ಹುಬ್ಬಳ್ಳಿ
ಗುರುವಾರ, 2 ಏಪ್ರಿಲ್ 2026
ಸಂಪುಟ 16, ಸಂಚಿಕೆ 8, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಅಮರಾವತಿ ಆಂಧ್ರದ ಏಕೈಕ ರಾಜಧಾನಿ | ೦೨ | ಹಿಂದಿಗೆ ಗ್ರೇಡ್: ಹೈಗೆ ಪಿಐಎಲ್ | ೦೩ | ದೇವರ ನಾಡಲ್ಲಿ ದೇವರೇ ಸುರಕ್ಷಿತವಾಗಿಲ್ಲ | ೦೨

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಹುಣ್ಣಿಮೆ, ನಕ್ಷತ್ರ: ಹಸ್ತ

ದಿನದ ಮಾತು

ಎಲ್ಲಾ ಬೆಳಕುಗಳಿಗಿಂತ ಸತ್ಯದ ಬೆಳಕೇ ನಿಜವಾದ ಬೆಳಕು

▲ಸ್ವಾಮಿ ಶಿವಾನಂದ

ಖಾಂಡವ ದಹನ ಪ್ರಸಂಗ

ಆ-ಲೋಚನ

• ರಾಧಾಕೃಷ್ಣ ಕಲ್ಚಾರ್

• ಪುಟ ೬

ಕಿರುಸುದ್ದಿ

ವಾಣಿಜ್ಯ ಎಲ್ಪಿಜಿ ದರ 195.50 ರೂ. ಏರಿಕೆ

• **ಹೊಸದಿಲ್ಲಿ:** ಮಧ್ಯಪ್ರಾಚ್ಯ ಯುದ್ಧದಿಂದ ಜಾಗತಿಕ ತೈಲ ಬೆಲೆ ಏರಿಕೆ ಹಿನ್ನೆಲೆ ವಾಣಿಜ್ಯ ಎಲ್‌ಪಿಜಿ ದರ ಬುಧವಾರ ರೂ. 195.50ರಷ್ಟು ಏರಿಕೆಯಾಗಿದೆ. ಆದರೆ ಗೃಹಬಳಕೆ ಎಲ್‌ಪಿಜಿ ದರದಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಬೆಂಗಳೂರಿನಲ್ಲಿ ವಾಣಿಜ್ಯ ಎಲ್‌ಪಿಜಿ ಬೆಲೆ ರೂ. 2,153.50 ತಲುಪಿದ್ದು, ಗೃಹಬಳಕೆ ಸಿಲಿಂಡರ್ ಬೆಲೆ 915.50 ರೂ.ಗಳಾಗಿದೆ. ದಿಲ್ಲಿಯಲ್ಲಿ 19 ಕೆಜಿ. ವಾಣಿಜ್ಯ ಸಿಲಿಂಡರ್ ಬೆಲೆ ಎರಡು ಸಾವಿರ ದಾಟಿದೆ.

• ಪುಟ ೨

ದೇಸಿ ಮಾಲ್ವಾನ್‌ನಿಂದ ನೌಕಾಪಡೆ ಸ್ವಾವಲಂಬಿ

• **ಹೊಸದಿಲ್ಲಿ:** ಎರಡನೇ ಜಲಾಂತರ್ಗಾಮಿ ನಿರೋಧಕ ಯುದ್ಧನೌಕೆ ಐಎನ್‌ಎಸ್ ಮಾಲ್ವಾನ್ ಅನ್ನು ಭಾರತೀಯ ನೌಕಾಪಡೆ ಬುಧವಾರ ಸ್ವೀಕರಿಸಿದೆ. ನೌಕಾಪಡೆಗೆ ಮಾಲ್ವಾನ್ ಯುದ್ಧನೌಕೆಯ ಸೇರ್ಪಡೆಯಿಂದ ಕರಾವಳಿ ರಕ್ಷಣಾ ಸಾಮರ್ಥ್ಯ ಬಲವರ್ಧನೆಯಾಗಿದ್ದು, ರಕ್ಷಣಾ ಉತ್ಪಾದನೆ ಕ್ಷೇತ್ರದಲ್ಲಿ ಆತ್ಮನಿರ್ಭರ ಭಾರತ ನಿರ್ಮಾಣದ ದಿಶೆಯಲ್ಲಿ ಕೇಂದ್ರ ಸರ್ಕಾರ ಮಹತ್ವದ ಹೆಜ್ಜೆಯನ್ನಿರಿಸಿದೆ.

• ಪುಟ ೨

ಪಂಜಾಬ್ ಬಿಜೆಪಿ ಕಚೇರಿ ಆವರಣದಲ್ಲಿ ಸ್ಫೋಟ

• ಪುಟ ೨

ರಷ್ಯಾ ಮಿಲಿಟರಿ ಸಾರಿಗೆ ವಿಮಾನ ಪತನ: 29 ಸಾವು

• ಪುಟ ೨

ಎಐ ಕಲಿಕೆಗೆ ಉತ್ತೇಜನ ಗಣಿತಕ್ಕೆ ಹೊಸ ಪಠ್ಯಕ್ರಮ

• ಪುಟ ೨

ಕೈಗೆ ದೊಡ್ಡ ಅಂತರದ ಗೆಲುವು: ಸಿಎಂ

• ಪುಟ ೩

ಆಸ್ಪತ್ರೆಗಳಲ್ಲಿ ಪೋಡಿಯಾಟ್ರಿಕ್ ವಿಭಾಗ ಆರಂಭ: ಸಚಿವ

• ಪುಟ ೩

ಕ್ಯಾನ್ಸರ್‌ಪೀಡಿತರಿಗೆ ಮನೆ ಆರೈಕೆ: ಸಚಿವ ದಿನೇಶ್

• ಪುಟ ೩

ಹಾರ್ಮುಜ್ ವಶಕ್ಕೆ ನ್ಯಾಟೋ ರಾಷ್ಟ್ರಗಳ ನಕಾರ ಹಿನ್ನೆಲೆ

ನ್ಯಾಟೋಗೆ ಟಾಟಾ?

• **ವಾಷಿಂಗ್ಟನ್:** ಹಾರ್ಮುಜ್ ತೆರೆಯಲು ಯುದ್ಧನೌಕೆಗಳನ್ನು ಕಳುಹಿಸುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾಡಿದ್ದ ಮನವಿಯನ್ನು ನ್ಯಾಟೋ ರಾಷ್ಟ್ರಗಳು ತಿರಸ್ಕರಿಸಿದ ಹಿನ್ನೆಲೆ ನ್ಯಾಟೋ ಸೇನಾ ಮೈತ್ರಿಯಿಂದ ಅಮೆರಿಕ ಹೊರಬರುವ ಸಾಧ್ಯತೆಯಿದೆ. ಇರಾನ್ ಯುದ್ಧವು ಅಮೆರಿಕ ಮತ್ತು ನ್ಯಾಟೋ ನಡುವಿನ ಸಂಬಂಧ ಹಳಸುವುದಕ್ಕೆ ಕಾರಣವಾಗಿದೆ.



ಸೋವಿಯತ್ (ರಷ್ಯಾ) ದಾಳಿ ಭೀತಿಯಿಂದ ಪ್ರತಿದಾಳಿ ಉದ್ದೇಶದಿಂದ ಐರೋಪ್ಯ ರಾಷ್ಟ್ರಗಳು, ಅಮೆರಿಕ ಮತ್ತು ಕೆನಡಾ ಜತೆಗೂಡಿ ನ್ಯಾಟೋ ಸೇನಾ ಮೈತ್ರಿಕೂಟವನ್ನು 1949ರಲ್ಲಿ ಸ್ಥಾಪಿಸಿದ್ದವು. ಅಲ್ಲಿಂದ ಇಲ್ಲಿಯವರೆಗೆ ನ್ಯಾಟೋ ಪಾಶ್ಚಿಮಾತ್ಯ ರಾಷ್ಟ್ರಗಳ ಭದ್ರತೆಯ ಕಣ್ಗಾವಲು ಜವಾಬ್ದಾರಿ ವಹಿಸಿಕೊಂಡು ಬಂದಿದೆ.

ಉಕ್ರೇನ್ ಮತ್ತು ರಷ್ಯಾ ನಡುವಿನ ಯುದ್ಧ ನಿಲ್ಲಿಸಲು ಟ್ರಂಪ್ ಮಾಡುತ್ತಿರುವ ಪ್ರಯತ್ನಗಳನ್ನು ನ್ಯಾಟೋ ವೀಕ್ಷಿಸುತ್ತಿದೆ. ಆದರೆ ಇತ್ತೀಚೆಗಿನ ಬೆಳವಣಿಗೆಯು ಟ್ರಂಪ್ ರಷ್ಯಾಗೆ ಲಾಭದಾಯಕ ಒಪ್ಪಂದ ಬೆಂಬಲಿಸುವ ಭೀತಿ ಯುರೋಪಿನ ಹಿರಿಯ ಅಧಿಕಾರಿಗಳನ್ನು ಕಾಡುತ್ತಿದೆ. ನ್ಯಾಟೋ ವಿಚಾರದಲ್ಲಿ ಅಧ್ಯಕ್ಷ ಟ್ರಂಪ್ ನಿರ್ಧಾರ ತೆಗೆದುಕೊಳ್ಳಲಿದ್ದಾರೆ. ಆದರೆ ನಮ್ಮ ಜತೆ ನಿಲ್ಲಲು ಒಪ್ಪದ ರಾಷ್ಟ್ರಗಳೊಂದಿಗೆ ದೊಡ್ಡಮಟ್ಟದ ಮೈತ್ರಿ ಇರುವುದಿಲ್ಲ ಎಂದು ಅಮೆರಿಕ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಹೇಳಿದ್ದಾರೆ.

ಅಮೆರಿಕ ಹೊರಬರುತ್ತಾ?: ನ್ಯಾಟೋ ಮೈತ್ರಿಯಿಂದ ಹೊರಬರುವುದನ್ನು ಅಮೆರಿಕ ಪರಿಗಣಿಸುತ್ತಿದೆಯೇ ಎಂಬ ಪ್ರಶ್ನೆಗೆ ಬುಧವಾರ ಪ್ರತಿಕ್ರಿಯಿಸಿದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಖಂಡಿತ ಪರಿಗಣಿಸುತ್ತೇವೆ ಎಂದಿದ್ದಾರೆ. ನ್ಯಾಟೋ ಜತೆ ಜುಗುಪ್ಸೆ ಮೂಡಿರುವ ಕುರಿತು ನಾನು ಅದರೊಂದಿಗೆ ಚರ್ಚಿಸಲಿದ್ದೇನೆ. ಅದರಲ್ಲಿ ಯಾವುದೇ ಪ್ರಶ್ನೆಯಿಲ್ಲ. ನೀವು ನನ್ನ ಜಾಗದಲ್ಲಿದ್ದರೆ ಏನು ಮಾಡಿರುತ್ತಿದ್ದಿರಿ ಎಂದು ಟ್ರಂಪ್ ಮರುಪ್ರಶ್ನೆ ಹಾಕಿದ್ದಾರೆ.

ಟ್ರಂಪ್‌ಗೆ ನ್ಯಾಟೋ ಬೇಸರ: ನ್ಯಾಟೋ ಸೇನಾ ಮೈತ್ರಿಯ ಆರ್ಟಿಕಲ್ 5ರ ಪ್ರಕಾರ, ಒಂದು ನ್ಯಾಟೋ ಸದಸ್ಯ ರಾಷ್ಟ್ರದ ಮೇಲಿನ ಶಸ್ತ್ರಾಸ್ತ್ರ ದಾಳಿ ಎಲ್ಲಾ ಸದಸ್ಯ ರಾಷ್ಟ್ರಗಳ ಮೇಲಿನ ದಾಳಿ ಇದ್ದಂತೆ.

➡ಪುಟ ೪





ಅಂತಾರಾಷ್ಟ್ರೀಯ ಸಮ್ಮೇಳನ

ಹಾರ್ಮುಜ್ ಜಲಸಂಧಿಯನ್ನು ಮರುತೆರೆಯುವ ಮಾರ್ಗಗಳ ಕುರಿತು ಇಂಗ್ಲೆಂಡ್ ಅಂತಾರಾಷ್ಟ್ರೀಯ ರಾಜತಾಂತ್ರಿಕ ಸಮ್ಮೇಳನವನ್ನು ಆಯೋಜಿಸುತ್ತದೆ ಎಂದು ಪ್ರಧಾನಿ ಕೈರ್ ಸ್ಟಾರ್ಮರ್ ತಿಳಿಸಿದ್ದಾರೆ. ಪ್ರಮುಖ ತೈಲ ಸಾಗಣೆ ಮಾರ್ಗವಾದ ಈ ಜಲ ಸಂಧಿಯಲ್ಲಿ ಸಮುದ್ರ ಭದ್ರತೆಯನ್ನು ಮರು ಸ್ಥಾಪಿಸಲು ಒಟ್ಟಾಗಿ ಕೆಲಸ ಮಾಡುವುದಾಗಿ 35 ದೇಶಗಳು ಘೋಷಣೆಗೆ ಸಹಿ ಹಾಕಿವೆ ಎಂದು ಅವರು ಹೇಳಿದರು. ಈ ಸಭೆಯಲ್ಲಿ ನಾವು ನ್ಯಾವಿಗೇಶನ್ ಸ್ವಾತಂತ್ರ್ಯವನ್ನು ಮರುಸ್ಥಾಪಿಸಲು, ಸಿಲುಕಿರುವ ಹಡಗುಗಳು ಮತ್ತು ಸಮುದ್ರಯಾತ್ರಿಗಳ ಸುರಕ್ಷತೆಯನ್ನು ಖಚಿತಪಡಿಸಲು ಹಾಗೂ ಅಗತ್ಯ ವಸ್ತುಗಳ ಸಾಗಣೆಯನ್ನು ಪುನರಾರಂಭಿಸಲು ಕೈಗೊಳ್ಳಬಹುದಾದ ಎಲ್ಲಾ ರಾಜತಾಂತ್ರಿಕ ಮತ್ತು ರಾಜಕೀಯ ಕ್ರಮಗಳನ್ನು ಪರಿಶೀಲಿಸುತ್ತೇವೆ ಎಂದು ಸ್ಟಾರ್ಮರ್ ಹೇಳಿದ್ದಾರೆ. ಈ ಸಭೆ ಬಳಿಕ ಯುದ್ಧ ಕೊನೆಗೊಂಡ ನಂತರ ಈ ಜಲಸಂಧಿಯನ್ನು ಸುರಕ್ಷಿತ ಮತ್ತು ಪ್ರವೇಶಯೋಗ್ಯವಾಗಿಸಲು ನಾವು ನಮ್ಮ ಸೈನಿಕ ಯೋಜಕರನ್ನೂ ಸೇರಿಸಿ ಅಗತ್ಯ ಕ್ರಮಗಳನ್ನು ರೂಪಿಸುತ್ತೇವೆ ಎಂದು ಅವರು ಹೇಳಿದರು. ಬ್ರಿಟನ್ ಪ್ರಧಾನಮಂತ್ರಿ ಈ ಯುದ್ಧದ ಪರಿಣಾಮಗಳು 'ಒಂದು ಪೀಳಿಗೆಯವರೆಗೆ ನಮ್ಮನ್ನು ನಿರ್ಧರಿಸಬಹುದು' ಎಂದು ಹೇಳಿ, ಅದು 1970ರ ದಶಕದ ಇಂಧನ ಬೆಲೆ ಏರಿಕೆಗೆ ಸಮಾನವಾಗಿರಬಹುದು ಎಂದು ಎಚ್ಚರಿಸಿದರು.

ಎರಡು ವಾರದಲ್ಲಿ ಯುದ್ಧ ಅಂತ್ಯ?

• **ವಾಷಿಂಗ್ಟನ್:** ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣ ತೆರೆಯಲು ಇರಾನ್ ಜತೆ ಯಾವುದೇ ಒಪ್ಪಂದವಾಗದಿದ್ದರೂ ಮುಂದಿನ 2 ವಾರಗಳೊಳಗೆ ಯುದ್ಧ ನಿಲ್ಲಬಹುದೆಂಬ ಸುಳಿವನ್ನು ಟ್ರಂಪ್ ನೀಡಿದ್ದಾರೆ. 2 ವಾರಗಳೊಳಗೆ ಯುದ್ಧ ನಿಂತರೆ, ತೈಲ ಪೂರೈಕೆ ಯಥಾಸ್ಥಿತಿಗೆ ಮರಳಲು 6 ವಾರ ಬೇಕಾಗುತ್ತದೆ ಎಂದು ವಿಶ್ಲೇಷಕರು ವಿಶ್ಲೇಷಿಸಿದ್ದಾರೆ.

• ವಿವರ ಪುಟ ೨

ನೆರೆಹೊರೆಯವರಿಗೆ ಭಾರತದ ಆಸರೆ

• **ಹೊಸದಿಲ್ಲಿ:** ಇರಾನ್ ಯುದ್ಧ ಮತ್ತು ಹಾರ್ಮುಜ್ ಜಲಸಂಧಿ ಮುಚ್ಚಲ್ಪಟ್ಟ ಪರಿಣಾಮ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಇಂಧನ ಭದ್ರತೆ ಕುಸಿದಿದೆ. ಈ ಹಿನ್ನೆಲೆ ಯಲ್ಲಿ ಬಾಂಗ್ಲಾದೇಶ, ಮಾಲ್ಡೀವ್ಸ್, ಶ್ರೀಲಂಕಾ ರಾಷ್ಟ್ರಗಳು ತುರ್ತು ಇಂಧನ ಪೂರೈಕೆಗಾಗಿ ಭಾರತದ ಮೊರೆ ಹೋಗಿವೆ. ತೀವ್ರ ಇಂಧನ ಕೊರತೆ ನೀಗಿಸಲು ಈ ದೇಶಗಳು ಈಗ ಭಾರತದ ಸಹಾಯ ಕೋರುತ್ತಿವೆ. ಭಾರತ ತನ್ನ 'ನೆರೆಹೊರೆಗೆ ಮೊದಲ ಆದ್ಯತೆ' ನೀತಿಯನ್ನು ಮುಂದುವರಿಸಿದ್ದು, ಭೂತಾನ್ ಮತ್ತು ನೇಪಾಳಕ್ಕೆ ಅಡೆತಡೆಯಿಲ್ಲದೆ ಇಂಧನ ಪೂರೈಕೆ ಮಾಡುತ್ತಿದೆ. ಇತರ ದೇಶಗಳ ವಿನಂತಿಗಳನ್ನು ಅಗತ್ಯಕ್ಕೆ ಅನುಗುಣವಾಗಿ ಪರಿಶೀಲಿಸಲಾಗುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.

• ವಿವರ ಪುಟ ೨

ಡಾ. ಶಿವಕುಮಾರ ಶ್ರೀ ಜಯಂತಿ ಉದ್ಘಾಟಿಸಿದ ರಾಷ್ಟ್ರಪತಿ | ಮಠದ ಶೈಕ್ಷಣಿಕ ಕ್ರಾಂತಿಗೆ ಪ್ರಶಂಸೆ

ವ್ಯಕ್ತಿತ್ವ ನಿರ್ಮಾಣಕ್ಕೆ ಶಿಕ್ಷಣವೇ ಬುನಾದಿ



• **ತುಮಕೂರು:** ಶಿಕ್ಷಣ ವ್ಯಕ್ತಿತ್ವ ವಿಕಸನ ಮತ್ತು ವ್ಯಕ್ತಿತ್ವ ನಿರ್ಮಾಣದ ಅಡಿಪಾಯವಾಗಿದೆ ಹಾಗೂ ಶಿಕ್ಷಣವು ಸ್ವಾವಲಂಬನೆಗೆ ದಾರಿ ಮಾಡಿಕೊಡಲಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ತುಮಕೂರಿನ ಸಿದ್ಧಗಂಗಾ ಮಠದಲ್ಲಿ ಬುಧವಾರ ಆಯೋಜಿಸಿದ್ದ ಲಿಂಗೈಕ್ಯ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಅವರ 119ನೇ ಜನ್ಮ ದಿನಾಚರಣೆ ಹಾಗೂ ಗುರುವಂದನೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ಅಥವಾ ವಿದ್ಯೆ ವ್ಯಕ್ತಿತ್ವ ವಿಕಸನ ಮತ್ತು ವ್ಯಕ್ತಿತ್ವ ನಿರ್ಮಾಣದ ಅಡಿಪಾಯವಾಗಿದ್ದು, ಹಿಂದುಳಿದ ಸಮುದಾಯದ ವಿದ್ಯಾರ್ಥಿಗಳಿಗೆ ಹಾಗೂ ಗ್ರಾಮೀಣ ಪ್ರದೇಶದ ಜನರಿಗೆ ಶಿಕ್ಷಣ ಒದಗಿಸುವ ಮೂಲಕ ಸಮಾಜಕ್ಕೆ ಶ್ರೀ ಸಿದ್ಧಗಂಗಾ ಮಠವು ಅತ್ಯಂತ ಅಮೂಲ್ಯ ಕೊಡುಗೆ ನೀಡುತ್ತಿರುವುದು ಅತ್ಯಂತ ಪ್ರಶಂಸನೀಯ ಎಂದು ಅವರು ಅಭಿಪ್ರಾಯಿಸಿದರು. ಶ್ರೀ ಮಠವು ಬಸವಣ್ಣನವರ ಆದರ್ಶಗಳನ್ನು ಅನುಸರಿಸುವ ಮೂಲಕ ತಾರತಮ್ಯದ ಸಾಮಾಜಿಕ ವ್ಯವಸ್ಥೆ ಮತ್ತು ಸಾರ್ವತ್ರಿಕ ಭಾಗವಹಿಸುವಿಕೆಯ ಆಧಾರದ ಮೇಲೆ ಕಾರ್ಯನಿರ್ವಹಿಸುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯ ಕೈಗನ್ನಡಿಯಾಗಿದೆ ಎಂದರು. ಶ್ರೀಗಳು ಬಡವರು ಹಾಗೂ ದುರ್ಬಲರ ಸೇವೆಗೆ ತಮ್ಮ ಇಡೀ ಆಯುಷ್ಯವನ್ನು ಮುಡಿಪಾಗಿಟ್ಟಿದ್ದರು.

➡ಪುಟ ೪

ಕರ್ನಾಟಕ ರಾಷ್ಟ್ರ ನಿರ್ಮಾಣದ ಪ್ರಮುಖ ಕೇಂದ್ರ

ಕಠಿಣ ಪರಿಶ್ರಮ, ಸಾರ್ವಜನಿಕ ಸೇವೆ ಮತ್ತು ರಾಷ್ಟ್ರೀಯ ಸೇವೆ ಪರಸ್ಪರ ಸಂಬಂಧ ಹೊಂದಿವೆ. ಸಾರ್ವಜನಿಕ ಸೇವೆ ಮತ್ತು ರಾಷ್ಟ್ರೀಯ ಸೇವೆಗೆ ಆಧ್ಯಾತ್ಮಿಕತೆಯು ಬಲವಾದ ಅಡಿಪಾಯ ಒದಗಿಸುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕವು ಸಾರ್ವಜನಿಕ ಸೇವೆ, ರಾಷ್ಟ್ರೀಯ ಸೇವೆ, ಆಧ್ಯಾತ್ಮಿಕತೆ ಹಾಗೂ ಆಧುನಿಕ ಪ್ರಗತಿಯ ಕೆಲವು ಪ್ರಭಾವಶಾಲಿ ಉದಾಹರಣೆಗಳನ್ನು ನೀಡುತ್ತದೆ. ಇದಕ್ಕಾಗಿ ಕರ್ನಾಟಕದ ಶ್ರಮಶೀಲ ಮತ್ತು ಪ್ರತಿಭಾನ್ವಿತ ನಿವಾಸಿಗಳು ಅಭಿನಂದನೆಗೆ ಅರ್ಹರು. ಕರ್ನಾಟಕದ ಜನರು ನಿರಂತರವಾಗಿ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಿದ್ದಾರೆ. ಕರ್ನಾಟಕವು ರಾಷ್ಟ್ರ ನಿರ್ಮಾಣದ ಪ್ರಮುಖ ಕೇಂದ್ರವಾಗಬಹುದು ಎಂಬುದು ನನ್ನ ನಂಬಿಕೆ ಎಂದರು.

ಶಾಲಾ ಮಕ್ಕಳ ಸ್ಕ್ರೀನ್ ಸಮಯ ಕಡಿತಕ್ಕೆ ಕ್ರಮ: ಸಚಿವ ದಿನೇಶ್

ಅಪ್ರಾಪ್ತರ ಡಿಜಿಟಲ್ ಕರಡು ಸಿದ್ಧ

• **ಬೆಂಗಳೂರು:** ಡಿಜಿಟಲ್ ಮಾಧ್ಯಮಗಳಿಂದ ಮಕ್ಕಳಲ್ಲಿ ಮಾನಸಿಕ ಸಮಸ್ಯೆಗಳಂತಹ ಸಾಕಷ್ಟು ದುಷ್ಪರಿಣಾಮ ಬೀರುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆವತಿಯಿಂದ ವಿದ್ಯಾರ್ಥಿಗಳಲ್ಲಿ ಜವಾಬ್ದಾರಿಯುತ ಡಿಜಿಟಲ್ ಬಳಕೆ ಕುರಿತು ಕರಡು ನೀತಿ ಸಿದ್ಧಪಡಿಸಿದೆ ಎಂದು ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.



ಆರೋಗ್ಯಸೌಧದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪ್ರಾಥಮಿಕ ಶಿಕ್ಷಣ ಇಲಾಖೆ, ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರ ಹಾಗೂ ನಿಮ್ಹಾನ್ಸ್ ಸಹಯೋಗದಲ್ಲಿ ವಿದ್ಯಾರ್ಥಿಗಳಿಗೆ ಸುರಕ್ಷಿತ, ಸಮತೋಲಿತ ಮತ್ತು ಮಾನಸಿಕವಾಗಿ ಆರೋಗ್ಯಕರ ಡಿಜಿಟಲ್ ವಾತಾವರಣ ಸೃಷ್ಟಿಸಲು ಈ ಕರಡು ವಿನ್ಯಾಸಗೊಳಿಸಲಾಗಿದೆ ಎಂದು ಹೇಳಿದರು.

➡ಪುಟ ೪

ಅಭಿಪ್ರಾಯ ಆಹ್ವಾನ

ಈ ಕರಡನ್ನು ಆರೋಗ್ಯ ಇಲಾಖೆಯ ಜಾಲತಾಣ https://hfwcom.karnataka.gov.in/en ನಲ್ಲಿ ಪ್ರಕಟಿಸಲಾಗಿದ್ದು, ಸಾರ್ವಜನಿಕರಿಂದ ಅಭಿಪ್ರಾಯ ಆಹ್ವಾನಿಸಲಾಗಿದೆ. ಆಸಕ್ತರು (ಪೋಷಕರು, ಶಿಕ್ಷಕರು, ವಿದ್ಯಾರ್ಥಿಗಳು ಇತರರ) ತಮ್ಮ ಅಭಿಪ್ರಾಯ ಹಾಗೂ ಸಲಹೆಗಳನ್ನು 15 ದಿನಗಳೊಳಗೆ ಇ-ಮೇಲ್ dd6mh-kar@gmail.com ಮತ್ತು ddehospital-hfws@kamataka.gov.in ಗೆ ರವಾನಿಸಬಹುದು ಎಂದರು.

ಪ್ರಧಾನಿ ನೇತೃತ್ವದಲ್ಲಿ ನಡೆದ ಭದ್ರತಾ ಮಂಡಳಿ ಸಭೆಯಲ್ಲಿ ಚರ್ಚೆ

ಅನಿಲ, ತೈಲ ಪೂರೈಕೆಗೆ ಅಗತ್ಯ ಕ್ರಮ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ನಿವಾಸದಲ್ಲಿ ಬುಧವಾರ ನಡೆದ ಭದ್ರತೆಯ ಸಂಪುಟ ಸಮಿತಿಯ (ಸಿಸಿಎಸ್) ತುರ್ತು ಸಭೆಯಲ್ಲಿ, ಇರಾನ್ ಯುದ್ಧದಿಂದ ತೈಲ, ಅನಿಲ ಪೂರೈಕೆಯಲ್ಲಿನ ವ್ಯತ್ಯಯ, ಜಾಗತಿಕ ಆರ್ಥಿಕ ಅಪಾಯಗಳು ಮತ್ತು ರಾಷ್ಟ್ರೀಯ ಭದ್ರತೆ ಕುರಿತು ಮೋದಿ ಸಚಿವರೊಂದಿಗೆ ಚರ್ಚೆ ನಡೆಸಿದರು. ಅನಿಲ, ತೈಲ ನಿರಂತರ ಪೂರೈಕೆ ನಿಟ್ಟಿನಲ್ಲಿ ಕೈಗೊಳ್ಳಲಾದ ಕ್ರಮಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆದಿದೆ.

ಪ್ರಧಾನಿ ಮೋದಿ ನೇತೃತ್ವದಲ್ಲಿ ರಾತ್ರಿ 7ಕ್ಕೆ ಆರಂಭವಾದ ಮಹತ್ವದ ಸಿಸಿಎಸ್ ಸಭೆಯಲ್ಲಿ, ತಡೆರಹಿತ ಎಲ್‌ಪಿಜಿ ಪೂರೈಕೆ, ರಸಗೊಬ್ಬರ ಪೂರೈಕೆ ಮತ್ತು ನೈಸರ್ಗಿಕ ಅನಿಲ (ಪಿಎನ್‌ಜಿ) ಬಳಕೆ ಉತ್ತೇಜಿಸುವುದು ಸೇರಿದಂತೆ ಮುಂದಿನ ಕಾರ್ಯಯೋಜನೆಗಳ ಕುರಿತು ಚರ್ಚಿಸಲಾಯಿತು. ಸುಮಾರು 2 ಗಂಟೆ 45 ನಿಮಿಷ ನಡೆದ ಸಭೆಯಲ್ಲಿ ಸಚಿವರೊಂದಿಗೆ ಮೋದಿ ಮಹತ್ವದ ಚರ್ಚೆ ನಡೆಸಿದ್ದಾರೆ.



ಸಭೆಯಲ್ಲಿ ಕೇಂದ್ರ ಸರ್ಕಾರದ ಮುಂದಿನ ಆರ್ಥಿಕ ಮತ್ತು ಕಾರ್ಯತಾಂತ್ರಿಕ ನಿರ್ಧಾರಗಳ ಕುರಿತು ಚರ್ಚಿಸಲಾಗಿದೆ. ರಕ್ಷಣಾ ಸಚಿವ ರಾಜನಾಥ್ ಗೈರು ಹಾಜರಿನಲ್ಲಿ ನಡೆದ ಸಭೆಯಲ್ಲಿ ಗೃಹ ಸಚಿವ ಅಮಿತ್ ಶಾ, ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್, ವಿದೇಶಾಂಗ ಸಚಿವ ಎಸ್.ಜೈಶಂಕರ್ ಮತ್ತು ಇನ್ನಿತರ ಸಚಿವರು ಉಪಸ್ಥಿತರಿದ್ದರು.

➡ಪುಟ ೪

ಒರಾಕಲ್‌ನ 12000 ಉದ್ಯೋಗಿಗಳ ವಜಾ

ಮುಂದಿನ ದಿನಗಳಲ್ಲಿ ಮತ್ತೆ ಉದ್ಯೋಗ ಕಡಿತ

ಎಐ ತಂತ್ರಜ್ಞಾನಕ್ಕೆ ಒತ್ತು

• **ಹೊಸದಿಲ್ಲಿ:** ಒರಾಕಲ್ ಕಾರ್ಪೊರೇಷನ್ ಭಾರತದಲ್ಲಿ ಸುಮಾರು 12 ಸಾವಿರ ಉದ್ಯೋಗಿಗಳನ್ನು ವಜಾಗೊಳಿಸಿದೆ. ಕೃತಕ ಬುದ್ಧಿಮತ್ತೆ (ಎಐ) ಮೂಲಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡುವ ನಿಟ್ಟಿನಲ್ಲಿ ಕಂಪನಿ ತನ್ನ ಒಟ್ಟು ಸ್ಥಳೀಯ ಸಿಬ್ಬಂದಿಯಲ್ಲಿ ಸುಮಾರು ಅರ್ಧದಷ್ಟು ಮಂದಿಯನ್ನು ವಜಾಗೊಳಿಸಿದೆ.

ಭಾರತದಲ್ಲಿನ ಈ ಉದ್ಯೋಗ ಕಡಿತ ಜಾಗತಿಕ ಮಟ್ಟದ ಮರುಸಂಘಟನೆಯ ಭಾಗವಾಗಿದ್ದು, ವಿಶ್ವಾದ್ಯಂತ ಸುಮಾರು 30 ಸಾವಿರ ಉದ್ಯೋಗಿಗಳ ಮೇಲೆ ಇದು ಪರಿಣಾಮ ಬೀರಲಿದೆ. ಹಿರಿಯ ಇಂಜಿನಿಯರ್‌ಗಳು, ವಿನ್ಯಾಸಗಾರರು, ಜಾರಿ ಹಂತದ ನಾಯಕರು, ಪ್ರೋಗ್ರಾಂ ಮ್ಯಾನೇಜರ್‌ಗಳು ಮತ್ತು ತಾಂತ್ರಿಕ ತಜ್ಞರು ಕೆಲಸ ಕಳೆದುಕೊಂಡಿದ್ದಾರೆ.

➡ಪುಟ ೪

ಅಕ್ರಮ ವಲಸಿಗರ ರಕ್ಷಣೆಗೆ ಕಾನೂನು ತರಲೂ ಹೇಸದ ಕೈ: ಪ್ರಧಾನಿ ವಾಗ್ದಾಳಿ

ನುಸುಳುಕೋರರ ರಕ್ಷಕ ಕಾಂಗ್ರೆಸ್: ಮೋದಿ

• **ಗೋಗಮುಖ್(ಅಸ್ಸಾಂ):** ಅಸ್ಸಾಂನಲ್ಲಿ ಒಂದುವೇಳೆ ಅಧಿಕಾರಕ್ಕೆ ಬಂದರೆ ಕಾಂಗ್ರೆಸ್ ಅಕ್ರಮ ನುಸುಳುಕೋರರನ್ನು ರಕ್ಷಿಸುವುದಕ್ಕಾಗಿ ಕಾನೂನು ತರಲೂ ಹೇಸದು ಎಂದು ಎಚ್ಚರಿಸಿರುವ ಪ್ರಧಾನಿ ನರೇಂದ್ರ ಮೋದಿಯವರು, ಬಿಜೆಪಿ ಅಕ್ರಮ ನುಸುಳುಕೋರರಿಗೆ ಎಂದೂ ಅವಕಾಶ ನೀಡದು. ಜನಾಶೀರ್ವಾದದ ಮೂಲಕ ಬಿಜೆಪಿ ಈ ಬಾರಿ ಹ್ಯಾಟ್ರಿಕ್ ವಿಜಯ ಸಾಧಿಸಲಿದೆ ಎಂದು ಘೋಷಿಸಿದ್ದಾರೆ.

ಧೇಮಾಜಿ ಜಿಲ್ಲೆಯಲ್ಲಿನ ಗೋಗಮುಖ್‌ನಲ್ಲಿ ನಡೆದ ಚುನಾವಣಾ ರ‍್ಯಾಲಿಯೊಂದರಲ್ಲಿ ಮಾತನಾಡಿದ ಅವರು, ದೇಶದ ಬಹುಸಂಖ್ಯಾತರನ್ನು ಅಲ್ಪಸಂಖ್ಯಾತರನ್ನಾಗಿಸಿ ಅಲ್ಪಸಂಖ್ಯಾತರನ್ನು ಬಹುಸಂಖ್ಯಾತರನ್ನಾಗಿಸುವ ಮೂಲಕ ಅಕ್ರಮ ನುಸುಳುಕೋರರನ್ನು ಕಾಯಂ ಆಗಿ ವೋಟ್‌ಬ್ಯಾಂಕ್ ಆಗಿ ಬಳಸಿಕೊಳ್ಳುವುದು ಕಾಂಗ್ರೆಸ್‌ನ ತಂತ್ರವಾಗಿದೆ ಎಂದು ತರಾಟೆಗೆತ್ತಿಕೊಂಡರು.

ಕಾನೂನು ತರಲು ಮುಂದಾಗಿದ್ದ ಕಾಂಗ್ರೆಸ್: 2014ರಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ಮುನ್ನ ಕಾಂಗ್ರೆಸ್ ಕೇಂದ್ರದಲ್ಲಿ ಹೊಸ ಕಾನೂನು ತರಲು ಮುಂದಾಗಿತ್ತು.

ಆದರೆ ಬಿಜೆಪಿ ನೇತೃತ್ವದ ಎನ್‌ಡಿಎ ಅದನ್ನು ವಿರೋಧಿಸಿತು. ಅಸ್ಸಾಂನಲ್ಲಿ ಅಕ್ರಮ ನುಸುಳುಕೋರರನ್ನು ರಕ್ಷಿಸುವುದಕ್ಕಾಗಿ ಹೊಸ ಕಾನೂನು ತರುವುದಾಗಿ ಕಾಂಗ್ರೆಸ್ ನಾಯಕರು ಬಹಿರಂಗವಾಗಿ ಹೇಳುತ್ತಿದ್ದು, ಇಂತಹ ಅಕ್ರಮ ನುಸುಳುವಿಕೆಯನ್ನು ಬೆಂಬಲಿಸುತ್ತಿದ್ದಾರೆ ಎಂದು ಮೋದಿ ಬೊಟ್ಟು ಮಾಡಿದರು.

➡ಪುಟ ೪



ಚಹಾ ಎಲೆ ಕೊಯ್ಲು ಮಾಡಿದ ನಮೋ

ಅಸ್ಸಾಂ ವಿಧಾನಸಭೆ ಚುನಾವಣೆ ಪ್ರಚಾರದಲ್ಲಿ ಭಾಗಿಯಾಗಿರುವ ಪ್ರಧಾನಿ ನರೇಂದ್ರ ಮೋದಿಯವರು ಕೆಲ ಹೊತ್ತು ಗುವಾಹಟಿ ಸಮೀಪ ಡಿಬ್ರುಗಢದ ಟೀ ಗಾರ್ಡನ್‌ಗೆ ಭೇಟಿ ನೀಡಿ ಚಹಾದ ಎಲೆಗಳನ್ನು ಕಿತ್ತು ಕಾರ್ಮಿಕ ಮಹಿಳೆಯರ ಯೋಗಕ್ಷೇಮ ವಿಚಾರಿಸಿದರು. ಅವರೊಂದಿಗೆ ಸಂವಾದ ನಡೆಸಿದರು. ನಾನು ಕೂಡ ಚಿಕ್ಕವನಿರುವಾಗ ಚಹಾ ಮಾರಿದ್ದು, ನಿಮ್ಮ ಜೀವನ ವ್ಯವಸ್ಥೆಯನ್ನು ಕಾಣುವಾಗ ನನ್ನ ಅಂದಿನ ಕಷ್ಟದ ದಿನಗಳು ನೆನಪಿಗೆ ಬರುತ್ತವೆ ಎಂದರು.

➡ಪುಟ ೪

ಕಿರುಸುದ್ದಿ

ರಥೋತ್ಸವ ಇಂದು



• **ಕುಂದಗೋಳ:** ಶೇರೆವಾಡ ಗ್ರಾಮದ ಮಾರುತಿ ದೇವರ 15ನೇ ರಥೋತ್ಸವ ಮತ್ತು ವೀರಭದ್ರೇಶ್ವರ ದೇವರ ಗುಗ್ಗಳ, ಅಗ್ನಿ ಮಹೋತ್ಸವ ಏ.2ರಂದು ಜರುಗಲಿದೆ. ಅಂದು ಬೆಳಗ್ಗೆ 6 ಗಂಟೆಗೆ ಮಾರುತಿ ದೇವರಿಗೆ ಪಂಚಾಮೃತ ಅಭಿಷೇಕ, ಕಳಸಾರೋಹಣ, ತೊಟ್ಟಿಲೋತ್ಸವ ಹಾಗೂ ವೀರಭದ್ರೇಶ್ವರ ದೇವರ ಗುಗ್ಗಳ, ಅಗ್ನಿಮಹೋತ್ಸವವು ಕುಂದಗೋಳ ಹಾಗೂ ಶೇರೆವಾಡ ಪುರವಂತರಿಂದ ನಡೆಯಲಿದೆ. ಸಂಜೆ 5.30ಕ್ಕೆ ಮಾರುತಿ ದೇವರ ಮಹಾರಥೋತ್ಸವ ಜರುಗುವುದು ಎಂದು ತಿಳಿಸಲಾಗಿದೆ.

ಇಂದು ಜಾತ್ರಾ ಮಹೋತ್ಸವ

• **ನವಲಗುಂದ:** ತಾಲೂಕಿನ ಕಡದಳ್ಳಿ ಗ್ರಾಮದಲ್ಲಿ ಗ್ರಾಮದೇವಿಯ 2ನೇ ವರ್ಷದ ವಾರ್ಷಿಕೋತ್ಸವ ಹಾಗೂ ಜಾತ್ರಾ ಮಹೋತ್ಸವ ಏ.2ರಂದು ಬೆಳಗ್ಗೆ ಕುಂಭಮೇಳ, ಅಭಿಷೇಕ ನೆರವೇರುವುದು. ನಂತರ ಉಪಹಾರ, ಮಧ್ಯಾಹ್ನ ಮಹಾಪ್ರಸಾದ ಜರುಗುವುದು. ಮಧ್ಯಾಹ್ನ 3 ಗಂಟೆಗೆ ಗ್ರಾಮದ ರಾಜ ಬೀದಿಗಳಲ್ಲಿ ಡೊಳ್ಳು, ಭಜನಾ ಮಂಡಳಿ ಹಾಗೂ ಸಕಲ ವಾದ್ಯಗಳೊಂದಿಗೆ ದೇವಿಯ ಪಲ್ಲಕ್ಕಿ ಉತ್ಸವ ಮೆರವಣಿಗೆ ಕಾರ್ಯಕ್ರಮ ನೆರವೇರುವುದು. ನರಗುಂದ ಪತ್ರಿವನಮಠದ ಷ.ಬ್ರ. ಡಾ. ಶ್ರೀಗುರು ಸಿದ್ಧವೀರ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ, ದೇವಮಂದಿರ ಮಹಾಮಠ ಮಣಕವಾಡದ ಅಭಿನವ ಮೃತ್ಯುಂಜಯ ಶ್ರೀಗಳ ಸಾನ್ನಿಧ್ಯದಲ್ಲಿ ನಡೆಯಲಿದೆ. ಸಂಜೆ 7 ಗಂಟೆಗೆ ಅಭಿನವ ಬೂದೀಶ್ವರ ವಿದ್ಯಾಪೀಠದ ವಿದ್ಯಾರ್ಥಿಗಳಿಂದ ಮಲ್ಲಕಂಬ ಪ್ರದರ್ಶನ, ಶ್ರೀಗಳಿಂದ ಆಶೀರ್ವಚನ, ರಾತ್ರಿ ಪ್ರಸಾದ, ನಂತರ ಅಗಸ್ತ್ಯ ಮೆಲೋಡಿಸ್ ತಂಡದಿಂದ ಹಾಸ್ಯ ರಸಮಂಜರಿ ಕಾರ್ಯಕ್ರಮ ನಡೆಯಲಿದೆ ಎಂದು ಕಡದಳ್ಳಿ ಗ್ರಾಮದ ಸಮಸ್ತರು ಪ್ರಕಟಣೆಗೆ ತಿಳಿಸಿದ್ದಾರೆ.

ಜಾತ್ರೆ ಇಂದು

• **ಧಾರವಾಡ:** ದವನದ ಹುಣ್ಣಿಮೆಯಲ್ಲಿ ತಾಲೂಕಿನ ಅಮ್ಮಿನಬಾವಿ ಗ್ರಾಮದ ಪ್ಯಾಟಿ ಬಸವಣ್ಣ (ನಂದೀಶ್ವರ) ದೇವರ ವಾರ್ಷಿಕ ಜಾತ್ರಾ ಮಹೋತ್ಸವ ಏ.2ರಂದು ದಿನ ಜರುಗಲಿದೆ.




ಏ.2 ಪ್ರಾತಃಕಾಲದಲ್ಲಿ ಬಸವಣ್ಣ ದೇವರ ವಿಗ್ರಹಕ್ಕೆ ಮಹಾರುದ್ರಾಭಿಷೇಕ, ಬಿಲ್ವಾರ್ಚನೆ, ಅಲಂಕಾರ ಪೂಜೆ, ಮಹಾಮಂಗಳಾರತಿ ಬಳಿಕ ಅಪರಾಹ್ನ ಅನ್ನಸಂತರ್ಪಣೆ ನಡೆಯುವುದು. ಅಂದು ಸಂಜೆ 4ಕ್ಕೆ ಗ್ರಾಮದ ಓರ್ವ ಜಂಗಮ ಮೂರ್ತಿ ಸಮೇತ ಗ್ರಾಮದ ಹಕ್ಕು-ಬಾಬುಗಳ ಗಣ್ಯರೊಂದಿಗೆ ಅಲಂಕೃತ ರಥೋತ್ಸವ ನಂದಿಕೋಲು, ಪಲ್ಲಕ್ಕಿ, ಕರಡಿ ಮಜಲು, ಭಜನೆಗಳ ಸಮೇತ ಆರಂಭಗೊಳ್ಳುವುದು. ದೇವಾಲಯದ ಪ್ರಧಾನ ಅರ್ಚಕ ಬಸವರಾಜ ಪೂಜಾರ ರಥೋತ್ಸವದ ಕೊನೆಗೆ ವರ್ಷದ ಆಗು-ಹೋಗುಗಳ ಕುರಿತು ಹೇಳಿಕೆ ಹೇಳುವರೆಂದು ದೇವಾಲಯದ ಸೇವಾ ಟ್ರಸ್ಟ್ ಅಧ್ಯಕ್ಷ ಪ್ರಕಾಶ ಹುಲ್ಲೂರ, ಉಪಾಧ್ಯಕ್ಷ ಶಿವಾನಂದ ಕಡ್ಲೆಪ್ಪನವರ, ಕಾರ್ಯದರ್ಶಿ ಬಸವರಾಜ ಬೂದಿಹಾಳ ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಸಂವಾದ

• **ಹುಬ್ಬಳ್ಳಿ:** ಬಾಲಾಜಿ ಆಸ್ಪತ್ರೆ ಮತ್ತು ಕನಕದಾಸ ಶಿಕ್ಷಣ ಸಂಸ್ಥೆಯ ಸಹಯೋಗದಲ್ಲಿ ವಿಶ್ವ ತಲೆ ಗಾಯ ಜಾಗೃತಿ ದಿನ ಅಂಗವಾಗಿ ಏ.2ರಂದು ಬೆಳಗ್ಗೆ 9.30ಕ್ಕೆ ಕಾಲೇಜಿನ ಡಾ. ಬಿ.ಎಫ್. ದಂಡಿನ ಸಭಾಂಗಣದಲ್ಲಿ ಆರೋಗ್ಯ ಅರಿವು ಮತ್ತು ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ. ಕನಕದಾಸ ಶಿಕ್ಷಣ ಸಂಸ್ಥೆಯ ಚೇರ್ಮನ್ ರವೀಂದ್ರನಾಥ್ ದಂಡಿನ ಅಧ್ಯಕ್ಷತೆ ವಹಿಸಲಿದ್ದು, ಬಾಲಾಜಿ ಆಸ್ಪತ್ರೆ ಚೇರ್ಮನ್ ಮತ್ತು ನರರೋಗ ತಜ್ಞ ಡಾ. ಕ್ರಾಂತಿಕಿರಣ ಅವರು ಅಪಘಾತ ಮತ್ತು ಮಿದುಳಿನ ಗಾಯಗಳಿಂದ ರಕ್ಷಿಸಿಕೊಳ್ಳುವ ವಿಧಾನ ಮತ್ತು ಮಿದುಳಿನ ಮಹತ್ವದ ಕುರಿತು ಅರಿವು ಮೂಡಿಸುವ ಜೊತೆಗೆ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ಕೆ.ಎಸ್.ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯ ಬಿ.ಜಿ. ಮಡ್ಲಿ, ಇನ್ನಿತರರು ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಶಸ್ತಿ ಪ್ರದಾನ ಇಂದು

• **ಧಾರವಾಡ:** ಕರ್ನಾಟಕ ವಿದ್ಯಾವರ್ಧಕ ಸಂಘವು ಡಾ.ಗುರುಲಿಂಗ ಕಾಪಸೆ ದತ್ತಿ ಅಂಗವಾಗಿ ಡಾ.ಗುರುಲಿಂಗ ಕಾಪಸೆ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭ ಏ.2 ರ ಸಂಜೆ 6ಕ್ಕೆ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಜರುಗಲಿದೆ.



ಪ್ರಶಸ್ತಿ ಪುರಸ್ಕೃತರಾದ ಧಾರವಾಡದ ಸಾಹಿತಿ ಡಾ.ವೀಣಾ ಶಾಂತೇಶ್ವರ ಹಾಗೂ ಬಳ್ಳಾರಿಯ ಲೋಹಿಯಾ ಪ್ರಕಾಶನದ ಪ್ರಕಾಶಕ ಸಿ. ಚನ್ನಬಸವಣ್ಣ ಅವರಿಗೆ ಅಥಣಿಯ ವಿಮೋಚನಾ ಸಂಸ್ಥೆಯ ಅಧ್ಯಕ್ಷ ಬಿ.ಎಲ್.ಪಾಟೀಲ ಪ್ರಶಸ್ತಿ ಪ್ರದಾನ ಮಾಡುವರು. ಚಿಂತಕ ಡಾ.ಸಿದ್ದನಗೌಡ ಪಾಟೀಲ ಪ್ರಶಸ್ತಿ ಪುರಸ್ಕೃತರ ಕುರಿತು ಮಾತನಾಡುವರು. ರಾಜೇಶ್ವರಿ ಹುಲಮನಿ ವಿದ್ಯಾರ್ಥಿ ಬಹುಮಾನ ಪಡೆಯಲಿದ್ದು, ಧಾರವಾಡದ ಡಾ. ಎಂ.ಎಂ.ಕಲಬುರ್ಗಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಅಧ್ಯಕ್ಷ ಡಾ.ವೀರಣ್ಣ ರಾಜೂರ ಅತಿಥಿಗಳಾಗಿ ಆಗಮಿಸುವರು. ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸುವರು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕಲಘಟಗಿ: ತಾಲೂಕಿನ ಹಿರೇಹೊನಿಹಳ್ಳಿ ಗ್ರಾಮದಲ್ಲಿ ಭಗವಾನ್ ಮಹಾವೀರ್ ತೀರ್ಥಂಕರರ 2625ನೇ ಜಯಂತಿ ಅದ್ದೂರಿಯಾಗಿ ಜರುಗಿತು. ಶ್ರೀ 1008 ಮಹಾವೀರ ತೀರ್ಥಂಕರರ ಜೈನ ಮಂದಿರದಲ್ಲಿ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮಹಾವೀರ ತೀರ್ಥಂಕರರ ಭಾವಚಿತ್ರ ಮೆರವಣಿಗೆ ಸಂಭ್ರಮದಿಂದ ಮಾಡಲಾಯಿತು. ಸೋಮದೇವ್ ಭಯಾಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ರಾಜೀಶ್ ಉಪಾಧ್ಯ, ನೇಮಚಂದ್ರ ಬಸ್ತಿ, ಜಯಪಾಲ್ ಬಸ್ತಿ, ಬಸವರಾಜ್ ಸಂಕಪ್ಪನವರ, ಸಂತೋಷ್ ಲಂಗೋಟಿ, ಬಾಹುಬಲಿ ಮಟ್ಟಿ, ಕಿರಣ ಮಟ್ಟಿ ಇತರರಿದ್ದರು.

ಮಹಾವೀರರ ಸಂದೇಶ ಸರ್ವರೂ ಪಾಲಿಸಲಿ

• **ನವಲಗುಂದ:** ಮಹಾವೀರರ ಅಹಿಂಸಾ ಪರಮೋಧರ್ಮ ಎಂಬ ತತ್ವ ಪ್ರತಿಪಾದಿಸಿದ ಸಂದೇಶವು ಮಾನವೀಯತೆಯ ಮಹತ್ವವನ್ನು ಸಾರುತ್ತದೆ. ಅವರ ಸಂದೇಶ ಸರ್ವಧರ್ಮಕ್ಕೂ ಅನ್ವಯವಾಗಿದೆ ಎಂದು ಶಾಸಕ ಎನ್. ಎಚ್. ಕೋನರಡ್ಡಿ ಹೇಳಿದರು. ಅವರು ಪಟ್ಟಣದ ಭಗವಾನ್ ಶ್ರೀ ಆದಿನಾಥ ದಿಗಂಬರ ಜೈನ ಮಂದಿರದಲ್ಲಿ ಮಹಾವೀರ ತೀರ್ಥಂಕರರ ಜಯಂತಿ ಆಚರಣೆಯಲ್ಲಿ ಭಾಗವಹಿಸಿ ದೀಪಬೆಳಗಿಸಿ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಜೈನ ಸಮಾಜದ ಬಸದಿಯ ಜೀರ್ಣೋದ್ಧಾರದ ಕೆಲಸಕ್ಕೆ ನಾನು ಸಹಿತ ಸಹಾಯ ಮಾಡುವುದರ ಜೊತೆಗೆ ತಾವುಗಳು ಅದಷ್ಟು ಬೇಗನೆ ಎಸ್ಟಿಮೇಷನ್ ಮಾಡಿ ಕಳಿಸಿದ್ದಲ್ಲಿ ಸರ್ಕಾರದ ಅನುದಾನದ ಹಣ ಬಿಡುಗಡೆ ಮಾಡುವುದಾಗಿ ತಿಳಿಸಿದರು. ಇದೇ ಮೊದಲು ತಾಲೂಕು ಆಡಳಿತಸೌಧದಲ್ಲಿ ತಾಲೂಕು ಆಡಳಿತ ವತಿಯಿಂದ ತಹಶೀಲ್ದಾರ್ ಸುಧೀರ್ ಸಾವುಕಾರ ನೇತೃತ್ವದಲ್ಲಿ ಮಹಾವೀರ ಜಯಂತಿ ಆಚರಿಸಲಾಯಿತು. ಸಮಾಜದ ಅಧ್ಯಕ್ಷ, ನ್ಯಾಯವಾದಿ ವಿ.ಪಿ. ಪಾಟೀಲ ಮಾತನಾಡಿ, ಭಗವಾನ್ ಮಹಾವೀರ ಅವರು ಅಹಿಂಸೆ ಮತ್ತು ಸತ್ಯದ ಸಂದೇಶವನ್ನು ನೀಡಿ ಸಮಾಜದಲ್ಲಿ ಸೋದರತೆ ಹಾಗೂ ಭ್ರಾತೃತ್ವದಿಂದ ಬಾಳಲು ನಮಗೆಲ್ಲ ಒಳ್ಳೆಯ ಸಂದೇಶ ನೀಡಿದ್ದಾರೆ ಎಂದರು. ಪುರಸಭೆ ಮುಖ್ಯಾಧಿಕಾರಿ ಶರಣು ಪೂಜಾರ, ತಾಪಂ ಇಒ ಪಿ.ಆರ್. ಬಡಿಗೇರ, ಜೈನ ಸಮಾಜದ ಅಧ್ಯಕ್ಷ ವಿದ್ಯಾಧರ ಪಾಟೀಲ, ಹಿರಿಯರಾದ ವಿಜಯಕುಮಾರ ಪಾಟೀಲ, ಮಲಗೌಡರು ಪಾಟೀಲ, ಮನೋಹರ ಪಾಟೀಲ, ಅಶೋಕ ಬಿ ಪಾಟೀಲ, ಅಶೋಕ ಡಿ ಪಾಟೀಲ, ಶಾಂತಿನಾಥ ಪಾಟೀಲ, ಸುಕುಮಾರ ಪಾಟೀಲ, ಸಂತೋಷ ಪಾಟೀಲ, ಗಿರೀಶ್ ಪಾಟೀಲ, ಬಿಪಿನ್ ಪಾಟೀಲ, ರವಿ ಪಾಟೀಲ, ಜಿನ್ನಪ್ಪ ಹನ್ನಿ, ಹನುಮಂತಗೌಡ ಪಾಟೀಲ, ಶಾಮನಗೌಡ ಪಾಟೀಲ, ಧರಮಪ್ಪ ಹನ್ನಿ, ಸೋಮು ಪಾಟೀಲ ಇತರರಿದ್ದರು.



ನವಲಗುಂದ: ಪಟ್ಟಣದ ಭಗವಾನ್ ಶ್ರೀ ಆದಿನಾಥ ದಿಗಂಬರ ಜೈನ ಮಂದಿರದಲ್ಲಿ ಮಹಾವೀರ ತೀರ್ಥಂಕರರ ಜಯಂತಿ ಆಚರಣೆಯಲ್ಲಿ ಭಾಗವಹಿಸಿ ದೀಪಬೆಳಗಿಸಿ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮವನ್ನು ಶಾಸಕ ಎನ್. ಎಚ್. ಕೋನರಡ್ಡಿ ಉದ್ಘಾಟಿಸಿದರು.

ಹು-ಧಾ ಮಹಾನಗರ ಪಾಲಿಕೆ ಈಜುಕೊಳ ನಿರ್ವಹಣೆ ಕೊರತೆ | ದರ ಹೆಚ್ಚಳ

ಕ್ಷೀಣಿಸಿದ ಈಜುಗಾರರ ಸಂಖ್ಯೆ

▸ ವಿಜಯಕುಮಾರ ಬೆಳ್ಳೇರಿಮಠ

• **ಹುಬ್ಬಳ್ಳಿ:** ನಗರದ ಐಟಿ ಪಾರ್ಕ್ ಹತ್ತಿರವಿರುವ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಈಜುಕೊಳ ನಿರ್ವಹಣೆ ಕೊರತೆ ಹಾಗೂ ದರ ಹೆಚ್ಚಳದಿಂದ ಈಜುಗಾರರ ಸಂಖ್ಯೆ ಬಹಳ ಕ್ಷೀಣಿಸಿದೆ.

ಬೇಸಿಗೆ ಕಾಲದಲ್ಲಿ ಈಜುಕೊಳಕ್ಕೆ ಬರುವವರ ಸಂಖ್ಯೆ ಹೆಚ್ಚಾಗುತ್ತಿತ್ತು. ಆದರೆ ಸ್ವಚ್ಛತೆ ಹಾಗೂ ನಿರ್ವಹಣೆ ಸರಿಯಾಗಿ ಮಾಡದ ಕಾರಣ ಈಜುಕೊಳ ಅವ್ಯವಸ್ಥೆ ಗೂಡಾಗಿದ್ದು, ಈಜು ಸ್ಪರ್ಧಿಗಳ ಹಾಗೂ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. 1977 ರಲ್ಲಿ 1272 ಚದರ ಪೂಟ್ ವಿಸ್ತೀರ್ಣದಲ್ಲಿ ರಾಷ್ಟ್ರೀಯ ಮಟ್ಟದ ಈಜುಕೊಳ ನಿರ್ಮಿಸಲಾಗಿದೆ. ಇತ್ತೀಚೆಗೆ ನಗರದ ಈಜು ಕ್ರೀಡಾಪಟುಗಳ ಪ್ರೋತ್ಸಾಹಿಸಲು, ಸಾರ್ವಜನಿಕರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಸ್ಮಾರ್ಟ್ ಸಿಟಿ ಯೋಜನೆಯಡಿ 8.5 ಕೋಟಿ ರೂ. ವೆಚ್ಚದಲ್ಲಿ ಪುನರ್ ಅಭಿವೃದ್ಧಿ ಮಾಡಲಾಗಿದೆ. ಟಿಕೆಟ್ ಕೌಂಟರ್, ಪುರುಷರು, ಮಹಿಳೆಯರ ಡ್ರೇಸಿಂಗ್ ರೂಂ., ಶೌಚಾಲಯ, ಆಡಳಿತ ಕಚೇರಿ ಹಾಗೂ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿ ನೀಡಲು ಕೊಠಡಿ, ಪಾರ್ಕಿಂಗ್ ಹಾಗೂ ಪೆವಿಲಿಯನ್ ಅಭಿವೃದ್ಧಿ ಪಡಿಸಲಾಗಿತ್ತು. ನಿರ್ವಹಣೆ ಇಲ್ಲದ ಕಾರಣ ಪುರುಷರು, ಮಹಿಳೆಯರಿಗೆ ಶವರ್, ಶೌಚಲಯವನ್ನು, ಸ್ನಾನಗೃಹ ಗಬ್ಬೆದ್ದು ನಾರುತ್ತಿದೆ. ಮಕ್ಕಳಿಗಾಗಿ ಇರುವ ಬೇಬಿ ಈಜುಕೊಳ ಸಹ ನಿರ್ವಹಣೆಯಾಗುತ್ತಿಲ್ಲ.

ನಗರದಲ್ಲಿರುವ ಏಕೈಕ ಸಾರ್ವಜನಿಕ ಈಜುಕೋಳ ಇದ್ದಾಗಿದ್ದು, ಮಹಾನಗರ ಪಾಲಿಕೆ ನಿರ್ವಹಣೆ ಮಾಡುತ್ತಿದೆ. ಈಜುಕೊಳದ ದರ 50 ರೂ.ನಿಂದ 100 ರೂ.ಗೆ ಹೆಚ್ಚಿಸಿದ ಕಾರಣ ಈಜುಗಾರರ ಸಂಖ್ಯೆ ಬಹಳ ಕಡಿಮೆಯಾಗಿದೆ. ಈ ಹಿಂದೆ 50 ರೂ. ದರವಿದ್ದಾಗ ಪ್ರತಿದಿನ 400-500 ಜನ ಆಗಮಿಸುತ್ತಿದ್ದರು. ದರ ಹೆಚ್ಚಳದಿಂದ ಸಂಖ್ಯೆ ಕಡಿಮೆಯಾಗಿದ್ದು, 50-70 ಜನಬರುತ್ತಿದ್ದಾರೆ. ಸಂಜೆ 4ರಿಂದ 6 ಗಂಟೆಗೆವರೆಗೆ ಮಹಿಳೆಯರಿಗೆ ಅವಕಾಶವಿದೆ. ಈಜುಕೊಳದಲ್ಲಿ ಮೂವರು ಪುರುಷ ಜೀವ ರಕ್ಷಕರು (ಲೈಫ್ ಗಾರ್ಡ್ಸ್) ಇದ್ದಾರೆ. ಮಹಿಳಾ ಜೀವ ರಕ್ಷಕರು ಇಲ್ಲದ ಕಾರಣ ಈಜುಕೊಳಕ್ಕೆ ಬರುವ ಮಹಿಳೆಯರ ಸಂಖ್ಯೆಯೂ ಇಳಿಕೆಯಾಗಿದೆ.

- ಈಜುಕೊಳ ನಿರ್ವಹಣೆಗೆ 10 ಜನರ ಸಿಬ್ಬಂದಿ ಅವಶ್ಯ
- ಕಳೆದ 8 ತಿಂಗಳಿನಿಂದ ಸಿಬ್ಬಂದಿಗೆ ಸಂಬಳ ನೀಡದ ಕಾರಣ ಆರು ಜನರು ಕೆಲಸ ಬಿಟ್ಟಿದ್ದು, ಈಗ ಕೇವಲ ಐದು ಜನ ಇದ್ದಾರೆ
- ಇದರಿಂದ ಸ್ವಚ್ಛತೆಗೆ ತೊಂದರೆ
- ಜೀವರಕ್ಷಕರು ಮತ್ತು ಸಿಬ್ಬಂದಿ ಸಂಖ್ಯೆಯನ್ನು ಹೆಚ್ಚಿಸುವುದು ಅಗತ್ಯ
- ಜೀವನ ನಡೆಸಲು ಕಷ್ಟವಾಗುತ್ತಿರುವುದರಿಂದ ಕೆಲಸ ಬಿಡುತ್ತಿದ್ದು, ಮಹಾನಗರ ಪಾಲಿಕೆ ಸಂಬಳ ನೀಡಬೇಕು ಎಂದ ಸಿಬ್ಬಂದಿ



ತರಬೇತಿ ಶಿಬಿರ ಆಯೋಜಿಸಿ

ಮಕ್ಕಳಿಗೆ ಬೇಸಿಗೆ ರಜೆ ಹಿನ್ನೆಲೆ ಗೂಗಲ್‌ನಲ್ಲಿ ಈಜುಕೊಳ ಇರುವುದು ತಿಳಿದು ಇಲ್ಲಿಗೆ ಬಂದಿದ್ದೆ. ಆದರೆ ಇಲ್ಲಿ ಸರಿಯಾಗಿ ನಿರ್ವಹಣೆ ಇಲ್ಲ. ದರವನ್ನು ಹೆಚ್ಚಿಸಿದ್ದಾರೆ. ಶುಲ್ಕ ಕಡಿಮೆ ಮಾಡುವ ಜತೆಗೆ ಮಕ್ಕಳಿಗಾಗಿ ಈಜು ತರಬೇತಿ ಶಿಬಿರವನ್ನು ಆಯೋಜಿಸಬೇಕು ಎಂದು ಉಣಕಲ್‌ನ ಪಾಲಕರೊಬ್ಬರು ತಿಳಿಸಿದರು.



ದಿಗಂತ ವಿಶೇಷ

ಈಜುಕೊಳದ ನಿರ್ವಹಣೆ ಮಹಾನಗರ ಪಾಲಿಕೆಯಿಂದ ಮಾಡಲಾಗುತ್ತಿದೆ. ಅಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ತಕ್ಷಣ ವೇತನ ಪಾವತಿಸಲಾಗುವುದು.
■ **ರುದ್ರೇಶ ಘಾಳಿ, ಆಯುಕ್ತ, ಹು-ಧಾ ಮಹಾನಗರ ಪಾಲಿಕೆ**

ಈಜುಕೊಳ ನಿರ್ವಹಣೆ ಮಾಡುವ ಅವಶ್ಯಕತೆಯಿದೆ. ಟೆಂಡರ್ ನೀಡುವ ಮೂಲಕ ಈಜಕೋಳ ಸುಧಾಣೆ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಲಾಗುವುದು.
■ **ಮೀನಾಕ್ಷಿ ವಂಟಮುರಿ, ಸದಸ್ಯೆ, ಮಹಾನಗರ ಪಾಲಿಕೆ**

ಊಟದ ಬದಲು ಮೊಸರು, ಅವಲಕ್ಕಿ!

▸ ರವಿ. ಸಿ.ಕಮಡೊಳ್ಳಿ

• **ಕುಂದಗೋಳ:** ಪಟ್ಟಣದ ಇಂದಿರಾ ಕ್ಯಾಂಟೀನ್‌ನಲ್ಲಿ ಅಡುಗೆ ಗ್ಯಾಸ್ ಕೊರತೆಯ ಪರಿಣಾಮವಾಗಿ ಬುಧವಾರ ಮಧ್ಯಾಹ್ನದ ಊಟದ ವ್ಯವಸ್ಥೆಯಲ್ಲಿ ಬದಲಾವಣೆ ಕಂಡುಬಂದಿದ್ದು, ನಿಯಮಿತ ಊಟದ ಬದಲು ಮೊಸರು ಅವಲಕ್ಕಿ ವಿತರಿಸಲಾಯಿತು.

ಬುಧವಾರ ಮಧ್ಯಾಹ್ನ ಊಟದ ಬದಲಿಗೆ ಮೊಸರು ಅವಲಕ್ಕಿ ನಿಡಲಾಗಿದೆ. ಕಳೆದ ಸುಮಾರು 15 ದಿನಗಳ ಹಿಂದೆಯೂ ಗ್ಯಾಸ್ ಸಿಲಿಂಡರ್ ಸಮಸ್ಯೆಯಿಂದ ಬೆಳಗ್ಗಿನ ಉಪಹಾರದಲ್ಲಿ ಪಲಾವ್ ನೀಡಲಾಗಿತ್ತು. ಇದೀಗ ಮತ್ತೆ ಅದೇ ಸಮಸ್ಯೆ ಮರುಕಳಿಸಿದ್ದು, ಬಡವರಿಗಾಗಿ ನೀಡಬೇಕಾದ ಮಧ್ಯಾಹ್ನದ ಊಟಕ್ಕೆ ಪರ್ಯಾಯವಾಗಿ ಮೊಸರು ಅವಲಕ್ಕಿ ನೀಡಲಾಗಿದೆ. ಇದರಿಂದಾಗಿ ಬಡಜನರ ಭರವಸೆಯ ಕೇಂದ್ರವಾಗಿರುವ ಇಂದಿರಾಕ್ಯಾಂಟಿನ್‌ನಲ್ಲಿ ಗ್ಯಾಸ್ ಕೊರತೆಯ ಸಮಸ್ಯೆ ಮತ್ತೆ ತಲೆದೋರಿರುವುದು ಸಾರ್ವಜನಿಕರಲ್ಲಿ ಆತಂಕ ಹುಟ್ಟಿಸಿದೆ.

ನಿರ್ಲಕ್ಷ್ಯ ಏಕೆ?

ಕ್ಯಾಂಟೀನ್‌ಗೆ ಊಟಕ್ಕೆ ಬಂದ ರಾಜಪ್ಪ ಮಾತನಾಡಿ, ಇಲ್ಲಿ ಸಾಮಾನ್ಯವಾಗಿ ಬಡವರ ಹೊಟ್ಟೆ ತುಂಬುತ್ತಿತ್ತು. ಆದರೆ ಇಂದು ಅನ್ನ ಸಿಗಲಿಲ್ಲ. ಸಿಲಿಂಡರ್ ಇಲ್ಲವೆಂದು ಹೇಳುತ್ತಾರೆ. ಬಡವರ ಊಟದ ವಿಷಯದಲ್ಲಿ ನಿರ್ಲಕ್ಷ್ಯ ಯಾಕೆ? ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಳೆದ ಎರಡು ದಿನಗಳಿಂದ ಗ್ಯಾಸ್ ಏಜೆನ್ಸಿಯವರನ್ನು ಸಂಪರ್ಕಿಸುತ್ತಿದ್ದೇವೆ. ಆದರೆ ಸ್ಟಾಕ್ ಲಭ್ಯವಿಲ್ಲ ಎಂದು ತಿಳಿಸುತ್ತಿದ್ದಾರೆ. ಸಿಲಿಂಡರ್ ದೊರೆಯದ ಕಾರಣ ಪರ್ಯಾಯವಾಗಿ ಮೊಸರು ಅವಲಕ್ಕಿ ನೀಡಬೇಕಾಯಿತು.
■ **ಕೃಷ್ಣಾ ಚವ್ಹಾಣ, ಕ್ಯಾಂಟೀನ್ ನಿರ್ವಾಹಕ**

ಗ್ಯಾಸ್ ಏಜೆನ್ಸಿ ಅವರೊಂದಿಗೆ ಮಾತುಕತೆ ನಡೆಸಲಾಗಿದೆ. ಯಾವುದೇ ಗಂಭೀರ ಸಮಸ್ಯೆ ಇಲ್ಲ. ಗುರುವಾರ ಬೆಳಗ್ಗೆ ಸಿಲಿಂಡರ್ ಲಭ್ಯವಾಗಲಿದೆ.
■ **ಬಸವರಾಜ ಸಂಶಿ, ತಾಲೂಕು ಆಹಾರ ಪರಿಶೀಲಕ**



ಬೋಧನೆಗೆ ಅರ್ಪಣಾ ಮನೋಭಾವ ಮುಖ್ಯ

• **ಧಾರವಾಡ:** ಬೋಧನೆಗೆ ಅರ್ಪಣಾ ಮನೋಭಾವ ಮುಖ್ಯ. ವಿದ್ಯಾರ್ಥಿ ಕೇಂದ್ರಿತ ಕಲಿಕೆಗೆ ಹೆಚ್ಚು ಮಹತ್ವ ನೀಡಬೇಕು. ಗಣಿತಶಾಸ್ತ್ರ ಅಧ್ಯಯನದಿಂದ ಅವಕಾಶಗಳು ವಿಫುಲವಾಗಿವೆ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ.ಎ.ಎಂ.ಖಾನ್ ಹೇಳಿದರು.

ಪ್ರೊ. ಎಚ್.ಬಿ.ವಾಲೀಕಾರ ಮತ್ತು ಪ್ರೊ. ಸಿ.ಎಸ್.ಸಾಲಿಮಠ ದತ್ತಿ ಪ್ರಯುಕ್ತ ಇಲ್ಲಿನ ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ಭವನದಲ್ಲಿ ಹಮ್ಮಿಕೊಂಡ ಪ್ರಾಧ್ಯಾಪಕರ ಬೋಧನಾ ವೃದ್ಧಿಯ ರಾಷ್ಟ್ರ ಮಟ್ಟದ ಕಾರ್ಯಾಗಾರದಲ್ಲಿ ಸಮಾರೋಪ ಭಾಷಣ ಮಾಡಿದರು. ಗಣಿತ ಅತ್ಯಂತ ಸರಳ ವಿಷಯ. ಆಸಕ್ತಿ ಮತ್ತು ಮನಃಪೂರಕ ಅಧ್ಯಯನದಿಂದ ಬೇಗನೇ ಅರ್ಥವಾಗಲಿದೆ. ಗಣಿತಶಾಸ್ತ್ರ ವಿಭಾಗಕ್ಕೆ ಸುಸಜ್ಜಿತ ಪ್ರಯೋಗಾಲಯ ಒದಗಿಸಿದೆ ಎಂದರು.

ಪ್ರಾಧ್ಯಾಪಕ ಡಾ.ಚಂದ್ರಶೇಖರ ಜೆ ಮಾತನಾಡಿ, ಡೇಟಾ ಸೈನ್ಸ್ ಹಾಗೂ ಕೃತಕ ಬುದ್ಧಿಮತ್ತೆ ಭವಿಷದಲ್ಲಿ ಮುನ್ನಲೆಗೆ ಬರಲಿವೆ. ಗಣಿತ ವಿಷಯದ ವಿದ್ಯಾರ್ಥಿಗಳು ತಂತ್ರಜ್ಞಾನ ಹಾಗೂ ತಂತ್ರಾಂಶಗಳ ಅರಿವು ಹೊಂದಬೇಕು. ಭವಿಷ್ಯದ ದೃಷ್ಟಿಯಿಂದ ಮೆಥೆಮೇಟಿಕಾ ತಂತ್ರಾಂಶ ಕಲಿಯುವುದು ಹೆಚ್ಚು ಸೂಕ್ತ. ಮುಂಬರುವ ದಿನಗಳಲ್ಲಿ ಕ್ವಾಂಟಮ್ ಮೇಥಮೇಟಿಕ್ಸ್ ಹೆಚ್ಚು ಮುನ್ನಲೆಗೆ ಬರಲಿದೆ ಎಂದರು.

ಪ್ರಾದೇಶಿಕ ವಿಜ್ಞಾನ ಕೇಂದ್ರದ ವಿಶ್ರಾಂತ ನಿರ್ದೇಶಕ ಡಾ. ವೀರಣ್ಣ ಬೋಳಿಶೆಟ್ಟಿ, ಪ್ರಾಯೋಗಿಕ ಬೋಧನೆ ಮತ್ತು ಕಲಿಕಗೆ ಹೆಚ್ಚು ಮಹತ್ವ ನೀಡುವ ಅವಶ್ಯಕತೆ ಒತ್ತಿ ಹಳಿದರು. ವಿಜ್ಞಾನ ವಿಷಯಗಳ ಬೋಧನೆಯಲ್ಲಿ ಮಾದರಿಗಳ ಮೂಲಕ ಬೋಧಿಸುವುದು ಹೆಚ್ಚು ಪರಿಣಾಮಕಾರಿ. ಗಣಿತದ ಮಾದರಿಗಳನ್ನು ತಂತ್ರಜ್ಞಾನದಿಂದ ಸುಲಭವಾಗಿ ಕಲಿಯಲು ಸಾಧ್ಯವಿದ್ದು, ಸೃಜನಶೀಲತೆಯಿಂದ ಪ್ರಯತ್ನಿಸುವಂತೆ ಹೇಳಿದರು.

ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಎಸ್.ಸಿ.ಶಿರಾಳಶೆಟ್ಟಿ ಮಾತನಾಡಿ, ಭವಿಷ್ಯದ ಗಮನಿಸಿ, ವಿದ್ಯಾರ್ಥಿಗಳು ಉದ್ಯೋಗ ಅವಕಾಶ ಗಳಿಸಲು ಅವರಿಗೆ ಬೋಧನೆ ಮಾಡಬೇಕು. ವಿದ್ಯಾರ್ಥಿಗಳಲ್ಲಿ ಕೌಶಲ್ಯ ಬೆಳೆಸಲು ಕಾರ್ಯಕ್ರಮ ರೂಪಿಸಿದ್ದಾಗಿ ತಿಳಿಸಿದರು. ಕಾರ್ಯಾಗಾರದ ಸಂಘಟನಾ ಕಾರ್ಯದರ್ಶಿ ಪ್ರೊ. ಎಚ್.ಎಸ್.ರಾಮನೆ, ಪ್ರೊ. ಆಶಾ ಎಸ್.ಕೆ, ಪ್ರೊ. ಆರ್.ಎಸ್.ದ್ಯಾವನಾಳ, ಡಾ.ಬಿ.ಪರ್ವತಾಲು ಜೆ.ಎಸ್.ಎಸ್ ಕಾಲೇಜಿನ ಡಾ.ಶಶಿಕಾಂತ, ಸಂಶೋಧಕರು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೆಥಮೇಟಿಕಾ ತರಬೇತಿ

ರಾಜ್ಯದ ವಿವಿಧ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯ 9 ಸ್ನಾತಕೋತ್ತರ ಗಣಿತದ ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಸೇರಿದಂತೆ 700 ವಿದ್ಯಾರ್ಥಿಗಳು ಮೆಥಮೇಟಿಕಾ ತಂತ್ರಾಂಶದ ಪ್ರಾಯೋಗಿಕ ತರಬೇತಿ ಪಡೆದರು.



ನಾಡಿನ ಕಲೆ-ಸಾಹಿತ್ಯ ಉಳಿಸಿ, ಬೆಳೆಸಿ: ಮಂಜುನಾಥ ಹಗೇದಾರ

• **ಧಾರವಾಡ:** ಆಧುನಿಕ ಬಿರುಗಾಳಿಗೆ ಸಿಲುಕಿನ ನಶಿಸುತ್ತಿರುವ ಸಾಹಿತ್ಯ, ಕಲೆ, ಪರಂಪರೆ ಉಳಿಸಿ, ಬೆಳೆಸಲು ಅಣಿಯಾಗಲು ಉತ್ತರ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಮಂಜುನಾಥ ಹಗೇದಾರ ಅವರು ಕಲಾವಿದರಿಗೆ ಸಲಹೆ ನೀಡಿದರು.

ಡಿ.ಕೆ.ಹಾವೇರಿಪೇಟ್ ಫೌಂಡೇಶನ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ನಗರದ ರಂಗಾಯಣದ ಸಾಂಸ್ಕೃತಿಕ ಸಮುಚ್ಚಯ ಭವನದಲ್ಲಿ ಭಾನುವಾರ ನಡೆದ ರಂಗಚಿಂತನೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ನಾಡಿನ ಸಾಂಸ್ಕೃತಿಕ ಶ್ರೀಮಂತ ಪರಂಪರೆ ಎತ್ತಿಹಿಡಿದ ಧಾರವಾಡ ಸಾಹಿತ್ಯ, ಕಲೆ, ಸಂಗೀತದ ತವರೂರು. ಈ ಪರಂಪರೆ ಉಳಿಯಲು ಕಲೆ ಹಾಗೂ ಕಲಾವಿದರಿಗೆ ಪ್ರೋತ್ಸಾಹಿಸುವ ಕೈಂಕರ್ಯಗಳು ನಿತ್ಯ ನಿರಂತರ ನಡೆಯಬೇಕು ಎಂದರು.

ಶಿಕ್ಷಕ ರಂಗನಾಥ ವಾಲ್ಮೀಕಿ ಮಾತನಾಡಿ, ಕಲೆ ಮತ್ತು ಕಲಾವಿದರು ಈ ನಾಡಿನ ಸಂಪತ್ತು. ಈ ಎರಡೂ ಉಳಿದಾಗ ಮಾತ್ರ ಸಂಸ್ಕೃತಿ ಉಳಿಯಲು ಸಾಧ್ಯವಿದೆ. ಈ ಕಲೆಗಳು ನಶಿಸಿದರೆ, ನಮ್ಮ ಅಸ್ಮಿತೆಯೇ ನಾಶವಾಗಲಿದೆ. ರಂಗಭೂಮಿ ಉಳಿಯಲು ಉತ್ತರ ಕರ್ನಾಟಕದಲ್ಲಿ ಜಾತ್ರೆಗಳು ಕಾರಣವಾಗಿವೆ. ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿ ಕಲಾವಿದರು ಕೇವಲ ಮನರಂಜನೆ ನೀಡದೆ ಸಮಾಜಕ್ಕೆ



ಒಳ್ಳೆಯ ಸಂದೇಶ ನೀಡುವ ಜವಾಬ್ದಾರಿಯೂ ಕಲಾವಿದ ಮೇಲಿದೆ ಎಂದರು. ಫೌಂಡೇಶನ್ ಅಧ್ಯಕ್ಷ ಕಲ್ಮೇಶ್ ಹಾವೇರಿಪೇಟ್ ಮಾತನಾಡಿ, ಇಡೀ ಗ್ರಾಮೀಣ ಸಮುದಾಯದ ಪರಂಪರೆ ಮತ್ತು ಬದುಕು ಕಲೆಗಳಲ್ಲಿ ಅಡಗಿದೆ. ನಮ್ಮ ಸಂಸ್ಕೃತಿ ಪ್ರತೀಕವಾದ ಗ್ರಾಮೀಣ ಕಲೆಗಳು ಬೆಳೆಸಲು, ಇಂತಹ ಕಾರ್ಯಗಳ ಅಗತ್ಯವಿದೆ ಎಂದರು. ಕಾರ್ಯಕ್ರಮದಲ್ಲಿ ಕಲಾಸಂಗಮ ಸಂಸ್ಥೆಯ ಅಧ್ಯಕ್ಷ ಪ್ರಭು ಹಂಚಿನಾಳ, ಲಕ್ಷ್ಮೀ ಹಾವೇರಿಪೇಟ್, ರಂಗಭೂಮಿ ಕಲಾವಿದರಾದ ಎನ್.ಎ.ದೇಸಾಯಿ, ಬಸವರಾಜ ಮುಳಗೋಡ, ನಿರ್ದೇಶಕ ಅರವಿಂದ ಮುಳಗುಂದ, ಅನೇಕ ಕಲಾವಿದರು ಇದ್ದರು.

ಬೆಲೆ ಏರಿಕೆ ಬಗ್ಗೆ ಬಿಜೆಪಿ ಉತ್ತರಿಸಲಿ: ಸಂತೋಷ ಲಾಡ್

• **ಧಾರವಾಡ:** ಕೇಂದ್ರ ಸರ್ಕಾರದ ತಪ್ಪು ಆರ್ಥಿಕ ನೀತಿಗಳಿಂದಾಗಿ ಸಾಮಾನ್ಯ ಜನರ ಬದುಕು ದುಸ್ತರವಾಗಿದೆ. ಬಡವರ ಕಷ್ಟ ಅವರಿಗೆ ಅರ್ಥವಾಗುತ್ತಿಲ್ಲ. ಬೆಲೆ ಏರಿಕೆ ಕುರಿತು ಬಿಜೆಪಿ ನಾಯಕರು ಉತ್ತರಿಸಬೇಕು ಎಂದು ಸಚಿವ ಸಂತೋಷ ಲಾಡ್ ಆಗ್ರಹಿಸಿದರು.



ಬುಧವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ರಾಜಕೀಯಕ್ಕಾಗಿ ಟೀಕೆ ಮಾಡುತ್ತಿಲ್ಲ. ಚುನಾವಣೆ ಬಂದಾಗಷ್ಟೇ ಬೆಲೆ ಇಳಿಸುವ ನಾಟಕವಾಡಿ, ನಂತರ ಮತ್ತೆ ಜನರ ಜೇಬಿಗೆ ಕತ್ತರಿ ಹಾಕುವುದು ಸರಿಯಲ್ಲ ಎಂದರು.

2014ರಲ್ಲಿ ಎಲ್‌ಪಿಜಿ ಮತ್ತು ತೈಲ 5.30 ಮಿಲಿಯನ್ ಮೆಟ್ರಿಕ್ ಸಂಗ್ರಹಿಸಿತ್ತು. ಬಿಜೆಪಿ ಸರ್ಕಾರ 12 ವರ್ಷಗಳಲ್ಲಿ ಇದರ ಪ್ರಮಾಣ ಹೆಚ್ಚಿಸಿಲ್ಲ. ಅರುಣ್ ಜೇಟ್ಲಿ 6 ಮಿಲಿಯನ್ ಮೆಟ್ರಿಕ್ ಟನ್ ಹೆಚ್ಚಿಸುವುದಾಗಿ ಹೇಳಿದ್ದರೂ ಅದನ್ನೂ ಮಾಡಿಲ್ಲ ಎಂದರು.

ಉಪಚುನಾವಣೆಯಲ್ಲಿ ಎರಡು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಗೆಲುವು ಖಚಿತ. ನಮ್ಮ ಪ್ರತಿಪಕ್ಷಗಳು ರಾಜಕೀಯ ಟೀಕೆಗಳಲ್ಲಿ ನಿರತವಾಗಿ, ಆದರೆ ಅಭಿವೃದ್ಧಿ ಮರೆತಿವೆ. ಪ್ರಬುದ್ಧ ಮತದಾರರು, ಕೆಲಸ ಮಾಡುವವರಿಗೆ ತಮ್ಮ ಮತ ನೀಡಲಿದ್ದಾರೆ ಎಂದು ಹೇಳಿದರು. ಎರಡು ಕ್ಷೇತ್ರಗಳ ಅಭ್ಯರ್ಥಿಗಳ ಪರವಾಗಿ ಪ್ರಚಾರಕ್ಕೆ ನಾನೂ ಸಹ ತೆರಳಲಿದ್ದೇನೆ ಎಂದ ಸಚಿವ ಲಾಡ್, ಡಿ.ಕೆ.ಶಿವಕುಮಾರ ವಿರುದ್ಧ ಘೋಷಣೆ ಕೂಗಿದ ಮಾಹಿತಿ ತಮಗಿಲ್ಲ. ಜನರಿಂದ ಇಂತಹ ವಿಷಯ ಬಂದಾಗ ಹೈಕಮಾಂಡ್ ಸರಿಪಡಿಸಲಿದೆ. ಜನರು ಬೆಲೆ ಏರಿಕೆಯಿಂದ ತತ್ತರಿಸಿದ್ದಾರೆ. ಈಗ ಜನರಿಗೆ ಬೇಕಿರುವುದು ಭರವಸೆ ಅಲ್ಲ, ವಾಸ್ತವದ ಪರಿಹಾರ. ಮುಂಬರುವ ಚುನಾವಣೆಯಲ್ಲಿ ಜನರು ಬಿಜೆಪಿಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಹನುಮ ಜಯಂತಿ ಸಂಭ್ರಮ



• **ಧಾರವಾಡ:** ಸತ್ತೂರಿನ ನಾರಾಯಣ ಪಾರಾಯಣ ಬಳಗದ ವತಿಯಿಂದ ಬಾಲ ಹನುಮನ ತೊಟ್ಟಿಲೋತ್ಸವ ಮೂಲಕ ಹನುಮ ಜಯಂತಿ ಸಂಭ್ರಮ-ಸಡಗರದಿಂದ ಆಚರಿಸಲಾಯಿತು.

ವನಸಿರಿ ನಗರದ ವಿಠ್ಠಲ ಅಂಬೇಕರ ನಿವಾಸದಲ್ಲಿ ಉಪನ್ಯಾಸ ನೀಡಿದ ಹನುಮಂತ ವಿನಾಪುರ, ಹನುಮನ ದೇವರ ಅವತಾರವೇ, ಶ್ರೀರಾಮಚಂದ್ರನ ಆರಾಧನೆಯಾಗಿದೆ ಎಂದರು.ಭಕ್ತಿ, ಸೇವೆ ಮತ್ತು ಮನೋಭಾವ ತೋರಿಸಲು ಚಿರಂಜೀವಿಯಾದ ವಾಯುದೇವ ಮಹಿಮಾತೀತ. ಭಕ್ತ ಪಥದಲ್ಲಿ ಶ್ರೇಷ್ಠತೆ ಮೆರೆದ ಕಾರಣ ಪ್ರತಿ ಊರಲ್ಲಿ ಹನುಮನ ಗುಡಿಗಳಿವೆ ಎಂದರು.

ರಘೋತ್ತಮ ಅವಧಾನಿ, ಡಾ. ಶ್ರೀನಾಥ, ವೆಂಕಟೇಶ ಕುಲಕರ್ಣಿ, ಹನುಮಂತ ಪುರಾಣಿಕ, ಸಂಜೀವ ಗೋಳಸಂಗಿ, ಸಂಜೀವ ಜೋಶಿ, ಆನಂದ ದೇಶಪಾಂಡೆ, ಕೇಶವ ಕುಲಕರ್ಣಿ, ಎಂ.ಆರ್.ಕಲ್ಕೋಟಿ, ಕೃಷ್ಣ ಹುನಗುಂದ ಸೇರಿದಂತೆ ಇತರರಿದ್ದರು.

ಶ್ರೀರಾಮನ ಆದರ್ಶ ಸಮಾಜಕ್ಕೆ ದಾರಿದೀಪ

• **ಅಣ್ಣಿಗೇರಿ:** ಪಟ್ಟಣದಲ್ಲಿ ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗದಳದ ಅಣ್ಣಿಗೇರಿ ಮತ್ತು ನವಲಗುಂದ ಘಟಕದ ವತಿಯಿಂದ ರಾಮ ನವಮಿ ಪ್ರಯುಕ್ತ ಹಿಂದೂ ಧರ್ಮಸಭೆ ಕಾರ್ಯಕ್ರಮ ಜರುಗಿತು.

ಶ್ರೀರಾಮನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದ ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಉದ್ಘಾಟಿಸಿ ಮಾತನಾಡಿ, ಪ್ರಭು ಶ್ರೀರಾಮನ ಆದರ್ಶಗಳು ಇಂದಿನ ಸಮಾಜಕ್ಕೆ ದಾರಿದೀಪವಾಗಿವೆ. ರಾಮ ರಾಜ್ಯದ ಕನಸು ನನಸಾಗುವ ಸಂದರ್ಭ ಬಂದಿದೆ. ನಮ್ಮ ಭವ್ಯ ಪರಂಪರೆ ಶಾಶ್ವತವಾಗಿ ಬೆಳಗಲಿ

ಧರ್ಮ ಮತ್ತು ನ್ಯಾಯದ ಹಾದಿಯಲ್ಲಿ ನಡೆಯುವುದು ರಾಮರಾಜ್ಯದ ಮೂಲ ಮಂತ್ರವಾಗಿದೆ ಎಂದರು.

ಮುಖ್ಯ ವಕ್ತಾರ ಕಿರಣ್‌ಕುಮಾರ್ ವಿವೇಕವಂಶಿ ಮಾತನಾಡಿ, ಹಿಂದುಗಳು ಸದಾಕಾಲ ಜಾಗೃತರಾಗಿರಬೇಕು. ದೇಶ ಮತ್ತು ಧರ್ಮಕ್ಕೆ ತೇಜೋವದೆ, ಭಯೋತ್ಪಾದನೆ, ಲವ್ ಜಿಹಾದ್ ಇಂತಹ ಹಲವಾರು ತೊಂದರೆಗಳಿಂದ ಸದಾಕಾಲ ಜಾಗೃತರಾಗಿ ದುಷ್ಟರಿಂದ ರಕ್ಷಣೆ ಅವಶ್ಯ ಎಂದರು.

ವಿಶ್ವ ಹಿಂದೂ ಪರಿಷತ್ ಜಿಲ್ಲಾ ಅಧ್ಯಕ್ಷ ಮಹೇಶ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಷಣ್ಮುಖ ಗುರಿಕಾರ, ಮಹಾಬಲೇಶ್ವರ ಹೆಬಸೂರ, ಶಿವಶಂಕರ ಕಲ್ಲೂರ, ಶಿವಯೋಗಿ ಸುರಕೋಡ, ನಾಗಪ್ಪ ದಳವಾಯಿ, ಚಂಬಣ್ಣ ಸುರಕೋಡ, ಭರತೇಶ ಜೈನ, ಭಗವಂತ ಪಟ್ಟಣ್ಣವರ, ವಿರೇಶ ಕುಬಸದ, ಶಿವಕುಮಾರ ಬಳಿಗೇರ,ರವಿ ಯಳವತ್ತಿ, ಮುತ್ತು ಕೊಪ್ಪದ ನಿಂಗಪ್ಪ ಹಣವಾಳ ಸೇರಿದಂತೆ ಇತರರಿದ್ದರು.



ನೆಮ್ಮದಿ ಬದುಕಿಗೆ ಭಗವದ್ಗಿತೆ ಸಹಕಾರಿ



• **ಅಳ್ನಾವರ:** ಭಗವದ್ಗಿತೆ ಓದುವುದು ಮತ್ತು ಆಲಿಸುವುದರಿಂದ ಮಾನಸಿಕ ತೋಳಲಾಟಗಳು ದೂರಾಗಿ ನೆಮ್ಮದಿಯ ಬದುಕನ್ನು ಕಂಡುಕೊಳ್ಳಬಹುದಾಗಿದೆ ಎಂದು ಸಾಮಾಜಿಕ ಚಿಂತಕ ಮಹಾದೇವ ಸಾಗರೇಕರ ಹೇಳಿದರು.

ಪಟ್ಟಣದ ಕಲ್ಮೇಶ್ವರ ದೇವಸ್ಥಾನದಲ್ಲಿ ಆಯೋಜಿಸಿರುವ ಭಗವದ್ಗಿತೆ ಪಠಣದ 10 ದಿನಗಳ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ಸಮಾಜದಲ್ಲಿ ಶ್ರೀಕೃಷ್ಣನ ಸಂದೇಶಗಳು ಪ್ರಸ್ತುತ ಸಮಾಜಕ್ಕೆ ಅತೀ ಅವಶ್ಯವಿದ್ದು ನಮ್ಮ ಪರಂಪರೆಯ ಪರಿಕಲ್ಪನೆಯನ್ನು ಮೂಡಿಸಲು ಈ ಕಾರ್ಯಕ್ರಮ ಸಹಕಾರಿಯಾಗಲಿದೆ ಎಂದರು.

ಶಿಬಿರದ ಆಯೋಜಕರಾದ ಶಿಕ್ಷಕ ಪುಂಡಲೀಕ ಘಾರ್ದಿ ಮಾತನಾಡಿ, ಧರ್ಮ ರಕ್ಷಣೆ ಮತ್ತು ಜಾಗೃತಿ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದ್ದು ಭಗವದ್ಗಿತೆ ಪಾರಾಯಣದಿಂದ ಆಶೆ ನಾಶವಾಗುತ್ತದೆ, ಮಕ್ಕಳಲ್ಲಿ ಜ್ಞಾನ ವೃದ್ಧಿಯಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಸಂಸ್ಕೃತಿ ಉಳಿಯುತ್ತದೆ ಎಂದರು.


ಬ್ಯಾಂಕ್ ವ್ಯವಸ್ಥಾಪಕಿ ಸಂತೋಷಿ ಕಲಾಲ ಮಾತನಾಡಿ, ಏಕಾಗ್ರತೆ ಮೂಡಿಸಿಕೊಳ್ಳಲು ಭಗವದ್ಗಿತೆ ಶ್ಲೋಕ ಓದು ಸಹಕಾರಿಯಾಗಲಿದೆ. ಸಾತ್ವಿಕ ಆಹಾರ ಸೇವನೆಯ ಕಡೆಗೆ ಒಲವು ಹೆಚ್ಚಿ ಆರೋಗ್ಯಯುತ ಬದುಕಿಗೆ ದಾರಿಯಾಗಲಿದೆ ಎಂದರು. ಮೀನಾಕ್ಷಿ ನಾರಾಯಣ ಕಲಾಲ ಅವರು ಬಗವದ್ಗಿತೆ ಪುಸ್ತಕಗಳನ್ನು ಉಚಿತವಾಗಿ ವಿತರಿಸುತ್ತಿದ್ದಾರೆ. ಸ್ಥಳಿಯ ಸಂಸ್ಕೃತ ಭಾರತಿ ಸಂಚಾಲಕಿ ಪೂರ್ಣಿಮಾ ಮುತ್ನಾಳ ಗೀತಾ ಪಠಣ ಮಾಡಿಸುತ್ತಿದ್ದಾರೆ.

ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ: ಸನ್ಮಾನ

• **ಅಣ್ಣಿಗೇರಿ:** ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಧಾರವಾಡ ಜಿಲ್ಲೆ ಕಬ್ಬೆನೂರು ಗ್ರಾಮದ ಕಾಮಧೇನು ಸಂಜೀವಿನಿ ಮಹಿಳಾ ಸ್ವ-ಸಹಾಯ ಸಂಘಕ್ಕೆ 2025-26ನೇ ಸಾಲಿನ ರಾಜ್ಯಮಟ್ಟದ ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ ಲಭಿಸಿದೆ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪ್ರಶಸ್ತಿ ಪ್ರದಾನ ಮಾಡಿದರು. ಕಾಮಧೇನು ಸಂಜೀವಿನಿ ಸಂಘದ ಪರವಾಗಿ ರಾಜೇಶ್ವರಿ ಮಂಜುನಾಥ ಪವಾಡಿ ಪ್ರಶಸ್ತಿ ಸ್ವೀಕರಿಸಿದರು.

ಈ ಹಿನ್ನೆಲೆ ಆದಿಕವಿ ಪಂಪ ಸ್ಮಾರಕ ಭವನದಲ್ಲಿ ನಡೆದ ಇಂಚಗೇರಿ ಸಂಪ್ರದಾಯದ ಸದ್ಗುರು ಸಮರ್ಥ ಬಾವು ಸಾಹೇಬ್ ಮಹಾರಾಜರ ಬ್ರಹ್ಮ ಶಾಲೆ ಆಶ್ರಯದಲ್ಲಿ ನಡೆದ ಜ್ಞಾನ ಯಜ್ಞ ಸಪ್ತಾಹ ಕಾರ್ಯಕ್ರಮದಲ್ಲಿ ಡಾ. ಎ.ಸಿ.ವಾಲಿ ಮಹಾರಾಜರ ನೇತೃತ್ವದಲ್ಲಿ ಕಾಮಧೇನು ಸಂಜೀವಿನಿ ಸಂಘದ ಪರವಾಗಿ ರಾಜೇಶ್ವರಿ ಮಂಜುನಾಥ ಪವಾಡಿ ಅವರಿಗೆ ಸನ್ಮಾನಿಸಲಾಯಿತು. ವ್ಯಾಪಾರಸ್ಥ ಮಹಾಬಳೇಶ್ವರ ಹೆಬಸೂರ ಅಧ್ಯಕ್ಷತೆ ವಹಿಸಿದ್ದರು. ಚಂದ್ರಣ್ಣ ಸುರುಕೋಡ್ ಮತ್ತು ಮಠದ ಭಕ್ತರು ಇದ್ದರು.



ತೃತೀಯ ಭಾಷೆಗೆ ಅಂಕಗಳ ಬದಲಿಗೆ ಗ್ರೇಡ್
ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆ

ಬೆಂಗಳೂರು: ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗೆ ಅಂಕಗಳ ಬದಲಿಗೆ ಗ್ರೇಡ್ ನೀಡುವುದಕ್ಕೆ ಮುಂದಾಗಿರುವ ರಾಜ್ಯ ಸರ್ಕಾರದ ಪ್ರಸ್ತಾವ ಪ್ರಶ್ನಿಸಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದೆ.



ಬೆಂಗಳೂರಿನ ಎಚ್.ಎನ್. ಚಂದನಾ, ಎಸ್.ವೆಂಕಟೇಶ್ ಅವರು ಅರ್ಜಿ ಸಲ್ಲಿಸಿದ್ದು, ಶಾಲಾ ಶಿಕ್ಷಣ ಇಲಾಖೆ ಕಾರ್ಯದರ್ಶಿ, ಆಯುಕ್ತರು, ಶಿಕ್ಷಣ ಇಲಾಖೆ ಸಚಿವ ಮಧು ಬಂಗಾರಪ್ಪ ಅವರನ್ನು ಪ್ರತಿವಾದಿಗಳನ್ನಾಗಿಸಲಾಗಿದೆ. ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಇತ್ತೀಚೆಗೆ ಸುದ್ದಿಗೋಷ್ಠಿಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆ ಕಡ್ಡಾಯವಲ್ಲ, ಈ ಭಾಷೆಗಳಿಗೆ ಅಂಕಗಳ ಬದಲಿಗೆ ಗ್ರೇಡ್ ನೀಡಲಾಗುತ್ತದೆ. ಪ್ರಸ್ತುತ ಶೈಕ್ಷಣಿಕ ವರ್ಷದಿಂದಲೇ ದ್ವಿಭಾಷಾ ಸೂತ್ರವನ್ನು ಜಾರಿಗೆ ತರವುದಾಗಿ ತಿಳಿಸಿದ್ದಾರೆ. ಅಲ್ಲದೆ, ಸಚಿವರು ಈ ನಿರ್ಧಾರವನ್ನು ಪ್ರಕಟಿಸುವುದಕ್ಕೂ ಮುನ್ನ ಸಾರ್ವಜನಿಕವಾಗಿ ಚರ್ಚೆ ನಡೆಸಿಲ್ಲ, ಸಚಿವ ಸಂಪುಟದ ಅನುಮೋದನೆ ಪಡೆದಿಲ್ಲ ಹಾಗೂ ಭಾಷಾ ತಜ್ಞರ ಸಲಹೆ ಇಲ್ಲದೇ ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಆಕ್ಷೇಪಿಸಲಾಗಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲಿಯೇ ಈ ರೀತಿಯ ಹೇಳಿಕೆ ಹೊರಬಿದ್ದಿರುವುದರಿಂದ ವಿದ್ಯಾರ್ಥಿಗಳು ಗೊಂದಲಕ್ಕೀಡಾಗಿದ್ದಾರೆ. ಈವರೆಗೂ ಈ ಕುರಿತಂತೆ ಯಾವುದೇ ಅಧಿಕೃತ ಸರ್ಕಾರಿ ಆದೇಶ ಅಥವಾ ಅಧಿಸೂಚನೆ ಹೊರಬಂದಿಲ್ಲ, ಸಚಿವರ ಈ ನಿರ್ಧಾರಕ್ಕಾಗಿ ಸಾರ್ವಜನಿಕರಿಂದ ವ್ಯಾಪಕ ವಿರೋಧ ವ್ಯಕ್ತವಾಗಿದೆ ಎಂದು ವಿವರಿಸಲಾಗಿದೆ. ಸಚಿವರ ಈ ನಿರ್ಧಾರ ಸಂವಿಧಾನದ 14ನೇ ವಿಧಿಯಡಿ ಸಮಾನತೆ ಹಕ್ಕಿನ ಉಲ್ಲಂಘನೆಯಾಗಿದೆ.



ಮೇಲುಕೋಟೆ ಕಲ್ಯಾಣಿಯಲ್ಲಿ ಝಗಮಗಿಸುವ ದೀಪಾಲಂಕಾರದ ನಡುವೆ ಶ್ರೀ ಚಲುವನಾರಾಯಣಸ್ವಾಮಿ ವೈರಮುಡಿ ತೆಪ್ಪೋತ್ಸವ ಬುಧವಾವ ರಾತ್ರಿ ಅದ್ದೂರಿಯಾಗಿ ನೆರವೇರಿತು. ನೂರಾರು ಭಕ್ತರು ಉತ್ಸವಕ್ಕೆ ಸಾಕ್ಷಿಯಾದರು.

ವಿದ್ಯಾರ್ಥಿಗಳಿಗೆ ದ್ವಿಭಾಷಾ ನೀತಿ: ಎಬಿವಿಪಿ ಖಂಡನೆ

ಬೆಂಗಳೂರು: ಪರೀಕ್ಷೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ದ್ವಿಭಾಷಾ ನೀತಿ ಎಂಬ ಗೊಂದಲವನ್ನು ಸೃಷ್ಟಿಸಿ, ಕನಿಷ್ಠ ಸಾಮಾನ್ಯ ಜ್ಞಾನವು ಇಲ್ಲದ ರೀತಿಯಲ್ಲಿ ವರ್ತಿಸಿ ವಿದ್ಯಾರ್ಥಿ ಸಮೂಹವನ್ನು ಹಾದಿ ತಪ್ಪಿಸುವಂತಹ ನಿರ್ಧಾರವನ್ನು ತೆಗೆದುಕೊಂಡಿರುವ ಸರ್ಕಾರದ ಕ್ರಮವನ್ನು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್(ಎಬಿವಿಪಿ) ಖಂಡಿಸುತ್ತದೆ ಎಂದು ತಿಳಿಸಿದೆ.

ಈ ಬಗ್ಗೆ ಮಾಧ್ಯಮ ಪ್ರಕಟಣೆ ನೀಡಿರುವ ಎಬಿವಿಪಿ, ತ್ರಿಭಾಷಾ ಸೂತ್ರ ಎಂಬುವುದು ಯಾವುದೋ ಭಾಷೆಯ ಹೇರಿಕೆಗಾಗಿಯೋ ಅಥವಾ ಯಾವುದೋ ಹೋರಾಟದ ಫಲವಾಗಿ ಬಂದದ್ದಲ್ಲ, ಶಿಕ್ಷಣ ತಜ್ಞರು ಮತ್ತು ಶೈಕ್ಷಣಿಕ ಪರಿಸರದ ಅನೇಕ ವರ್ಷಗಳ ಯೋಜನೆಯೊಂದಾಗಿ ಮಕ್ಕಳ ಪ್ರತಿಭೆಯನ್ನು ಅನಾವರಣ ಗೊಳಿಸುವುದಕ್ಕಾಗಿ ಬಂದಂತಹ ನೀತಿಯಾಗಿದೆ. ಆದರೆ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕಾದ ಸರ್ಕಾರವು ಪರೀಕ್ಷೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ದ್ವಿಭಾಷಾ ನೀತಿ ಎಂಬ ಗೊಂದಲವನ್ನು ಸೃಷ್ಟಿಸಿ, ಕನಿಷ್ಠ ಸಾಮಾನ್ಯ ಜ್ಞಾನವು ಇಲ್ಲದ ರೀತಿಯಲ್ಲಿ ವರ್ತಿಸಿ ವಿದ್ಯಾರ್ಥಿ ಸಮೂಹವನ್ನು ಹಾದಿ ತಪ್ಪಿಸುವಂತಹ ನಿರ್ಧಾರವನ್ನು ತೆಗೆದುಕೊಂಡಿದೆ ಎಂದು ದೂರಿದೆ.

ದ್ವಿಭಾಷಾ ಸೂತ್ರವನ್ನು ತರಬೇಕೆಂಬ ಯೋಜನೆ ಸರ್ಕಾರದ ಬಳಿ ಇದ್ದದ್ದೇ ಆದಲ್ಲಿ, ಈ ಮೊದಲೇ ಘೋಷಣೆ ಮಾಡಿ, ಸಾರ್ವಜನಿಕವಾಗಿ ಚರ್ಚೆಗೆ ಅವಕಾಶ ಮಾಡಿಕೊಡಬೇಕಾಗಿತ್ತು. ಅದನ್ನು ಬಿಟ್ಟು ಯಾರದ್ದೋ ಒತ್ತಡಕ್ಕೆ ಮಣಿದು, ಪರೀಕ್ಷೆ ಸಂದರ್ಭದಲ್ಲೇ ದ್ವಿಭಾಷಾ ನೀತಿಯ ಮುಖಾಂತರ ದೇಶೀಯ ಭಾಷೆಗಳನ್ನು ನಾಶಮಾಡಲು ಹೊರಟಿರುವ ರಾಜ್ಯ ಸರ್ಕಾರದ ನಿಲುವನ್ನು ಎಬಿವಿಪಿ ತೀವ್ರವಾಗಿ ವಿರೋಧಿಸುತ್ತದೆ ಎಂದು ತಿಳಿಸಿದೆ. ಈಗಾಗಲೇ ಆಂಗ್ಲ ಮಾಧ್ಯಮ ಶಾಲೆಗಳ ಹಾವಳಿಯಿಂದ ಕನ್ನಡ ಸೇರಿದಂತೆ ಪ್ರಾದೇಶಿಕ ಭಾಷೆಯ ಕುಂಠಿತವಾಗುತ್ತಿದೆ. ಇಂತಹ ಸಂದರ್ಭದಲ್ಲಿಯೇ ದೇಶೀಯ ಭಾಷೆಗಳ ನಾಶ ಮಾಡುವ ದ್ವಿಭಾಷಾ ನೀತಿಯು ನಮ್ಮ ಮಾತೃಭಾಷೆಯಾದ ಕನ್ನಡಕ್ಕೂ ಸಹ ಹೊಡೆತ ಕೊಡಲಿದೆ ಎಂದು ಸರ್ಕಾರವು ಯೋಚಿಸಬೇಕೆಂದು ಎಬಿವಿಪಿ ಆಗ್ರಹಿಸಿದೆ.

ಕಿರುಸುದ್ದಿ

ಶಿವಮೊಗ್ಗದಲ್ಲಿ ಮಳೆ: ಮನೆಗೆ ನುಗ್ಗಿದ ನೀರು

ಶಿವಮೊಗ್ಗ: ನಗರದಲ್ಲಿ ಮಂಗಳವಾರ ತಡರಾತ್ರಿ ಸುರಿದ ಮಳೆಯಿಂದ ವಿವಿಧೆಡೆ ಸಾಕಷ್ಟು ಹಾನಿಯಾಗಿದೆ. ಭಾರೀ ಪ್ರಮಾಣದ ಗುಡುಗು, ಸಿಡಿಲಿನೊಂದಿಗೆ ಸುರಿದ ಮಳೆ ವಿವಿಧೆಡೆ ಪ್ರವಾಹ ಸೃಷ್ಟಿಸಿತ್ತು. ಶರಾವತಿ ನಗರದಲ್ಲಿ ರಾಜಾ ಕಾಲುವೆ ಸ್ವಚ್ಛಗೊಳಿಸದ ಹಿನ್ನೆಲೆಯಲ್ಲಿ 10.15 ಮನೆಗಳಿಗೆ ಗಲೀಜು ನೀರು ನುಗ್ಗಿತ್ತು. ಇಲ್ಲಿನ 7ನೇ ತಿರುವಿನ ನಿವಾಸಿಗಳಾದ ಗೌರಮ್ಮ, ಮಂಜುನಾಥ್, ಪದ್ಮಮ್ಮ, ಮಾದಯ್ಯ, ಲಿಲ್ಲಿ ಎಂಬುವರ ಮನೆಗೆ ನೀರು ನುಗ್ಗಿದ ಕಾರಣ ಫ್ರಿಡ್ಜ್, ಟಿವಿ, ವಾಷಿಂಗ್ ಮೆಷಿನ್ ಮೊದಲಾದ ಯಂತ್ರೋಪಕರಣಗಳು ಹಾಳಾಗಿವೆ. ಇಲ್ಲಿನ ಮನೆಗಳು ತಗ್ಗಿನ ಪ್ರದೇಶದಲ್ಲಿರುವುದರಿಂದ ಮಳೆ ನೀರು ಸಲೀಸಾಗಿ ನುಗ್ಗಿದೆ. ಸಾಗರ ರಸ್ತೆಯ ಎಸ್.ಎಸ್ ಇಂಡಸ್ಟ್ರೀಸ್‌ಗೆ ಭಾರೀ ಪ್ರಮಾಣದ ನೀರು ನುಗ್ಗಿ ಜಲಾವೃತವಾಗಿತ್ತು. ಮುಳ್ಳು ತಂತಿ ಮತ್ತು ಚೈನ್ ಲಿಂಕ್ ಮೆಶ್ ಇಲ್ಲಿ ತಯಾರಿಸಲಾಗುತ್ತದೆ. ತಯಾರಿಸಲಾಗಿದ್ದ ಲಕ್ಷಾಂತರ ರೂ ಮೌಲ್ಯದ ತಂತಿ ಮತ್ತು ಇತರೆ ವಸ್ತುಗಳಿಗೆ ಮಳೆ ನೀರು ನುಗ್ಗಿ ಹಾನಿಗೊಳಗಾಗಿದೆ.

ಸರ್ಕಾರ ಜನಹಿತ ಮರೆತಿದೆ: ಬಿ.ಎಸ್. ಯಡಿಯೂರಪ್ಪ

ದಾವಣಗೆರೆ: ರಾಜ್ಯದ ಕಾಂಗ್ರೆಸ್ ಸರ್ಕಾರ ಜನಹಿತವನ್ನು ಮರೆತಿದೆ. ಸರ್ಕಾರದ ಖಜಾನೆಯನ್ನು ಲೂಟಿ ಮಾಡುವಂತಹ ಹಗಲು ದರೋಡೆಯಲ್ಲಿ ಸಿದ್ದರಾಮಯ್ಯ ನಿರತರಾಗಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆರೋಪ ಮಾಡಿದರು. ದಾವಣಗೆರೆ ದಕ್ಷಿಣ ಕ್ಷೇತ್ರದ ಚುನಾವಣಾ ಪ್ರಚಾರಕ್ಕೆಂದು ಆಗಮಿಸಿದ್ದ ಅವರು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಬಿಜೆಪಿ ಅಭ್ಯರ್ಥಿಪರ ಮತಯಾಚನೆ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ದಾವಣಗೆರೆ ಹಾಗೂ ಬಾಗಲಕೋಟೆ ಎರಡೂ ಕಡೆ ನಿರೀಕ್ಷೆ ಮೀರಿದ ಜನಸ್ಪಂದನೆ ವ್ಯಕ್ತವಾಗುತ್ತಿದೆ. ಬಾಗಲಕೋಟೆಯಲ್ಲೂ ಎರಡು ದಿನ ಪ್ರಚಾರ ಮಾಡುತ್ತೇನೆ. ಜನ ಈ ಭ್ರಷ್ಟಾಚಾರದ ಸರ್ಕಾರದಿಂದ ಬೇಸತ್ತು ಹೋಗಿದ್ದಾರೆ. ರಾಜ್ಯ ಸರ್ಕಾರದ ಮೇಲಿನ ಜನರ ಆಕ್ರೋಶದಿಂದಾಗಿ ಎರಡೂ ಕ್ಷೇತ್ರದ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯ ಸಾಧಿಸಲಿದ್ದಾರೆ ಎಂದರು.

ಪ್ಲಾಟ್‌ಫಾರ್ಮ್‌ಗೆ ನುಗ್ಗಿದ ಬಸ್: ಮಗು ಸಾವು

ಹಾವೇರಿ: ಕೇಂದ್ರ ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ಕಾಯುತ್ತಾ ನಿಂತಿದ್ದ ಪ್ರಯಾಣಿಕರ ಮೇಲೆ ದಿಢೀರನೇ ಹರಿದ ಬಸ್‌ನಿಂದಾಗಿ ತೀವ್ರವಾಗಿ ಗಾಯಗೊಂಡಿದ್ದ ಎರಡು ವರ್ಷದ ಬಾಲಕ ಸಾವನ್ನಪ್ಪಿ ನಾಲ್ವರಿಗೆ ಗಂಭೀರ ಗಾಯಗಳಾದ ಘಟನೆ ಬುಧವಾರ ನಡೆದಿದೆ. ಈ ಅಪಘಾತದಲ್ಲಿ ಸವಣೂರು ಪಟ್ಟಣದ ಹಜರತ್ ಅಲಿ ಇಸ್ಮಾಯಿಲ್ ರಾಯಚೂರ (2 ವರ್ಷ)ದ ಮಗು ಸಾವನ್ನಪ್ಪಿದೆ. ಗಂಭೀರ ಗಾಯಗಳಾಗಿದ್ದು, ಪ್ರಾಥಮಿಕ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ಹುಬ್ಬಳ್ಳಿಯ ಕಿಮ್ಸ್‌ಗೆ ಕಳಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಿಸದೇ ಮಗು ಸಾವನ್ನಪ್ಪಿದೆ. ಅಲ್ಲದೇ ವಾಸುದೇವ ಗುರುನಾಥಪ್ಪ ಉತಳೇಕರ (44), ಹರ್ಷಾ ವಾಸುದೇವ ಉತಳೇಕರ (6), ಕಾವ್ಯಾಂಜಲಿ ವಿಷ್ಣು ಉತಳೇಕರ (39) ಹಾಗೂ ಅರ್ಬಾಜಖಾನ ಸೌದಾಗರ (13) ಎಂಬುವರಿಗೆ ಗಾಯಗಳಾಗಿದ್ದು ಇವರಿಗೆ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಗಾಯಾಳುಗಳು ಬಂಕಾಪುರ ಪಟ್ಟಣದ ನಿವಾಸಿಗಳಾಗಿದ್ದು, ಚಾಲಕ-ಕಂಡಕ್ಟರ್ ಮಂಜುನಾಥ ರಾಜಪ್ಪ ಅವರ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ. ಘಟನಾ ಸ್ಥಳಕ್ಕೆ ಪೊಲೀಸರ ಭೇಟಿ, ಪರಿಶೀಲನೆ ನಡೆಸಿದ್ದು, ಹಾವೇರಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಅಭಿವೃದ್ಧಿಗಾಗಿ ಕಾಂಗ್ರೆಸ್‌ಗೆ ಬೆಂಬಲ: ಸಿಎಂ ಸಿದ್ದರಾಮಯ್ಯ ವಿಶ್ವಾಸ
ಕೈಗೆ ದೊಡ್ಡ ಅಂತರದ ಗೆಲುವು

ದಾವಣಗೆರೆ: ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ದೊಡ್ಡ ಅಂತರದ ಗೆಲುವು ಸಾಧಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಶಾಮನೂರು ಶಿವಶಂಕರಪ್ಪ ಹಾಗೂ ಬಾಗಲಕೋಟೆಯಲ್ಲಿ ಹೆಚ್. ವೈ. ಮೇಟಿ ಕ್ಷೇತ್ರದ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದ್ದಾರೆ. ಅಭಿವೃದ್ಧಿ ಕಾರ್ಯಕ್ರಮ ಮತ್ತು ಗ್ಯಾರಂಟಿ ಯೋಜನೆಗಳು ಕಾಂಗ್ರೆಸ್ ಪಕ್ಷದ ನೆರವಿಗೆ ಬಂದಿವೆ. ಎರಡೂ ಕ್ಷೇತ್ರಗಳಲ್ಲಿ ಜನರು ಬೆಂಬಲಿಸುವ ವಿಶ್ವಾಸವಿದೆ. ಸಚಿವ ಜಮೀರ್ ಅಹ್ಮದ್ ಖಾನ್ ಕೂಡ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಲಿದ್ದಾರೆ ಎಂದರು.

ಬಿಜೆಪಿಯವರು ರಾಜ್ಯದಲ್ಲಿ 4 ವರ್ಷ ಅಧಿಕಾರದಲ್ಲಿದ್ದಾಗಲೂ ದಾವಣಗೆರೆ, ಬಾಗಲಕೋಟೆಗೆ ಯಾವುದೇ ಕೊಡುಗೆ ನೀಡಿಲ್ಲ, ನಮ್ಮ ಸರ್ಕಾರ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುದಾನವನ್ನು ಈ ಕ್ಷೇತ್ರಗಳಿಗೆ ನೀಡಲಿದೆ. ಬಿಜೆಪಿಯವರ ಅಪಪ್ರಚಾರದ ನಡುವೆಯೂ ಹಿಂದೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಭಾರಿ ಬಹುಮತ ಸಾಧಿಸಿತ್ತು. ಮಾಜಿ ಸಿಎಂಗಳ ಪುತ್ರರು ನಿಂತಿದ್ದ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದರು. ಅದೇ ರೀತಿ ಈಗಲೂ ಜಯ ನಮ್ಮದಾಗಲಿದೆ ಎಂದು ತಿಳಿಸಿದರು. ಜೆಡಿಎಸ್ ಹಾಗೂ ಬಿಜೆಪಿಯಲ್ಲಿ ಕೂಡ ಕುಟುಂಬ ರಾಜಕಾರಣ ಇದೆ. ಯಡಿಯೂರಪ್ಪ, ದೇವೇಗೌಡರ ಕುಟುಂಬ ಸದಸ್ಯರು ರಾಜಕೀಯದಲ್ಲಿ ಸಕ್ರಿಯವಾಗಿದ್ದಾರೆ. ಕಾಂಗ್ರೆಸ್ ಪಕ್ಷ ಕುಟುಂಬ ರಾಜಕಾರಣ ಮಾಡುತ್ತಿದೆ ಎಂಬ ಆರೋಪದಲ್ಲಿ ಹುರುಳಿಲ್ಲ ಎಂದರು.



> ಮತಪಟ್ಟಿ ವ್ಯತ್ಯಾಸಗೊಳಿಸುವ ಅಧಿಕಾರ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಕೇಂದ್ರ ಚುನಾವಣಾ ಆಯೋಗಕ್ಕೆ ಇದೆ. ಇಂತಹ ಕೃತ್ಯಗಳಲ್ಲಿ ಕಾಂಗ್ರೆಸ್ ಎಂದಿಗೂ ಭಾಗಿಯಾಗಿಲ್ಲ, ಹಿಂದೆ ಎಂದಿಗೂ ಇರದಿದ್ದ ವೋಟ್ ಚೋರಿಯ ವಿಷಯ ಪ್ರಧಾನಿ ನರೇಂದ್ರ ಮೋದಿಯವರ ಅವಧಿಯಲ್ಲಿ ಕೇಳಿಬರುತ್ತಿದೆ.
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

1 ರೂ. ತೆರಿಗೆಗೆ 15 ಪೈಸೆ ವಾಪಸ್

ಕನ್ನಡಿಗರು ತಮ್ಮ ಬೆವರ ಗಳಿಕೆಯಿಂದ ನೀಡುವ 1 ರೂಪಾಯಿ ತೆರಿಗೆಗೆ ಪ್ರತಿಯಾಗಿ ಕೇಂದ್ರ ಸರ್ಕಾರ 15 ಪೈಸೆ ಮಾತ್ರ ವಾಪಸ್ಸು ನೀಡುತ್ತಿದೆ. ಇದನ್ನು ತೆರಿಗೆ ಭಯೋತ್ಪಾದನೆ ಎನ್ನಲೇ ತೆರಿಗೆ ದರೋಡೆ ಎನ್ನಲೇ ಈ ಪ್ರಶ್ನೆಗೆ ರಾಜ್ಯದ ಬಿಜೆಪಿ ನಾಯಕರು ಉತ್ತರಿಸುವ ಧೈರ್ಯ ಮಾಡುತ್ತಾರೆಯೇ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗುಡುಗಿದ್ದಾರೆ. ಮಾಧ್ಯಮ ಹೇಳಿಕೆಯಲ್ಲಿ ಕೇಂದ್ರವನ್ನು ಟೀಕಿಸಿರುವ ಅವರು, ತೆರಿಗೆ ಹಂಚಿಕೆ, ಜಿಎಸ್‌ಟಿ ಪರಿಹಾರ ಮತ್ತು ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ನೀಡುವ ಅನುದಾನದಲ್ಲಿ ಅನ್ಯಾಯ ಮಾಡದೆ ನಮಗೆ ಸಿಗಬೇಕಾದ ನ್ಯಾಯಬದ್ಧ ಸಂಪನ್ಮೂಲದ ಪಾಲನ್ನು ನೀಡಿದರೆ 1 ಪೈಸೆ ಸಾಲವನ್ನು ಮಾಡದೆ ರಾಜ್ಯದ ಆರ್ಥಿಕತೆಯನ್ನು ನಿರ್ವಹಿಸುವೆ. ಈ ಸವಾಲು ಸ್ವೀಕರಿಸಲು ಬಿಜೆಪಿ ನಾಯಕರು ಸಿದ್ಧರಿದ್ದಾರಾ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಜಿಎಸ್‌ಟಿ ಸಂಗ್ರಹದಲ್ಲಿ ದೇಶದಲ್ಲಿಯೇ 2ನೇ ಸ್ಥಾನದಲ್ಲಿ ರಾಜ್ಯ ಇದೆ. ಇನ್ನು ಜಿಎಸ್‌ಟಿ ಸಂಗ್ರಹದ ಬೆಳವಣಿಗೆ ದರವನ್ನು ಗಮನಿಸಿದರೆ ಶೇ.17ರ ಸಾಧನೆಯ ಮೂಲಕ ದೇಶದಲ್ಲೇ ಮೊದಲ ಸ್ಥಾನದಲ್ಲಿ ಕರ್ನಾಟಕವಿದೆ. ವಿಪರ್ಯಾಸವೆಂದರೆ ಈ ಪ್ರಮಾಣದಲ್ಲಿ ಜಿಎಸ್‌ಟಿ ಹಣವನ್ನು ಕೇಂದ್ರಕ್ಕೆ ಸಂಗ್ರಹಿಸಿ ನೀಡಿದರೂ ಇದರಿಂದ ರಾಜ್ಯಕ್ಕೆ ಮರಳಿ ದೊರೆಯುತ್ತಿರುವುದು ಶೇ.52 ಪಾಲು ಮಾತ್ರ. ಜಿಎಸ್‌ಟಿಯ ಅವೈಜ್ಞಾನಿಕ ಅನುಷ್ಠಾನದಿಂದಾಗಿ ಕರ್ನಾಟಕವು ಸಾವಿರಾರು ಕೋಟಿ ರೂಪಾಯಿ ಕಳೆದುಕೊಂಡಿದೆ ಎಂದು ತಿಳಿಸಿದ್ದಾರೆ. ಕಳೆದ 3 ವರ್ಷಗಳಲ್ಲಿ ಹಲವಾರು ಬಾರಿ ತೆರಿಗೆ ದರೋಡೆಯನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಸಂಸತ್ ಭವನದ ಎದುರಿಗೆ ನಿಂತು ಈ ಅನ್ಯಾಯವನ್ನು ಕೂಗಿಕೂಗಿ ಹೇಳಿದ್ದೇವೆ. ಆಗ ಬಾಯಿ ಮುಚ್ಚಿಕೊಂಡು 7 ಕೋಟಿ ಕನ್ನಡಿಗರಿಗೆ ದ್ರೋಹ ಬಗೆದಿರುವ ಈ ಬಸವರಾಜ ಬೊಮ್ಮಾಯಿ, ಅಶೋಕ್ ಮತ್ತು ಮೊದಲಾದ ಬಿಜೆಪಿ ನಾಯಕರು ಈಗ ನಮ್ಮ ವಿರುದ್ಧ ಕೂಗು ಹಾಕುತ್ತಿದ್ದಾರೆ ಎಂದು ತೀರುಗೇಟು ನೀಡಿದ್ದಾರೆ.

ಆರ್ಥಿಕ ಅಧೋಗತಿ: ಬಿವೈವಿ

ಬಾಗಲಕೋಟೆ: ಗ್ಯಾರಂಟಿ ಯೋಜನೆಗಳಿಂದ ರಾಜ್ಯವು ದಿವಾಳಿಯತ್ತ ಸಾಗುತ್ತಿಲ್ಲ, ಈಗಾಗಲೇ ದಿವಾಳಿ ಆಗಿದೆ. ಆರ್ಥಿಕ ಸ್ಥಿತಿ ಅಧೋಗತಿ ತಲುಪಿದ್ದು, ಅದನ್ನು ಜನರ ಮುಂದೆ ಬಿಚ್ಚಿಡಲಾಗದೇ ಶ್ವೇತಪತ್ರ ಹೊರಡಿಸುವಂತೆ ಬಿಜೆಪಿಯು ಕೇಳಿದರೆ ಹತಾಶೆಯ ಸಿದ್ದರಾಮಯ್ಯ ''ಸಿಟ್ಟರಾಮಯ್ಯ''ರಂತೆ ವರ್ತಿಸುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ನವನಗರದ ಬಿಜೆಪಿ ಕಚೇರಿಯಲ್ಲಿ ಹಮ್ಮಿಕೊಂಡ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಾಗಲಕೋಟೆಯ ಬಿಸಿಲಿನ ಪರಿಣಾಮಕ್ಕೋ ಸೋಲಿನ ಭಯಕ್ಕೊ ಸಿಎಂ ಸಿದ್ದರಾಮಯ್ಯ ಮನಬಂದಂತೆ ಮಾತನಾಡುತ್ತಿದ್ದಾರೆ. ರಾಜ್ಯದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಶ್ವೇತಪತ್ರ ಹೊರಡಿಸುವಂತೆ ಕೇಳಿದರೆ ವಿಜಯೇಂದ್ರ ಅವರಿಗೆ ಆರ್ಥಿಕತೆಯ ಬಗ್ಗೆ ಜ್ಞಾನವಿಲ್ಲ ಎಂಬ ಹತಾಶೆಯ ಹೇಳಿಕೆ ಕೊಡುತ್ತಿದ್ದಾರೆ.



ಪ್ರಸ್ತುತ ರಾಜ್ಯದ ಆರ್ಥಿಕ ಸ್ಥಿತಿ ಜನಸಾಮಾನ್ಯರಿಗೆ ಅರ್ಥವಾಗುತ್ತಿದ್ದು, ಅದಕ್ಕೆ ಆರ್ಥಿಕ ತಜ್ಞರಾಗುವ ಅವಶ್ಯಕತೆ ಇಲ್ಲ ಎಂದು ತಿರುಗೇಟು ನೀಡಿದರು.

ರಾಜ್ಯದ ಜನತೆಗೆ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಸತ್ಯ ಸಂಗತಿಗಳನ್ನು ತಿಳಿಸುವ ಕೆಲಸವನ್ನು ಮಾಡಲು ಸರಕಾರ ಸಿದ್ಧವಿಲ್ಲ, ಅಧಿಕಾರಕ್ಕೆ ಬಂದ ಒಂದು ತಿಂಗಳಿನಲ್ಲಿ ನೇರನಾಮಕಾತಿ ಮಾಡುತ್ತೇವೆ ಎಂದು ಹೇಳಿದ್ದು ಇನ್ನೂ ವರೆಗೂ ಆಗಿಲ್ಲ, ಗ್ಯಾರಂಟಿಗಳಿಗೆ ಹಣ ಕ್ರೂಢಿಕರಿಸಲು ಸಾಧ್ಯವಾಗದೆ ಸಿಕ್ಕ ಸಿಕ್ಕಲ್ಲಿ ದೋಚುವ ಕೆಲಸ ಮಾಡುತ್ತಿದ್ದಾರೆ ಎಂದರು.

ಕುರ್ಚಿಬಿಡುವ ಸಮಯ ಸನ್ನಿಹಿತ: ವಿಜಯೇಂದ್ರ

ಕೇಂದ್ರ ಸರ್ಕಾರದ ಮೇಲೆ ಆರೋಪ ಮಾಡುತ್ತ ಅಧಿಕಾರ ಮಾಡುತ್ತಿದೆ. ರಾಜ್ಯದ ಗ್ಯಾರಂಟಿ ಯೋಜನೆಗಳನ್ನು ಬೇರೆ ರಾಜ್ಯಗಳು ಅನುಸರಿಸಿ ಅತಂತ್ರವಾಗಿವೆ. ಹಿಮಾಚಲ ಪ್ರದೇಶದಲ್ಲಿ ಗ್ಯಾರಂಟಿ ನೀಗಿಸಲು ಹಣ ಇಲ್ಲದ್ದಕ್ಕೆ ಅಲ್ಲಿನ ಸಿಎಂಗಳೇ ದೇವಸ್ಥಾನಗಳ ದೇಣಿಗೆಯನ್ನು ಸರ್ಕಾರಕ್ಕೆ ಕೊಡುವಂತೆ ಪತ್ರ ಬರೆದು ಮನವಿ ಮಾಡಿಕೊಂಡಿದ್ದಾರೆ. ತೆಲಂಗಾಣದ ಅಧಿವೇಶನದಲ್ಲಿ ಮುಖ್ಯಮಂತ್ರಿಗಳು ಗ್ಯಾರಂಟಿಗಳಿಂದ ಸಂಬಳ ಕೊಡಲಾಗುತ್ತಿಲ್ಲ ಎಂದು ಒಪ್ಪಿಕೊಂಡಿದ್ದಾರೆ. ಆದರೂ ರಾಜ್ಯದಲ್ಲಿ ಅಸಲಿ ಸತ್ಯ ಮುಚ್ಚಿಟ್ಟು ಗ್ಯಾರಂಟಿಗಳ ಬಗ್ಗೆ ಮನವರಿಕೆ ಮಾಡಲು ಬರುತ್ತಿರುವ ಕಾಂಗ್ರೆಸ್ ಇವುಗಳಿಂದ ಬೇಸತ್ತ ತಮ್ಮ ಪಕ್ಷದ ಶಾಸಕರಿಗೆ, ಕಾರ್ಯಕರ್ತರಿಗೆ ಮೊದಲು ಮನವರಿಕೆ ಮಾಡಲಿ. ಗ್ಯಾರಂಟಿ ಬಗ್ಗೆ ವಿಶ್ವಾಸ ಇದ್ದಿದ್ದರೆ ಮಂತ್ರಿ ಮಂಡಲದ ಜೊತೆಗೆ ಸೂಟಕೇಸ್ ಸಮೇತ ಬಾಗಲಕೋಟೆಯಲ್ಲಿ ಬೆಂಡಾ ಹೂಡುವ ಅವಶ್ಯಕತೆ ಇರುತ್ತಿರಲಿಲ್ಲ. ಜಾತಿಗಳ ಆಧಾರದ ಮೇಲೆ ರಾಜಕೀಯ ಮಾಡುವ ಸಿದ್ದರಾಮಯ್ಯ ಕಾಂಗ್ರೆಸ್ ಗೆಲ್ಲಲಿ ನಾನೇ ಮುಖ್ಯಮಂತ್ರಿ ಎಂದು ಹೇಳುತ್ತಿದ್ದಾರೆ. ಆದರೆ ಕುರ್ಚಿಬಿಡುವ ಸಮಯ ಸನ್ನಿಹಿತವಾಗಿದೆ ಎಂದರು.

ಆಸ್ಪತ್ರೆಗಳಲ್ಲಿ ಪೋಡಿಯಾಟ್ರಿಕ್ ವಿಭಾಗ ಆರಂಭ: ಶರಣಪ್ರಕಾಶ್

ಬೆಂಗಳೂರು: ಮಧುಮೇಹ ಪಾದದ ಶುಶ್ರೂಷೆಗಾಗಿ ರಾಜ್ಯದ ಎಲ್ಲ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಪೋಡಿಯಾಟ್ರಿಕ್ ವಿಭಾಗವನ್ನು ಆರಂಭಿಸಲಾಗುವುದು ಎಂದು ಸಚಿವ ಡಾ.ಶರಣಪ್ರಕಾಶ್ ಪಾಟೀಲ ತಿಳಿದರು.

ಮಧುಮೇಹದಿಂದ ಉಂಟಾಗುವ ಪಾದ ಸಮಸ್ಯೆಗಳನ್ನು ತಡೆಗಟ್ಟುವ ಉದ್ದೇಶದಿಂದ ಪ್ರೈಯಾಸ್ (PRAIAS) ರಾಷ್ಟ್ರೀಯ ಜಾಗೃತಿ ಮತ್ತು ತಪಾಸಣಾ ಅಭಿಯಾನಕ್ಕೆ ಗುಲ್ಬರ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಜಿಮ್ಸ್) ಆವರಣದಲ್ಲಿ ಚಾಲನೆ ನೀಡಿ ಮಾತನಾಡಿ, ಮಧುಮೇಹ - ಪಾದದ ಶುಶ್ರೂಷೆಗಾಗಿ (ಡಯಾಬಿಟಿಕ್ ಫೂಟ್ ಕೇರ್) ರಾಜ್ಯದ ಎಲ್ಲ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಪೋಡಿಯಾಟ್ರಿಕ್ ವಿಭಾಗಗಳನ್ನು ಆರಂಭಿಸಲಾಗುವುದು. ಜತೆಗೆ, ಮುಂಬರುವ ದಿನಗಳಲ್ಲಿ ಇಲಾಖೆಯ ವತಿಯಿಂದ ಮಧುಮೇಹ-ಪಾದ ತಪಾಸಣೆಗೂ (ಸ್ಕ್ರೀನಿಂಗ್) ವ್ಯವಸ್ಥೆ ಮಾಡಲಾಗುವುದು ಎಂದರು.



ಬೆಂಗಳೂರಿನಲ್ಲಿರುವ ಕರ್ನಾಟಕ ಮಧುಮೇಹ ಸಂಸ್ಥೆ ಉತ್ತಮವಾಗಿ ಕಾರ್ಯಾಚರಿಸುತ್ತಿದೆ. ಅದೇ ಮಾದರಿಯಲ್ಲಿ ಕಲಬುರಗಿ ಮತ್ತು ಮೈಸೂರಿನಲ್ಲಿ ಮಧುಮೇಹ ಸಂಸ್ಥೆಯ ಶಾಖಾ ಕೇಂದ್ರಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಈಗಾಗಲೇ ಕಾರ್ಯ ಆರಂಭಗೊಂಡಿದೆ ಎಂದರು.

ಆರಂಭಿಕ ಹಂತದಲ್ಲಿಯೇ ಪತ್ತೆ

ಆಧುನಿಕ ತಂತ್ರಜ್ಞಾನದ ನೆರವಿನಿಂದ ಸಕ್ಕರೆ ರೋಗಿಗಳ ಪಾದದಲ್ಲಿನ ಒತ್ತಡದ ಬಿಂದುಗಳನ್ನು ಆರಂಭಿಕ ಹಂತದಲ್ಲಿಯೇ ಸ್ಕ್ರೀನಿಂಗ್ ಮೂಲಕ ಪತ್ತೆಹಚ್ಚಬಹುದು. ಇದರಿಂದಾಗಿ ಒತ್ತಡವನ್ನು ಕಡಿಮೆಗೊಳಿಸಿ ಪಾದಗಳನ್ನು ಸಂರಕ್ಷಿಸಲು ಸಾಧ್ಯವಾಗುತ್ತದೆ. ಭಾರತವು ಮಧುಮೇಹದ ತವರಾಗಿರುವುದರಿಂದ ಪಾದಗಳ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸುವುದು ಅತ್ಯವಶ್ಯವಾಗಿದೆ ಎಂದರು.

ಕಾಂಗ್ರೆಸ್ ಸರ್ಕಾರ ಪತನ: ಶಾಸಕ

ದಾವಣಗೆರೆ: ಮುಂದೆಯೂ ನಾನೇ ಮುಖ್ಯಮಂತ್ರಿ ಎನ್ನುತ್ತಿದ್ದ ಸಿದ್ದರಾಮಯ್ಯ ಈಗ ನಾವೇ ಮುಖ್ಯಮಂತ್ರಿ ಎನ್ನುತ್ತಿದ್ದಾರೆ. ದಾವಣಗೆರೆ ಮತ್ತು ಬಾಗಲಕೋಟೆ ಉಪ ಚುನಾವಣೆ ಫಲಿತಾಂಶದ ನಂತರ ಕಾಂಗ್ರೆಸ್ ಸರ್ಕಾರ ಪತನವಾಗಲಿದೆ ಎಂದು ಶಾಸಕ ಸುನಿಲ್ ಕುಮಾರ್ ಹೇಳಿದರು.



ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಘೋಷಣೆಗಳ ಮೂಲಕ ದೊಡ್ಡ ಮಟ್ಟದ ಪ್ರಚಾರ ಪಡೆಯುವ ಕಾಂಗ್ರೆಸ್ ಸರ್ಕಾರ, ಬಾಗಲಕೋಟೆ, ದಾವಣಗೆರೆ ಚುನಾವಣಾ ಫಲಿತಾಂಶಗಳು ರಾಜ್ಯ ರಾಜಕೀಯಕ್ಕೆ ಮಹತ್ವದ ಸಂದೇಶ ನೀಡಲಿವೆ. ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಜನರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಿದ್ದಾರೆ.

ಈ ಫಲಿತಾಂಶ ಕಾಂಗ್ರೆಸ್ ಸರ್ಕಾರದ ಪತನದ ಸೂಚನೆಯಾಗಲಿದೆ. ಅಹಿಂದ ವರ್ಗದ ಹಿತಾಸಕ್ತಿಗಳನ್ನು ಕಾಪಾಡಲು ವಿಫಲವಾಗಿರುವ ಸರ್ಕಾರದ ವಿರುದ್ಧ ಜನರು ತಮ್ಮ ಆಕ್ರೋಶ ವ್ಯಕ್ತಪಡಿಸಬೇಕು ಎಂದರು.

ಸ್ವಯಂ ಗಣತಿ ದಾಖಲಿಸಿದ ಶಾಲಿನಿ ರಜನೀಶ್

ಬೆಂಗಳೂರು: ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ ಜನಗಣತಿ 2027ರ ಅಂಗವಾಗಿ ಸ್ವಯಂ ಗಣತಿ ವ್ಯವಸ್ಥೆ ಪರಿಚಯಿಸಿದ್ದು, ಬುಧವಾರ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಅವರು ತಮ್ಮ ಮೊಬೈಲ್ ಮೂಲಕ ಸ್ವಯಂ ಗಣತಿ ದಾಖಲಾತಿ ಪೂರ್ಣಗೊಳಿಸಿದರು.



ನಮ್ಮ ಜನಗಣ ನಮ್ಮ ಅಭಿವೃದ್ಧಿ ಎಂಬ ಧ್ಯೇಯ ವಾಕ್ಯದೊಂದಿಗೆ ಸರ್ಕಾರ ಜನಗಣತಿ 2027 ಹಮ್ಮಿಕೊಂಡಿದ್ದು, ಇದರ ಅಂಗವಾಗಿ ಸರ್ಕಾರ ಸ್ವಯಂ ಗಣತಿ ವ್ಯವಸ್ಥೆಯನ್ನು ಪರಿಚಯಿಸಿದೆ.ಈ ಪ್ರಕ್ರಿಯೆ ಸರಳ ಮತ್ತು ಸುರಕ್ಷಿತವಾಗಿದೆ ಏಪ್ರಿಲ್ 1 ರಿಂದ 15ರವರೆಗೆ ಎಲ್ಲಾ ನಾಗರಿಕರು ಅಧಿಕೃತ ಪೋರ್ಟಲ್ se.census.gov.in ಮೂಲಕ ತಮ್ಮ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ದಾಖಲಿಸಿಕೊಳ್ಳಬೇಕೆಂದು ಅವರು ತಿಳಿಸಿದರು.

ಜನಗಣತಿ ನಮ್ಮ ರಾಜ್ಯ ಮತ್ತು ದೇಶದ ಭವಿಷ್ಯ ರೂಪಿಸುವ ಮಹತ್ವದ ಕಾರ್ಯ. ಇದು ದತ್ತಾಂಶ ಆಧಾರಿತ ನಿರ್ಧಾರಗಳಿಗೆ ಸಹಾಯ ಮಾಡುತ್ತದೆ. ಆರೋಗ್ಯ, ಶಿಕ್ಷಣ, ವಸತಿ ಮತ್ತು ಮೂಲಸೌಕರ್ಯ ಕ್ಷೇತ್ರಗಳಲ್ಲಿ ಸಮರ್ಪಕ ಸಂಪನ್ಮೂಲ ಹಂಚಿಕೆಗೆ ದಾರಿ ತೋರುತ್ತದೆ. ನಿಮ್ಮ ಭಾಗವಹಿಸುವಿಕೆ ಅತ್ಯಂತ ಮುಖ್ಯ ಎಂದು ಕರೆ ನೀಡಿದರು.

ಇದು ಕೇವಲ ಕರ್ತವ್ಯವಲ್ಲ ಕರ್ನಾಟಕದ ಅಭಿವೃದ್ಧಿಗೆ ನಿಮ್ಮ ಕೊಡುಗೆಯಾಗಿದೆ. ಇಂದು ನೀಡುವ ನಿಖರ ಮಾಹಿತಿ, ನಾಳೆಯ ಉತ್ತಮ ನೀತಿಗಳು, ಸೇವೆಗಳಿಗೆ ಆಧಾರವಾಗುತ್ತದೆ. ಜನಗಣತಿಯಿಂದ ಯಾರು ಬಿಟ್ಟು ಹೋಗದಂತೆ ಸರ್ಕಾರ ಮುತುವರ್ಜಿ ವಹಿಸಿದೆ. ನಿಗದಿತ ಅವಧಿಯಲ್ಲಿ ಸ್ವಯಂ ಗಣತಿಯನ್ನು ಪೂರ್ಣಗೊಳಿಸಿ, ಜನಗಣತಿ 2027 ಅನ್ನು ಯಶಸ್ವಿಗೊಳಿಸಲು ನಾವು ಎಲ್ಲರೂ ಕೈಜೋಡಿಸೋಣ ಎಂದು ನಾಗರಿಕರಲ್ಲಿ ಮನವಿ ಮಾಡಿದ್ದಾರೆ.

ಮೊಬೈಲ್ ಮೂಲಕ ಗಣತಿ

ಬೆಂಗಳೂರು: ಡಿಜಿ ಮತ್ತು ಐಜಿಪಿ ಡಾ.ಎಂ.ಎ.ಸಲೀಂ ಅವರು ಅವರು ತಮ್ಮ ಕಚೇರಿಯಲ್ಲಿ ಮೊಬೈಲ್ ಮೂಲಕ ಸ್ವಯಂ ಗಣತಿ ದಾಖಲಾತಿ ಪೂರ್ಣಗೊಳಿಸಿದ ಅವರು, ಈ ಪ್ರಕ್ರಿಯೆ ಅತ್ಯಂತ ಸರಳ ಮತ್ತು ಸುರಕ್ಷಿತವಾಗಿದ್ದು, ನಾಗರಿಕರು ಯಾವುದೇ ಆತಂಕವಿಲ್ಲದೇ ಸ್ವಯಂ ಮಾಹಿತಿಯನ್ನು ದಾಖಲಿಸಬಹುದು ಎಂದು ಹೇಳಿದರು.



ಮತದಾರರಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನವಿ | ಅಭ್ಯರ್ಥಿ ಪರ ನಾಯಕರ ಮತ ಪ್ರಚಾರ
ಗ್ಯಾರಂಟಿ ಯೋಜನೆಯ ಫಲಾನುಭವಿಗಳು ಉಪಕಾರ ಮಾಡಿ



ಬಾಗಲಕೋಟೆ: ಸರ್ಕಾರದ ಐದು ಗ್ಯಾರಂಟಿಗಳಿಂದ ಜನರಿಗೆ ಉಪಯುಕ್ತವಾಗಿದ್ದು, ಇದರ ಉಪಕಾರ ಸ್ಮರಣೆಯನ್ನು ತೋರಿಸಲಿದ್ದಾರೆ ಹೀಗಾಗಿ ಬಾಗಲಕೋಟೆ ಮತ್ತು ದಾವಣಗೆರೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ನಗರದ ಖಾಸಗಿ ರೆಸಾರ್ಟ್‌ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮತದಾರರು ಗ್ಯಾರಂಟಿ ಯೋಜನೆ ಋಣವನ್ನು ತೀರಿಸುತ್ತೇವೆ ಎಂದು ಹೇಳುತ್ತಿದ್ದಾರೆ ಎಂದರು. ಕೇಂದ್ರ ಸರ್ಕಾರದ ಬೆಲೆ ಏರಿಕೆಯನ್ನು ತಪ್ಪಿಸಲು ಗ್ಯಾರಂಟಿ ಯೋಜನೆಗಳನ್ನು ರಾಜ್ಯದಲ್ಲಿ ಜಾರಿಗೆ ತರಲಾಗಿದೆ. 15ನೇ ಹಣಕಾಸು ಆಯೋಗದ ವರದಿಯಂತೆ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ದುಡ್ಡು ಬರಲಿಲ್ಲ, ಇನ್ನೂ ಗ್ಯಾಸ್, ಪೆಟ್ರೋಲ್, ಡಿಸೇಲ್ ದರ ಏರಿಕೆಯಾಗುತ್ತಿದೆ. ದೇಶದಲ್ಲಿ ಅಚ್ಛೆದಿನ್ ಬರಲೇ ಇಲ್ಲ, ಇದನ್ನು ಜನರಿಗೆ ಕೇಳುತ್ತಿದ್ದೇವೆ ಎಂದರು.

ಬಾಗಲಕೋಟೆಯಲ್ಲಿ ಕೆಲವೊಂದು ವಿದ್ಯಾರ್ಥಿಗಳ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಿದ್ದಾರೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಕೆಲವೊಂದು ವಿದ್ಯಾರ್ಥಿಗಳು ಎರಡೆರಡು ಊರುಗಳಲ್ಲಿ ಮತದಾರರ ಪಟ್ಟಿಯನ್ನು ಹೊಂದಿದ್ದು, ಈ ಕುರಿತು ದೂರು ಕೊಡುತ್ತೇವೆ. ಇದನ್ನು ಪರಿಶೀಲನೆ ಮಾಡಲು ದೊಡ್ಡ ತಂಡ ನಮ್ಮಲ್ಲಿದೆ. ವಿದ್ಯಾರ್ಥಿಗಳು ತಮ್ಮ ಊರಿನಲ್ಲಿ ಮತದಾನದ ಹಕ್ಕನ್ನು ಉಳಿಸಿಕೊಳ್ಳಬೇಕು ಎಂದರು. ಸಚಿವ ಭೈರತಿ ಸುರೇಶ, ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ, ಶಿವಾನಂದ ಪಾಟೀಲ, ಶಾಸಕ ಜೆ.ಟಿ.ಪಾಟೀಲ ಇದ್ದರು.

ಕಾಂಗ್ರೆಸ್ ಸರ್ಕಾರವಿದ್ದರೆ ಗ್ಯಾರಂಟಿಗೆ ಸುರಕ್ಷತೆ

ರಾಜ್ಯದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಜನ ಕಲ್ಯಾಣ, ಜನಜಾಗೃತಿ, ಸಮಗ್ರ ಅಭಿವೃದ್ಧಿಯನ್ನು ಇಟ್ಟುಕೊಂಡು ಹೊರಟಿದೆ ಆದರೆ ಬಿಜೆಪಿ ದ್ವೇಷ, ದೇಶ ವಿಘಟನೆ ಮಾಡುವತ್ತ ಸಾಗಿದೆ. ರಾಜ್ಯದ ಜನರಿಗೆ ಐದು ವರ್ಷ ನಾವು ನೌಕರರಾದರೆ ಅವರು ನಮಗೆ ಮಾಲೀಕರಾಗಿದ್ದಾರೆ ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪಸಿಂಗ್ ಸುರ್ಜೇವಾಲಾ ಹೇಳಿದರು. ನಗರದ ಖಾಸಗಿ ರೆಸಾರ್ಟ್‌ದಲ್ಲಿ ಪಕ್ಷದ ಮುಖಂಡರ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಐದು ಗ್ಯಾರಂಟಿಗಳಿಗೆ ಎರಡು ವರ್ಷದಲ್ಲಿ 1 ಲಕ್ಷ 31 ಸಾವಿರ ಕೋಟಿ ರೂ. ನೀಡಲಾಗಿದೆ. ಕಾಂಗ್ರೆಸ್ ಸರ್ಕಾರವಿದ್ದರೆ ಗ್ಯಾರಂಟಿಗಳಿಗೆ ಸುರಕ್ಷತೆ, ಬಿಜೆಪಿ ಇದ್ದರೆ ಬೆಲೆ ಏರಿಕೆಗೆ ಎಂದು ದೂರಿದರು. ಏಪ್ರಿಲ್ 1 ಆಂಗ್ಲರು ಏಪ್ರಿಲ್ ಫೂಲ್ ಎನ್ನುತ್ತಾರೆ. ಮೋದಿ ಸರ್ಕಾರ ಏ.1ರಂದು ಜೇಬಿಗೆ ಕತ್ತರಿ ಹಾಕುವ ಕೆಲಸ ಮಾಡಿದ್ದಾರೆ. ಕೇಂದ್ರ ಸರ್ಕಾರ ಬೆಲೆ ಏರಿಕೆ ಮಾಡುತ್ತಿರುವುದರಿಂದ ಸಾಮಾನ್ಯ ಜನರ ಜೀವನಕ್ಕೆ ಹೊಡೆತ ಬಿದ್ದಿದೆ.ಬಿಜೆಪಿಯವರು ಒಂದು ಪಿಕ್ ಪಾಕೇಟ್ ಕಳ್ಳರಂತೆ ಅವರಿಂದ ಎಚ್ಚರವಾಗಿರಿ ಎಂದರು. 450 ರೂ. ಗ್ಯಾಸ ಸಿಗುತ್ತಿರುವುದು ಈಗ 2000 ಗಡಿ ದಾಟಿದೆ. ಮೂರು ಬಾರಿ ಗ್ಯಾಸ್ ದರವನ್ನು ಕೇಂದ್ರ ಸರ್ಕಾರ ಏರಿಕೆ ಮಾಡಿದೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ ಫೀ ಕೂಡ ಹೆಚ್ಚಿಸಿದ್ದಾರೆ. ರಾಜ್ಯದಿಂದಲೇ ವರ್ಷಕ್ಕೆ 23 ಸಾವಿರ ಕೋಟಿ ರೂ. ಸಂಗ್ರಹವಾಗಿದೆ. ಏರ್ ಕಂಡೀಶನರ್, ಫ್ರಿಡ್ಜ್ ವಾಟರ್ ಕೂಲರ್ ದರ ಶೇ.8 ರಿಂದ 15ರಷ್ಟು ಏರಿಕೆಯಾಗಿದೆ. 900 ಔಷಧಿಗಳ ಬೆಲೆ ಕೂಡ ಹೆಚ್ಚಿಸಿದೆ. . ಜೆಟ್ ವಿಮಾನಗಳಿಗೆ ನೀಡುವ ಪೆಟ್ರೋಲ್ ದರ 2 ಲಕ್ಷ ಕ್ರಾಸ ಆಗಿದೆ. ಇದು ಬಿಜೆಪಿಯವರು ಕೊಟ್ಟ ಕೊಡುಗೆ ಎಂದರು.

ಅನ್ಯಾಯದ ಸರಣಿ ಮುಂದುವರಿಸಿದ ಕೇಂದ್ರ: ಸಚಿವ ಪ್ರಿಯಾಂಕ್ ಖರ್ಗೆ

ಬೆಂಗಳೂರು: ಕೇಂದ್ರ ಸರ್ಕಾರವು ಕನ್ನಡಿಗರನ್ನು ಶತ್ರುಗಳಂತೆ ಕಾಣುತ್ತಿದೆ. ಪ್ರತಿ ಹಂತದಲ್ಲೂ ಪ್ರತಿ ವಿಷಯದಲ್ಲೂ ರಾಜ್ಯಕ್ಕೆ ಅನ್ಯಾಯದ ಸರಣಿ ಮುಂದುವರೆಸಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಗುಡುಗಿದ್ದಾರೆ.

ತಮ್ಮ ಎಕ್ಸ್ ಖಾತೆಯಲ್ಲಿ ಕೇಂದ್ರ ಸರ್ಕಾರವನ್ನು ಟೀಕಿಸಿರುವ ಅವರು, 15ನೇ ಹಣಕಾಸು ಆಯೋಗದ ಅವಧಿ ಮುಕ್ತಾಯವಾಗಿದೆ. ಈ ಹೊತ್ತಿನಲ್ಲಿ ರಾಜ್ಯಕ್ಕೆ ಕೇಂದ್ರ ಸರ್ಕಾರದ ಅನ್ಯಾಯದ ದೊಡ್ಡ ಸಾಕ್ಷಿಗುಡ್ಡೆಯನ್ನೂ ಉಳಿಸಿದೆ. ಈ ವಂಚನೆ ಕೇವಲ 15ನೇ ಹಣಕಾಸು ಆಯೋಗದ ಅನುದಾನಕ್ಕೆ ಮಾತ್ರ ಸೀಮಿತವಲ್ಲ, ಬಜೆಟ್‌ನಿಂದ ಹಿಡಿದು ನೆರೆ, ಬರ ಪರಿಹಾರ, ತೆರಿಗೆ ಹಂಚಿಕೆ, ಕೇಂದ್ರ ಪುರಸ್ಕೃತ ಯೋಜನೆಗಳು ಸೇರಿದಂತೆ ಎಲ್ಲದರಲ್ಲೂ ಕನ್ನಡಿಗರು ಮಲತಾಯಿ ಮಕ್ಕಳೇ ಎಂದು ಅಸಹನೆ ವ್ಯಕ್ತಪಡಿಸಿದ್ದಾರೆ.

ಮನರೇಗಾ ಯೋಜನೆಯೂ ಮಾ. 31ಕ್ಕೆ ಕೊನೆಯಾಗಿದೆ. ಸದರಿ ಯೋಜನೆಯಲ್ಲಿ ರಾಜ್ಯಕ್ಕೆ 1,943 ಕೋಟಿ ಅನುದಾನ ಬಾಕಿ ಇದೆ. ಈ ಅನುದಾನದ ಬಗ್ಗೆ ಇದುವರೆಗೂ ಕೇಂದ್ರ ಸರ್ಕಾರ ಯಾವುದೇ ಸ್ಪಷ್ಟತೆ ನೀಡಿಲ್ಲ, ಏ.1ರಿಂದ ಜನರಿಗೆ ಉದ್ಯೋಗ ಒದಗಿಸಬೇಕಿದ್ದ ವಿಬಿಗ್ರಾಮ್‌ಜಿ ಯೋಜನೆಯ ಸುಳಿವೂ ಇಲ್ಲ, ಈ ಯೋಜನೆಯು ಜಾರಿಗೆ ನಿಯಮಗಳ ರೂಪುರೇಷೆಯೂ ಸಿದ್ಧವಾಗಿಲ್ಲ, ಇದು ಗ್ರಾಮೀಣ ಜನರ ಕಾನೂನಾತ್ಮಕ ಉದ್ಯೋಗದ ಹಕ್ಕನ್ನು ಕಸಿದಂತಾಗಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ಮಾಡುತ್ತಿರುವುದು ಅನ್ಯಾಯ ಮಾತ್ರವಲ್ಲ, ನಿಷ್ಕರುಣೆಯ ಕ್ರೌರ್ಯ, ಮೋದಿ ಸರ್ಕಾರವು ಕರ್ನಾಟಕಕ್ಕೆ ಬಾಂಗ್ಲಾದೇಶ, ಅಫ್ಘಾನಿಸ್ತಾನಗಳಿಗೆ ತೋರಿದಷ್ಟು ಕಾಳಜಿಯನ್ನೂ ತೋರುತ್ತಿಲ್ಲ ಎಂದು ಟೀಕಿಸಿದ್ದಾರೆ.


ಶೇ.100 ಕಡತ ವಿಲೇವಾರಿ ಸಾಧನೆ

• ಬೆಂಗಳೂರು: ಕೃಷಿ ಸಚಿವ ಚೆಲುವರಾಯಸ್ವಾಮಿ ಅವರ ನೇತೃತ್ವದ ಕೃಷಿ ಸಚಿವರ ಕಚೇರಿ ಸಾರ್ವಜನಿಕ ಸ್ನೇಹಿ ಆಡಳಿತದ ಭಾಗವಾಗಿ 2025-26ನೇ ಸಾಲಿನಲ್ಲಿ ಶೇ.100 ಕಡತ ವಿಲೇವಾರಿ ಸಾಧನೆ ಮಾಡಿದೆ.

ವಿಕಾಸಸೌಧದಲ್ಲಿರುವ ಸಚಿವರ ಕಚೇರಿಗೆ ಬಂದ ಎಲ್ಲಾ ಕಡತಗಳನ್ನು ಸಮಯಬದ್ಧವಾಗಿ ಪರಿಶೀಲಿಸಿ ನಿಯಮಾನುಸಾರವಾಗಿ ವಿಲೇವಾರಿ ಮಾಡಲಾಗಿದೆ ಎಂದು ತಿಳಿಸಲಾಗಿದೆ. ಈ ಸಾಲಿನಲ್ಲಿ ಒಟ್ಟು 909 ಕಡತಗಳನ್ನು ಪರಿಶೀಲಿಸಿ ಪೂರ್ಣವಾಗಿ ವಿಲೇವಾರಿ ಮಾಡಲಾಗಿದೆ. ಜತೆಗೆ ಮಾರ್ಚ್ ಅಂತ್ಯದವರೆಗೆ ಸ್ವೀಕರಿಸಲ್ಪಟ್ಟ 4201 ಪತ್ರಗಳನ್ನೂ ಸಮಗ್ರವಾಗಿ ಪರಿಶೀಲಿಸಿ ನಿರ್ವಹಿಸಲಾಗಿದೆ. ವಿಧಾನಸಭೆ ಹಾಗೂ ವಿಧಾನಪರಿಷತ್ ಸದಸ್ಯರು ಕೃಷಿ ಇಲಾಖೆಗೆ ಕೇಳಿದ ಒಟ್ಟು 352 ಪ್ರಶ್ನೆಗಳಿಗೆ ಸಹ ಸಮರ್ಪಕ ಉತ್ತರ ನೀಡಲಾಗಿದೆ ಎಂದು ಇಲಾಖೆ ಮಾಹಿತಿ ನೀಡಿದೆ.

ಕಳೆದ ಮೂರು ವರ್ಷಗಳಿಂದಲೂ ಸಚಿವರ ಕಚೇರಿಯಲ್ಲಿ ನಿರಂತರವಾಗಿಶೇ.100ಕಡತವಿಲೇವಾರಿಸಾಧನೆಮುಂದುವರಿದಿದ್ದು, ಇದು ಆಡಳಿತದ ದಕ್ಷತೆ ಮತ್ತು ಪಾರದರ್ಶಕತೆಯ ಪ್ರತೀಕವಾಗಿದೆ. ಈ ಸಾಧನೆಗೆ ಸಹಕರಿಸಿದ ಸಿಬ್ಬಂದಿಯ ಪರಿಶ್ರಮವನ್ನು ಸಚಿವರು ಶ್ಲಾಘಿಸಿದ್ದು, ಮುಂದಿನ ದಿನಗಳಲ್ಲಿಯೂ ಇದೇ ರೀತಿಯ ಸೇವಾಭಾವದಿಂದ ಕಾರ್ಯನಿರ್ವಹಿಸಲು ಸೂಚಿಸಿದ್ದಾರೆ.

ರಾಮ ಬಾಣ



ವಿದ್ಯಾರ್ಥಿಗಳಿಗೆ ಹಿಂದಿ ಭಾಷೆ ಕಲಿಕೆ ಅಗತ್ಯ

• ಬೆಂಗಳೂರು: ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಇತ್ತೀಚೆಗೆ ಉಂಟಾಗಿರುವ ಬೆಳವಣಿಗೆಗಳ ಕುರಿತು ಬಿಜೆಪಿಯ ಶಿಕ್ಷಣ ಪ್ರಕೋಷ್ಠ ತೀವ್ರ ಆತಂಕ ಹಾಗೂ ಅಸಮಾಧಾನವನ್ನು ವ್ಯಕ್ತಪಡಿಸಿದೆ.

ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ಶಿಕ್ಷಣ ಪ್ರಕೋಷ್ಠದ ರಾಜ್ಯ ಸಂಚಾಲಕ ಡಾ. ಸಿ.ಬಿ. ಶಶಿಧರ್ ಅವರು, ರಾಜ್ಯದ ಕಾಂಗ್ರೆಸ್ ಸರ್ಕಾರವು ತ್ರಿಭಾಷಾ ಸೂತ್ರದ ಅಡಿಯಲ್ಲಿ ವಿದ್ಯಾರ್ಥಿಗಳು ಹಿಂದಿ ಭಾಷೆಯನ್ನು ಕಲಿಯಬೇಕು ಎಂದು ಹಲವು ವರ್ಷಗಳಿಂದ ಹೇಳುತ್ತ ಬಂದಿದ್ದರೂ, ಇದೀಗ ಯಾವುದೇ ಪೂರ್ವ ಚರ್ಚೆ ಇಲ್ಲದೆ ಮತ್ತು ವಿದ್ಯಾರ್ಥಿಗಳು ಹಾಗೂ ಪೋಷಕರ ಅಭಿಪ್ರಾಯವನ್ನು ಪರಿಗಣಿಸದೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಹಿಂದಿ ವಿಷಯವನ್ನು ಕೈಬಿಡುವ ಕುರಿತು ಸೂಚನೆ ನೀಡಿರುವುದು ಶಿಕ್ಷಣ ವಲಯದಲ್ಲಿ ಗಂಭೀರ ಗೊಂದಲವನ್ನು ಸೃಷ್ಟಿಸಿದೆ ಎಂದು ಹೇಳಿದರು.

ವಿದ್ಯಾರ್ಥಿಗಳ ಭವಿಷ್ಯ, ಅವರ ಸ್ಪರ್ಧಾತ್ಮಕ ಸಾಮರ್ಥ್ಯ ಹಾಗೂ ಬಹುಭಾಷಾ ಅಧ್ಯಯನದ ಅಗತ್ಯತೆಯನ್ನು ಕಡೆಗಣಿಸುವಂತಹ ನಿರ್ಧಾರಗಳು ಶಿಕ್ಷಣ ವ್ಯವಸ್ಥೆಯ ಮೇಲಿನ ವಿಶ್ವಾಸವನ್ನು ಕುಂದಿಸುತ್ತವೆ. ಸರ್ಕಾರವು ರಾಜಕೀಯ ಲಾಭಕ್ಕಾಗಿ ಶಿಕ್ಷಣ ಕ್ಷೇತ್ರವನ್ನು ಪ್ರಯೋಗಾಲಯವನ್ನಾಗಿ ಮಾಡಬಾರದು ಎಂದರು.



ಇದಕ್ಕಿಂತಲೂ ಆತಂಕಕಾರಿ ವಿಷಯವೆಂದರೆ, ಇತ್ತೀಚೆಗೆ ರಾಜ್ಯದ ಶಿಕ್ಷಣ ಸಚಿವರು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಹಿಂದಿ ವಿಷಯವನ್ನು ಕೈಬಿಡುವ ಕುರಿತು ನೀಡಿರುವ ಸೂಚನೆ ಶಿಕ್ಷಣ ವಲಯದಲ್ಲಿ ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಈಗಾಗಲೇ ನಡೆದಿರುವ ಪರೀಕ್ಷೆಗೆ ಸಂಬಂಧಿಸಿದಂತೆ, ವಿದ್ಯಾರ್ಥಿಗಳಿಗೆ ಗ್ರೇಡ್ ನೀಡುತ್ತೇವೆ ಎಂದು ಸರ್ಕಾರ ಹೇಳಿದೆ. ಇದು ವಿದ್ಯಾರ್ಥಿಗಳ ಪರಿಶ್ರಮ ಹಾಗೂ ಅವರ ವಿದ್ಯಾಭ್ಯಾಸದ ಮೌಲ್ಯವನ್ನು ಕಡಿಮೆ ಮಾಡುವ ಕ್ರಮವಾಗಿದ್ದು, ಬಿಜೆಪಿ ಶಿಕ್ಷಣ ಪ್ರಕೋಷ್ಠ ಇದನ್ನು ತೀವ್ರವಾಗಿ ಖಂಡಿಸುತ್ತದೆ. ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಅನ್ಯಾಯವಾಗದಂತೆ ಅವರಿಗೆ ಸಮರ್ಪಕವಾದ ಗ್ರೇಸ್ ಅಂಕಗಳನ್ನು ನೀಡುವ ಮೂಲಕ ನ್ಯಾಯ ಒದಗಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಶಿಕ್ಷಣ ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯ ಕೆ. ಹರೀಶ್ ಸೇರಿದಂತೆ ಇತರರಿದ್ದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ರಾಜ್ಯ ಸರ್ಕಾರದಲ್ಲಿ ಯೋಜನೆ, ಅನುದಾನ, ಅನುಷ್ಠಾನದ ನಡುವೆ ತಾಳ ಮೇಳವೇ ಕಂಡು ಬರುತ್ತಿಲ್ಲ - ಸುನೀಲ್ ಕುಮಾರ್

- ಒಬ್ಬಾತ ಸಂಗೀತ ಕಾರ್ಯಕ್ರಮವೊಂದನ್ನು ಕೇಳಿ ಹೀಗೆ ಹೇಳಿದನಂತೆ --- ವ್ಾ, ರಾಗ- ಸರಾಗ, ತಾಳ -ಬೇತಾಳ, ಲಯ- ಮಾಯವಾಗಿದ್ದ ಅಪೂರ್ವ ಕಾರ್ಯಕ್ರಮ!

ದಿನ ಭವಿಷ್ಯ

ಮೇಷ
ಕೆಲವರನ್ನು ಬದಲಿಸಲು ನಿಮ್ಮಿಂದ ಅಸಾಧ್ಯ. ಅವರ ಜತೆ ಹೊಂದಿಕೊಂಡು ಬಾಳುವುದು ಒಳ್ಳೆಯದು. ವಿದ್ಯಾರ್ಥಿಗಳಿಗೆ ಯಶ.

ವೃಷಭ
ವಿದ್ಯಾರ್ಥಿಗಳಿಗೆ ಸಫಲ ದಿನ. ವೃತ್ತಿಯಲ್ಲಿ ಸಮಸ್ಯೆ ನೀಗಿಸಲು ಶಕ್ತರಾಗುವಿರಿ. ಆರೋಗ್ಯ ಕಾಳಜಿ ನೋಡಿಕೊಳ್ಳಿ. ಸಿಕ್ಕಿದ್ದನ್ನು ತಿನ್ನಬೇಡಿ.

ಮಿಥುನ
ಪ್ರತಿಕೂಲ ಪರಿಸ್ಥಿತಿ ಎದುರಿಸುತ್ತಿದ್ದರೆ ಸ್ವಲ್ಪ ಕಾಲ ಕಾದು ನೋಡಿ. ಬಳಿಕ ಸರಿ ಹೋಗುವುದು. ದುಡುಕಿನ ಕ್ರಮ ಕೈಗೊಳ್ಳಬೇಡಿ. ಆರ್ಥಿಕ ಸ್ಥಿರತೆ.

ಕಟಕ
ವೃತ್ತಿಯಲ್ಲಿ ಸ್ಪರ್ಧೆ ಎದುರಿಸುವಿರಿ. ನಿಮ್ಮ ಪ್ರಭುತ್ವ ಸ್ಥಾಪಿಸಲು ಸ್ವಲ್ಪ ಕಷ್ಟ ಪಡಬೇಕಾಗುವುದು. ಮನೆಯಲ್ಲಿ ಶಾಂತ ಪರಿಸ್ಥಿತಿ. ಧನ ಪ್ರಾಪ್ತಿ.

ಸಿಂಹ
ಮಾನಸಿಕ ಶಾಂತಿ ಕದಡುವ ಬೆಳವಣಿಗೆ. ಸಮಚಿತ್ತ ಕಾಯ್ದುಕೊಳ್ಳಿ. ಕೆಲವರ ಕೆಣಕುವಿಕೆ ನಿರ್ಲಕ್ಷಿಸಿ. ವಿದ್ಯಾರ್ಥಿಗಳಿಗೆ ಆಂಶಿಕ ಯಶಸ್ಸು.

ಕನ್ಯಾ
ಹೆತ್ತವರು ಮಕ್ಕಳ ಕುರಿತು ಕಾಳಜಿ ವಹಿಸಿ. ಆದಾಯಕ್ಕಿಂತ ಹೆಚ್ಚು ಖರ್ಚು ಮಾಡಬೇಡಿ. ನೆಂಟರಿಂದ ಟೀಕೆ ಕೇಳುವಿರಿ.

ತುಲಾ
ಕೆರಿಯರ್‌ನಲ್ಲಿ ಮುಂದೆ ಹೆಜ್ಜೆ ಇಡಿ. ಸಣ್ಣ ಅಪಯಶಸ್ಸು ಕಂಡು ಹಿಂದಡಿ ಇಡಬೇಡಿ. ಹೊಸ ವ್ಯವಹಾರದಲ್ಲಿ ಧನ ಸಂಪಾದನೆ ಹೆಚ್ಚಳ.

ವೃಶ್ಚಿಕ
ಆರ್ಥಿಕ ಒತ್ತಡ. ಅನ್ಯರ ನೆರವು ಅಪೇಕ್ಷಿಸಿದರೂ ಸಿಗದು. ಸಣ್ಣ ಘಟನೆಯೊಂದು ಮಾನಸಿಕ ಕ್ಷೋಭೆ ಉಂಟು ಮಾಡಬಹುದು.

ಧನು
ನಿಮ್ಮ ಕಾರ್ಯಕ್ಕೆ ಮೆಚ್ಚುಗೆ ಸಿಗಲಿದೆ. ಟೀಕೆಗಳಿಗೆ ಅಂಜಿ ಉದ್ದೇಶಿತ ಕೆಲಸದಿಂದ ಹಿಂದೆ ಸರಿಯಬೇಡಿ. ವಿದ್ಯಾರ್ಥಿಗಳಿಗೆ ಒತ್ತಡ.

ಮಕರ
ಅಡ್ಡಿಗಳಿಗೆ ಅಂಜಬೇಡಿ. ಅದನ್ನು ದಾಟಿ ಮುಂದೆ ಸಾಗಲು ಯತ್ನಿಸಿ. ಹಿರಿಯರ ಆರೋಗ್ಯ ಚಿಂತೆಗೆ ಕಾರಣವಾದೀತು.

ಕುಂಭ
ಹತಾಶೆಯ ಮನೋಭಾವ. ಅದಕ್ಕೆ ಕಾರಣ ಮುಗಿಯದ ಸಮಸ್ಯೆ. ಗ್ರಹಗತಿ ಕೆಲ ಕಾಲ ಮಾನಸಿಕ ಕಿರಿಕಿರಿ ಸೃಷ್ಟಿಸಲಿದೆ.

ಮೀನ
ಕಠಿಣ ಶ್ರಮಕ್ಕೆ ಫಲ ಸಿಗುವುದು. ಆದರೆ ಉದಾಸೀನತೆ ಬಿಡುವುದು ಮುಖ್ಯ. ನಾಳೆಗೆ ಮುಂದೂಡುವ ಅಭ್ಯಾಸ ಬಿಟ್ಟುಬಿಡಿ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ: 0,4,9,2

ಒರಾಕಲ್‌ನ 12 ಸಾವಿರ ಉದ್ಯೋಗಿಗಳ ವಜಾ

ಪುಟ ೧➔ ಯಾವುದೇ ಮುನ್ಸೂಚನೆ ಇಲ್ಲದೆ ಇಮೇಲ್ ಮೂಲಕ ವಜಾ ಆದೇಶ ನೀಡಲಾಗಿದ್ದು, ನೋಟಿಸ್ ಅವಧಿಯ ವೇತನ ಮತ್ತು ಸೇವಾ ಅವಧಿಗೆ ಅನುಗುಣವಾಗಿ ಪರಿಹಾರ ಪ್ಯಾಕೇಜ್ ನೀಡಲಾಗುತ್ತಿದೆ. ಮುಂದಿನ ವಾರಗಳಲ್ಲಿ ಮತ್ತೊಂದು ಸುತ್ತಿನ ಉದ್ಯೋಗ ಕಡಿತ ನಡೆಯುವ ಸಾಧ್ಯತೆಯಿದೆ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಎಐ ಕಡೆಗೆ ಕಾರ್ಯತಂತ್ರ ಬದಲಾವಣೆ: ಒರಾಕಲ್ ಕಂಪನಿ ಸಾಂಪ್ರದಾಯಿಕ ಎಂಟರ್‌ಪ್ರೈಸ್ ಸಾಫ್ಟ್‌ವೇರ್ ಮತ್ತು ಆಂತರಿಕ ಕಾರ್ಯಾಚರಣೆಗಳಿಂದ ಬಂಡವಾಳ ಹಿಂಪಡೆದು, ಎಐ-ಸಿದ್ಧ ಡೇಟಾ ಸೆಂಟರ್‌ಗಳು ಮತ್ತು ಕ್ಲೌಡ್ ಸೇವೆಗಳ ಮೇಲೆ ದೊಡ್ಡ ಪ್ರಮಾಣದಲ್ಲಿ ಹೂಡಿಕೆ ಮಾಡುತ್ತಿದೆ. ಇದರ ಪ್ರಮುಖ ಭಾಗವಾಗಿ 'ಸ್ಟಾರ್‌ಗೇಟ್' ಎಐ ಮೂಲಸೌಕರ್ಯ ಯೋಜನೆಯನ್ನು ಕೈಗೆತ್ತಿಕೊಂಡಿದ್ದು, ಮುಂದಿನ ಪೀಳಿಗೆಯ ಡೇಟಾ ಸೆಂಟರ್ ಸಾಮರ್ಥ್ಯ ಅಭಿವೃದ್ಧಿಪಡಿಸಲು ಮುಂದಾಗಿದೆ. ಮುಂದಿನ ಕೆಲವು ವರ್ಷಗಳಲ್ಲಿ ನೂರಾರು ಬಿಲಿಯನ್ ಡಾಲರ್ ಹೂಡಿಕೆ ಮಾಡುವ ನಿರೀಕ್ಷೆಯಿದೆ.

ಜಾಗತಿಕ ತಂತ್ರಜ್ಞಾನ ಕ್ಷೇತ್ರದ ಟ್ರೆಂಡ್

ಜಾಗತಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಉದ್ಯೋಗಗಳ ಕಡಿತ, ಎಐ ಆಧಾರಿತ ಬೆಳವಣಿಗೆಗೆ ಹಣ ಹೂಡಿಕೆ ಸಾಮಾನ್ಯವಾಗುತ್ತಿದೆ. ಅಮೆಜಾನ್ ಮತ್ತು ಆಲ್ಫಾಬೆಟ್‌ನಂತಹ ಕಂಪನಿಗಳಿಗೆ ಪೈಪೋಟಿ ನೀಡಲು ಒರಾಕಲ್ ತನ್ನ ಕ್ಲೌಡ್ ಮೂಲ ಸೌಕರ್ಯ ವಿಸ್ತರಿಸುತ್ತಿದೆ. ಎಐ ಆರ್ಥಿಕತೆಯಲ್ಲಿ ಪ್ರಮುಖ ಮೂಲ ಸೌಕರ್ಯ ಪೂರೈಕೆದಾರನೆಂದು ಗುರುತಿಸಿಕೊಳ್ಳಲು ಕಂಪನಿ ಇತ್ತೀಚೆಗೆ ಜನರೇಟಿವ್ ಎಐ ತಂತ್ರಜ್ಞಾನ ಅಳವಡಿಸಿಕೊಂಡಿದೆ.

ಕೇರಳ ಮಾದರಿಯಲ್ಲೇ ಆರೈಕೆ ಒದಗಿಸಲು ಆರೋಗ್ಯ ಇಲಾಖೆ ಮುಂದು

ಕ್ಯಾನ್ಸರ್ ಪೀಡಿತರಿಗೆ ಮನೆ ಆರೈಕೆ

• ಬೆಂಗಳೂರು: ಕ್ಯಾನ್ಸರ್ ಪೀಡಿತರಿಗೆ ಆರೋಗ್ಯ ಇಲಾಖೆ ಸಿಹಿ ಸುದ್ದಿ ನೀಡಿದ್ದು, ಮಾರಣಾಂತಿಕ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳು ಇನ್ನು ಮುಂದೆ ಆಸ್ಪತ್ರೆಗೆ ಹೋಗುವ ಅಗತ್ಯವಿಲ್ಲ, ಬದಲಾಗಿ ಮನೆಯಲ್ಲಿಯೇ ಉಪಶಮನ ಆರೈಕೆ ನೀಡುವ ಕುರಿತು ಕರುಣಾಶ್ರಯ ಸಂಸ್ಥೆಯು ಕನ್ನಡದಲ್ಲಿ ಆ್ಯನಿಮೇಷನ್ ವಿಡಿಯೋಗಳ ಸರಣಿಗಳನ್ನು ನಿರ್ಮಿಸಿದೆ.

ಆರೋಗ್ಯ ಸೌಧದಲ್ಲಿ ಬುಧವಾರ ಕರುಣಾಶ್ರಯ ಸಂಸ್ಥೆವತಿಯಿಂದಹಮ್ಮಿಕೊಂಡಿದ್ದಕಾರ್ಯಕ್ರಮದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ 17 ವಿವಿಧ ಬಗೆಯ ವಿಡಿಯೊ ಸರಣಿಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿ, ಜನರಿಗೆ ಕೇರಳದಲ್ಲಿ ಗೃಹ ಆಧಾರಿತ ಉಪಶಮನ ಆರೈಕೆ ಮಾದರಿ ರೀತಿಯಲ್ಲಿ ರಾಜ್ಯದಲ್ಲೂ ಅದೇ ರೀತಿ ಆರೈಕೆ ಒದಗಿಸಲು ಆರೋಗ್ಯ ಇಲಾಖೆ ಮುಂದಾಗಿದೆ ಎಂದು ತಿಳಿಸಿದರು.

52 ಸಾವಿರ ಮಂದಿ ಕ್ಯಾನ್ಸರ್ ಪೀಡಿತರಿಗೆ ಆರೋಗ್ಯ ಇಲಾಖೆಯಿಂದಮನೆಆಧಾರಿತಚಿಕಿತ್ಸೆನೀಡುತ್ತಿದ್ದೇವೆ. ಕ್ಯಾನ್ಸರ್ ಅಂತಿಮ ಹಂತದ ಮಾರಣಾಂತಿಕ ಕಾಯಿಲೆಯಿಂದ ಬಳಲುತ್ತಿರುವವರು, ಒಂದೇ ಕಡೆ ಮಲಗಿರುವುದರಿಂದ ಹುಣ್ಣು, ಸೋಂಕು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಅಂತಹವರಿಗೆ ಗುಣಪಡಿಸಲು ಸಾಧ್ಯವಾಗದಿದ್ದರೂ, ಆರೈಕೆ ಅಗತ್ಯವಿರುತ್ತದೆ. ಆದ್ದರಿಂದ ಮನೆಗಳಲ್ಲಿ ಅವರ ಆರೈಕೆ ಬಗ್ಗೆ ಅರಿವು ಮೂಡಿಸಬೇಕಿದೆ. ಅದಕ್ಕೆ ಈ ವಿಡಿಯೋ ಸಹಕಾರಿಯಾಗಲಿದೆ ಎಂದು ಹೇಳಿದರು.

ಉಪಶಮನ ಆರೈಕೆಗೆ ಹೊಸ ನಿಯಮ ರೂಪಿಸಲು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿತ್ತು. ಈ ಆರೈಕೆಗೆ ಸಂಬಂಧಿಸಿದಂತೆ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿ ರಚಿಸಲಾಗಿದೆ ಎಂದು ಹೇಳಿದರು.

ಸರ್ಕಾರಿ ಜಿಲ್ಲಾ ಆಸ್ಪತ್ರೆಗಳಲ್ಲಿಯೂ ಉಪ ಶಮನ ಆರೈಕೆ ಹಿನ್ನೆಲೆ ತಲಾ 6 ಹಾಸಿಗೆಗಳನ್ನು ಮೀಸಲಿಡಲಾಗಿದ್ದು, ಉಪಶಮನ ಆರೈಕೆಗೆ ಹೊರ ರೋಗಿ ವಿಭಾಗದಲ್ಲಿ ಪ್ರತಿ ವರ್ಷ 87 ಸಾವಿರ ನೋಂದಣಿಯಾಗುತ್ತಿದ್ದಾರೆ. ಜತೆಗೆ ಒಳರೋಗಿಗೆ ವಿಭಾಗದಲ್ಲಿ 17 ಸಾವಿರಕ್ಕೂ ಅಧಿಕ ಮಂದಿಗೆ ಚಿಕಿತ್ಸೆ ಒದಗಿಸಲಾಗುತ್ತಿದೆ ಎಂದರು. ಈ ವೇಳೆ ಸಂಸ್ಥೆಯ ವೈದ್ಯಕೀಯ ನಿರ್ದೇಶಕ ಡಾ. ನಾಗೇಶ್ ಸಿಮ್ಹಾ, ಆರೋಗ್ಯ ಇಲಾಖೆ ಆಯುಕ್ತ ಗುರುದತ್ತ ಹೆಗಡೆ, ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ವ್ಯವಸ್ಥಾಪಕ ನಿರ್ದೇಶಕ ಅವಿನಾಶ್ ಮೆನನ್ ಸೇರಿದಂತೆ ಇತರರಿದ್ದರು.



ಆರೈಕೆ ಮಾಡುವುದೇ ದೊಡ್ಡ ಕೆಲಸ

ಕ್ಯಾನ್ಸರ್ ರೋಗಿಗಳು ದೀರ್ಘಕಾಲೀನ ಚಿಕಿತ್ಸೆ ಪಡೆದ ನಂತರ ಮನೆಗೆ ಹೋದ ವೇಳೆ ಕುಟುಂಬಸ್ಥರಿಗೆ ಅವರ ಆರೈಕೆ ಮಾಡುವುದೇ ದೊಡ್ಡ ಸವಾಲಿನ ಕೆಲಸವಾಗಿ ಪರಿಣಮಿಸಲಿದೆ. ಆದ್ದರಿಂದ ಮನೆಯಲ್ಲಿ ಸುಲಭವಾಗಿ ಆರೈಕೆ ಮಾಡುವ ಬಗ್ಗೆ 17 ವಿಡಿಯೊಗಳನ್ನು ಸಿದ್ಧಪಡಿಸಲಾಗಿದೆ. ಇದು ಯೂಟ್ಯೂಬ್ ಚಾನಲ್ (ಕರುಣಾಶ್ರಮ ಬಿಎಚ್‌ಟಿ)ನಲ್ಲಿ ಅಳವಡಿಸಲಾಗಿದೆ. ಸೋಂಕು, ಬೆನ್ನು ಆರೈಕೆ, ಹುಣ್ಣು ತಡೆಗಟ್ಟುವಿಕೆ, ಮೂತ್ರಕೋಶದ ಆರೈಕೆ, ಗಾಯಕ್ಕೆ ಔಷಧ ಹಚ್ಚುವ ಸರಿಯಾದ ರೀತಿ ಸೇರಿ ಅನೇಕ ಅಗತ್ಯತೆ ಹಾಗೂ ಕೌಶಲಗಳ ಬಗ್ಗೆ ಅತ್ಯಂತ ಸರಳ ವಿಧಾನಗಳನ್ನು ಈ ವಿಡಿಯೋಗಳನ್ನು ವೀಕ್ಷಿಸಿದರೆ ಮಾರ್ಗದರ್ಶನ ಸಿಗಲಿದೆ ಎಂದು ತಿಳಿಸಿದರು.

ನ್ಯಾಟೋಗೆ ಟಾಟಾ?

ಪುಟ ೧➔ ತಜ್ಞರ ಪ್ರಕಾರ, ಅಮೆರಿಕ ತನ್ನ ನ್ಯಾಟೋ ಬದ್ಧತೆಗಳಿಂದ ಹೊರ ನಡೆದರೆ ರಷ್ಯಾ, ನ್ಯಾಟೋ ಸದಸ್ಯ ರಾಷ್ಟ್ರಗಳ ಯುದ್ಧ ಸನ್ನದ್ಧತೆಯನ್ನು ಪರೀಕ್ಷಿಸುವ ಎಲ್ಲಾ ಸಾಧ್ಯತೆಗಳಿವೆ.

ತಾಳ್ಮೆ ವಹಿಸಲು ಪೋಲೆಂಡ್ ಸಲಹೆ: ಅಮೆರಿಕ ಅಧ್ಯಕ್ಷರು ಭಾವನಾತ್ಮಕ ಮಾತುಗಳನ್ನಾಡಿದ್ದಾರೆ. ಆದರೆ ಅವರು ತಾಳ್ಮೆ ವಹಿಸಲಿದ್ದಾರೆಂಬ ಭರವಸೆ ನನಗಿದೆ. ಯಾಕೆಂದರೆ ಅಮೆರಿಕ ಇಲ್ಲದೆ ನ್ಯಾಟೋ ಇಲ್ಲ, ನ್ಯಾಟೋ ಇಲ್ಲದಿದ್ದರೆ ಅಮೆರಿಕ ತನ್ನ ಶಕ್ತಿ ಕಳೆದುಕೊಳ್ಳಲಿದೆ ಎಂದು ಪೋಲೆಂಡ್ ರಕ್ಷಣಾ ಸಚಿವ ವ್ಲಾಡಿಸ್ಲಾವ್ ಕೊಸಿನಿಯಾಕ್ ಕ್ಯಾಮಿಸ್ ಹೇಳಿದ್ದಾರೆ. ನ್ಯಾಟೋಸದಸ್ಯ ಯಾವುದೇಪ್ರತಿಕ್ರಿಯೆನೀಡಿಲ್ಲ, ಆದರೆಜರ್ಮನಿಸರ್ಕಾರದ ವಕ್ತಾರರೊಬ್ಬರು, ಅಧ್ಯಕ್ಷ ಟ್ರಂಪ್ ಹೀಗೆ ಹೇಳುತ್ತಿರುವುದು ಇದೇ ಮೊದಲಲ್ಲ, ಇದರ ಪರಿಣಾಮಗಳ ಬಗ್ಗೆ ಅವರೇ ಯೋಚಿಸಲಿ. ಜರ್ಮನಿ ನ್ಯಾಟೋ ಮೈತ್ರಿ ಜತೆಗಿರಲಿದೆ ಎಂದು ಪ್ರತಿಕ್ರಿಯೆ ನೀಡಿದ್ದಾರೆ.

ಅನಿಲ, ತೈಲ ಪೂರೈಕೆಗೆ ಅಗತ್ಯ ಕ್ರಮ

ಪುಟ ೧➔ ರಕ್ಷಣಾ ಸಚಿವರ ಗೈರು: ಕೇರಳದಲ್ಲಿ ವಿಧಾನಸಭೆ ಚುನಾವಣಾ ಪ್ರಚಾರದಲ್ಲಿ ವ್ಯಸ್ತರಾಗಿರುವ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಸಿಸಿಎಸ್ ಸಭೆಗೆ ಗೈರಾಗಿದ್ದಾರೆ.

ಹತ್ತು ದಿನದಲ್ಲಿ 2ನೇ ಸಭೆ: ಇರಾನ್ ಯುದ್ಧದಿಂದ ಉಂಟಾದ ತೈಲ, ಅನಿಲ ವ್ಯತ್ಯಯ ಹಿನ್ನೆಲೆ ಹತ್ತು ದಿನಗಳೊಳಗೆ ಇದು ಎರಡನೇ ಬಾರಿಗೆ ಸಿಸಿಎಸ್ ಸಭೆ ಯನ್ನು ಪ್ರಧಾನಿ ಮೋದಿ ನಡೆಸಿದ್ದಾರೆ. ಹಿಂದಿನ ಸಭೆ ಮಾ.22ರಂದು ಪ್ರಧಾನಿ ನೇತೃತ್ವದಲ್ಲಿ ನಡೆದಿತ್ತು. ಹಿಂದಿನ ಸಭೆಯಲ್ಲಿ, ದೇಶದ ಎಲ್ಲಾ ವಿದ್ಯುತ್ ಸ್ಥಾವರಗಳಲ್ಲಿ ಸಾಕಷ್ಟು ಕಲ್ಲಿದ್ದಲು ಶೇಖರಿಸುವ ಮೂಲಕ ವಿದ್ಯುತ್ ಕೊರತೆ ತಡೆಗಟ್ಟಲು ಕ್ರಮ ತೆಗೆದುಕೊಳ್ಳಲು ನಿರ್ಧರಿಸಲಾಗಿತ್ತು.

- ಕೃಷಿ, ರಸಗೊಬ್ಬರ, ಸರಕು ಸಾಗಣೆ (ಶಿಪ್ಪಿಂಗ್), ವಿಮಾನಯಾನ, ಲಾಗಿಸ್ಟಿಕ್ಸ್ ಮತ್ತು ಎಂಎಸ್‌ಎಂಇ ಸವಾಲುಗಳ ಬಗ್ಗೆ ಚರ್ಚೆ
- ತೈಲ ಸುಂಕ ಕಡಿತಗೊಳಿಸಲು ಮತ್ತು ಎಲ್‌ಪಿಜಿ, ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಪೂರೈಕೆ ವ್ಯತ್ಯಯದ ಬಗ್ಗೆ ಚರ್ಚೆ
- ನೈಸರ್ಗಿಕ ಅನಿಲ (ಪಿಎನ್‌ಜಿ) ಕನೆಕ್ಷನ್ ಹೆಚ್ಚಿಸಲು ಉತ್ತೇಜನ
- ಅಗತ್ಯ ವಸ್ತುಗಳ ಅಕ್ರಮ ಮಾರಾಟದ ವಿರುದ್ಧ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳುವ ಕುರಿತು ಚರ್ಚೆ
- ಯೂರಿಯಾ ಉತ್ಪಾದನೆಗೆ ಉತ್ತೇಜನ, ಖಾರಿಫ್ ಮತ್ತು ರಾಬಿ ಋತುವಿನಲ್ಲಿ ರಸಗೊಬ್ಬರ ಲಭ್ಯತೆಗಾಗಿ ಅಗತ್ಯ ಕ್ರಮ
- ಸಾಮಾನ್ಯ ಪ್ರಜೆಯ ಅಗತ್ಯತೆಗಳ ಬಗ್ಗೆ ಪ್ರಧಾನಿ ಅವಲೋಕನ
- ಸಾರ್ವಜನಿಕರಿಗೆ ಯಾವುದೇ ವದಂತಿ ಮತ್ತು ಸುಳ್ಳು ಸುದ್ದಿ ಹರಡುವುದನ್ನು ತಡೆಗಟ್ಟಲು ಪ್ರಧಾನಿ ಕರೆ
- ವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲು ಸಂಗ್ರಹಕ್ಕಾಗಿ ಸಲಹೆ

ನುಸುಳುಕೋರರ ರಕ್ಷಕ ಕಾಂಗ್ರೆಸ್: ಮೋದಿ

ಪುಟ ೧➔ ದೇಶ ವಿಭಜನೆ ವೇಳೆ ಮುಸ್ಲಿಂ ಲೀಗ್ ಏನು ಮಾಡಿತ್ತೋ ಅದೇ ರೀತಿ ಈಗ ಗ್ರ್ಯಾಂಡ್ ಓಲ್ಡ್ ಪಾರ್ಟಿ ಕಾಂಗ್ರೆಸ್ ದೇಶವನ್ನು ವಿಭಜಿಸಲು ಯತ್ನಿಸುತ್ತಿದೆ .ಅಷ್ಟೇ ಅಲ್ಲದೆ ಬಾಬಾ ಸಾಹೇಬ್ ಅಂಬೇಡ್ಕರ್ ರಚಿಸಿದ ಸಂವಿಧಾನಕ್ಕೇ ದ್ರೋಹ ಬಗೆಯಲು ಮುಂದಾಗಿದೆ ಎಂದು ಅವರು ನುಡಿದರು. ಕಾಂಗ್ರೆಸಿಗೆ ದಿಲ್ಲಿಯಲ್ಲಿ ಮತ್ತು ಅಸ್ಸಾಮಿನಲ್ಲಿ ಎರಡು ಕುಟುಂಬಗಳಿವೆ. ಅವರ ಆದ್ಯತೆ ತಮ್ಮ ಕುಟುಂಬಗಳ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳುವುದೇ ವಿನಾ ಜನತೆಯ ಹಿತವನ್ನು ಕಾಯುವುದಲ್ಲ ಎಂದರು. ಈ ಮೂಲಕ ಅವರು ಗಾಂಧಿ ಕುಟುಂಬ ಮತ್ತು ಅಸ್ಸಾಂನಲ್ಲಿನ ಗೊಗೋಯಿ ಕುಟುಂಬಗಳನ್ನು ಬೊಟ್ಟು ಮಾಡಿದರು.

ಸಮಾನ ನಾಗರಿಕ ಸಂಹಿತೆ, ಬುಡಕಟ್ಟು ಜನರ ರಕ್ಷಣೆ: ಬಿಜೆಪಿ ಮತ್ತೊಮ್ಮೆ ಅಧಿಕಾರಕ್ಕೆ ಬಂದಲ್ಲಿ ಸಮಾನ ನಾಗರಿಕ ನೀತಿಸಂಹಿತೆ ಜಾರಿಗೊಳಿಸಿ, ಅಸ್ಸಾಮಿನ ಅನನ್ಯತೆಯನ್ನು ರಕ್ಷಿಸುವುದಕ್ಕಾಗಿ 6ನೇ ಶೆಡ್ಯೂಲ್‌ನಲ್ಲಿ ಬುಡಕಟ್ಟು ಜನರ ಹಿತವನ್ನು ಸಂರಕ್ಷಿಸಲಾಗುವುದು. ಕಳೆದ 10 ವರ್ಷಗಳ ಬಿಜೆಪಿ ಆಡಳಿತವು ಅಸ್ಸಾಮಿನಲ್ಲಿ ಸೇವೆ ಮತ್ತು ಸುಶಾಸನ (ಉತ್ತಮ ಆಡಳಿತ)ದ ನವೋದಯಕ್ಕೆ ನಾಂದಿ ಹಾಡಿದೆ. ಅಸ್ಸಾಂನಲ್ಲಿ ಅತ್ಯಾಧುನಿಕ ಮೂಲಸೌಕರ್ಯಗಳನ್ನು ಬಿಜೆಪಿ ನೇತೃತ್ವದ ಎನ್‌ಡಿಎ ಮಾತ್ರವೇ ನಿರ್ಮಿಸಬಲ್ಲುದು ಎಂಬುದಾಗಿ ಈಗ ಎಲ್ಲರೂ ಹೇಳಲಾರಂಭಿಸಿದ್ದಾರೆ ಎಂದು ಮೋದಿ ತಿಳಿಸಿದರು.

ಕಾಂಗ್ರೆಸ್ ತನ್ನ 60-65 ವರ್ಷಗಳ ಸುದೀರ್ಘ ಆಡಳಿತದಲ್ಲಿ ಕೇವಲ 3 ಸೇತುವೆಗಳನ್ನು ನಿರ್ಮಿಸಿದ್ದರೆ, ಬಿಜೆಪಿ 10 ವರ್ಷಗಳಲ್ಲೇ 5ಸೇತುವೆಗಳನ್ನು ನಿರ್ಮಿಸಿ ಜನಜೀವನ ಸುಲಲಿತವಾಗುವಂತೆ ಮಾಡಿದೆ. ಅಸ್ಸಾಮಿಗೆ ಸಂಪನ್ಮೂಲಗಳ ಕೊರತೆ ಇದ್ದುದಲ್ಲ, ಆದರೆ ಕಾಂಗ್ರೆಸ್ ತನ್ನ ಅಧಿಕಾರದಾಹಕ್ಕಾಗಿ ಅಸ್ಸಾಮಿನ ಜನತೆಯನ್ನು ವಿಭಜಿಸಿ ಬ್ರಹ್ಮಪುತ್ರಾ ನದಿಯ 2 ದಡಗಳ ಜನರನ್ನು ಒಟ್ಟು ಸೇರಲು ಬಿಡಲಿಲ್ಲ.ಆದರೆ ಎನ್‌ಡಿಎ ಸರಕಾರ ಜನರ ಸಂಕಷ್ಟ ಮತ್ತು ನೋವನ್ನು ಅರ್ಥ ಮಾಡಿಕೊಂಡು ಸೇತುವೆಗಳನ್ನು ನಿರ್ಮಿಸಿ ಅವರ ಬದುಕಿನ ಸಂಕಷ್ಟವನ್ನು ನಿವಾರಿಸಲು ಮುಂದಾಯಿತು. ಅಸ್ಸಾಮಿನ ಜನರನ್ನು ಪ್ರವಾಹದಿಂದ ರಕ್ಷಿಸುವುದಕ್ಕಾಗಿ 1800 ಕೋಟಿ. ರೂ.ಗಳ ಸುಬಾನ್‌ಸಿರಿ ಜಲವಿದ್ಯುತ್ ಯೋಜನೆ ಜಾರಿಗೊಳಿಸಲು ಮುಂದಾಗಿದೆ ಎಂದರು. ಅಸ್ಸಾಮಿನಲ್ಲಿ ಕಳೆದ 10 ವರ್ಷಗಳಲ್ಲಿ 22 ಲಕ್ಷ ಬಡ ಕುಟುಂಬಗಳಿಗೆ ಪಕ್ಕಾ ಮನೆಗಳನ್ನು ನಿರ್ಮಿಸಿ ಕೊಡಲಾಗಿದೆ .ಮುಂದೆ 15 ಲಕ್ಷ ಕುಟುಂಬಗಳಿಗೆ ಇದೇ ರೀತಿ ಮನೆಗಳನ್ನು ನಿರ್ಮಿಸಿಕೊಡಲಾಗುವುದು. ಡಬಲ್ ಇಂಜಿನ್ ಸರಕಾರವು ಈಗ 3 ಲಕ್ಷ ಮಹಿಳೆಯರನ್ನು 'ಲಖ್‌ಪತಿ'ಗಳನ್ನಾಗಿಸಿದ್ದು, ಮುಂದೆ 40 ಲಕ್ಷ ಮಹಿಳೆಯರನ್ನು ಲಖ್‌ಪತಿಗಳನ್ನಾಗಿಸಲಿದೆ. ಸರಕಾರಿ ಉದ್ಯೋಗ ಮತ್ತು ಸ್ವ-ಉದ್ಯೋಗಾವಕಾಶ ಹೆಚ್ಚಿಸಲು ಈಗಾಗಲೇ ಯೋಜನೆ ರೂಪಿಸಿದೆ. ಅಸ್ಸಾಂ ಇನ್ನಷ್ಟು ಪ್ರಗತಿ ಸಾಧಿಸುವಂತೆ ಮಾಡುವುದೇ ಮೋದಿ ಗ್ಯಾರಂಟಿ ಎಂದು ಅವರು ಘೋಷಿಸಿದರು. ಏ.9ರಂದು ರಾಜ್ಯದ 126 ಸದಸ್ಯ ಬಲದ ವಿಧಾನಸಭೆಗೆ ಮತದಾನ ನಡೆಯಲಿದ್ದು, ಮೇ4ರಂದು ಎಣಿಕೆ ನಡೆಯಲಿದೆ.

ಚಹಾ ಎಲೆ ಕೊಯ್ಲು ಮಾಡಿದ ನಮೋ

ಪುಟ ೧➔ ಪ್ರಧಾನಿ ಮೋದಿಯವರು ತಮ್ಮನ್ನು ಭೇಟಿ ಮಾಡಿ ಮಾತನಾಡಿಸಿದ್ದು, ಚಹಾ ತೋಟದ ಕಾರ್ಮಿಕ ಮಹಿಳೆಯರಲ್ಲಿ ಸಂಭ್ರಮವನ್ನುಂಟು ಮಾಡಿತು. ಈ ಕಾರ್ಮಿಕ ಮಹಿಳೆಯರು ಪ್ರಧಾನಿ ಜತೆ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

'ಚಹಾ ಅಸ್ಸಾಂನ ಆತ್ಮ': ಟೀ ಅಸ್ಸಾಂನ ಆತ್ಮವಾಗಿದೆ. ಇಲ್ಲಿ ಉತ್ಪಾದನೆಯಾಗುವ ಟೀ ವಿಶ್ವದಾದ್ಯಂತ ಪ್ರಸಿದ್ಧಿ ಪಡೆದಿದೆ. ಇಂದು ಬೆಳಗ್ಗೆ ಡಿಬ್ರುಗಢದಲ್ಲಿ ಚಹಾ ತೋಟಕ್ಕೆ ಭೇಟಿ ನೀಡಿ ಮಹಿಳಾ ಕಾರ್ಮಿಕರೊಂದಿಗೆ ಮಾತನಾಡಿದ್ದು ಬಹಳ ಸ್ಮರಣೀಯ ಅನುಭವವಾಗಿತ್ತು. ಪ್ರತಿ ಚಹಾ ತೋಟದ ಕುಟುಂಬಗಳ ಕಠಿಣ ಪರಿಶ್ರಮ ಮತ್ತು ದುಡಿಮೆ ನಮ್ಮ ಹೆಮ್ಮೆ. ಯಾಕೆಂದರೆ ಅಸ್ಸಾಮಿನ ಚಹಾ ವಿಶ್ವದೆಲ್ಲೆಡೆಗೆ ತಲುಪುತ್ತಿದೆ ಎಂದು ಮೋದಿ ತಮ್ಮ ಸೋಷಿಯಲ್ ಮೀಡಿಯಾದಲ್ಲಿ ಬರೆದುಕೊಂಡು ಹಲವು ಸುಂದರ ಚಿತ್ರಗಳನ್ನು ಹಂಚಿಕೊಂಡಿದ್ದಾರೆ.

ಅಪ್ರಾಪ್ತರ ಡಿಜಿಟಲ್ ಕರಡು ಸಿದ್ಧ

ಪುಟ ೧➔ ಸುಮಾರು ಪ್ರತಿ ನಾಲ್ಕು ಮಕ್ಕಳಲ್ಲಿ ಒಬ್ಬರಿಗೆ ಹೆಚ್ಚಾದ ಇಂಟರ್‌ನೆಟ್ ಬಳಕೆಯ ಸಮಸ್ಯೆಗಳ ಲಕ್ಷಣಗಳು ಕಾಣಿಸುತ್ತಿರುವುದರಿಂದ, ಈ ನೀತಿಯಲ್ಲಿ ಹೆಚ್ಚು ಸಮಯದ ಸ್ಕ್ರೀನ್ ಬಳಕೆಯಿಂದ ಉಂಟಾಗುವ ಮಾನಸಿಕ ಆರೋಗ್ಯ ಸಮಸ್ಯೆಗಳಾದ ಆತಂಕ, ನಿದ್ರಾಹೀನತೆ, ಕಡಿಮೆ ಶೈಕ್ಷಣಿಕ ಕಾರ್ಯಕ್ಷಮತೆ ಮತ್ತು ಸಾಮಾಜಿಕ ಪ್ರತ್ಯೇಕತೆ ಇತ್ಯಾದಿ ಸಮಸ್ಯೆಗಳನ್ನು ಗುರುತಿಸಲಾಗಿದ್ದು, ಜತೆಗೆ ಸಾಮಾಜಿಕ ಜಾಲತಾಣಗಳ ಮುಖೇನ ಹೆಚ್ಚುತ್ತಿರುವ ಆನ್‌ಲೈನ್ ಕಿರುಕುಳ, ಮೋಸ ಮತ್ತು ಆನ್‌ಲೈನ್ ದುರುಪಯೋಗ ಸೇರಿದಂತೆ ಸೈಬರ್ ಅಪಾಯಗಳನ್ನು ಪ್ರಮುಖವಾಗಿ ಸೂಚಿಸುತ್ತದೆ ಎಂದರು.

ಶಿಕ್ಷಕರಿಗೆ ತರಬೇತಿ: ಟ್ರೈನಿಂಗ್ ಆಫ್ ಟ್ರೈನರ್ಸ್ (ಟಿಒಟಿ) ಮಾದರಿ ಮೂಲಕ, ತಂತ್ರಜ್ಞಾನ ವ್ಯಸನದ ಕುರಿತು ಸಮಸ್ಯೆಗಳನ್ನು ಆರಂಭದಲ್ಲೇ ಗುರುತಿಸಿ, ಸೂಕ್ತ ಚಿಕಿತ್ಸೆ, ಆರೈಕೆ ಮೂಲಕ ನಿಯಂತ್ರಿಸುವ ಕಾರ್ಯ ಆಗಬೇಕಿದೆ. ಈ ಸಂಬಂಧ ಡಿಜಿಟಲ್ ಬಳಕೆ ಕುರಿತು ಶಾಲೆಯಲ್ಲಿ ತಂತ್ರಜ್ಞಾನ ಬಳಕೆಯ ಕುರಿತು ಮಕ್ಕಳಿಗೆ ಹೇಗೆ ತಿಳಿಸಬೇಕು ಹಾಗೂ ಮನೆಯಲ್ಲಿ ಸಾಮಾಜಿಕ ಜಾಲತಾಣಗಳ ಬಳಕೆ ಹೇಗೆ ಮಾಡಬೇಕು ಎಂಬುದನ್ನು ಕಲಿಸಲು ಶಿಕ್ಷಕರಿಗೆ ತಜ್ಞರಿಂದ ತರಬೇತಿ ನೀಡಲಾಗುವುದು ಹಾಗೂ ಪೋಷಕರಿಗೆ ಜಾಗೃತಿ ಮೂಡಿಸಲಾಗುವುದು ಎಂದರು.

ಬೆಂ-ವಿಜಯಪುರ ಎಕ್ಸ್‌ಪ್ರೆಸ್ ರೈಲಿಗೆ ಆಗ್ರಹ

• ಬೆಂಗಳೂರು: ಬೆಂಗಳೂರು ವಿಜಯಪುರ ನಡುವಿನ ಎಕ್ಸ್‌ಪ್ರೆಸ್ ರೈಲು ಸೇವೆ ಆರಂಭಿಸಬೇಕು ಎಂದು ಕೋರಿ ಸಚಿವ ಎಂ.ಬಿ ಪಾಟೀಲ ಅವರು ಕೇಂದ್ರ, ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ವಿ.ಸೋಮಣ್ಣ ಅವರಿಗೆ ಪತ್ರ ಬರೆದಿದ್ದಾರೆ. ಆಲಮಟ್ಟಿ-ವಂದಾಲ್ ನಡುವಿನ 9.60 ಕಿ.ಮೀ. ಉದ್ದ ಜೋಡಿಹಳಿ ಕಾಮಗಾರಿ ಮುಗಿದು, ಸಂಚಾರಕ್ಕೆ ಮುಕ್ತವಾಗಿದೆ. ಇದು ಮುಗಿದರೆ ಬೆಂ.-ವಿಜಯಪುರ ನಡುವೆ ಎಕ್ಸ್‌ಪ್ರೆಸ್ ರೈಲು ಆರಂಭಿಸಬಹುದು ಎಂದು ಹಿಂದಿನ ಭೇಟಿಯಲ್ಲಿ ಹೇಳಿದ್ದಿರಿ. ಈಗ ಇದಕ್ಕೆ ಆದ್ಯತೆ ಕೊಡಬೇಕು ಎಂದರು.

ವ್ಯಕ್ತಿತ್ವ ನಿರ್ಮಾಣಕ್ಕೆ ಶಿಕ್ಷಣವೇ ಬುನಾದಿ

ಪುಟ ೧➔ ರಾಷ್ಟ್ರ ನಿರ್ಮಾಣ, ಲೋಕೋಪಕಾರ ಮತ್ತು ಕರ್ತವ್ಯ ನಿಷ್ಠೆಯ ಮಾರ್ಗವನ್ನು ಅನುಸರಿಸಿದರೆ ಮಾತ್ರ ನಾವು ಶ್ರೀ ಶಿವಕುಮಾರ ಸ್ವಾಮೀಜಿ ಅವರಿಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ ಎಂದು ಅವರು ಹೇಳಿದರು.

ಕುವೆಂಪು ವಿರಚಿತ ನಾಡಗೀತೆಗೆ ರಾಷ್ಟ್ರಪತಿ ನಮನ: ವಂದೇ ಮಾತರಂ ರಾಷ್ಟ್ರೀಯ ಗೀತೆಯ ರಚನೆಗೆ 150 ವರ್ಷಗಳು ಸಂದಿದ್ದು, ದೇಶಾದ್ಯಂತ 150ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದೇವೆ. ಇದೇ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ರಾಷ್ಟ್ರಕವಿ ಕುವೆಂಪು ಅವರು ರಚಿಸಿದ ಕರ್ನಾಟಕ ಗೀತೆಯಲ್ಲಿ ಕರ್ನಾಟಕ ಮಾತೆಯನ್ನು ಭಾರತ ಮಾತೆಯ ಮಗಳು ಎಂದು ವರ್ಣಿಸಿರುವುದು ನೆನಪಾಗುತ್ತದೆ ಎಂದ ಅವರು, 'ಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ' ಎಂಬ ಆ ಅಮರ ವಾಣಿಯು ದೇಶ ವಾಸಿಗಳ ಹೃದಯದಲ್ಲಿ ಕರ್ನಾಟಕದ ಬಗ್ಗೆ ಹಾಗೂ ರಾಷ್ಟ್ರೀಯ ಏಕತೆಯ ಬಗ್ಗೆ ಇರುವ ಹೆಮ್ಮೆಯ ಭಾವನೆಯನ್ನು ಜಾಗೃತಗೊಳಿಸುತ್ತದೆ. ಈ ಮೂಲಕ ಗೀತೆಯ ಭಾರತೀಯ ಮೌಲ್ಯಗಳ ಸಮಗ್ರತೆ ಮತ್ತು ಔದಾರ್ಯದ ವಿವರಣೆಯನ್ನು ಒದಗಿಸುತ್ತದೆ. ಇದೇ ಭಾರತೀಯ ಮೌಲ್ಯಗಳು ಲಿಂಗೈಕ್ಯ ಶ್ರೀಗಳ ಅಸಾಧಾರಣ ಕೊಡುಗೆಯಲ್ಲಿಯೂ ಪ್ರತಿಫಲಿಸುತ್ತವೆ ಎಂದರು.

ಶ್ರೀ ಶಿವಕುಮಾರ ಸ್ವಾಮೀಜಿಯವರ ಸತ್ಕಾರ್ಯಗಳ ಪರಂಪರೆಯನ್ನು ಇಂದಿನ ಶ್ರೀಗಳು ಮುಂದುವರೆಸಿಕೊಂಡು ಹೋಗುತ್ತಿದ್ದು, ಮಠದೊಂದಿಗಿನ ಭಕ್ತರ ಬಾಂಧವ್ಯ ಶ್ರೀಮಠದಿಂದ ಗ್ರಾಮೀಣ ಮಕ್ಕಳಿಗೆ ಮತ್ತು ಗ್ರಾಮೀಣ ಜನತೆಗೆ ಸಿಗುತ್ತಿರುವ ತ್ರಿವಿಧ ದಾಸೋಹ ಮತ್ತು ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೂ ಸಿಗುತ್ತಿರುವ ವಿಶೇಷ ಸೌಲಭ್ಯಗಳು ಮತ್ತಷ್ಟು ಉನ್ನತ ಮಟ್ಟದಲ್ಲಿ ನಡೆಯಲಿ ಎಂದು ಆಶಿಸಿದರು.

ಆದರ್ಶಪ್ರಾಯರು: ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ.ಪರಮೇಶ್ವರ ಮಾತನಾಡಿ, ಲಿಂಗೈಕ್ಯ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಅವರು ಆದರ್ಶ ಜೀವಿಗಳು. ಸರಳತೆ ಮತ್ತು ಮಾನವೀಯತೆಯ ಮೂಲಕ ಬಡವರಿಗೆ ತ್ರಿವಿಧ ದಾಸೋಹದ ಮೂಲಕ ಸೇವೆಯನ್ನು ಮಾಡುವ ಮೂಲಕ ಆದರ್ಶಪ್ರಾಯರಾಗಿದ್ದಾರೆ ಎಂದರು.

ಸಾನಿಧ್ಯ ವಹಿಸಿದ್ದ ಶ್ರೀ ಸಿದ್ಧಗಂಗಾ ಮಠದ ಮಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿ ಮಾತನಾಡಿ, 111 ವರ್ಷಗಳ ಸುದೀರ್ಘ ತಮ್ಮ ಜೀವಿತಾವಧಿಯಲ್ಲಿ 79 ವರ್ಷಗಳ ಸುದೀರ್ಘ ಸೇವೆಯನ್ನು ಶ್ರೀ ಶಿವಕುಮಾರ ಸ್ವಾಮೀಜಿ ಅವರು ಸಮಾಜ ಸೇವೆಗಾಗಿಯೇ ಮುಡಿಪಾಗಿಟ್ಟಿದ್ದರು. ಇದು ಅವರ ಆದರ್ಶ, ಆಚಾರ, ವಿಚಾರ, ವಿಸ್ಮಯ, ಪವಾಡ ಎಂದರೆ ತಪ್ಪಾಗಲಾರದು. ಗ್ರಾಮಾಂತರ ಭಾಗದ ಬಡ ಮಕ್ಕಳಿಗೆ, ಹೆಣ್ಣು ಮಕ್ಕಳಿಗೆ ಶಿಕ್ಷಣ ಸಿಗಬೇಕೆಂಬುದು ಶ್ರೀಗಳ ಮಹತ್ತರ ಆಶಯವಾಗಿತ್ತು. ಈ ನಿಟ್ಟಿನಲ್ಲಿ ಭಕ್ತರಿಗೆ ಸನ್ಮಾರ್ಗವನ್ನು ತೋರುವ ಮೂಲಕ ಶ್ರೀ ಮಠವು ನಿರಂತರ ಸೇವೆಯನ್ನು ಮುಂದುವರಿಸಿದೆ ಎಂದರು. ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯಸಚಿವ ವಿ. ಸೋಮಣ್ಣ ಅವರು ಗಣ್ಯರನ್ನು ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಗೌರವಾನ್ವಿತ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್, ಸಚಿವರಾದ ಎಂ.ಬಿ. ಪಾಟೀಲ್, ಲಕ್ಷ್ಮೀ ಹೆಬ್ಬಾಳ್ಕರ್ ಉಪಸ್ಥಿತರಿದ್ದರು.

ಶಿಷ್ಟಾಚಾರ ಹೆಸರಲ್ಲಿ ಅವಮಾನ: ಭಕ್ತರ ಆಕ್ರೋಶ

• ತುಮಕೂರು: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾಗವಹಿಸಿದ್ದ ಡಾ.ಶಿವಕುಮಾರ ಸ್ವಾಮೀಜಿ ಅವರ 119ನೇ ಜನ್ಮ ವರ್ಧಂತಿ ಮಹೋತ್ಸವದ ವೇದಿಕೆ ಕಾರ್ಯಕ್ರಮದಲ್ಲಿ ರಾಷ್ಟ್ರಪತಿಗಳ ಉಪಸ್ಥಿತಿಯಲ್ಲೇ ವೇದಿಕೆ ಆಸನದ ಶಿಷ್ಟಾಚಾರ ಪಾಲನೆಗೆ ಸಂಬಂಧಿಸಿದಂತೆ ತೀವ್ರ ಗೊಂದಲ ಉಂಟಾಯಿತು. ಶಿಷ್ಟಾಚಾರ ಪಾಲನೆ ನೆಪದಲ್ಲಿ ಶ್ರೀ ಸಿದ್ದಲಿಂಗ ಸ್ವಾಮೀಜಿ ಅವರನ್ನು ವೇದಿಕೆಯ ಮೇಲೆ ಕೊನೆಯ ಆಸನದಲ್ಲಿ ಕೂರಿಸಿದ್ದಕ್ಕೆ ಭಕ್ತರು ಆಕ್ರೋಶ ವ್ಯಕ್ತಪಡಿಸಿದರು. ಸುಮಾರು ಹತ್ತು ನಿಮಿಷಗಳ ಕಾಲ ನಡೆದ ಈ ಹಗ್ಗಜಗ್ಗಾಟದಿಂದಾಗಿ ಸಿದ್ಧಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿಯವರು ವೇದಿಕೆಯ ಕೊನೆಯಲ್ಲಿ ಕುಳಿತುಕೊಳ್ಳಬೇಕಾದ ಪ್ರಸಂಗ ಎದುರಾಯಿತು. ನಿಯಮದಂತೆ ರಾಷ್ಟ್ರಪತಿಗಳ ಪಕ್ಕದಲ್ಲಿ ಸಿದ್ದಲಿಂಗ ಸ್ವಾಮೀಜಿಯವರು ಕುಳಿತುಕೊಳ್ಳಲು ಅವಕಾಶ ನೀಡಬೇಕು ಎಂದು ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ ಹಾಗೂ ವಿ. ಸೋಮಣ್ಣ ಅವರು ಭದ್ರತಾ ಸಿಬ್ಬಂದಿ ಬಳಿ ಮನವಿ ಮಾಡಿಕೊಂಡರು. ಆದರೆ, ರಾಷ್ಟ್ರಪತಿಗಳ ಭದ್ರತಾ ಸಿಬ್ಬಂದಿ ಈ ಮನವಿಗೆ ಒಪ್ಪಲಿಲ್ಲ. ಶಿಷ್ಟಾಚಾರದ ಪಟ್ಟಿಯ ಪ್ರಕಾರವೇ ಆಸನಗಳನ್ನು ಕಲ್ಪಿಸಬೇಕು ಎಂದು ಪಟ್ಟು ಹಿಡಿದರು. ಕೇಂದ್ರ ಸಚಿವರು ಎಷ್ಟೇ ಪ್ರಯತ್ನಿಸಿದರೂ ಭದ್ರತಾ ಸಿಬ್ಬಂದಿ ಮಾತ್ರ ತಮ್ಮ ಪಟ್ಟು ಸಡಿಲಿಸಲಿಲ್ಲ. ಇದರಿಂದಾಗಿ ವೇದಿಕೆಯ ಮೇಲೆ ಕೆಲಕಾಲ ಅಸಮಾಧಾನ ಮತ್ತು ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ಆಧುನಿಕ ಸಂಶೋಧನಾ ಕೇಂದ್ರ

ಕೇಂದ್ರ, ಗ್ರಾಹಕ ವ್ಯವಹಾರಗಳು ಮತ್ತು ಆಹಾರ ಸಚಿವ ಪ್ರಹ್ಲಾದ ಜೋಶಿ ಮಾತನಾಡಿ, ಶ್ರೀ ಸಿದ್ಧಗಂಗಾ ಮಠವು ಕೇವಲ ಆಧ್ಯಾತ್ಮಿಕ ಕೇಂದ್ರವಲ್ಲದೆ, ಆಧುನಿಕ ಸಂಶೋಧನಾ ಕೇಂದ್ರವಾಗಿದೆ. ಸಂಸ್ಕಾರವನ್ನು ಕೊಡುವ ಮೂಲಕ ಭಕ್ತರಿಗೆ ಸನ್ಮಾರ್ಗವನ್ನು ತೋರಿಸುವ ವಿಶ್ವದ ಏಕೈಕ ಮಠ. ಇದಕ್ಕೆ ಕಾರಣ ಶ್ರೀ ಶಿವಕುಮಾರ ಸ್ವಾಮೀಜಿ ಅವರಿಗೆ ಹಸಿವಿನ ಅರ್ಥವಾಗಿತ್ತು. ಜಾತಿ, ಧರ್ಮವನ್ನು ಮೀರಿ ಬಡವರು ಹಸಿವಿನಿಂದ ನರಳಬಾರದು. ಹಣವಿಲ್ಲದವರು ಜ್ಞಾನದಿಂದ ವಂಚಿತರಾಗಬಾರದು ಎಂಬ ಧ್ಯೇಯವನ್ನು ಇಟ್ಟುಕೊಂಡಿರುವ ವಿಶ್ವದ ಏಕೈಕ ಮಠ ಇದಾಗಿದೆ. ಈ ಮೂಲಕ ಲಿಂಗೈಕ್ಯ ಶ್ರೀಗಳು ಮನುಷ್ಯನಿಂದ ಮಹಾದೇವರಾದರು ಎಂದರು.

ಕಿರುಸುದ್ದಿ

ಒಬ್ಬ ವಿದ್ಯಾರ್ಥಿ, 18 ಮಂದಿ ಸಿಬ್ಬಂದಿ

ಮುಧೋಳ: ತಾಲೂಕಿನ ಆರ್‌ಎಂಜಿ ಪರೀಕ್ಷಾ ಕೇಂದ್ರದಲ್ಲಿ ಬುಧವಾರ ಒಬ್ಬ ವಿದ್ಯಾರ್ಥಿ ಎಸೆಸೆಲ್ಸಿ ಅರ್ಥಶಾಸ್ತ್ರ ವಿಷಯದ ಪರೀಕ್ಷೆ ಬರೆದನು. ಆದರೆ, ಇಲ್ಲಿ ಒಟ್ಟು 18 ಜನ ಸಿಬ್ಬಂದಿ ಕಾರ್ಯ ನಿರ್ವಹಿಸಿದರು. ತಾಲೂಕಿನ ಮಾಚಕನೂರ ಪ್ರೌಢಶಾಲೆಯ ವಿದ್ಯಾರ್ಥಿ ಬಸವರಾಜ ಸುನಗಾರ ಪರೀಕ್ಷೆ ಬರೆದ ವಿದ್ಯಾರ್ಥಿ. ಆ ವಿದ್ಯಾರ್ಥಿಯ ಪರೀಕ್ಷೆಯ ಕಾರ್ಯನಿರ್ವಹಿಸಲು 18 ಜನ ಪರೀಕ್ಷೆಯ ಕಾರ್ಯನಿರ್ವಹಣೆಯಲ್ಲಿ ತೊಡಗಿದ್ದು ವಿಶೇಷವಾಗಿತ್ತು. ಒಬ್ಬ ವಿದ್ಯಾರ್ಥಿಗೆ ಕೋಠ ಮೇಲ್ವಿಚಾರಕರು, ರೀಲಿವರ್, ಮುಖ್ಯ ಅಧೀಕ್ಷಕರು ಉಪಮುಖ್ಯ ಅಧ್ಯಕ್ಷರು ಅಭಿರಕ್ಷಕರು ಸ್ಥಾನಿಕ ಜಾಗೃತ ದಳ ಪ್ರಶ್ನೆ ಪತ್ರಿಕೆ ವಿತರಕರು ನಾಲ್ಕು ಜನ ಪೊಲೀಸ್ ಸಿಬ್ಬಂದಿ ಆರೋಗ್ಯ ಸಿಬ್ಬಂದಿ ಸಹಾಯಕರು ಡಿ ದರ್ಜೆಯ ಇಬ್ಬರು ಹಾಗೂ ವಿಚಕ್ಷಣ ದಳದ ಸಿಬ್ಬಂದಿ ಇಷ್ಟೆಲ್ಲ ಸಿಬ್ಬಂದಿ ಕಾರ್ಯನಿರ್ವಹಿಸಿದ್ದು, ಒಬ್ಬ ವಿದ್ಯಾರ್ಥಿ ಅರ್ಥಶಾಸ್ತ್ರ ಪರೀಕ್ಷೆ ಪೂರ್ಣಗೊಳಿಸಿದ್ದು, ತಾಲೂಕಿನಲ್ಲಿ ವಿಶೇಷವಾಗಿತ್ತು. ಎಸ್ ಎಸ್ ಎಲ್ ಸಿ ಯಲ್ಲಿ ಅರ್ಥಶಾಸ್ತ್ರ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದು, ಮುಧೋಳ್ ತಾಲೂಕಿನಲ್ಲಿಯೇ ಒಬ್ಬನೇ ಒಬ್ಬ ವಿದ್ಯಾರ್ಥಿ ಪರೀಕ್ಷೆ ಬರೆದಿದ್ದು, ಇದು ದಾಖಲೆಯ ವಿಷಯವಾಗಿದೆ. ಪರೀಕ್ಷಾ ಕೇಂದ್ರದಲ್ಲಿ ಒಬ್ಬನೇ ಒಬ್ಬ ವಿದ್ಯಾರ್ಥಿ ಪರೀಕ್ಷೆ ಬರೆದಿದ್ದು ವಿಶೇಷವಾಗಿತ್ತು ಎಂದು ಪರೀಕ್ಷಾ ಮುಖ್ಯ ಅಧೀಕ್ಷಕ ಎ.ವ್ಹಿ. ಹಚೇರಿ ಹೇಳಿದರು.

ಆಟೋ ನಿಲ್ಲಿಸುವ ವಿಚಾರಕ್ಕೆ ಜಗಳ :ಕೊಲೆ

ಬೆಳಗಾವಿ/ಕಾಗವಾಡ: ಜಿಲ್ಲೆಯ ಕಾಗವಾಡ ತಾಲೂಕಿನ ಮಂಗಸೂಳಿ ಗ್ರಾಮದಲ್ಲಿ ಕ್ಷುಲ್ಲಕ ಕಾರಣಕ್ಕೆ ಆಟೋ ಚಾಲಕರ ನಡುವೆ ಉಂಟಾದ ಮನಸ್ತಾಪವೊಂದು ಕೊಲೆಯಲ್ಲಿ ಅಂತ್ಯವಾಗಿರುವ ಘಟನೆಯೊಂದು ನಡೆದಿದೆ.

ಆಟೋ ರಿಕ್ಷಾ ನಿಲ್ಲಿಸುವ ಸರತಿ ಸಾಲಿನ ವಿಚಾರವಾಗಿ ನಡೆದ ವಾಗ್ವಾದವೇ ಬೀಕರ ಕೊಲೆ ಮಾಡುವಷ್ಟು ಪೀತ ನೆತ್ತಿಗೇರಿ ಕೊಲೆ ಮಾಡುವುದರ ಮೂಲಕ ಅಂತ್ಯವಾಗಿದೆ. ಮಂಗಸೂಳಿ ಗ್ರಾಮದ ನಿವಾಸಿ ಅಶೋಕ ವಡ್ಡರ (27) ಎಂಬುವವರೇ ಕೊಲೆಯಾದ ದುರ್ದೈವಿ. ಸರತಿ ಸಾಲಿನಲ್ಲಿ, ಆಟೋ ನಿಲ್ಲಿಸುವ ವಿಷಯದಲ್ಲಿ ಅಶೋಕ ಹಾಗೂ ಇತರ ಚಾಲಕರ ನಡುವೆ ಕಳೆದ ಕೆಲವು ದಿನಗಳಿಂದ ವೈಮನಸ್ಸು ಏರ್ಪಟ್ಟಿತ್ತು. ಇದೇ ದ್ವೇಷದ ಹಿನ್ನೆಲೆಯಲ್ಲಿ ಆರೋಪಿಗಳಾದ ಶಿವಾ ವದ್ದರ, ಸಾಗರ ವದ್ದರ ಹಾಗೂ ವಿನೋದ್ ವಡ್ಡರ ಎಂಬುವವರು ಅಶೋಕನ ತಲೆಗೆ ಮಾರಕಾಸ್ತ್ರದಿಂದ ಬಡೆದು ಭೀಕರವಾಗಿ ಹತ್ಯೆ ಮಾಡಿದ್ದಾರೆ. ಕಳೆದ ಎರಡು ದಿನಗಳ ಹಿಂದೆ ನಡೆದ ಈ ಘಟನೆಯು ತಡವಾಗಿ ಬೆಳಕಿಗೆ ಬಂದಿದ್ದು, ಕಾಗವಾಡ ಪೊಲೀಸರು 'ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸದ್ಯ ಮೂವರು ಆರೋಪಿಗಳನ್ನು ಬಂಧಿಸಿ ಕಾಗವಾಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಪ್ರಾರಂಭಿಸಿದ್ದಾರೆ.

ಸಿಡಿಲು ಬಡಿದು ವ್ಯಕ್ತಿ ಸಾವು

ನರಗುಂದ: ಜಗಾಪೂರ ರಸ್ತೆಯ ಪಠಾಣ ಅವರ ಹೊಲದಲ್ಲಿ ಬುಧವಾರ ಸಂಜೆ 4 ಗಂಟೆಗೆ ಸಿಡಿಲು ಬಡಿದು ಕುರಿಗಾಯಿ ಮಾರುತಿ ಮಾಡಗೆಂಡಪ್ಪ ಕುರಿ (22) ಸಾವನ್ನಪ್ಪಿದ್ದಾನೆ. ಓರ್ವ ರೈತ ನಿಂಗಪ್ಪ ಶಿಂಗಾಡೆಪ್ಪ ಮಜ್ಜಗಿ(45) ಗಾಯಗೊಂಡಿರುವ ಘಟನೆ ಜರುಗಿದೆ. ಸಿಡಿಲಿಗೆ ಸಾವನ್ನಪ್ಪಿದ ಯುವಕ ರಾಮದುರ್ಗ ತಾಲೂಕಿನ ಹಿರೇಮೂಲಂಗಿ ಗ್ರಾಮದವನಾಗಿದ್ದಾನೆ. ಗಾಯಗೊಂಡ ವ್ಯಕ್ತಿಯು ಪಟ್ಟಣದ ಹಾಲಬಾವಿ ಕೆರೆ ಓಣಿ ನಿವಾಸಿಯಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿ ಕಿಮ್ಸ್ ಗೆ ದಾಖಲಿಸಲಾಗಿದೆ. ಈ ಪ್ರಕರಣ ನರಗುಂದ ಪೋಲಿಸ್ ಠಾಣೆಯಲ್ಲಿ ದಾಖಲಾಗಿದೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	3511	3511
ಕಡಲೆಬೇಳೆ	4201	7000
ಕಡಲೆಕಾಳು	1519	5415
ಉದ್ದಿನಕಾಳು	810	6925
ತೆಂಗಿನಕಾಯಿ	25000	38000
ಹತ್ತಿ	7350	7800
ಒಣ ಮೆಣಸಿನಕಾಯಿ	2700	62599
ಹೆಸರುಬೇಳೆ	9500	9500
ಹೆಸರುಕಾಳು	2189	6666
ನೆಲಗಡಲೆ (ಶೇಂಗಾ)	6013	6851
ಹುರುಳಿ ಕಾಳು	2502	5180
ಬೆಲ್ಲ	3900	4345
ಜೋಳ	1001	4135
ಮೆಕ್ಕೆಜೋಳ	1650	1858
ಮಡಿಕೆ (ಮಟಕಿ)	11111	12729
ಈರುಳ್ಳಿ	500	2000
ಭತ್ತ	2300	2400
ಆಲೂಗಡ್ಡೆ	1000	1700
ಅಕ್ಕಿ	5550	10700
ಕುಸುಬೆ	5166	5256
ಸಾಮೆ/ಸಾವಿ	3911	3911
ಸೋಯಾಬಿನ್	4300	5569
ತೊಗರಿ	3779	4029
ತೊಗರಿ ಬೇಳೆ	8100	12601
ಗೋಧಿ	1711	5355

ವೇದ ಪೀಠ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಸಮೀರಾಚಾರ್ಯ ಕಂಠಪಲ್ಲಿ ಹೇಳಿಕೆ

ಪ್ರತಿಯೊಬ್ಬರಿಗೂ ಅಂಬೇಡ್ಕರ್ ಸ್ಫೂರ್ತಿ



ಹುಬ್ಬಳ್ಳಿ: ಬಾಲ್ಯದಲ್ಲಿ ಸಾಕಷ್ಟು ಅಸ್ಪೃಶ್ಯತೆ ಅನುಭವಿಸಿದ ಡಾ. ಬಿ.ಆರ್ ಅಂಬೇಡ್ಕರ್ ಅವರು ಶ್ರೇಷ್ಠ ಸಂವಿಧಾನ ನೀಡುವ ಮೂಲಕ ದೇಶದ ಸಂಪತ್ತು ಆಗಿದ್ದಾರೆ ಎಂದು ವೇದ ಪೀಠ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಸಮೀರಾಚಾರ್ಯ ಕಂಠಪಲ್ಲಿ ಹೇಳಿದರು.

ಇಲ್ಲಿಯ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕೇಶವ ಕುಂಜದಲ್ಲಿ ಲೋಕಹಿತ ಟ್ರಸ್ಟ್, ಸೇವಾ ಭಾರತಿ ಟ್ರಸ್ಟ್ ಹಾಗೂ ಸಾಮರಸ್ಯ ವೇದಿಕೆ ಸಹಯೋಗದಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜನ್ಮದಿನದ ಅಂಗವಾಗಿ ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಡಾ. ಬಿ.ಆರ್. ಅಂಬೇಡ್ಕರ್ ಅವರ ಹೆಸರೇ ದೇಶದ ಪ್ರತಿಯೊಬ್ಬರಿಗೂ ಸ್ಫೂರ್ತಿಯಾಗಿದೆ. ಅಂಬೇಡ್ಕರ್ ಅವರು ಸಂಪೂರ್ಣ ಮನುಸ್ಮೃತಿ ವಿರೋಧ ಮಾಡಿಲ್ಲ. ಕಾಮಕ್ಕೆ ತಕ್ಕಂತೆ ಅದರಲ್ಲಿರುವ ಅಂಶಗಳ ಬದಲಾವಣೆ ಮಾಡಬೇಕು ಎಂದಿದ್ದರು. ಪ್ರಸ್ತುತ ಕಾಲದಲ್ಲಿಯೂ ಮನುಸ್ಮೃತಿ ಎಲ್ಲ ಅಂಶಗಳನ್ನು ಸ್ವೀಕರಿಸಲು ಸಾಧ್ಯವಿಲ್ಲ ಎಂದರು.

ದೇಶದ ಸಂವಿಧಾನ ರಚಿಸಲು ಅಂಬೇಡ್ಕರ ಅವರೊಂದಿಗೆ ಎಷ್ಟೋ ವಿದ್ವಾಂಸರ ತ್ಯಾಗವಿದೆ. ಸದ್ಯ ದೇಶದಲ್ಲಿ ಗಣರಾಜ್ಯೋತ್ಸವ ಆಚರಣೆ ಮಾಡಲು ಬಿ.ಆರ್. ಅಂಬೇಡ್ಕರ್ ಅವರು ಕಾರಣ. ಅವರು ಸಂಪಾದನೆ ಮಾಡಿ ವಿದ್ಯಾ ಲೋಕೋತ್ತರವಾಗಿದ್ದು, ದೇವದೂತರಾಗಿದ್ದಾರೆ ಎಂದು ತಿಳಿಸಿದರು. ಸಹ ಜೀವನವೇ ಭಾರತ ಶ್ರೇಷ್ಠವಾದ ಧರ್ಮವೆಂದು ಸಾರಿದ್ದರು. ಸ್ತ್ರೀಯರನ್ನು ಗೌರವದಿಂದ ಕಾಣುತ್ತಿದ್ದ ಅವರು ನಾವು ಭಾರತೀಯರು ಎಂದು ಹೇಳಿ ಪ್ರಾಣ ಬಿಡಬೇಕು ಎಂದು ಹೇಳಿದ್ದರು. ಎಲ್ಲ ವರ್ಗದಲ್ಲಿ ಒಳ್ಳೆಯವರು ಹಾಗೂ ಕೆಟ್ಟವರು ಇರುತ್ತಾರೆ. ಆದರೆ ಎಂದಿಗೂ ಒಳ್ಳೆಯವರ ಸಂಘ ಮಾಡಬೇಕು ಎಂದು ಹೇಳಿದ್ದರು. ದೇಶದಲ್ಲಿ ಕೆಟ್ಟ ಚಿಂತನೆ, ದುಷ್ಟ ಆಲೋಚನೆ ದೂರು ಮಾಡಿದ್ದಾರೆ ಎಂದು ಹೇಳಿದರು.

> ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಯಲ್ಲಿ ನಾವು ಭಾರತೀಯರು ಎಂಬುವುದನ್ನು ಸಂಕೋಚಿತವಾಗಿ ಕಾಣುವಂತೆ ಮಾಡಲಾಗುತ್ತಿದೆ. ಇದನ್ನು ಮೀರಿ ಭಾರತೀಯರಾಗಬೇಕು ಎಂಬುವುದು ಅಂಬೇಡ್ಕರ್ ಅವರ ಮುಖ್ಯ ಚಿಂತನೆಯಾಗಿದೆ.
> ■ ಡಾ. ಗಜಾನನ ನಾಯಕ್, ರಾಣಿ ಚನ್ನಮ್ಮ ವಿವಿ ಪ್ರಾಧ್ಯಾಪಕ

ಜಗತ್ತಿನಲ್ಲಿ ಎಷ್ಟೋ ಯುದ್ಧಗಳು ನಡೆಯುತ್ತಿವೆ. ಆದರೆ ಸನಾತನ ಧರ್ಮವಿರುವ ಭಾರತ ಸದೃಢ ವಾಗಿದೆ. ಭಾರತ ಹೇಳಿದಂತೆ ಕೇಳುವ ಕಾಲ ಮುಂದೆ ಬರಲಿದೆ ಎಂದರು.

ರಾಣಿ ಚನ್ನಮ್ಮ ವಿವಿ ಪ್ರಾಧ್ಯಾಪಕ ಡಾ. ಗಜಾನನ ನಾಯಕ್ ಮುಖ್ಯ ವಕ್ತಾರಾಗಿ ಮಾತನಾಡಿ, ಪ್ರಾಚೀನ ಭಾರತದ ಬಗ್ಗೆ ತಿಳಿಯಲು ರಾಮಾಯಣ ಹಾಗೂ ಮಹಾಭಾರತ ಓದಬೇಕು. ಅದೇ ರೀತಿ ಆಧುನಿಕ ಭಾರತ ಅರಿಯಲು ಗಾಂಧಿಜೀ, ಡಾ. ಬಿ.ಆರ್. ಅಂಬೇಡ್ಕರ್ ಅರ್ಥ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಅಂಬೇಡ್ಕರ್ ಅವರು ಶಿಕ್ಷಣ, ಸಂಘಟನೆ, ಹೋರಾಟ ವನ್ನು ಮೂಲ ಮಂತ್ರವಾಗಿ ಮಾಡಿಕೊಂಡಿದ್ದರು. ಅಂಬೇಡ್ಕರ್ ನೀಡಿದ ಕೊಡುಗೆ ಯಿಂದ ಭಾರತ ಪ್ರಬುದ್ಧವಾಗಿದೆ. ಯುವ ಪೀಳಿಗೆ ಅಂಬೇಡ್ಕರ್ ಚಿಂತನೆ ಅರ್ಥ ಮಾಡಿಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಅಧ್ಯಕ್ಷತೆಯನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಧಾರವಾಡ ವಿಭಾಗ ಸಂಘಚಾಲಕ ಗೋವಿಂದಪ್ಪ ಗೌಡಪ್ಪಗೋಳ ವಹಿಸಿದ್ದರು. ಲೋಕಹಿತ ಟ್ರಸ್ಟ ಕಾರ್ಯದರ್ಶಿ ಶ್ರೀಧರ ನಾಡಿಗೇರ, ಕರ್ನಾಟಕ ಉತ್ತರ ಪ್ರಾಂತ ಪ್ರಚಾರಕರು ರವೀಂದ್ರ, ಶ್ರೀಧರ ಜೋಶಿ, ಪೂರ್ಣಚಂದ್ರ ಘಂಟಸಾಲ, ಪ್ರಕಾಶ ಗುಡಿಹಾಳ, ಶಂಕರ ಗುಮಾಸ್ತೆ ಇದ್ದರು.

ಟಿಬಿಬಿ ಬೋರ್ಡ್ ಜಾಗ ಅಕ್ರಮ ಖರೀದಿ ಕೋರ್ಟ್‌ನಲ್ಲಿ ಸಾಬೀತು: ಓ.ಆರ್.ಕೆ ರೆಡ್ಡಿ



ವಿಜಯನಗರ: ಹೊಸಪೇಟೆ ನಗರದ ಟಿಬಿ ಡ್ಯಾಂ ಪ್ರದೇಶದ ತುಂಗಭದ್ರಾ ಮಂಡಳಿ ಮಾಲೀಕತ್ವದಲ್ಲಿರುವ ಜಾಗೆಯನ್ನು ಮತ್ತೊಬ್ಬರಿಂದ ನಿವೃತ್ತ ನ್ಯಾಯಾಧೀಶರೊಬ್ಬರು ಖರೀದಿಸಿದ್ದು, ಅಕ್ರಮವೆಂದು ಸ್ಥಳೀಯ ಜೆಎಂಎಫ್‌ಸಿ ನ್ಯಾಯಾಲಯ ಆದೇಶಿಸಿದೆ. ನ್ಯಾಯಾಲಯದ ಈ ತೀರ್ಪು ಟಿಬಿ ಬೋರ್ಡ್ ಮಾಲೀಕತ್ವದ ಜಾಗೆಗಳನ್ನು ಅಕ್ರಮವಾಗಿ ಮಾರಾಟ ಮಾಡುವ ಮತ್ತು ಖರೀದಿಸುವವರಿಗೆ ಎಚ್ಚರಿಕೆಯ ಸಂದೇಶವಾಗಿದೆ ಎಂದು ಟಿಬಿ ಬೋರ್ಡ್ ಕಾರ್ಯದರ್ಶಿ ಓ.ಆರ್.ಕೆ.ರೆಡ್ಡಿ ತಿಳಿಸಿದರು.

ಹೊಸಪೇಟೆಯಲ್ಲಿರುವ ತುಂಗಭದ್ರಾ ಮಂಡಳಿ ಸಭಾಂಗಣದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೊಸಪೇಟೆ ನಗರದ ಅಮರಾವತಿ, ನಿಶಾನಿ ಕ್ಯಾಂಪ್, ಪಿಎಲ್‌ಸಿ ಸೇರಿದಂತೆ ಇನ್ನಿತರೆ ಭಾಗದಲ್ಲಿ ಸುಮಾರು ಟಿಬಿ ಬೋರ್ಡ್ ಮಾಲೀಕತ್ವದಲ್ಲಿ 700 ಎಕರೆ ಪ್ರದೇಶ ಇದೆ. ಇದು ಕರ್ನಾಟಕ, ಆಂಧ್ರ ಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳಿಗೆ ಸಂಬಂಧಿಸಿದೆ. ಈ ಹಿಂದೆ ಡ್ಯಾಂ ನಿರ್ಮಾಣದ ವೇಳೆ ಕೆಲಸಕ್ಕೆ ಬಂದಿದ್ದ ಕಾರ್ಮಿಕರು, ಬೋರ್ಡ್ ನೌಕರರ ಕುಟುಂಬಗಳ ವಾಸಕ್ಕಾಗಿ ಲೀಸ್ ಹಾಗೂ ಗುತ್ತಿಗೆ ರೂಪದಲ್ಲಿ ನೀಡಿದೆ. ಆದರೆ, ಯಾವುದೇ ರೀತಿಯ ಪರಭಾರೆಗೆ ಅವಕಾಶವಿಲ್ಲ. 1923ರ ವಿಧಿ ಪ್ರಕಾರ ಈ ಎಲ್ಲ ಪ್ರದೇಶವನ್ನೂ ನಿರ್ಬಂಧಿತ ಪ್ರದೇಶವಾಗಿದೆ. ಆದರೆ, ನಿವೃತ್ತ ನ್ಯಾಯಾಧೀಶೆಯೊಬ್ಬರು ಇತರೆ ವ್ಯಕ್ತಿಯಿಂದ ನಮ್ಮ ಮಾಲೀಕತ್ವದ 100★80 ಅಡಿ ಜಾಗೆ ಖರೀದಿಸಿದ್ದಾರೆ ಎಂದು ತಿಳಿದು ಬಂದಿದ್ದು, ಅದನ್ನು ಪ್ರಶ್ನಿಸಿ ಟಿಬಿ ಬೋಡ್ ಹೂಡಿದ್ದ ದಾವೆ ಕುರಿತು ಸ್ಥಳೀಯ ನ್ಯಾಯಾಲಯ ಕೂಲಂಕುಷವಾಗಿ ವಿಚಾರಣೆ, ದಾಖಲೆಗಳನ್ನು ಪರಿಶೀಲಿಸಿ ಕಳೆದ ಮಾರ್ಚ್ 28 ರಂದು ನ್ಯಾಯಲಯ ಬೋರ್ಡ್ ಪರವಾಗಿ ತೀರ್ಪು ನೀಡಿರುವುದು ಸ್ವಾಗತಾರ್ಹ. ಈ ಪ್ರಕರಣದಿಂದಾಗಿ ಕೆಲವರು ಬೋರ್ಡ್ ಆಸ್ತಿಯನ್ನು ತಮ್ಮದೆಂದು ನಕಲಿ ದಾಖಲೆಗಳನ್ನು ಸೃಷ್ಟಿಸಿ ಮತ್ತೊಬ್ಬರಿಗೆ ಮಾರಾಟ ಮಾಡುತ್ತಿದ್ದಾರೆ ಎಂಬುದು ದೃಢಪಟ್ಟಿದೆ. ಅಂತಹ ಚಟುವಟಿಕೆಗಳನ್ನು ಯಾವುದೇ ಕಾರಣಕ್ಕೂ ಬೋರ್ಡ್ ಸಹಿಸುವುದಿಲ್ಲ. ಅಂತಹವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು. ಈ ಬಗ್ಗೆ ಸಾರ್ವಜನಿಕರು ಎಚ್ಚರವಹಿಸಬೇಕು.

ಮೇ ಅಂತ್ಯಕ್ಕೆ ಎಲ್ಲಾ ಕ್ರಸ್ಟ್ ಗೇಟ್ ಅಳವಡಿಕೆ ಪೂರ್ಣ

ತುಂಗಭದ್ರಾ ಜಲಾಶಯದಲ್ಲಿ ಹೊಸ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ಭರದಿಂದ ಸಾಗಿದೆ. ಈಗಾಗಲೇ 22 ಗೇಟ್‌ಗಳನ್ನು ಯಶಸ್ವಿಯಾಗಿ ಅಳವಡಿಸಲಾಗಿದೆ. ಇನ್ನುಳಿದ ಗೇಟ್‌ಗಳು ಮತ್ತು ಹೊಸ ಚೈನ್‌ಗಳನ್ನು ಮೇ ತಿಂಗಳ ಅಂತ್ಯದೊಳಗೆ ಅಳವಡಿಸಲಾಗುತ್ತದೆ. ಜೂನ್ ನಲ್ಲಿ ಬರುವ ಮುಂಗಾರು ಮಳೆ ವೇಳೆಗೆ ಡ್ಯಾಮ್ ಸಂಪೂರ್ಣ ಸಿದ್ಧವಾಗಿರಲಿದೆ ಎಂದು ಬೋರ್ಡ್ ಕಾರ್ಯದರ್ಶಿ ಓ.ಆರ್.ಕೆ.ರೆಡ್ಡಿ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಅದಲ್ಲದ್ದೇ ಬೋರ್ಡ್ ಜಾಗದಲ್ಲಿ ಅಕ್ರಮವಾಗಿ ಪಕ್ಕಾ ಕಟ್ಟಡಗಳ ನಿರ್ಮಾಣ, ಅತಿಕ್ರಮಕ್ಕೆ ಸಂಬಂಧಿಸಿ ಇನ್ನೂ 22 ಪ್ರಕರಣಗಳು ವಿಚಾರಣೆ ಹಂತದಲ್ಲಿವೆ ಎಂದು ಓ.ಆರ್. ಕೆ.ರೆಡ್ಡಿ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಹೊಸಪೇಟೆ ನಗರದಲ್ಲಿ ಹಾದು ಹೋಗುವ ತುಂಗಭದ್ರ ಜಲಾಶಯದ ಮುಖ್ಯ ಕಾಲುವೆಗಳ ಅಕ್ಕಪಕ್ಕದಲ್ಲಿ 30 ರಿಂದ 50 ಅಡಿ ರಸ್ತೆ ಬೋರ್ಡ್ಗೆ ಸೇರಿದೆ. ಆ ಜಾಗವೂ ಅನೇಕ ಕಡೆ ಒತ್ತುವರಿಯಾಗಿದೆ. ಆದಷ್ಟು ಬೇಗ ಸರ್ವೆ ನಡೆಸಿ, ತೆರವು ಮಾಡಲಾಗುವುದು ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಸಹ ಕಾರ್ಯದರ್ಶಿ ಅಖಿಲಾಂಜನ್, ಟಿಬಿ ಬೋರ್ಡ್ ಮುಖ್ಯ ಕಾರ್ಯನಿರ್ವಾಹಕ ಅಭಿಯಂತರ ಎನ್.ಚಂದ್ರಶೇಖರ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಎಸ್.ನಾರಾಯಣ ನಾಯ್ಕ್ ಇತರರಿದ್ದರು.

ಸಕಾಲ ಸೇವೆ: ಜಿಲ್ಲಾವಾರು ಪ್ರಗತಿ ವರದಿ ಪ್ರಕಟ

ಬಳ್ಳಾರಿ ಜಿಲ್ಲೆ ಪ್ರಥಮ ಸ್ಥಾನ



ಬಳ್ಳಾರಿ: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ 'ಸಕಾಲ' ಯೋಜನೆಯ ಮಾರ್ಚ್ ತಿಂಗಳ ಜಿಲ್ಲಾವಾರು ಕಾರ್ಯಕ್ಷಮತೆಯ ವರದಿ ಬಿಡುಗಡೆಯಾಗಿದ್ದು, ಗಣಿನಾಡು ಬಳ್ಳಾರಿ ಜಿಲ್ಲೆಯು ರಾಜ್ಯದಲ್ಲೇ ಅತ್ಯುತ್ತಮ ಪ್ರಗತಿ ಸಾಧಿಸಿ ಮೊದಲ ಸ್ಥಾನ ಅಲಂಕರಿಸಿದೆ.

ಸಕಾಲದ ವಿವಿಧ ಮಾನದಂಡಗಳಾದ ಅರ್ಜಿ ವಿಲೇವಾರಿ, ವೇಗ, ನಿಗದಿತ ಅವಧಿಯೊಳಗಿನ ವಿಲೇವಾರಿ ಮತ್ತು ತಿರಸ್ಕೃತಗೊಂಡ ಅರ್ಜಿಗಳ ಪ್ರಮಾಣವನ್ನು ಆಧರಿಸಿ ಈ ಶ್ರೇಯಾಂಕ ನೀಡಲಾಗುತ್ತದೆ. ಸಾರ್ವಜನಿಕರ ಅರ್ಜಿಗಳನ್ನು ನಿಗದಿತ ಕಾಲಮಿತಿಯೊಳಗೆ ವಿಲೇವಾರಿ ಮಾಡುವಲ್ಲಿ ಬಳ್ಳಾರಿ ಜಿಲ್ಲೆಯು ಮೇಲುಗೈ ಸಾಧಿಸಿದೆ. ಬಳ್ಳಾರಿ ಜಿಲ್ಲೆಯು ಶೇ.97.91ರಷ್ಟು ಅರ್ಜಿಗಳನ್ನು ನಿಗದಿತ ಅವಧಿಯಲ್ಲಿ ವಿಲೇವಾರಿ ಮಾಡುವ ಮೂಲಕ ಗಮನಾರ್ಹ ಸಾಧನೆ ಮಾಡಿದೆ.

ಟಾಪ್ 5 ಜಿಲ್ಲೆಗಳ ವಿವರ: ಬಳ್ಳಾರಿ (ಮೊದಲ ಸ್ಥಾನ - 78.65 ಅಂಕ) ಚಾಮರಾಜನಗರ (ಎರಡನೇ ಸ್ಥಾನ - 78.45 ಅಂಕ), ಧಾರವಾಡ (ಮೂರನೇ ಸ್ಥಾನ - 78.38 ಅಂಕ) ಕಲಬುರಗಿ (ನಾಲ್ಕನೇ ಸ್ಥಾನ - 78.27 ಅಂಕ), ಹಾವೇರಿ (ಐದನೇ ಸ್ಥಾನ - 78.26 ಅಂಕ) ಹೆಚ್ಚು ಜನಸಂಖ್ಯೆ ಮತ್ತು ಅರ್ಜಿಗಳ ಒತ್ತಡವಿರುವ ಬೆಂಗಳೂರು ನಗರ (32ನೇ ಸ್ಥಾನ) ಹಾಗೂ ಬೆಂಗಳೂರು ಗ್ರಾಮಾಂತರ (31ನೇ ಸ್ಥಾನ) ಜಿಲ್ಲೆಗಳು ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿವೆ. ಬೆಂಗಳೂರು ನಗರದಲ್ಲಿ ಶೇ.11.19 ರಷ್ಟು ಅರ್ಜಿಗಳು ತಿರಸ್ಕೃತಗೊಂಡಿರುವುದು ಹಿನ್ನಡೆಗೆ ಕಾರಣವಾಗಿದೆ. ಬಳ್ಳಾರಿ ಜಿಲ್ಲೆಯು ಸರ್ಕಾರಿ ಸಂಬಂಧಿತ ಸಾರ್ವಜನಿಕರ ಕೆಲಸಗಳನ್ನು ಕಾಲಮಿತಿಯೊಳಗೆ ಮಾಡಿಕೊಡುವಲ್ಲಿ ಯಶಸ್ವಿಯಾಗಿದ್ದು, ಇತರ ಜಿಲ್ಲೆಗಳಿಗೆ ಮಾದರಿಯಾಗಿದೆ. ಸರ್ಕಾರಿ ಸೇವೆಗಳನ್ನು ಜನರಿಗೆ ಸಕಾಲದಲ್ಲಿ ತಲುಪಿಸುವ ನಿಟ್ಟಿನಲ್ಲಿ ಈ ವರದಿಯು ಜಿಲ್ಲಾಡಳಿತದ ಕಾರ್ಯವೈಖರಿಗೆ ಹಿಡಿದ ಕೈಗನ್ನಡಿಯಾಗಿದೆ. ಅಧಿಕಾರಿ-ಸಿಬ್ಬಂದಿಗೆ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅಭಿನಂದನೆ ತಿಳಿಸಿದ್ದಾರೆ.

ಮಳೆಹಾನಿ ಜಂಟಿ ಸಮೀಕ್ಷೆಗೆ ಲಾಡ್ ಸೂಚನೆ



ಧಾರವಾಡ: ಕಲಘಟಗಿ ಹಾಗೂ ವಿವಿಧ ಭಾಗದಲ್ಲಿ ಸುರಿದ ಆಲಿಕಲ್ಲು ಮಳೆಯಿಂದ ಉಂಟಾದ ವಿವಿಧ ಹಾನಿಗಳ ಸಮೀಕ್ಷೆಗೆ ಸೂಚಿಸಿದ ಸಚಿವ ಸಂತೋಷ್ ಲಾಡ್, ಶೀಘ್ರ ವರದಿ ಸಲ್ಲಿಸುವುದರ ಜೊತೆಗೆ ರೈತರಿಗೆ ಪರಿಹಾರ ನೀಡಲು ಆದೇಶಿಸಿದರು.

ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ನೂತನ ಸಭಾಂಗಣದಲ್ಲಿ ಬುಧವಾರ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ನಡೆಸಿದ ಅವರು, ಆಲಿಕಲ್ಲು ಮಳೆಯಿಂದ ಕೃಷಿ, ತೋಟಗಾರಿಕೆ ಬೆಳೆಹಾನಿ ನಿಯಮಾನುಸಾರ ರೈತರಿಗೆ ಪರಿಹಾರ ನೀಡಲು ಸೂಚನೆ ನೀಡಿದರು. ಮಳೆಯಿಂದ ಜಿಲ್ಲೆಯಲ್ಲಿ ಮಾವು, ಕಬ್ಬು ಹೀಗೆ ಕೃಷಿ-ತೋಟಗಾರಿಕೆ, ವಾಣಿಜ್ಯ ಹಾಗೂ ಬೇಸಿಗೆ ಅವಧಿಯ ಬೆಳೆಗಳು ಹಾನಿಯಾಗಿವೆ. ಕೃಷಿ-ತೋಟಗಾರಿಕೆ ಮತ್ತು ಕಂದಾಯ ಇಲಾಖೆ ಜಂಟಿ ಸಮೀಕ್ಷೆ ನಡೆಸಿ, ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸುವಂತೆ ಆದೇಶಿಸಿದರು. ಬೆಳೆಗಳ ಹಾನಿ ಅನುಭವಿಸಿದ ರೈತರಿಗೆ ಕೇಂದ್ರ ಮತ್ತು ರಾಜ್ಯ ವಿಪತ್ತು ನಿರ್ವಹಣಾ ನಿಧಿಯಿಂದ ನಿಯಮಾನುಸಾರವಾಗಿ ಪರಿಹಾರ ನೀಡಲಾಗುತ್ತಿದೆ. ಹಾನಿಗೆ ವಿಶೇಷ ಅನುದಾನ ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಜಿಲ್ಲಾಡಳಿತಕ್ಕೆ ಸೂಚಿಸಿದರು. ಬೆಳೆಹಾನಿ ಸಮೀಕ್ಷೆ ಅಂತಿಮ ಹಂತದಲ್ಲಿದ್ದು, ಶೀಘ್ರವೇ ವರದಿ ಸಲ್ಲಿಸಲಿದೆ. ಬೆಳೆ ವಿಮೆ ಪರಿಹಾರ ವಿತರಣೆಗೆ ವಿಮಾ ಕಂಪನಿ ಹಾಗೂ ಹೆಸ್ಕಾಂ ವಿದ್ಯುತ್ ಪರಿಕರ ಮರುಸ್ಥಾಪನೆಗೆ ಸೂಚಿಸಿದ್ದಾಗಿ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಸಚಿವರಿಗೆ ಮಾಹಿತಿ ನೀಡಿದರು.

ಹಳೆತೆಗೂರು ಮತ್ತು ದಾಟ್ನಾಳ ಗ್ರಾಮದಲ್ಲಿ ಮೃತಪಟ್ಟ ಎಮ್ಮೆ ಮಾಲೀಕರಿಗೆ ತಲಾ ರೂ.97,500, ಗೋಕುಲದಲ್ಲಿ ಕುದುರೆ ಸಾವಿಗೆ ರೂ.20 ಸಾವಿರ, ಮಾಚಾಪುರ ಗ್ರಾಮದ ಮೂರು ಕರುಗಳ ಜೀವಹಾನಿಗೆ ರೂ.60 ಸಾವಿರ ಪರಿಹಾರ ನೀಡಿದ್ದಾಗಿ ತಿಳಿಸಿದರು.

ತೀರ್ಲಾಪುರ ಗ್ರಾಮದ 31 ಮೇಕೆ ಮತ್ತು ಕುರಿಗಳ ಸಾವಿಗೆ ರೂ.1.28 ಲಕ್ಷ, ಮಣಕವಾಡ ಗ್ರಾಮದ 9 ಮೇಕೆಗಳ ಸಾವಿಗೆ ರೂ.36 ಸಾವಿರ ಪರಿಹಾರ ಧನ ನೀಡಿದೆ. ಜಿಲ್ಲೆಯಲ್ಲಿ ಒಟ್ಟು 350ಕ್ಕೂ ಅಧಿಕ ಮನೆಗಳಿಗೆ ಹಾನಿಯಾಗಿದ್ದಾಗಿಯೂ ಹೇಳಿದರು.

ಅಧಿಕಾರಿಗಳೇ ಹೊಣೆ

ಜಿಲ್ಲೆಯ ಗ್ರಾಮಗಳಿಗೆ ಮತ್ತು ನಗರ ಪ್ರದೇಶಕ್ಕೆ ನೀರಿನ ಸಮಸ್ಯೆ ಉಂಟಾಗುತ್ತಿದೆ. ಕುಡಿಯುವ ನೀರಿನ ಅಭಾವಕ್ಕೆ ಅಧಿಕಾರಿಗಳೇ ಹೊಣೆ ಮಾಡಲಿದೆ. ಈ ಕಾರಣಕ್ಕೆ ನೀರಿನ ಅಭಾವಕ್ಕೆ ಶಾಸ್ವತ ಪರಿಹಾರ ಹುಡುಕಬೇಕು. ಇದರ ಕಾಮಗಾರಿ ಶೀಘ್ರವೇ ಮುಗಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಸೂಚಿಸಿದರು.

ಬೋರ್‌ವೆಲ್ ವ್ಯವಸ್ಥೆ

14 ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ಗೋಚರಿಸಿದ್ದು, ತಕ್ಷಣ ಖಾಸಗಿ ಬೋರ್‌ವೆಲ್ ವ್ಯವಸ್ಥೆ ಮಾಡಲಾಗಿದೆ. ಜನರಿಗೆ ಕುಡಿಯುವ ನೀರು ಮತ್ತು ಮೂಲ ಸೌಕರ್ಯಕ್ಕೂ ಸಮಸ್ಯೆ ಉಂಟಾಗದಂತೆ ಕ್ರಮ ವಹಿರುವುದಾಗಿ ಡಿಸಿ ಸ್ನೇಹಲ್ ಆರ್. ಸಚವರಿಗೆ ವರದಿ ಒಪ್ಪಿಸಿದರು.

ಬಿಜೆಪಿ ರಾಜ್ಯ ವಕ್ತಾರೆ ಡಾ.ಸುಧಾ ಪತ್ರಿಕಾಗೋಷ್ಠಿ

ಮೋದಿಯವರಿಂದ ರಕ್ತಸಿಕ್ತ ನಕ್ಸಲಿಸಂ ಅಂತ್ಯ



ಕಲಬುರಗಿ: ಭಾರತದಲ್ಲಿ ರಕ್ತಸಿಕ್ತದಿಂದ ಕೂಡಿದ ನಕ್ಸಲಿಸಂ ಅಧ್ಯಾಯಕ್ಕೆ ಸಂಪೂರ್ಣವಾಗಿ ಅಂತ್ಯ ಹಾಡಿರುವ ಪ್ರಧಾನಿ ನರೇಂದ್ರ ಮೋದಿ ಹಾಗೂ ದೇಶದ ಗೃಹ ಸಚಿವ ಅಮಿತ್ ಶಾ ಅವರಿಗೆ ಭಾರತದ ನಿವಾಸಿಗಳ ಪರವಾಗಿ ಹೃದಯಪೂರ್ವಕ ಅಭಿನಂದನೆಗಳು ಸಲ್ಲಿಸುವುದಾಗಿ ಬಿಜೆಪಿ ರಾಜ್ಯ ವಕ್ತಾರೆ, ವೈದ್ಯಕೀಯ ಪ್ರಕೋಷ್ಠದ ಸಂಚಾಲಕಿ ಡಾ.ಸುಧಾ ಹಾಲಕಾಯಿ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಡವರ, ಶೋಷಿತರ ಪರ ಎಂದು 1959ರಲ್ಲಿ ಹುಟ್ಟಿಕೊಂಡ ಈ ನಕ್ಸಲಿಸಂ, ದೇಶಾದ್ಯಂತ ಆದಿವಾಸಿಗಳಿಗೆ ಮೂಲಭೂತ ಹಕ್ಕು ನೀಡುವುದಾಗಿ ಭರವಸೆ ನೀಡಿ,15 ಸಾವಿರಕ್ಕೂ ಅಧಿಕ ಸಾಮಾನ್ಯ ಜನರ ಬಲಿ ತೆಗೆದುಕೊಂಡಿತ್ತು. 20 ಸಾವಿರ ಕುಟುಂಬಗಳನ್ನು ಅನಾಥವಾಗಿ ಮಾಡಿದ್ರು. ಇಂತಹ ನಕ್ಸಲಿಸಂ 2014ರ ಬಳಿಕ ಅಧಿಕಾರಕ್ಕೆ ಬಂದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು, ಸಂಪೂರ್ಣವಾಗಿ ದೇಶದಿಂದ ಅಂತ್ಯಗೊಳಿಸಿದೆ ಎಂದು ಸಂತಸ ವ್ಯಕ್ತಪಡಿಸಿದರು.

57 ವರ್ಷಗಳ ಕಾಲ ಎಡಪಂಥೀಯ ಕಮ್ಯೂನಿಸ್ಟ್ ಸಿದ್ಧಾಂತದಿಂದ ಪ್ರೇರಣೆಗೊಂಡು ತನ್ನ ದಾರಿಯನ್ನು ವಿಸ್ತರಿಸಿಕೊಂಡ ಈ ನಕ್ಸಲಿಸಂ, ಬಡ ಜನರ ಪರ ಶೋಷಣೆ ಮಾಡುವ ಜಮೀನ್ದಾರರ ವಿರುದ್ಧ ಹಿಂಸಾತ್ಮಕವಾಗಿ ಬೆಳೆದಿದ್ದು, 2014ರ ಪೂರ್ವದಲ್ಲಿ ದೇಶದ 128 ಜಿಲ್ಲೆಗಳಲ್ಲಿ ಬೇರು ಸಮೇತ ನೆಲೆಯೂರಿ, 2024ರ ವೇಳೆ ಕೇವಲ 12 ಜಿಲ್ಲೆಗಳಲ್ಲಿ ಮಾತ್ರ ಇತ್ತು. ಇದೀಗ ಮಾರ್ಚ್ 31ರವರೆಗೆ ದೇಶದಿಂದ ಸಂಪೂರ್ಣವಾಗಿ ರಕ್ತಸಿಕ್ತದಿಂದ ಕೂಡಿದ ನಕ್ಸಲಿಸಂನ್ನು ಕೇಂದ್ರ ಸರ್ಕಾರ ಬುಡಸಮೇತ ಕಿತ್ತು ಹಾಕಿದ್ದು, ದೇಶದ ಒಳ್ಳೆಯ ಬೆಳವಣಿಗೆಯಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ಗಿರಿರಾಜ್ ಯಳಮೇಲಿ, ಸಪ್ನಾ ಮಂಗಲಗಿ ಇದ್ದರು.

ಕೇಂದ್ರದಿಂದ 20 ಸಾವಿರ ಕೋಟಿ ಖರ್ಚು

ಆದಿವಾಸಿಗಳ ಪರ ಎನ್ನುವ ಕಾಂಗ್ರೆಸ್ ಕೇವಲ ದೇಶ ಒಡೆಯುವ ಕೆಲಸದಲ್ಲಿ ಮುಗುಗಿ ಹೋಗಿತೆ ವಿನಃ, ಆದಿವಾಸಿಗಳ ಪರ ಎಂದಿಗೂ ನಿಲ್ಲಲಿಲ್ಲ. ಬಿಜೆಪಿ ಆಡಳಿತದಲ್ಲಿ ಇಲ್ಲಿಯವರೆಗೆ 17 ಸಾವಿರ ನಕ್ಸಲಿಸಂಗಳು ಕ್ಯಾಪ್ಚರ್ ಆಗಿದ್ರೆ,.20 ಸಾವಿರ ಜನ ನಕ್ಸಲಿಗರೂ ಸರೆಂಡರ್ ಆಗಿದ್ದಾರೆ ಎಂದು ಡಾ.ಸುಧಾ ಹಾಲಕಾಯಿ ತಿಳಿಸಿದರು.

ಕೊಟ್ಟಿಗೆಗೆ ಬೆಂಕಿ: ವ್ಯಕ್ತಿ ಸಹಿತ 45 ಕುರಿಗಳು ಸಾವು



ಬೀದರ: ಔರಾದ್ ತಾಲೂಕಿನ ಬೋರಾಳದಲ್ಲಿ ಮಂಗಳವಾರ ಕೊಟ್ಟಿಗೆಗೆ ಬೆಂಕಿ ಹತ್ತಿ 45 ಕುರಿಗಳು ಹಾಗೂ ಶಂಕರ ಮೇತ್ರೆ (65) ಎಂಬಾತ ಮೃತಪಟ್ಟಿದ್ದಾರೆ. ಆಕಸ್ಮಿಕವಾಗಿ ನಡೆದ ಈ ಘಟನೆಯಲ್ಲಿ ವ್ಯಕ್ತಿಯ ಜೀವ ಶೆಡ್ ಸೇರಿದಂತೆ ಲಕ್ಷಾಂತರ ರೂಪಾಯಿ ಹಾನಿಯಾಗಿದೆ.

ತಹಶೀಲ್ದಾರ್ ಮಹೇಶ ಪಾಟೀಲ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ ಪೂಜಾರಿ, ಸಿಪಿಐ ರಘುವೀರಸಿಂಗ ಠಾಕೂರ್, ಪಿಎಸ್‌ಐ ವಸೀಮ ಪಟೇಲ್ ಸ್ಥಳಕ್ಕೆ ಭೇಟಿ ನೀಡಿದರು.

ಬೆಳಗಾವಿ ನಗರದ 350 ಕ್ಕೂ ಹೆಚ್ಚು ಹೋಟೆಲ್ ಕ್ಯಾಂಟೀನ್, ರೆಸ್ಟೋರೆಂಟ್‌ಗಳಲ್ಲಿ ಬಳಕೆ

ಹೋಟೆಲ್ ಉದ್ಯಮಕ್ಕೆ ಬಯೋಮಾಸ್ ಆಸರೆ

ಬಾಳಗೌಡ ಪಾಟೀಲ

ದಿಗಂತ ವಿಶೇಷ



ಬೆಳಗಾವಿ: ಮಧ್ಯಪ್ರಾಚ್ಯದಲ್ಲಿ ಯುದ್ಧದ ಬಿಸಿ ದೇಶವ್ಯಾಪ್ತಿ ಬಿಸಿ ಮುಟ್ಟಿದೆ. ರಾಜ್ಯದ ಎರಡನೇಯ ರಾಜ್ಯಧಾನಿ ಕುಂದಾನಗರಿಯಲ್ಲೂ ಅಡುಗೆ ಅನಿಲ ಸಮಸ್ಯೆ ಉಂಟಾಗಿದೆ. ಅದರಲ್ಲೂ ಕಮರ್ಷಿಯಲ್ ಸಿಲಿಂಡರ್ ಕೊರತೆ ಹೆಚ್ಚಿದೆ. ಇದರ ಪರಿಣಾಮ ಹಲವು ಹೋಟೆಲ್ ಗಳು ಬಂದ್ ಆಗುವ ಸ್ಥಿತಿ ನಿರ್ಮಾಣವಾಗಿದೆ. ಇಂಥ ಪರಿಸ್ಥಿತಿಯಲ್ಲಿ, ಹೋಟೆಲ್ ಮಾಲೀಕರು ಬೆಳಗಾವಿಯಲ್ಲಿ ತಯಾರಾಗುವ ಬಯೋಮಾಸ್ ಒಲೆಗಳತ್ತ ಮುಖ ಮಾಡುತ್ತಿದ್ದಾರೆ.

ಗಡಿ ಜಿಲ್ಲೆ ಬೆಳಗಾವಿ ನಗರದಲ್ಲಿನ 350ಕ್ಕೂ ಅಧಿಕ ಹೋಟೆಲ್, ಕ್ಯಾಂಟಿನ್ ಮತ್ತು ರೆಸ್ಟೋರೆಂಟ್ ಗಳಿವೆ. ಪ್ರತಿನಿತ್ಯ 1600 ಕಮರ್ಷಿಯಲ್ ಸಿಲಿಂಡರ್ ಬೇಡಿಕೆ ಇದೆ. ಸದ್ಯ ಪೂರೈಕೆ ಆಗುತ್ತಿರುವುದು 600 ಸಿಲಿಂಡರ್ ಮಾತ್ರ. ಪತ್ರಿ ನಿತ್ಯ ಪೂರೈಕೆ ಮಾಡಲಾಗುತ್ತಿದ್ದು, ಇನ್ನುಳಿದ ಹಲವು ಹೋಟೆಲ್ ಗಳು ಬಾಗಿಲು ಮುಚ್ಚುವ ಸ್ಥಿತಿಯಲ್ಲಿವೆ ಹೋಟೇಲ್ ಉಧ್ಯಮಕ್ಕೆ ಹೊಡೆತ ಬೀಳದಂತೆ ಹೊಸ ಆವಿಷ್ಕಾರ ಏನಾದರು ಮಾಡಬೇಕೆಂದು ಹೋಟೆಲ್ ಉಧ್ಯಮಿಯೊಬ್ಬರು ಬಯೋಮಾಸ್ ಒಲೆ ತರಾರಿಸಬೇಕೆಂದು ಈ ಹೊಸ ಆವಿಷ್ಕಾರ ಪ್ರಾರಂಭಿಸಿದ್ದಾರೆ.

ಈ ಹೊಸ ಆವಿಷ್ಕಾರವನ್ನು ಟಾಟಾ ಎನರ್ಜಿ ರಿಸೋರ್ಸ್ ಇನ್ಸಟಿಟ್ಯೂಟ್ ದೆಹಲಿ ಇಂಡಿಯನ್ ಇನ್ಸಟಿಟ್ಯೂಟ್ ಆಫ್ ಸೈನ್ಸ್ ಬೆಂಗಳೂರು ಸಹಯೋಗದಲ್ಲಿ ಈ ಬಯೋಮಾಸ್ ಒಲೆಯನ್ನು ಅಭಿವೃದ್ಧಿ ಪಡಿಸಲಾಗಿದೆ. ಈ ಒಲೆಗಳನ್ನು ಬೆಳಗಾವಿಯ ಕೈಗಾರಿಕೋದ್ಯಮಿ ಸಮೀರ್ ಕಣಬರಗಿ ಅವರು ತಮ್ಮ ಫೀನಿಕ್ಸ್ ಪ್ರೊಡಕ್ಟ್ಸ್ ಕಂಪನಿಯಲ್ಲಿ ತಯಾರಿಸಿ ಕಳೆದ 25 ವರ್ಷಗಳಿಂದ ಮಾರಾಟ ಮಾಡುತ್ತಿದ್ದಾರೆ.

> ಮೊದಲು ಅಡುಗೆ ಮಾಡುವುದಕ್ಕೆ ಪ್ರತಿ ದಿನ ಎರಡೂ ಸಿಲಿಂಡರ್ ಗಳು ಬೇಕಾಗುತ್ತಿತ್ತು. ಅವುಗಳಿಗೆ 4 ಸಾವಿರ ರೂ. ಬೇಕಾಗುತ್ತಿತ್ತು. ಈಗ ಬಯೋಮಾಸ್ ಒಲೆ ಬಳಸಲು ಶುರು ಮಾಡಿದ ಮೇಲೆ ದಿನಕ್ಕೆ 600 ರೂ. ಕಟ್ಟಿಗೆ ಖರ್ಚಾಗುತ್ತಿದೆ. ಏನಿಲ್ಲ ಅಂದರೂ 1500 ರೂ. ಉಳಿತಾಯ ಆಗುತ್ತಿದೆ. ಇದರಿಂದಾಗಿ ಎಲ್ಪಿಜಿಗಳ ಗ್ಯಾಸ್ ಗಳ ಅವಲಂಬನೆ ಕಡಿಮೆ ಯಾಗುತ್ತಿದೆ.
> ■ ದಯಾನಂದ ಅಪ್ಪಯ್ಯ ನವರಮಠ, ಖಾನಾವಳಿ ಮಾಲೀಕರು.

ಕಡಿಮೆ ಕಟ್ಟಿಗೆ, ಕೃಷಿ ತ್ಯಾಜ್ಯ ಬಳಸಿ ಇದನ್ನು ಉರಿಸಬಹುದಾಗಿದೆ. ಸಾಮಾನ್ಯ ಕಟ್ಟಿಗೆ ಒಲೆ ಶೇ.5ರಷ್ಟು ಬಳಕೆ ಆಗುತ್ತಿತ್ತು. ಆದರೆ, ಇದು ಶೇ.75ರಷ್ಟು ಬಳಕೆ ಆಗುತ್ತದೆ. ಇನ್ನು 100 ರೂ. ಗ್ಯಾಸ್ ಖರ್ಚಾದರೆ ಇದರ ಖರ್ಚು ಕೇವಲ 20 ರೂ. ಇದು ಪರಿಸರ ಸ್ನೇಹಿ. ಕೇಂದ್ರ ಸರ್ಕಾರದ ಹೊಸ ಮತ್ತು ನವೀಕರಿಸಬಹುದಾದ ಇಂಧನ ಇಲಾಖೆ ಬಯೋ ಮಾಸ್ ಇಂಧನ ಗುರುತಿಸಿ ಅದನ್ನು ಬಳಸಲು ಹೆಚ್ಚು ಪ್ರಚಾರ ಮಾಡುತ್ತಿದೆ.

ಒಟ್ಟಿನಲ್ಲಿ ಓಟಿನಲ್ಲಿ ಆಧುನಿಕ ಯುಗದಲ್ಲಿಯೂ ಹಳೆ ಕಾಲದ ಪದ್ಧತಿಗಳತ್ತ ಮುಖ ಮಾಡುತ್ತಿದ್ದದು, ನೈಸರ್ಗಿಕ ಪದ್ಧತಿಯ ಪ್ರಕಾರ ಅಡುಗೆಯೂ ಆರೋಗ್ಯಕ್ಕೂ ಉತ್ತಮ ಹಾಗೂ ರುಚಿಕರ ಎಂದು ಹಳೆಯ ಕಾಲದ ಪದ್ಧತಿಗಳನ್ನು ನೆನಪಿಸಿ ಮೇಲಕು ಹಾಕುತ್ತಿರುವುದು ಸತ್ಯ.

> 2006ರಿಂದ 14ರವರೆಗೆ ನಾವು ಇದೇ ಬಯೋಮಾಸ್ ಒಲೆಗಳನ್ನು ಬಳಸುತ್ತಿದ್ದೇವು. ಆಮೇಲೆ ಗ್ಯಾಸ್ ಸಿಲಿಂಡರ್ ಬಳಸಲು ಶುರು ಮಾಡಿದೇವು. ಇತ್ತಿಚೆಗೆ ಗ್ಯಾಸ್ ಪೈಪ್ ಲೈನ್ ಸಂಪರ್ಕ ಪಡೆದಿದ್ದೇವೆ. ಈಗ ಗ್ಯಾಸ್ ಅಭಾವ ಕಾಡುತ್ತಿದ್ದರಿಂದ ಬಯೋಗ್ಯಾಸ್ ಒಲೆ ಬಳಕೆ ಪುನಃ ಆರಂಭಿಸಿದ್ದೇವೆ. ನಮ್ಮಲ್ಲಿ ತೆಂಗಿನ ಗರಿ, ತೆಂಗಿನ ಚಿಪ್ಪು, ಕೃಷಿ ತ್ಯಾಜ್ಯ ಮತ್ತು ಕಟ್ಟಿಗೆಯನ್ನು ಈ ಒಲೆಗೆ ಬಳಸುತ್ತೇವೆ. ಇದರಿಂದ ನಮ್ಮಗೆ ಬಹಳ ಅನಕೂಲ ವಾಗುತ್ತಿದೆ.
> ■ ಅಜಯ ಪೈ, ಬೆಳಗಾವಿ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ

ಸಂಪಾದಕೀಯ

ನಕ್ಸಲ್ ಪಿಡುಗಿನ ಅಂತ್ಯ

ಈ ವರ್ಷದ ಮಾರ್ಚ್ 31ರೊಳಗೆ ನಕ್ಸಲ್ ಪಿಡುಗನ್ನು ಸಂಪೂರ್ಣ ನಾಶಮಾಡಬೇಕು ಎಂಬ ಗುರಿಯನ್ನು ಕೇಂದ್ರ ಸರಕಾರ ಹಾಕಿಕೊಂಡಿತ್ತು. ಅದರಂತೆ ಮಾರ್ಚ್ 30ರಂದೇ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 'ದೇಶವು ಈಗ ನಕ್ಸಲ್ ಮುಕ್ತವಾಗಿದೆ' ಎಂದು ಸಂಸತ್ತಿನಲ್ಲಿ ಘೋಷಿಸಿದ್ದಾರೆ. ದೇಶದಲ್ಲಿ ನಕ್ಸಲ್‌ವಾದಿ ನಾಯಕರು ಬಹುತೇಕ ಹತಗೊಂಡಿದ್ದಾರೆ. ಇನ್ನೊಂದಿಷ್ಟು ಮಂದಿ ಶಸ್ತ್ರಾಸ್ತ್ರ ತ್ಯಜಿಸಿ ಶರಣಾಗತರಾಗಿದ್ದಾರೆ. ಬೆರಳೆಣಿಕೆಯ ನಕ್ಸಲ್ ಕಾರ್ಯಕರ್ತರು ಉಳಕೊಂಡಿದ್ದಾರಾದರೂ ಅವರೂ ಶರಣಾಗುವ, ತಪ್ಪಿದಲ್ಲಿ ಹತರಾಗುವ ದಿನಗಳು ದೂರವಿಲ್ಲ. 2024ರಲ್ಲಿ ಸುಮಾರು 2000ದಷ್ಟಿದ್ದ ನಕ್ಸಲೀಯರ ಸಂಖ್ಯೆ ಈಗ ಬೆರಳೆಣಿಕೆಗೆ ಇಳಿದಿರುವುದೇ ನಕ್ಸಲೀಯ ಸಮಸ್ಯೆ ಅಂತ್ಯಗೊಳ್ಳುತ್ತಿರುವುದರ ಸಂಕೇತವಾಗಿದೆ.

ನಕ್ಸಲೀಯ ಪಿಡುಗು ಆರಂಭ ವಾದುದು 1967ರಲ್ಲಿ. ಪ.ಬಂಗಾಳದ ನಕ್ಸಲ್‌ಬಾರಿ ಎಂಬಲ್ಲಿ ಜಮೀನ್ದಾರ ಪದ್ಧತಿಯ ವಿರುದ್ಧ ಆರಂಭಗೊಂಡ ಚಳವಳಿ ಬಳಿಕ ಹಿಂಸಾತ್ಮಕ ರೂಪ ತಾಳಿತು. ಕಮ್ಯುನಿಸ್ಟ್ ಚೀನಾ ಅದಕ್ಕೆ ಪ್ರೇರಣೆಯೊದಗಿಸಿತು. ಸಶಸ್ತ್ರ ನಕ್ಸಲೀಯ ಚಳವಳಿಯನ್ನು ಆರಂಭಿಸಿದವರು ಭಾರತವನ್ನೂ ಚೀನಾದಂತಾಗಿಸುವ ಕನಸು ಕಂಡರು. ನಕ್ಸಲ್ ಚಳವಳಿಯ ರೂವಾರಿಗಳಲ್ಲೊಬ್ಬನಾದ ಚಾರು ಮಜುಂದಾರ್ ಅಂತೂ ''ಚೀನಾ ಅಧ್ಯಕ್ಷರು ನಮ್ಮ ಅಧ್ಯಕ್ಷರು, ಚೀನಾದ ಹಾದಿಯೇ ನಮ್ಮದು ಕೂಡಾ'' ಎಂದು ಘೋಷಿಸಿದ್ದ. ಎಡಪಂಥೀಯ ಬುದ್ಧಿಜೀವಿಗಳಿಂದಲೂ ನಕ್ಸಲ್ ಚಳವಳಿಗೆ ಬೆಂಬಲ ದೊರಕಿತಲ್ಲದೆ, ಇನ್ನಿತರ ಹಲವು ರಾಜ್ಯಗಳಿಗೂ ನಕ್ಸಲೀಯ ಪಿಡುಗು ವ್ಯಾಪಿಸಿತು. ಪೊಲೀಸರು, ಅರೆಸೈನಿಕ ಪಡೆಗಳು, ಸಾರ್ವಜನಿಕರು ಸೇರಿದಂತೆ ಸಾವಿರಾರು ಜನರು ನಕ್ಸಲೀಯರ ಗುಂಡಿಗೆ ಬಲಿಯಾದರು. ''ನಕ್ಸಲ್‌ವಾದವು, ಭಾರತದ ಅತೀ ದೊಡ್ಡ ಆಂತರಿಕ ಅಪಾಯ'' ಎಂದು ಮಾಜಿ ಪ್ರಧಾನಿ ಮನಮೋಹನ ಸಿಂಗ್ ಕೂಡಾ ಘೋಷಿಸಿದ್ದರು. ದುರಂತವೆಂದರೆ ಯಾವುದೇ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರ ನಕ್ಸಲೀಯರನ್ನು ದಮನಿಸಲು ಸುಸಜ್ಜಿತ ಯೋಜನೆ ಯಾ ಕಾರ್ಯಾಚರಣೆ ರೂಪಿಸಲಿಲ್ಲ. ನಕ್ಸಲ್ ದಮನ ಕಾರ್ಯಾಚರಣೆ ಆರಂಭಿಸಿದರೂ ಅದು ಅಲ್ಪಕಾಲ ಮಾತ್ರ ನಡೆಯಿತು. 2024ರಲ್ಲಿ ನರೇಂದ್ರ ಮೋದಿ ಸರಕಾರ ಅಧಿಕಾರಕ್ಕೆ ಬಂದ ಮೇಲೆಯೇ ನಕ್ಸಲೀಯರ ನಿರ್ನಾಮಕ್ಕೆ ನಿರ್ಣಾಯಕ ಸ್ವರೂಪ ದೊರಕಿದ್ದು. ಸುಸಜ್ಜಿತ ಯೋಜನೆ, ಪರಿಣಾಮಕಾರಿ ಕಾರ್ಯಾನುಷ್ಠಾನದ ಮೂಲಕ ನಕ್ಸಲೀಯ ಸಮಸ್ಯೆಯನ್ನು ಈಗ ಸಂಪೂರ್ಣ ದಮನಿಸಲಾಗಿದೆ. ದೇಶವೀಗ ನಕ್ಸಲ್ ಮುಕ್ತವಾಗಿದೆ. ಆದರೂ ನಕ್ಸಲ್ ಮನಸ್ಥಿತಿಯ 'ನಗರ ನಕ್ಸಲರು' ಇನ್ನೂ ಸಕ್ರಿಯರಾಗಿದ್ದಾರೆ. ಅವರನ್ನೂ ನಿಯಂತ್ರಿಸಬೇಕಾಗಿರುವುದು ಮುಂದಿನ ಕಾರ್ಯವಾಗಬೇಕಾಗಿದೆ.



ಖಾಂಡವ ದಹನ ಪ್ರಸಂಗ

ಇಡೀ ಪ್ರಕೃತಿಗೆ ನಾವಷ್ಟೇ ಉತ್ತರಾಧಿಕಾರಿಗಳಲ್ಲ, ಈಗಾಗಲೇ ಜನಿಸಿದ ಮಕ್ಕಳೂ ಇದರ ಹಕ್ಕುದಾರರು. ಅವರಿಗಾಗಿ ನಾವಿದನ್ನು ಉಳಿಸಬೇಕಾದ ಬದ್ಧತೆ ನಮಗಿದೆ.

ಆ-ಲೋಚನ
•ರಾಧಾಕೃಷ್ಣ ಕಲ್ಚಾರ್
rkkalchar@gmail.com



ಆರೇಳು ತಿಂಗಳುಗಳ ಹಿಂದೆ ಹೆಗ್ಗೋಡಿನ ನೀನಾಸಮ್ ನಡೆಸಿದ ರಂಗ ಶಿಬಿರದಲ್ಲಿ ಒಂದೂವರೆ ಗಂಟೆಯ ತಾಳಮದ್ದಲೆ. ಪ್ರಸಂಗ ಖಾಂಡವ ದಹನ.

ಒಟ್ಟು ತಾಳಮದ್ದಲೆ ರಂಗಭೂಮಿಯ ಸ್ವರೂಪಕ್ಕೆ ಅದು ತೀರ ಸಣ್ಣ ಅವಧಿ. ಅಲ್ಲದೆ ಪ್ರಾಕೃತಿಕವಾದ ಸಂಪತ್ತಿಗೆ ಒಟ್ಟು ಜೀವ ಸಂಕುಲವೇ ಉತ್ತರಾಧಿಕಾರಿ ಎಂಬ ಆಶಯವೂ ಪ್ರಕಟವಾಗಬೇಕಿತ್ತು. ಯಥಾಸಾಧ್ಯ ಅದನ್ನು ನಿರೂಪಿಸಿದೆವು. ನಾಡಿನ ನಾನಾ ಕಡೆಯಿಂದ ಬಂದ ಬಹುಮಂದಿ ರಂಗಕರ್ಮಿಗಳೂ ರಂಗಾಸಕ್ತರೂ ಇದ್ದ ಸಭೆಯದು. ಅವರಿಗೂ ತಾಳಮದ್ದಲೆ ಮೆಚ್ಚುಗೆಯಾಯ್ತು.

ಇರಲಿ, ಆ ಕಾರ್ಯಕ್ರಮವು ಮುಗಿದ ಮೇಲೆ ನನ್ನೊಳಗೆ ಕೆಲವು ಪ್ರಶ್ನೆಗಳು ಹುಟ್ಟಿಕೊಂಡವು. ಲಾಗಾಯ್ತಿನಿಂದಲೂ ಮಾನವ ಮತ್ತು ಪ್ರಕೃತಿಯ ಸಂಘರ್ಷ ನಿರಂತರವಾಗಿ ನಡೆಯುತ್ತ ಬಂದಿದೆ. ಇದಕ್ಕೆ ಕೊನೆಯುಂಟೆ? ಪ್ರಕೃತಿ ಉಳಿಯಬೇಕು ಎಂಬುದು ಸತ್ಯವಾದರೂ ದಿನೇ ದಿನೇ ಹೆಚ್ಚುತ್ತಿರುವ ಜನಸಂಖ್ಯೆ ಇದನ್ನು ಆಗಗೊಡುವುದೆ? ಇತ್ಯಾದಿ. ಈ ಎಲ್ಲ ಸಂಕಷ್ಟ, ಸಮಸ್ಯೆಗಳಿಗೂ ಒಂದು ಸಂಕೇತವಾಗಿ ಖಾಂಡವ ದಹನ ಪ್ರಕರಣ ಇದೆ ಅಂತ ಅನಿಸತೊಡಗಿತು. ಅದನ್ನೊಂದಿಷ್ಟು ಚಿಂತಿಸೋಣ.

ಮಹಾಭಾರತದಲ್ಲಿ ಬರುವ ಖಾಂಡವ ವನ ದಹನದ ಕಥೆ ಹೀಗಿದೆ. ಇಂದ್ರಪ್ರಸ್ಥದಲ್ಲಿ ಪಾಂಡವರು ನೆಲೆಯಾದ ಮೇಲೆ ಒಂದು ದಿನ ಕೃಷ್ಣಾರ್ಜುನರು ವನವಿಹಾರಕ್ಕೆ ತೆರಳುತ್ತಾರೆ. ಅಲ್ಲಿ ಬಂದ ಅಗ್ನಿದೇವ, ತನಗೆ ಬಹು ಹಿಂದೆ ಶ್ವೇತಕಿ ಎಂಬ ರಾಜನ ಯಜ್ಞದಲ್ಲಿ ತುಪ್ಪ ಕುಡಿದುದು ಹೆಚ್ಚಾಗಿ, ಅಜೀರ್ಣವಾಗಿದೆ. ಇದಕ್ಕೆ ಔಷಧಿಯಾಗಿ ಖಾಂಡವವನ್ನು ಸುಡಬೇಕಿದೆ. ಆದರೆ ಇಂದ್ರನ ವಶದಲ್ಲಿರುವ ಆ ವನವನ್ನು ಸುಡುವುದಕ್ಕೆ ಅವನು ಬಿಡುತ್ತಿಲ್ಲ, ತನಗೆ ಸಹಾಯ ಮಾಡಿ ಎಂದು ಕೋರಿದ. ಕೃಷ್ಣಾರ್ಜುನರು ಅದಕ್ಕೊಪ್ಪಿದರು. ಅವರಿಗೆ ಬೇಕಾದ ಆಯುಧಾದಿಗಳನ್ನು ಅಗ್ನಿಯೇ ಒದಗಿಸಿದ. ಅರ್ಜುನನಿಗೆ ದಿವ್ಯ ರಥಾಶ್ವಗಳು, ಗಾಂಡಿವ ಧನುಸ್ಸು, ಅಕ್ಷಯವಾದ ಬತ್ತಳಿಕೆಗಳು ಲಭಿಸಿದವು. ಕೃಷ್ಣನಿಗೆ ಸುದರ್ಶನ ಚಕ್ರವೂ, ಕೌಮೋದಕಿ ಎಂಬ ಗದೆಯೂ ದತ್ತವಾದವು. ಇವುಗಳ ಸಹಾಯದಿಂದ ಖಾಂಡವ ವನವನ್ನು ದಹಿಸುವ ಅಗ್ನಿಗೆ ಅವರು ಸಹಾಯಕರಾದರು. ಇಂದ್ರ ಬಂದ. ಆದರೆ ಅವನು ಇವರೆದುರು ನಿಲ್ಲಲಾರದೆ ಹೋದ. ಆಯಿತು. ಅರಣ್ಯ ಪೂರ್ಣವಾಗಿ ಅಗ್ನಿಗೆ ಆಹುತಿಯಾಯಿತು.

ಇದೆಲ್ಲ ಆದ ಮೇಲೆ ಇಂದ್ರ ಸಂಧಾನಕ್ಕೆ ಬಂದ. ಪ್ರಸಂಗದಲ್ಲಿ (ಖಾಂಡವ ದಹನ – ರಚನೆ ಪ್ರೊ.ಎಂ. ಎ. ಹೆಗಡೆ) ಒಂದು ಪದ್ಯ ಇದೆ.

ಅನಲನುರುಹಿದ ವನವು ಚಿಗಿತುಕೊಳ್ಳಲಿ ಮತ್ತೆ ।
ವನನಾಶ ತರವಲ್ಲ ಜಗದಿ ॥
ಅನಿವಾರ್ಯ ವನವ ನಿರ್ಮಿಸಿ ಪೋಷಿಸಿದ ಬಳಿಕ ।
ಜನರು ನೆಮ್ಮದಿಯುಣಲಿ ಮನದಿ॥

ಅಗ್ನಿಯು ಸುಟ್ಟ ಖಾಂಡವ ವನವು ಮತ್ತೆ ಚಿಗುರಿ ಹಿಂದಿನಂತೆ ಸಮೃದ್ಧ ಅರಣ್ಯವಾಗಲಿ. ಅರಣ್ಯ ನಾಶವು ವಿಹಿತವಲ್ಲ, ಕಾಡನ್ನು ಬೆಳೆಸುವುದು ಅನಿವಾರ್ಯವಿದೆ. ಅದರಿಂದ ಜನರು ನೆಮ್ಮದಿಯನ್ನು ಕಾಣುತ್ತಾರೆ ಎಂಬುದು ಪ್ರಸಂಗದ ಆಶಯ.

ಇದನ್ನಷ್ಟೇ ಇಟ್ಟುಕೊಂಡರೆ ಸಮಸ್ಯೆಯನ್ನು ಸರಳಗೊಳಿಸಿದಂತೆ ಆಗುತ್ತದೆ. ಯಾಕೆಂದರೆ ಇಂದಿನ ದಿನಗಳಲ್ಲಿ ಜನಸಂಖ್ಯೆ ಎಂಬುದು ವಿಪರೀತವಾಗಿ ಹೆಚ್ಚುತ್ತಿದೆ. ದಶಕಗಳ ಹಿಂದಿನವರೆಗೂ ಜನಸಂಖ್ಯಾ ನಿಯಂತ್ರಣ ಎಂಬುದು ಒಂದು ಕರ್ತವ್ಯವೆಂಬಂತೆ ಭಾವನೆಯಿತ್ತು. ಅದು ಒಂದು ರೀತಿಯ ಮೌಲ್ಯವೂ ಆಗಿತ್ತು. ಆದರೆ ಇತ್ತೀಚೆಗೆ ಸಾಮೂಹಿಕವಾಗಿ ಜನರ ದೃಷ್ಟಿಕೋನವೇ ಬದಲಾದಂತೆ ಕಾಣುತ್ತಿದೆ.



ಹಾಗಾಗಿ ಜನನ ಪ್ರಮಾಣ ಹೆಚ್ಚುವುದು ಸ್ವಾಭಾವಿಕ. ಹೀಗೆ ಹೆಚ್ಚಿದ ಜನರು ಎಲ್ಲಿಗೆ ಹೋಗಬೇಕು? ಸಹಜವಾಗಿ ಅವರಿಗೆ ಬೇಕಾದ ಮೂಲಭೂತ ಅಗತ್ಯಗಳಿಗಾಗಿ ಅರಣ್ಯವನ್ನು ಅವಲಂಬಿಸುವುದು ಅನಿವಾರ್ಯ. ಇದರಿಂದಾಗಿ ಅರಣ್ಯದ ಪ್ರಮಾಣ ದಿನೇದಿನೇ ತಗ್ಗುತ್ತಿದೆ. ಅಂದರೆ ಮಾನವ ತನ್ನ ಉಳಿವಿಗಾಗಿ ಅರಣ್ಯವನ್ನು ಬಲಿಗೊಡುತ್ತಿದ್ದಾನೆ. ಮನುಷ್ಯ ಮತ್ತು ಪ್ರಕೃತಿಯ ನಡುವಿನ ಸಂಘರ್ಷ ಪ್ರಾಚೀನವಾದುದೇ ಹೌದಾದರೂ, ಕಳೆದ ನಾಲ್ಕಾರು ದಶಕಗಳಿಂದ ಇದು ಹೆಚ್ಚು ತೀವ್ರವಾಗಿದೆ.

ಮತ್ತೆ ಖಾಂಡವ ವನದ ಕಥೆಗೆ ಬರೋಣ. ಹಸ್ತಿನಾವತಿಯಿಂದ ಇಂದ್ರಪ್ರಸ್ಥಕ್ಕೆ ಬಂದ ಪಾಂಡವರಿಗೆ ರಾಜಧಾನಿಯ ವಿಸ್ತರಣೆ, ಜನವಸತಿಗಳ ನಿರ್ಮಾಣ, ಅಗತ್ಯಕ್ಕಾಗಿ ಕಾಡಿನ ಮರಗಳ ಬಳಕೆ–ಹೀಗೆ ಹಲವು ನೆಲೆಗಳಿಂದ ಕಾಡನ್ನು ಕಡಿಯುವ ಅನಿವಾರ್ಯವಿತ್ತು. ಹಾಗೆ ಕಡಿಯದೆ ಇದ್ದರೆ ಇನ್ನೊಂದು ಸಂಕಟವಿತ್ತು. ಆ ಕಾಲದಲ್ಲಿ ದಟ್ಟವಾದ ಅರಣ್ಯದಲ್ಲಿದ್ದ ಮೃಗಗಳಿಂದ ಬಾಧೆಯೂ ಇತ್ತು. ವಿಷಜಂತುಗಳು ಜನರಿಗೆ ಆಪತ್ತನ್ನು ತರುತ್ತಿದ್ದವು. ಹೀಗಾಗಿ ಅಗ್ನಿಯ ಬೇಡಿಕೆಯನ್ನು ನೆಪವಾಗಿಸಿಕೊಂಡು ಖಾಂಡವವೆಂಬ ಆ ದಟ್ಟಾರಣ್ಯವನ್ನು ಸುಟ್ಟುಹಾಕಿದರು. ಆ ಪಾತ್ರಗಳಿಗೆ ಪರಿಸರ, ಅರಣ್ಯ ನಾಶದ ಅಪಾಯದ ಕಲ್ಪನೆಯಿತ್ತೋ ಇಲ್ಲವೋ, ಪ್ರಸಂಗಕರ್ತನಿಗೆ ಇದ್ದ ಕಾರಣ ಕೊನೆಯ ಪದ್ಯ ಪರಿಸರದ ಪ್ರೀತಿಯನ್ನು ಉತ್ತೇಜಿಸುವಂತೆ ಇದೆ. ಇದರಿಂದ ಪರಿಸರ ರಕ್ಷಣೆಯ ಒಂದು ಸಂದೇಶವನ್ನು ಕಲಾತ್ಮಕವಾಗಿ ನೀಡುವುದು ಸುಲಭವಾಯಿತು.

ಈ ಸಮಸ್ಯೆಯನ್ನು ಇವತ್ತಿಗೆ ಅನ್ವಯಿಸಿ ನೋಡೋಣ. ಆಗ ಹೇಳಿದಂತೆ ಜನಸಂಖ್ಯೆ ಬೆಳೆಯುತ್ತಿದೆ. ಅವರ ಅಗತ್ಯಕ್ಕಾಗಿ ನಾಡು ವಿಸ್ತರಿಸುತ್ತಿದೆ. ನೀವು ಗಮನಿಸಿರಬಹುದು, ಹಳ್ಳಿಗಾಡಿನ ಗುಡ್ಡಗಳೂ ತಲೆಕತ್ತರಿಸಿಕೊಂಡು ಮನೆ ನಿವೇಶನಗಳಾಗುವುದಕ್ಕೆ ತಯಾರಾಗಿ ನಿಂತಿವೆ. ಇನ್ನು ನಗರದೊಳಗಿನ ದಟ್ಟಣೆಯ ಮಾತು ಬಿಡಿ. ಅದರೊಂದಿಗೆ ಬೃಹತ್ ಉದ್ಯಮಗಳು, ಹೆದ್ದಾರಿಗಳು ಸಾವಿರಾರು ಎಕರೆ ಅರಣ್ಯ ಹಾಗೂ ಕೃಷಿ ಭೂಮಿಯನ್ನು ನುಂಗಿ ಬೆಳೆಯುತ್ತಿವೆ. ಇನ್ನೊಂದು ಕಡೆಯಲ್ಲಿ ಕೃಷಿಕರೂ ತಮ್ಮ ಕೃಷಿ ಭೂಮಿಯನ್ನು ವಿಸ್ತರಿಸುತ್ತಿದ್ದಾರೆ. ರಬ್ಬರು, ಕಾಫಿ, ಅಡಿಕೆ– ಹೀಗೆ ಅನೇಕ ವಾಣಿಜ್ಯ ಬೆಳೆಗಳೂ ತಮ್ಮ ಕೈಗಳನ್ನು ಅಂತಿಮವಾಗಿ ಅರಣ್ಯ ಭೂಮಿಯತ್ತ ಚಾಚುತ್ತಿವೆ. ಇವೆಲ್ಲದರ ಒಟ್ಟು ಪರಿಣಾಮ ಭೂಮಿಯ ವಾತಾವರಣದ ಮೇಲೆ ಆಗುವುದು ಸ್ವಾಭಾವಿಕ. ನೀರು, ಗಾಳಿ ಎಂಬ ಎರಡು ಜೀವಾಧಾರ ಸಂಗತಿಗಳು ಕಲುಷಿತವಾಗುತ್ತಿವೆ. ಹೀಗೆ ನಗರಗಳೆಲ್ಲ 'ಇಂದ್ರಪ್ರಸ್ಥವಾಗುವ' ರಭಸದಲ್ಲಿ ಖಾಂಡವದಂತಹ ನೂರಾರು ವನಗಳು ಸುಟ್ಟು ಹೋಗುತ್ತಿವೆ. ಇದರೊಂದಿಗೆ ಪ್ರಭುತ್ವವೂ ಹಲವಾರು ಮಹಾ ಯೋಜನೆಗಳನ್ನು (ಸಾಧ್ಯಾಸಾಧ್ಯ ವಿವೇಚನೆಯಿಲ್ಲದೆ) ಹಮ್ಮಿಕೊಳ್ಳುತ್ತಿದೆ.

ಈ ಎಲ್ಲ ವಿಪತ್ತುಗಳನ್ನು ಎದುರಿಸಿದ ಪ್ರಕೃತಿಯೂ ಸುಮ್ಮನಿರುವುದಿಲ್ಲ. ಕೃಷಿಕರ ತೋಟಕ್ಕೆ ನುಗ್ಗುವ ವನ್ಯಮೃಗಗಳಿಂದ ತೊಡಗಿ ಬರಿದಾಗುತ್ತಿರುವ ನೀರ ಸೆಲೆಯವರೆಗೆ ಅದೂ ಪ್ರತಿಭಟನೆಯನ್ನು ತೋರಿಸುತ್ತದೆ. ಈಗ ಜನಿಸಿದ, ಮುಂದೆ ಜನಿಸಲಿರುವ ಮಕ್ಕಳೂ ಮೂಲತಃ ಇರಬೇಕಾದ ಸಮತೋಲನ ತಪ್ಪಿದ್ದರ ಎಲ್ಲ ಪರಿಣಾಮಗಳನ್ನೂ ಎದುರಿಸಬೇಕಾಗಿ ಬರುತ್ತದೆ. ಅನಿವಾರ್ಯವಿರಲಿ, ಇಲ್ಲದಿರಲಿ, ಪ್ರಕೃತಿಯ ಮೇಲೆ ಹಸ್ತಕ್ಷೇಪ ಮಾಡುವಾಗ ಮುಂದಿನ ಪರಿಣಾಮಗಳನ್ನು ತರ್ಕಿಸಿಕೊಂಡು ಮಾಡಬೇಕಾಗುತ್ತದೆ. ಆಧುನಿಕ ಅಗ್ನಿದೇವರ ಅಜೀರ್ಣಕ್ಕೆ ಔಷಧವಾಗಿಯೋ, ತಕ್ಷಕ ಸಂತಾನದಂತಹ ವಿಷ ಜಂತುಗಳ ನಿವಾರಣೆಗೋ ಕಾಡನ್ನು ನಾಶ ಮಾಡಿಯೇ ತೀರಬೇಕಾದ ಸನ್ನಿವೇಶದಲ್ಲೂ ನೆನಪಿಡಬೇಕಾದುದು 'ಅನಲನುರುಹಿದ ವನವು ಚಿಗಿತುಕೊಳ್ಳಲಿ ಮತ್ತೆ' ಎಂಬ ಧ್ವನಿಯನ್ನು.

ಇಡೀ ಪ್ರಕೃತಿಗೆ ನಾವಷ್ಟೇ ಉತ್ತರಾಧಿಕಾರಿಗಳಲ್ಲ, ಈಗಾಗಲೇ ಜನಿಸಿದ ಮಕ್ಕಳೂ ಇದರ ಹಕ್ಕುದಾರರು. ಅವರಿಗಾಗಿ ನಾವಿದನ್ನು ಉಳಿಸಬೇಕಾದ ಬದ್ಧತೆ ನಮಗಿದೆ. ಪ್ರಕೃತಿ ನಾಶದ ಆಪತ್ತು ಹೇಗೆಲ್ಲ ಕಾಡಬಹುದು ಎಂಬುದರ ಕಲ್ಪನೆಯೂ ನಮಗಿಲ್ಲ. ಅಂದಿನ ವನದಹನ ಪ್ರಕರಣದಲ್ಲಿ ಅರ್ಜುನನಿಗೆ ಹಗೆಯಾದ ತಕ್ಷಕನ ಮಗ ಅಶ್ವಸೇನ ಎಂಬ ನಾಗ, ಮುಂದೆ ಎಷ್ಟೋ ಕಾಲದ ಬಳಿಕ ಸರ್ಪಾಸ್ತ್ರವಾಗಿ ಕರ್ಣನ ಬತ್ತಳಿಕೆಯಲ್ಲಿ ಕುಳಿತು ಅರ್ಜುನನ ಕೊರಳು ಕತ್ತರಿಸುವುದಕ್ಕೆ ಕಾಯುತ್ತಿದ್ದ. ಕರ್ಣನ ಧೋರಣೆಯಲ್ಲದಿದ್ದರೆ ಅರ್ಜುನನ ಪ್ರಾಣವೇ ಹೋಗಿಬಿಡುತ್ತಿತ್ತೋ ಏನೋ. ಹಾಗಾಗಿ ಪ್ರಕೃತಿಯನ್ನು ಒಲಿಸಿಕೊಂಡು ಬಾಳುವುದು ಸುಖವೇ ಹೊರತು ಅದರ ವಿನಾಶದಿಂದ ಅಲ್ಲ.

ವ್ಯವಸ್ಥಿತವಾಗಿ ಬರೆಯುವುದು ಕಷ್ಟ

ಬಹ್ವಪಿ ಸ್ವೇಚ್ಛಯಾ ಕಾಮಂ ಪ್ರಕೀರ್ಣಮಭಿಧೀಯತೇ ।
ಅನುಜ್ಝಿತಾರ್ಥ ಸಂಬಂಧಃ ಪ್ರಬಂಧೋ ದುರುದಾಹೃತಃ ॥

–ಶಿಶುಪಾಲವಧೆ

ಮನಸ್ಸಿಗೆ ಬಂದ ಹಾಗೆ ಅಸಂಬದ್ಧವಾದ ಮಾತುಗಳನ್ನು ಬೇಕಾದಷ್ಟು ಆಡಬಹುದು. ಆದರೆ ಒಂದು ವಿಷಯವನ್ನು ಕುರಿತು ಸಂಗತವಾದ ರೀತಿಯಲ್ಲಿ ವ್ಯವಸ್ಥಿತವಾಗಿ ಬರೆಯುವುದು ಕಷ್ಟ – ಎಂಬುದು ಶ್ಲೋಕಾರ್ಥ.

ಪ್ರಕೃತ ಶ್ಲೋಕದಲ್ಲಿ ಚೆನ್ನಾಗಿ ಬರೆಯುವುದು, ಇತರರ ಮನಸ್ಸನ್ನು ಸೆರೆ ಹಿಡಿಯುವಂತೆ ಬರೆಯುವುದು ಕಷ್ಟ ಎಂಬುದನ್ನು ಕವಿಯು ಹೇಳುತ್ತಾನೆ. ಯಾವುದೇ ವಿಷಯವನ್ನು ಮನಮುಟ್ಟುವಂತೆ ಬರೆಯುವುದು ಸುಲಭದ ಕೆಲಸವಲ್ಲ. ಬರವಣಿಗೆಯಲ್ಲಿ ಸಿದ್ಧಿಯಾಗಬೇಕು. ಕೆಲವರ ಬರಹವನ್ನು ಓದಿದಾಗ ಏನನ್ನು ಹೇಳಲು ಹೊರಟಿದ್ದಾರೆ ಎಂಬುದು ಅರ್ಥವಾಗುವುದೇ ಇಲ್ಲ. ಇನ್ನು ಕೆಲವರ ಬರಹ ಬೇಗನೆ ಅರ್ಥವಾಗುತ್ತದೆ. ಅಷ್ಟೇ ಅಲ್ಲ, ಇಂತಹ ಬರಹವನ್ನು ಇನ್ನಷ್ಟು ಓದಬೇಕು ಅನ್ನಿಸುತ್ತದೆ.



ಬರಹ ಮಾತನಾಡಿದಷ್ಟು ಸುಲಭವಲ್ಲ. ಮಾತಿನ ವೈಖರಿಯೇ ಬೇರೆ. ಲೇಖನದ ಶೈಲಿಯೇ ಬೇರೆ. ಮಾತನಾಡುವಾಗ ಏನನ್ನೂ ಮಾತನಾಡಬಹುದು. ಹೇಗೂ ಮಾತನಾಡಬಹುದು. ಆದರೆ ಅದನ್ನೇ ಲೇಖನ ರೂಪಕ್ಕೆ ಇಳಿಸುವಾಗ ಸಾಕಷ್ಟು ಜಾಗ್ರತೆ ವಹಿಸಬೇಕು. ಲೇಖನವೆಂಬುದು ಒಂದು ಬಗೆಯ ದಾಖಲೆ ಇದ್ದಂತೆ. ಮಾತಿನ ಬರದಲ್ಲಿ ಮನಸ್ಸಿಗೆ ಬಂದಂತೆ ಅಸಂಬದ್ಧ ಮಾತುಗಳನ್ನು ಆಡಬಹುದು. ಎದುರಿಗಿರುವ ಅಭಿಮಾನಿಗಳನ್ನು ಮೆಚ್ಚಿಸುವುದಕ್ಕೆ, ಚಪ್ಪಾಳೆ ಗಿಟ್ಟಿಸುವುದಕ್ಕೆ ಏನನ್ನೂ ಹೇಳಬಹುದು. ಆಡಿದ ಮಾತು ಕೆಡುಕಾಗಿರಲಿ,ಒಳಿತಾಗಿರಲಿ ಕೆಲವು ಕಾಲವಿದ್ದು ತನ್ನಷ್ಟಕ್ಕೇ ಮಾಯವಾಗಿ ಬಿಡುತ್ತದೆ.

ಆದರೆ ಬರಹ ಹಾಗಲ್ಲ.ಕೆಲವೊಮ್ಮೆ ಬರೆದದ್ದು ವಿವಾದಕ್ಕೆ ಕಾರಣವಾಗುತ್ತದೆ. 'ಸಹಸ್ರಂ ವದ , ಏಕಂ ಮಾ ಲಿಖ' ಎಂಬ ಮಾತು ಈ ಕಾರಣಕ್ಕಾಗಿಯೇ ಬಂದಿದೆ. ಬರೆಯುವಾಗ ಎಚ್ಚರವಿರಲೆಂಬುದು ಕಥನದ ಆಶಯ. ಆಡುವುದೆಲ್ಲವನ್ನೂ ಬರೆಯುವುದು ಕಷ್ಟ,' 'ಬರೆಯುವುದು ಆಡಿದಷ್ಟು ಸುಲಭವಲ್ಲ' ಇಂತಹ ಮಾತುಗಳು ಬರಹದ ಮಹತ್ವವನ್ನು ಹೇಳುತ್ತವೆ. ಮಾತನಾಡಿದ ಬಳಿಕ ನಾನು ಹಾಗೆ ಹೇಳಿಲ್ಲ, ನನ್ನ ಆಶಯ ಹಾಗಿರಲಿಲ್ಲ, ನನ್ನ ಮಾತನ್ನು ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೆ. ಪತ್ರಕರ್ತರು ನನ್ನ ಮಾತನ್ನು ತಿರುಚಿ ಬರೆದಿದ್ದಾರೆ ಎಂದೆಲ್ಲಾ ಹೇಳಲು ಅವಕಾಶವಿದೆ. ರಾಜಕಾರಣಿಗಳು ಇದನ್ನೇ ಮಾಡುವುದು.ಆದರೆ ಬರವಣಿಗೆ ಸಂಬಂಧಿಸಿ ಈ ರೀತಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ಬರಹವೇ ದಾಖಲೆಯನ್ನು ಒದಗಿಸುತ್ತದೆ.

ಬರವಣಿಗೆಗೆ ಆಧಾರವನ್ನು ನೀಡಬೇಕಾಗುತ್ತದೆ. ಎಲ್ಲಿಂದ ಸ್ವೀಕರಿಸಿದ್ದು ಎಂಬುದನ್ನು ಉಲ್ಲೇಖಿಸಬೇಕಾಗುತ್ತದೆ. ತಾನು ಬರೆಯಬೇಕಾದದ್ದನ್ನು ಒಪ್ಪ ಓರಣವಾಗಿ ಜೋಡಿಸಬೇಕಾಗುತ್ತದೆ. ಜೊತೆಗೆ ಬರವಣಿಗೆಗೆ ಶೈಲಿ, ಶಬ್ದ ಸಂಗ್ರಹ, ನಿರಂತರ ಓದು ಇವೆಲ್ಲವೂ ಬೇಕಾಗುತ್ತದೆ. ಇಂದಿನ ರಾಜಕಾರಣಿಗಳು ಮಾತನಾಡಿದಂತಲ್ಲ, ಹೇಳುವಾಗ ಸುಳ್ಳು ದಾಖಲೆಗಳನ್ನು, ಅಂಕಿ ಅಂಶಗಳನ್ನು, ಅಸಂಬದ್ಧ ಟೀಕೆಗಳನ್ನು ಮಾಡುತ್ತಾರೆ. ಎದುರಿಗಿರುವ ಕಾರ್ಯಕರ್ತರನ್ನು ಮೆಚ್ಚಿಸುವುದಕ್ಕೆ ಪ್ರಯತ್ನಿಸುತ್ತಾರೆ. ಸುಳ್ಳು ಅಂಕಿ ಅಂಶಗಳನ್ನು ಹೇಳಿ ನಗೆ ಪಾಟಲಾದವರನ್ನು ನಿತ್ಯವೂ ನೋಡುತ್ತೇವೆ. ಇಂತಹ ಪ್ರವೃತ್ತಿ ಬರಹಕ್ಕೆ ಸಲ್ಲದು. ಆದ್ದರಿಂದ ಎಚ್ಚರಿಕೆಯಿಂದ, ಸರಿಯಾದ ಮಾಹಿತಿ ಪಡೆದು ಜನರನ್ನು ಆಕರ್ಷಿಸುವಂತೆ ಬರೆಯಬೇಕು. ಅದಕ್ಕಾಗಿ ಪರಿಶ್ರಮವಿರಬೇಕು.

ಪರದೆಯಾಚೆಗಿನ 'ಧುರಂಧರ್' ಅಜಿತ್ ದೋವಲ್!

▸ಪೃಥ್ವಿರಾಜ್ ಕುಲಕರ್ಣಿ



ಬಾಲಿವುಡ್‌ನ 'ಶೌರ್ಯ' ಎಂಬ ಸಿನಿಮಾದಲ್ಲಿ ಪಾತ್ರಧಾರಿ ಬ್ರಿಗೇಡಿಯರ್ ಪ್ರತಾಪ್ ನ್ಯಾಯಾಲಯದಲ್ಲಿ 'ನಿಮ್ಮಲ್ಲಿ ಎಷ್ಟು ತಿಳಿದುಕೊಳ್ಳುವ ಕ್ಷಮತೆ ಮತ್ತು ತಡೆದುಕೊಳ್ಳುವ ಶಕ್ತಿ ಇದೆಯೋ ಅಷ್ಟೇ ತಿಳಿದುಕೊಳ್ಳುತ್ತೀರಿ. ಅದಕ್ಕಿಂತ ಹೆಚ್ಚು ತಿಳಿದುಕೊಂಡರೆ ನಿಮಗೆ ಅರಗಿಸಿಕೊಳ್ಳಲಾಗಲ್ಲ' ಎಂಬ ಡೈಲಾಗ್ ಹೇಳುತ್ತಾರೆ. ಅದು ಸಿನಿಮಾ ಸನ್ನಿವೇಶಕ್ಕೆ ತಕ್ಕಂತೆ ಬರೆಯಲಾದ ಸ್ಕಿಪ್ಟ್. ಅದೇ ಡೈಲಾಗ್ ಇದೀಗ 'ಧುರಂಧರ್' ವಿಚಾರದಲ್ಲಿ ಸತ್ಯವಾಗಿ ಬದಲಾಗುತ್ತಿದೆ. ಧುರಂಧರ್ ಎಂಬ ಸಿನಿಮಾದ context ತಿಳಿದುಕೊಂಡವರಿಗೆ ಅದು ಅರ್ಥವಾಗುತ್ತದೆ. ತಡೆದುಕೊಂಡವರಿಗೆ ಅದು ದೇಶದ ಹೆಮ್ಮೆ. ತಿಳಿದುಕೊಳ್ಳದವರಿಗೆ ಪ್ರೊಪಾಗೆಂಡಾ. ಒಂದು ಕಾಲದಲ್ಲಿ 'ಭಜರಂಗಿ ಭಾಯಿಜಾನ್' ಅಂತಹ ಸಿನಿಮಾಗಳೊಂದಿಗೆ ಪಾಕ್ ಒಲೈಕೆಗೆ ಕೈಚಾಚುತ್ತಿದ್ದ ಬಾಲಿವುಡ್ ಇದೀಗ ಪ್ರೋ ಇಂಡಿಯನ್ ಸಿನಿಮಾ ಮಾಡುತ್ತಿದೆ.

Context ವಿಚಾರಕ್ಕೆ ಬಂದರೆ ಧುರಂಧರ್ ಒಬ್ಬ ವ್ಯಕ್ತಿಯ ಕಾರ್ಯತಂತ್ರದ ಬಗ್ಗೆ ಮಾತ್ರ ಹೇಳಿಲ್ಲ. ಪಾಕಿಸ್ತಾನಕ್ಕೆ ನುಗ್ಗಿ ಅಲ್ಲಿನ ಜನರಿಗೆ ಚಳ್ಳೆ ಹಣ್ಣು ತಿನ್ನಿಸಿ ದೇಶಕ್ಕಾಗಿ ಹೋರಾಟ ಮಾಡಿದ, ಉಗ್ರರನ್ನು ಕೊಂದ ಮತ್ತು ಆಂತರಿಕ ಮಾಹಿತಿಗಳನ್ನು ಕಳುಹಿಸಿದ ನೂರಾರು ಸ್ಪೈಗಳ ಕಾರ್ಯತಂತ್ರಗಳ ಬಗ್ಗೆ ಒಂದೇ ಸಂಯೋಜಿತ ಪಾತ್ರದ ಮೂಲಕ ತಿಳಿಸಲು ಯತ್ನಿಸಲಾಗಿದೆ. ಸಿನೆಮಾಕ್ಕೆ ತಕ್ಕಂತೆ ಒಂದಿಷ್ಟು ಫಿಕ್ಷನ್ ಕೂಡ ಸೇರಿಸಿರುವುದು ಸುಳ್ಳೇನಲ್ಲ. ಆದರೆ ಕೆಲವರು ಸಾಕ್ಷಿ ಕೇಳುತ್ತಿದ್ದಾರೆ. ಅದಕ್ಕೆ ಅಜಿತ್ ದೋವಲ್ ಅವರೇ ಸಾಕ್ಷಿ. ದೇಶದ ಭದ್ರತೆಯ ದಿಕ್ಕು ಬದಲಾಯಿಸಿ ಪಾಕಿಸ್ತಾನಕ್ಕೆ ನುಗ್ಗಿ ಭಯೋತ್ಪಾದಕರನ್ನು ಬೇಟೆಯಾಡಿ, ಇದು ಹೊಸ ಭಾರತ ಎಂಬ ಎಚ್ಚರಿಕೆಯನ್ನು ಶತ್ರುದೇಶಕ್ಕೆ ತಿಳಿಸಿದ ಪ್ರತ್ಯಕ್ಷ ಧುರಂಧರ್ ಅಜಿತ್ ದೋವಲ್ ಅವರ ಕತೆ ಸಿನಿಮಾಗಿಂತ ಕಮ್ಮಿಯೇನಿಲ್ಲ.

ವಾರದೊಳಗೆ ದಂಗೆ ನಿಲ್ಲಿಸಿದ ಐಪಿಎಸ್ ದೋವಲ್: 1971ರಲ್ಲಿ ಕೇರಳದ ಕಣ್ಣೂರು ಜಿಲ್ಲೆಯ ತಲಶ್ಶೇರಿಯ ಖಾಸಗಿ ಹೋಟೆಲ್‌ನಲ್ಲಿ ದಂಗೆಯಾಯಿತು. ಅದು ಕೋಮು ಘರ್ಷಣೆಯಾಗಿ ಬದಲಾಯಿತು. ಅದರ ಭೀಕರತೆಯಿಂದ ತತ್ತರಿಸಿದ ಕೇರಳದ ಗೃಹ ಸಚಿವ ಕರುಣಾಕರನ್ ಅವರು ತ್ವರಿತ ಪರಿಹಾರಕ್ಕಾಗಿ ಗಲಭೆ ಅಡಗಿಸಲು ನಿಷ್ಠಾವಂತ ಪೊಲೀಸ್ ಅಧಿಕಾರಿಯನ್ನು ಹುಡುಕುತ್ತಿದ್ದರು. ಇದೇ ವೇಳೆ ಅಲ್ಲಿನ ಹಿರಿಯ ಪೊಲೀಸ್ ಅಧಿಕಾರಿಗಳು ತಟ್ಟನೆ ಆಗಷ್ಟೇ ಯುಪಿಎಸ್‌ಸಿ ಪಾಸಾಗಿದ್ದ ಅಜಿತ್ ದೋವಲ್ ಅವರ ಹೆಸರನ್ನು ಸೂಚಿಸಿದರು. ಮೂರು ವರ್ಷವಷ್ಟೇ ಅನುಭವ ಹೊಂದಿದ್ದ ದೋವಲ್, ಡೈರೆಕ್ಟ್ ಫೋರ್ಸ್‌ಗಳನ್ನು ಬಳಸದೆ strategic intelligence gathering technique ಬಳಸಿದರು. ಮೂಲ ಹುಡುಕುತ್ತಾ ಗಲಭೆಕೋರ ಸಂಘಟನೆಗಳ ನಾಯಕರತ್ತ ತಲುಪಿದರು. ಸಂಘಟನೆಗಳ ನಾಯಕರ ಮನವೊಲಿಸಲು ಯಶಸ್ವಿಯಾದರು. ಲೂಟಿಯಾದ ವಸ್ತು ಸಿಕ್ಕ ತಕ್ಷಣಕ್ಕೆ ದಂಗೆಗಳು ನಿಂತು ಹೋದವು. ಶಾಂತಿ ಸ್ಥಾಪನೆಯಾಯಿತು. ವಾರದೊಳಗೆ ಅಜಿತ್ ದೋವಲ್ ಅವರು ಬಗೆಹರಿಸಿದ ಕಾರ್ಯತಂತ್ರದ ಬಗ್ಗೆ ದೇಶದಲ್ಲೆಲ್ಲಾ ಚರ್ಚೆಯಾದವು. ಅವರ ಹೆಗ್ಗಳಿಕೆ ಅವರನ್ನು ದಿಲ್ಲಿಗೆ ಕಳುಹಿಸಿತು. ಅಲ್ಲೇ ಅವರನ್ನು ಇಂಟಲಿಜೆನ್ಸ್ ಬ್ಯೂರೋಗೆ ಸೇರಿಸಲಾಯಿತು.

ಮಿಜೋರಾಂ ಮತ್ತು ದೋವಲ್ ವೈಖರಿ: ಆಗಿನ ಅಸ್ಸಾಂ ಭಾಗವಾಗಿದ್ದ ಮಿಜೋರಾಂನಲ್ಲಿ ಬರಗಾಲ ಭೀತಿ ಶುರುವಾಗಿತ್ತು. ಜೊತೆಗೆ ಅದೇ ಹೊತ್ತಲ್ಲಿ ಅಸ್ಸಾಮಿ ಭಾಷೆಯ ಕ್ರಾಂತಿಯಾಯಿತು. ಸ್ಥಳೀಯರು ಅಸ್ಸಾಮಿ ಭಾಷೆ ಬಲ್ಲವರಿಗೆ ಮಾತ್ರ ನೌಕರಿ ನೀಡಬೇಕೆಂದು ಬೇಡಿಕೆ ಇಟ್ಟರು. ಅದರ ವಿರೋಧಕ್ಕೆ ನಿಂತ ಲಾಲ್ ಡೆಂಗಾ ಎಂಬ ವ್ಯಕ್ತಿ ಹೊಸ ಪಾರ್ಟಿ ನಿರ್ಮಿಸಿ, ಸರ್ಕಾರದ ವಿರುದ್ಧ ಮಾತನಾಡತೊಡಗಿದರು. ಅದಕ್ಕೆ ಜನರ ಬೆಂಬಲ ದೊರೆತು, ವಿವಿಧ ಇಲಾಖೆಗಳ ಜನರು ಹೋರಾಟಕ್ಕೆ ಬೆಂಬಲ ನೀಡಿದರು. ಸರ್ಕಾರದ ವಿರುದ್ಧ ನಿಂತವರು ಪ್ರತ್ಯೇಕ ಮಿಜೋರಾಂ ದೇಶಕ್ಕಾಗಿ ಆಗ್ರಹಿಸಿದರು. ಅಲ್ಲಿಗೆ ದೋವಲ್ ಕಾಲಿಟ್ಟರು. ಹೋರಾಟಗಾರರನ್ನು ಸಂಪರ್ಕಿಸಿ ಸ್ನೇಹ ಬೆಳೆಸಿದರು. ಸರ್ಕಾರ ಮತ್ತು ಹೋರಾಟಗಾರರ ಮಧ್ಯೆ ಸೇತುವೆಯಾಗಿ ಕಾರ್ಯನಿರ್ವಹಿಸಿ ಸರ್ಕಾರದಿಂದ ಕೆಲವು ಬೇಡಿಕೆಗಳನ್ನು ಪೂರೈಸಿಕೊಡುವುದಾಗಿ ದೋವಲ್ ಭರವಸೆ ನೀಡಿದರು. 2 ವರ್ಷಗಳ ಪ್ರಯತ್ನದಿಂದ ಬೇಡಿಕೆಗಳನ್ನು ಈಡೇರಿಸಿದರು. 1974 ರಲ್ಲಿ ಮಿಜೋರಾಂ ಹೊಸ ರಾಜ್ಯವಾಯಿತು. ಹೊಸ ಸಿಎಂ ಲಾಲ್ ಡೆಂಗಾ ಆದರು.



ಸಿಕ್ಕಿಂ ವಿಲೀನದಲ್ಲಿ ದೊಡ್ಡ ಪಾತ್ರ: ಸಿಕ್ಕಿಂ ನ ಪಾಲ್ದೆನ್ ಎಂಬ ರಾಜ ಅಮೆರಿಕದ ಸಿಐಎ ಏಜೆಂಟ್ ಹೋಪ್ ಕೋಕ್‌ನ ಹನಿಟ್ರ್ಯಾಪ್‌ಗೆ ಸಿಕ್ಕಿಬಿದ್ದಿದ್ದ. ಮಾಸ್ಟರ್‌ಪ್ಲಾನ್ ಮಾಡಿದ ರಾ ಹೆಡ್ ಆರ್.ಎನ್ ಕಾವ್, ಸ್ಥಳೀಯ ರಾಜಕಾರಣಿಗಳನ್ನು ಒಗ್ಗೂಡಿಸುವ ಕೆಲಸಕ್ಕೆ ಮುಂದಾದರು. ಜನರನ್ನು ಒಗ್ಗೂಡಿಸಿ ಮನವೊಲಿಸುವ ಕೆಲಸವನ್ನು ಅಜಿತ್ ದೋವಲ್ ಅವರಿಗೆ ನೀಡಲಾಗಿತ್ತು. ಅಚ್ಚುಕಟ್ಟಾದ ಯೋಜನೆಗಳನ್ನು ರೂಪಿಸಿಕೊಂಡ ದೋವಲ್ ಸಿಕ್ಕಿಂ ಭಾರತದೊಂದಿಗೆ ಸೇರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಕೇರಳ, ಮಿಜೋರಾಂ, ಸಿಕ್ಕಿಂನ ದೊಡ್ಡ ದಂಗೆಗಳನ್ನು ನಿಲ್ಲಿಸಿದ್ದಕ್ಕೆ ಅಜಿತ್ ದೋವಲ್ ಭಾರತ ಭದ್ರತಾ ಪಡೆಯ ಪ್ರಮುಖ ವ್ಯಕ್ತಿಯಾದರು. ಅಲ್ಲಿಗೆ ಅವರು ವಿವಿಧ ಆಪರೇಷನ್‌ಗಳಿಗಾಗಿ ಭಾರತೀಯ ರಾಯಭಾರ ಕಚೇರಿಯ ಕಾರ್ಯದರ್ಶಿಯಾಗಿ ಪಾಕಿಸ್ತಾನಕ್ಕೆ ಹೋದರು. ಅಲ್ಲಿಂದಲೇ ಅಜಿತ್ ದೋವಲ್ ಪಾಕ್ ಪಾಲಿನ ಭಯೋತ್ಪಾದಕರಿಗೆ ದುಃಸ್ವಪ್ನವಾದರು. ಪಾಕಿಸ್ತಾನದ ಪರಮಾಣು ಪರೀಕ್ಷೆಯ ಕುರಿತು ಮಾಹಿತಿ ಹೊರತರುವಲ್ಲಿ ಇವರು ಸಿಂಹ ಪಾತ್ರ ವಹಿಸಿದ್ದರು ಎಂಬ ಮಾತುಗಳಿವೆ. ಭಯೋತ್ಪಾದಕರ ಯೋಜನೆಗಳನ್ನು ವಿಫಲಗೊಳಿಸಿದ ವರದಿಗಳಿವೆ. ಗೌಪ್ಯ ಮಿಶನ್‌ಗಳಿಗೆ ಅಜಿತ್ ದೋವಲ್ ಈಗ ರಾಜ. ಆಪರೇಷನ್ ಬ್ಲಾಕ್ ಥಂಡರ್

ಖಲಿಸ್ತಾನಿಗಳ ಉಪಟಳ ಹೆಚ್ಚಾಯಿತು. ಖಲಿಸ್ತಾನಿಗಳು ಸ್ವರ್ಣ ಮಂದಿರದೊಳಗೆ ಅಡಗಿದಾಗ ಪಾಕಿಸ್ತಾನದಲ್ಲಿದ್ದ ಅಜಿತ್ ದೋವಲ್ ಅವರನ್ನು ಕರೆಸಲಾಯಿತು. ಮಂದಿರವನ್ನು ಕಬ್ಜಾ ಮಾಡಿ ಕುಳಿತಿದ್ದ ಖಲಿಸ್ತಾನಿಗಳಿಗೆ ದೋವಲ್ ಒಮ್ಮೆ ಆಟೋ ಡ್ರೈವರ್ ಆಗಿ, ಒಮ್ಮೆ ಪಾಕ್ ಮೂಲದ ವ್ಯಕ್ತಿಯಾಗಿ ಭೇಟಿ ಮಾಡಿದರು. ಉಗ್ರರು ಯಾವ ಕೋಣೆಯಲ್ಲಿದ್ದಾರೆ ಎಂಬುದನ್ನು ಪತ್ತೆ ಮಾಡಿದ ನಂತರ ಒಳಗೆ ವಿದ್ಯುತ್ ಮತ್ತು ನೀರು ಪೂರೈಕೆ ಕತ್ತರಿಸಿದರು. ಖಲಿಸ್ತಾನಿ ನಾಯಕ ಹೊರಬರುವಂತೆ ಮಾಡಿದರು. ನಾಯಕ ಹೊರಬರುತ್ತಿದ್ದಂತೆ ಎನ್‌ಎಸ್‌ಜಿ ಕಮಾಂಡೋಗಳಿಂದ ಗುಂಡು ಹಾರಿಸಿದರು. ಖಲಿಸ್ತಾನಿಗಳ ಶಕ್ತಿಯೇ ಉಡುಗಿತು. ಒಳಗಿದ್ದ ಇನ್ನಷ್ಟು ಖಲಿಸ್ತಾನಿಗಳ ಮನವೊಲಿಸುವಲ್ಲಿ ಯಶ ಕಂಡ ಅವರು, ಮತ್ತೊಮ್ಮೆ ಆಪತ್ಬಾಂಧವರಾಗಿ ಕಾಣಿಸಿಕೊಂಡರು. ಪಾಕಿಸ್ತಾನ, ಲಂಡನ್ ಸೇರಿದಂತೆ ವಿವಿಧ ದೇಶಕ್ಕೆ ಹೋಗಿ ಅಲ್ಲಿಂದ ಇಂಟೆಲ್ ಮಾಹಿತಿ ಕೊಟ್ಟ ದೊಡ್ಡ ದೊಡ್ಡ ದಾಳಿಗಳನ್ನು ನಿಲ್ಲಿಸಿದರು. ಮುಂದೊಂದು ದಿನ ಅವರು ಭಾರತದ ಪ್ರಮುಖ ಭದ್ರತಾ ಅಧಿಕಾರಿಯಾದರು. ರಾ ಮುಖ್ಯಸ್ಥರಾಗುವ ಸಮಯ ಬಂದಾಗ ಯಾವುದೋ ಕಾರಣ ಅವರನ್ನು ತಡೆಯಿತು. ಗುಜರಾತಿನಲ್ಲಿ ಬಿಜೆಪಿ ಸರ್ಕಾರ ಬಂದಾಗ ವಿವೇಕಾನಂದ ಫೌಂಡೇಶನ್ ಮೂಲಕ ಇಂಟರ್‌ನ್ಯಾಷನಲ್ ಫೌಂಡೇಶನ್ ಕಟ್ಟಿದರು. ಯೂನಿವರ್ಸಿಟಿ ಕಟ್ಟಿ ಅದರಲ್ಲಿ ಸಾವಿರಾರು ಯುವಕರಿಗೆ ಗುಪ್ತಚರ ಮತ್ತು ಭದ್ರತಾ ತರಬೇತಿ ನೀಡಿದರು. 2004ರಲ್ಲಿ ಐಬಿ ನಿರ್ದೇಶಕ ಆಗುವ ಸಮಯ ಬಂತು. ಆದರೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಅವರಿಗೆ ಐಬಿ ನಿರ್ದೇಶಕನ ಪಟ್ಟ ಕಟ್ಟಿದರೂ, 2 ವರ್ಷದ ಮಟ್ಟಿಗಿದ್ದ ಅವಧಿಯನ್ನು 8 ತಿಂಗಳಿಗೆ ಇಳಿಸಿತು. ಅಜಿತ್ ದೋವಲ್ ನಿವೃತ್ತಿಯಾದ ನಂತರ ಅವಧಿಯನ್ನು ಮತ್ತೆ 2 ವರ್ಷಕ್ಕೆ ವಿಸ್ತರಿಸಿತು!

2005ರಲ್ಲಿ ಅಜಿತ್ ದೋವಲ್ ನಿರ್ದೇಶಕರಾಗಿ ನಿವೃತ್ತಿಯಾದರೂ ಮಾಫಿಯಾ ಡಾನ್ ದಾವುದ್ ಇಬ್ರಾಹಿಂ ಸಂಹಾರಕ್ಕೆ ಅಚ್ಚುಕಟ್ಟಾದ ಯೋಜನೆ ರೂಪಿಸಿದ್ದರು. ಆದರೆ ಆ ಯೋಜನೆಗೆ ಮುಂಬೈ ಪೊಲೀಸ್ ಅಡ್ಡಿಪಡಿಸಿ ವಿಫಲಗೊಳಿಸಿದರೆಂಬ ಮಾತುಗಳಿವೆ. 2014ರಲ್ಲಿ ಎನ್‌ಡಿಎ ಸರ್ಕಾರ ಬಂದ ನಂತರ ಅನಂತರ ರಾಷ್ಟ್ರೀಯ ಭದ್ರತಾ ಸಲಹೆಗಾರ ಎಂಬ ಪಟ್ಟ ನೀಡಿತು. ವಿವಿಧ ರಾಷ್ಟ್ರೀಯ ಗೌರವಗಳನ್ನು, ಪ್ರಶಸ್ತಿಗಳನ್ನು ನೀಡಿತು. ಅಲ್ಲಿಂದ ಅಜಿತ್ ದೋವಲ್ ಭಾರತದ ಭದ್ರತಾ ಸ್ಟ್ರಾಟರ್ಜಿಯನ್ನೇ ಬದಲಾಯಿಸಿಬಿಟ್ಟರು. ಆರ್ಟಿಕಲ್ 375 ತೆಗೆಯುವಲ್ಲಿ ದೊಡ್ಡ ಪಾತ್ರ ವಹಿಸಿದರು. ಉರಿ ದಾಳಿಗೆ ಪ್ರತಿದಾಳಿ ಯೋಜನೆ ಹಾಕಿಕೊಟ್ಟರು. ಪಾಕ್‌ನ ಪ್ರತಿಯೊಂದು ಷಡ್ಯಂತ್ರಕ್ಕೆ ತ್ವರಿತ ಮತ್ತು ತಕ್ಕ ಉತ್ತರ ನೀಡುತ್ತಾ ಬಂದರು. ನೋಟು ನಿಷೇಧ ಸಮಯದಲ್ಲೂ ಅಜಿತ್ ಅವರ ಪಾತ್ರ ದೊಡ್ಡದಿದೆ ಎಂಬ ಮಾತುಗಳಿವೆ. ಒಟ್ಟಿನಲ್ಲಿ ಅಜಿತ್ ದೋವಲ್ ಅವರ ಕಾರ್ಯವೈಖರಿ ವಿಶ್ವಕ್ಕೆ ಮಾದರಿ. ಸಾರ್ವಜನಿಕ ವಲಯದಲ್ಲಿ ಲಭ್ಯವಿರುವ ಮಾಹಿತಿ ಒಗ್ಗೂಡಿಸಿದಾಗ ಇಂತಹ ಕೆಲವು ಪವಾಡಗಳು ಮಾತ್ರ ಹೊರಬರುತ್ತವೆ. ಅಸಲಿಯತ್ತಾಗಿ ಪಬ್ಲಿಕ್ ಡೋಮೇನಿನಲ್ಲಿ ಇಲ್ಲದ ಮಾಹಿತಿ ಹುಡುಕಿದರೆ ದೋವಲ್ ಬಗ್ಗೆ ಇನ್ನೆಷ್ಟಿರಬಹುದೋ! ಯಾವ ದೇಶದ ಗುಪ್ತಚರ ಇಲಾಖೆಯ ಬಗ್ಗೆ ಅಷ್ಟೊಂದು ಹೇಳಲಾಗುವುದಿಲ್ಲವೋ ಅಷ್ಟು ಬಲಿಷ್ಠವಾಗಿರುತ್ತವೆ ಎಂಬ ಮಾತುಗಳು ಇಲ್ಲಿಗೆ ನೆನಪಿಸಿಕೊಳ್ಳಬಹುದು. ರಾ ಮತ್ತು ಐಬಿಯ ಕಾರ್ಯವೈಖರಿಗಳು ಮೊಸಾದ್, ಸಿಐಎ ಕಾರ್ಯಚರಣೆಗಳಂತೆ ಪ್ರಚಾರಗೊಂಡಿಲ್ಲ, ಅದಕ್ಕೆ ಕಾರಣ ಆಪರೇಷನ್‌ಗಳನ್ನು ಗುಪ್ತವಾಗಿ ಇಟ್ಟದ್ದು ಅನ್ನಬಹುದು. ಇದಕ್ಕೆ ಅಜಿತ್ ದೋವಲ್ ಅಂತಹ ಧುರಂಧರ್‌ಗಳೇ ಮುಖ್ಯ ಕಾರಣ. ಭಾರತ ಸುರಕ್ಷಿತವಾಗಿದೆ, ನಾವೆಲ್ಲಾ ನೆಮ್ಮದಿಯಿಂದ ನಿದ್ದೆ ಮಾಡುತ್ತಿದ್ದೇವೆ. ಹಾಗೇ ಧುರಂಧರ್ ಅಂತಹ ಸಿನೆಮಾಗಳ ಬಗ್ಗೆ ಮಾತನಾಡುತ್ತೇವೆ ಎಂದರೆ ಅದಕ್ಕೆ ರಾ ಮತ್ತು ಐಬಿಯ ಬಲಿದಾನವೇ ಕಾರಣ. ಆದ್ದರಿಂದ 'ಬಲಿದಾನ ಪರಮೋ ಧರ್ಮಃ'.

ಹನುಮಂತನ ಪ್ರಸಂಗಾವಧಾನತೆ ಮತ್ತು ಇಂಗಿತಜ್ಞತೆ

▸ಗ.ನಾ.ಭಟ್ಟ

ಹನುಮಂತನ ಪ್ರಸಂಗಾವಧಾನತೆಗೆ ಒಂದು ಸುಂದರ ಉದಾಹರಣೆ ಕಿಷ್ಕಿಂಧಾಕಾಂಡದಲ್ಲಿ ಬರುತ್ತದೆ. ಆತ ತಾನೇ ರಾಮಲಕ್ಷ್ಮಣರಿಗೆ ಪರಿಚಯಿಸಿಕೊಂಡು ಸುಗ್ರೀವನಿಗೆ ಅವರನ್ನು ಪರಿಚಯಿಸಿಕೊಡುತ್ತಾ ಹನುಮಂತ, ''ಇವರು ರಾಮಲಕ್ಷ್ಮಣರು. ಅಯೋಧ್ಯಾ ಅರಸು ಕುಮಾರರು; ದಶರಥ ಮಹಾರಾಜನ ಮಕ್ಕಳು. ಪಿತೃವಾಕ್ಯಪರಿಪಾಲನೆಗಾಗಿ ವನವಾಸ ದೀಕ್ಷೆ ಹೊತ್ತು ಅರಣ್ಯಕ್ಕೆ ಬಂದಿದ್ದಾರೆ. ಮಧ್ಯಂತರದಲ್ಲಿ ರಾಮನ ಮಡದಿ ಸೀತೆ ರಾವಣನಿಂದ ಅಪಹೃತಳಾದಳು. ಅವಳನ್ನು ಹುಡುಕುತ್ತಾ ನಿನ್ನ ಸಹಾಯವನ್ನು ಯಾಚಿಸಿ ಇಲ್ಲಿಗೆ ಬಂದಿದ್ದಾರೆ. ಇವರನ್ನು ಸರಿಯಾಗಿ ಸ್ವಾಗತಿಸಿ, ಅರ್ಚಿಸು. ಇವರು ಪೂಜ್ಯತಮರು'' ಎಂದು ಹೇಳುತ್ತಾನೆ. ಹನುಮಂತನ ಈ ಮಾತಿನ ಸೂಕ್ಷ್ಮ, ಅದರ ಆಳ ಸುಗ್ರೀವನಿಗೆ ಅರ್ಥವಾಗಲಿಲ್ಲ.

ಸುಗ್ರೀವ ರಾಮನ ವಿಷಯದಲ್ಲಿ ಹೇಗೆ ನಡೆದುಕೊಂಡ ಎಂದು ಗಮನಿಸಿದರೆ ಆತ ಮಾಡಿದ ತಪ್ಪು ಏನು ಅಂತ ಗೊತ್ತಾಗುತ್ತದೆ. ಹೊಸದಾಗಿ ಪರಿಚಿತನಾದ ರಾಮನನ್ನು ಕುರಿತು ಆತ ಹೇಳಿದ–''ನೀನು ಧರ್ಮದಲ್ಲಿ ಸುಶಿಕ್ಷಿತನೆಂದೂ, ವೀರನೆಂದೂ, ಸರ್ವಭೂತಗಳಲ್ಲೂ ದಯೆ ಇರುವವನೆಂದೂ'' ಹನುಮಂತ ಹೇಳಿದ. ''ಅವನು ನಿನ್ನ ಸದ್ಗುಣವನ್ನು ಪರಿಚಯಿಸಿದ್ದಾನೆ. ನಾನೋ ವಾನರ, ನೀನೋ ಅರಸುಕುಮಾರ, ನಿನಗೆ ನನ್ನ ಸಖ್ಯ ಬೇಕಿದ್ದರೆ ಇಗೋ ಕೈ ನೀಡಿದ್ದೇನೆ. ಕೈ ಹಿಡಿ'' ಎಂದು ಒಂದು ಬಗೆಯ ದರ್ಪವನ್ನು ತೋರಿಸಿದ. ''ರೋಚತೆ ಯದಿ ವಾ ಸಖ್ಯಂ ಬಾಹುರೇಷ ಪ್ರಸಾರಿತಃ–ಕಿ: 5–12. ರಾಮನ ಕಾಲಿಗೂ ಬೀಳಲಿಲ್ಲ, ನಮಸ್ಕರಿಸಲೂ ಇಲ್ಲ. ಇದು ರಾಮನಿಗೆ ಮಾಡಿದ ಅಪಚಾರವಾಯಿತು. ರಾಮ ಇದನ್ನು ಗಮನಿಸಿದ ಮತ್ತು ಸಹಿಸಿಕೊಂಡ. ಹಾಗೆಯೇ ಮುಂದೆ ಅವರೀರ್ವರಲ್ಲಿ ಅಗ್ನಿಸಾಕ್ಷಿಯಾಗಿ ಸ್ನೇಹವೂ ಆಯಿತು. ಅಷ್ಟು ಹೊತ್ತೂ ರಾಮನಿಗೆ ಕೂತುಕೊ ಎನ್ನದ ಸುಗ್ರೀವ ರಾಮನೊಡನೆ ಸ್ನೇಹವುಂಟಾಗಿ, ರಾಮನ ಮೇಲೆ ನಂಬಿಕೆ ಹುಟ್ಟಿದ ಮೇಲೆ ಎಲೆ ಮತ್ತು ಹೂಗಳಿಂದ ತುಂಬಿ ತುಳುಕುತ್ತಿದ್ದ ಸಾಲವೃಕ್ಷದ ಒಂದು ದೊಡ್ಡ ಕೊಂಬೆಯನ್ನು ಮುರಿದು ಹಾಸಿ ಅದರ ಮೇಲೆ ರಾಮನಿಗೆ ಕೂತುಕೊಳ್ಳುವಂತೆ ಹೇಳಿ ತಾನೂ ಅದರ ಮೇಲೇ ಕೂತ. ರಾಮನ ಒತ್ತಿನಲ್ಲೇ ಇದ್ದ ಲಕ್ಷ್ಮಣನನ್ನು ''ಬಂದೆಯಾ? ಹೋದೆಯಾ?'' ಅಂತಲೂ ವಿಚಾರಿಸಲಿಲ್ಲ. ಮಹಾಭಾಗವತನಾದ ಲಕ್ಷ್ಮಣನಿಗೆ ಹೀಗೆ ಅಪಚಾರವಾದುದನ್ನು ರಾಮ ಗಮನಿಸಿದ. ಮಾತ್ರವಲ್ಲ, ಹನುಮಂತನೂ ಗಮನಿಸಿದ. ಅಯ್ಯೋ ಕೆಲಸ ಕೆಟ್ಟಿತಲ್ಲ! ಎಂದುಕೊಂಡು ಹನುಮಂತ ತನ್ನ ದೊರೆಯ ಮಾನ ಮುಚ್ಚಲು ಶ್ರೀರಾಮನಿಗೆ ಹಾಕಿದ ಸಾಲವೃಕ್ಷದ ಟೊಂಗೆಗಿಂತಲೂ ಉತ್ತಮವಾದ, ತುಂಬಾ ಹೂಗಳಿಂದ ಕೂಡಿದ ಶ್ರೀಗಂಧದ ಟೊಂಗೆಯೊಂದನ್ನು ಮುರಿದು ಲಕ್ಷ್ಮಣನಿಗೆ ನೀಡಿದ ಮತ್ತು ತಾನು ನಿಂತುಕೊಂಡೇ ಉಳಿದ. ಲಕ್ಷ್ಮಣ ಅದರ ಮೇಲೆ ಆಸೀನನಾದ.

ಇದು ಕೇವಲ ಒಂದು ಸಲ ನಡೆದದ್ದಲ್ಲ. ಮತ್ತೊಮ್ಮೆಯೂ ಸುಗ್ರೀವ ಹಾಗೆಯೇ ನಡೆದುಕೊಂಡ. ಹನುಮಂತ ಮತ್ತೆ ಅದನ್ನು ಸರಿಪಡಿಸಿದ.



ಹನುಮಂತನ ಆ ನಡವಳಿಕೆಯಿಂದ ಶ್ರೀರಾಮ ಪ್ರಸನ್ನನಾದನಂತೆ. (ಪ್ರಸನ್ನಮುದಧಿಂ ಯಥಾ) ಸುಗ್ರೀವ ಬೇಕು ಅಂತಲೇ ಉದ್ದೇಪೂರ್ವಕವಾಗಿ ಮಾಡಿದ್ದಲ್ಲ ಅದು. ಆದರೆ ತಪ್ಪು ತಪ್ಪೇ. ಸುಗ್ರೀವ ರಾಮನಿಗೆ ಮಾಡಿದ ಉಪಚಾರದಂತೆ ಲಕ್ಷ್ಮಣನಿಗೂ ಮಾಡಬೇಕಿತ್ತು. ಏಕೆಂದರೆ ರಾಮನಿಗೆ ಲಕ್ಷ್ಮಣ ಎಲ್ಲವೂ ಆಗಿದ್ದ. ಅವನು ರಾಮನ ಏಕೈಕ ಪರಿವಾರ. ಮಿತ್ರ, ಮಂತ್ರಿ, ಭೃತ್ಯ, ಸಖಾ ಎಲ್ಲವು ಆಗಿದ್ದ. ಅದನ್ನು ಗಮನಿಸದ ಸುಗ್ರೀವ ಗುರುತರ ಪ್ರಮಾದವನ್ನೇ ಎಸಗಿದ್ದ. ಅದನ್ನು ಸರಿಪಡಿಸುವ ಪ್ರಸಂಗಾವಧಾನತೆಯನ್ನು ಹನುಮಂತ ಮಾಡಿದ. ಇಂತಹ ಕಾರಣಗಳಿಂದಲೇ ಹನುಮಂತನನ್ನು ವಿವೇಕದ ಸಾಕಾರಮೂರ್ತಿಯೆಂದೂ, ಚಾಣಾಕ್ಷನೆಂದೂ ಕರೆಯುವುದು.

ಅವನ ಇಂಗಿತಜ್ಞತೆಯಂತೂ ಅಮೋಘವಾದುದು. ಆತ ಸೀತೆಯನ್ನು ಹುಡುಕುತ್ತಾ ಹುಡುಕುತ್ತಾ ಅಶೋಕವನದತ್ತ ಹೋದ. ಅಲ್ಲಿ ಸೀತೆ ಕಂಡಳು. ಆದರೆ ಅವನು ಅಲ್ಲಿಗೆ ಹೋದ ಸಮಯ ರಾತ್ರಿಯಾಗಿತ್ತು. ಬೆಳಗಾಗಲು ಸ್ವಲ್ಪವೇ ಸಮಯವಿತ್ತು. ಅಷ್ಟರಲ್ಲಿ ರಾವಣನ ಸವಾರಿ ಅವಳಲ್ಲಿ ಪ್ರಣಯಯಾಚನೆ ಮಾಡಲು ಅಲ್ಲಿಗೆ ಬಂತು. ಹನುಮಂತ ಶಿಂಶಪಾವೃಕ್ಷದ ಮೇಲೆ ಮರೆಯೊಂದರಲ್ಲಿ ಕೂತು ಅದನ್ನೆಲ್ಲ ಗಮನಿಸತೊಡಗಿದ. ರಾವಣನ ಪ್ರಣಯಯಾಚನೆಗೆ ಸೀತೆ ಧಿಕ್ಕಾರ ಸೂಚಿಸಿದಳು. ಅದರಿಂದ ಸಿಟ್ಟುಗೊಂಡ ರಾವಣ ಅವಳು ಒಲಿಯುವುದಕ್ಕೆ ಎರಡು ತಿಂಗಳ ಅವಧಿಯನ್ನು ನೀಡಿ ಹೊರಟುಹೋದ. ರಾವಣನ ಈ ದರಿದ್ರ ಕೋಟಲೆಯನ್ನು ಸಹಿಸಲಾರದ ಸೀತಾದೇವಿ ನಂತರ ಸ್ವಲ್ಪ ಹೊತ್ತಿನಲ್ಲಿ ಆತ್ಮಹತ್ಯೆಗೆ ಯತ್ನಿಸುತ್ತಾಳೆ. ಇಂತಹ ಸಂದರ್ಭದಲ್ಲಿ ಹನುಮಂತ ಏನು ಮಾಡಬೇಕು? ದಿಢೀರನೆ ಅವಳೆದುರು ಪ್ರತ್ಯಕ್ಷನಾಗಬೇಕೆ? ಹಾಗೆ ಪ್ರತ್ಯಕ್ಷನಾದರೆ ಅವನೇ ವೇಷ ಮರೆಸಿಕೊಂಡು ಬಂದ ರಾವಣ ಅಂತ ಆಕೆ ತಿಳಿದರೆ ಏನು ಮಾಡುವುದು? ಅವಳಲ್ಲಿ ವಿಶ್ವಾಸ ಸಂಪಾದಿಸುವುದು ಹೇಗೆ? ಅವಳಲ್ಲಿ ಮಾತನಾಡಬೇಕಾದ ಭಾಷೆ ಯಾವುದು? ಹೀಗೆ ಅವನಿಗೆ ಅನೇಕ ಗೋಜಲುಗಳು ಕಾಣಿಸಿಕೊಳ್ಳುತ್ತವೆ. ಇಲ್ಲಿಯೇ ಅವನ ಬುದ್ಧಿವಂತಿಕೆಯಿರುವುದು.

ಹಾಗಾದರೆ ಏನು ಮಾಡಿದ? ಸೀತೆಗೆ ತನ್ನಲ್ಲಿ ನಂಬಿಕೆ ಹುಟ್ಟುವಂತೆ ಅವನು ರಾಮನ ಕಥೆಯನ್ನು ಸಂಕ್ಷಿಪ್ತವಾಗಿ ಹೇಳಿದ. ಸೀತೆಗೆ ನಂಬಿಕೆ ಹುಟ್ಟಿತು. ಮುಂದೆ ಅವನು ರಾಮನಾಮಾಂಕಿತ ಮುದ್ರೆಯುಂಗರವನ್ನು ಸೀತೆಗೆ ನೀಡಿದ್ದು, ಅವಳು ಚೂಡಾಮಣಿಯನ್ನು ನೀಡಿದ್ದು ಎಲ್ಲರಿಗೂ ಗೊತ್ತು. ಇವೆಲ್ಲ ಆದ ಮೇಲೆ ಅವನು ಏನು ಮಾಡಿದ ಅನ್ನುವುದು ಬಹಳ ಮುಖ್ಯ. ಅಶೋಕವನ ಧ್ವಂಸ, ರಾವಣನ ಕಿಂಕರರೆಂಬ ಎಂಭತ್ತು ಸಾವಿರ ರಕ್ಕಸರನ್ನು ಕೊಂದು ಹಾಕಿದ್ದು, ರಾವಣನ ಮುದ್ದು ಮಗ ಅಕ್ಷನೆಂಬವನನ್ನು ಕೊಂದು ಅವನ ಹೆಣದ ಗುರುತೂ ಸಿಗದಂತೆ ಉಂಡೆ ಮಾಡಿ ಎಸೆದಿದ್ದು, ರಾವಣನಿಗೆ ಉಪದೇಶ ಮಾಡಿದ್ದು ಇತ್ಯಾದಿ ಇತ್ಯಾದಿ.

ಇಲ್ಲಿ ಹನುಮಂತ ಯಾವುದನ್ನೂ ಅನುಚಿತವಾಗಿ ಮಾಡಿರಲಿಲ್ಲ. ರಾಮನ ಇಂಗಿತಕ್ಕೆ ತಕ್ಕಂತೆ ನಡೆದುಕೊಂಡಿದ್ದ.

ಕತಾರ್ ಟ್ಯಾಂಕರ್, ಕುವೈತ್ ವಿಮಾನ ನಿಲ್ದಾಣ ಮೇಲೆ ದಾಳಿ

ದುಬೈ: ಇರಾನ್ ಪಡೆಗಳು ಬುಧವಾರ ಮುಂಜಾನೆ ಕತಾರ್ ಸಮುದ್ರ ತೀರದಲ್ಲಿ ಟ್ಯಾಂಕರ್ ಮೇಲೆ ಬಾಂಬ್ ದಾಳಿ ನಡೆಸಿದ್ದು, ಅತ್ತ ಕುವೈತ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆಯೂ ಡ್ರೋನ್ ದಾಳಿ ಮಾಡಿವೆ. ಈ ಬೆಳವಣಿಗೆಯಿಂದಾಗಿ ಕೊಲ್ಲಿ ರಾಷ್ಟ್ರಗಳಲ್ಲಿ ಯುದ್ಧದ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ. ಕತಾರ್ ಕರಾವಳಿಯಲ್ಲಿ ನಡೆದ ದಾಳಿಯಲ್ಲಿ ಹಡಗಿನ ಸಿಬ್ಬಂದಿಗೆ ಯಾವುದೇ ಅಪಾಯವಾಗಿಲ್ಲ ಎಂದು ತಿಳಿದುಬಂದಿದೆ. ಆದರೆ, ಕುವೈತ್ ವಿಮಾನ ನಿಲ್ದಾಣದ ಇಂಧನ ಟ್ಯಾಂಕ್ ಮೇಲೆ ಡ್ರೋನ್ ಬಿದ್ದ ಪರಿಣಾಮ ಭಾರೀ ಬೆಂಕಿ ಕಾಣಿಸಿಕೊಂಡಿದೆ. ಬಹ್ರೈನ್ ದೇಶದ ವ್ಯಾಪಾರ ಕೇಂದ್ರವೊಂದರ ಮೇಲೆಯೂ ಕ್ಷಿಪಣಿ ದಾಳಿಯಾಗಿದ್ದು, ಅತ್ತ ಸೌದಿ ಅರೇಬಿಯಾ ತನ್ನತ್ತ ನುಗ್ಗಿ ಬಂದ ಎರಡು ಡ್ರೋನ್‌ಗಳನ್ನು ಹೊಡೆದುರುಳಿಸಿದೆ. ಇತ್ತ ಇಸ್ರೇಲ್ ಪಡೆಗಳು ಲೆಬನಾನ್ ರಾಜಧಾನಿ ಬೈರುತ್ ಮೇಲೆ ನಡೆಸಿದ ವೈಮಾನಿಕ ದಾಳಿಯಲ್ಲಿ ಐವರು ಮೃತಪಟ್ಟಿದ್ದು, 21 ಜನರು ಗಾಯಗೊಂಡಿದ್ದಾರೆ. ಇರಾನ್ ರಾಜಧಾನಿ ಟೆಹ್ರಾನ್‌ನಲ್ಲಿರುವ ತೋಫಿಗ್ ದಾರು ಕಾರ್ಖಾನೆಯ ಮೇಲೆ ದಾಳಿ ನಡೆದಿದ್ದು, ಅಲ್ಲಿ ರಾಸಾಯನಿಕ ಅಸ್ತ್ರ ತಯಾರಿಸಲಾಗುತ್ತಿತ್ತು ಎಂದು ಇಸ್ರೇಲ್ ಆರೋಪಿಸಿದೆ. ಆದರೆ ಇರಾನ್ ಮಾತ್ರ ಅದು ಕೇವಲ ಔಷಧಿ ತಯಾರಿಕಾ ಘಟಕ ಎಂದು ವಾದಿಸುತ್ತಿದೆ.



ರಾಜತಾಂತ್ರಿಕ ಬಿಕ್ಕಟ್ಟು: ಕದನ ವಿರಾಮದ ಕುರಿತು ಅಮೆರಿಕದ ಪ್ರತಿನಿಧಿ ಸ್ಟೀವ್ ವಿಟ್ಕೋಫ್ ನೇರ ಸಂಪರ್ಕದಲ್ಲಿದ್ದಾರೆ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಒಪ್ಪಿಕೊಂಡಿದ್ದಾರೆ. ಆದರೆ, ಯಾವುದೇ ಮಾತುಕತೆ ಇನ್ನೂ ನಡೆದಿಲ್ಲ ಮತ್ತು ನಮಗೆ ಅಮೆರಿಕದ ಮೇಲೆ ನಂಬಿಕೆಯೇ ಇಲ್ಲ ಎಂದು ಅವರು ಕಿಡಿಕಾರಿದ್ದಾರೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ಯುದ್ಧ ಎರಡು ವಾರಗಳಲ್ಲಿ ಮುಗಿಯಬಹುದು ಎಂದು ಹೇಳುತ್ತಿದ್ದರೂ, ಮತ್ತೊಂದೆಡೆ ಸಾವಿರಾರು ಸೈನಿಕರನ್ನು ಈ ಪ್ರದೇಶಕ್ಕೆ ಕಳುಹಿಸುತ್ತಿದ್ದಾರೆ. ಅಮೆರಿಕವು ಶಾಂತಿಗಾಗಿ 15 ಅಂಶಗಳ ಯೋಜನೆಯನ್ನು ಮುಂದಿಟ್ಟಿದ್ದರೆ, ಇರಾನ್ ತನ್ನದೇ ಆದ 5 ಅಂಶಗಳ ಬೇಡಿಕೆಯನ್ನು ಇಟ್ಟಿದೆ.



ಆರ್ಥಿಕ ಹೊಡೆತ: ಹಾರ್ಮುಜ್ ಜಲಸಂಧಿಯಲ್ಲಿ ಇರಾನ್ ಹಡಗುಗಳ ಸಂಚಾರವನ್ನು ತಡೆಹಿಡಿದಿರುವುದರಿಂದ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಭಾರೀ ಏರಿಕೆಯಾಗಿದೆ. ಪ್ರಸ್ತುತ ಒಂದು ಬ್ಯಾರೆಲ್ ತೈಲದ ಬೆಲೆ 104 ಡಾಲರ್ ದಾಟಿದ್ದು, ಇದು 2022ರ ನಂತರದ ಗರಿಷ್ಠ ಬೆಲೆಯಾಗಿದೆ. ಪ್ರಪಂಚದ ಶೇ.20ರಷ್ಟು ತೈಲ ಇದೇ ಮಾರ್ಗವಾಗಿ ಸಾಗುವುದರಿಂದ ಜಾಗತಿಕವಾಗಿ ಬೆಲೆ ಏರಿಕೆಯ ಭೀತಿ ಎದುರಾಗಿದೆ. ಈ ಜಲಮಾರ್ಗವನ್ನು ರಕ್ಷಿಸುವ ಜವಾಬ್ದಾರಿ ಅದನ್ನು ಬಳಸುವ ಫ್ರಾನ್ಸ್ ನಂತಹ ದೇಶಗಳ ಮೇಲಿದೆ, ಎಂದು ಟ್ರಂಪ್ ಹೇಳಿದ್ದಾರೆ.


ಸಾವುನೋವುಗಳ ವಿವರ: ಈ ಭೀಕರ ಸಂಘರ್ಷದಲ್ಲಿ ಈವರೆಗೆ 3,000ಕ್ಕೂ ಹೆಚ್ಚು ಜನರು ಪ್ರಾಣ ಕಳೆದುಕೊಂಡಿದ್ದಾರೆ. ಇರಾನ್‌ನಲ್ಲಿ 1,900, ಲೆಬನಾನ್‌ನಲ್ಲಿ 1,200 ಮತ್ತು ಇಸ್ರೇಲ್‌ನಲ್ಲಿ 19 ಜನರು ಮೃತಪಟ್ಟಿದ್ದಾರೆ ಎಂದು ವರದಿಗಳು ತಿಳಿಸಿವೆ. ಯುದ್ಧದಲ್ಲಿ 13 ಅಮೆರಿಕನ್ ಸೈನಿಕರು ಮೃತಪಟ್ಟಿದ್ದು, 348 ಮಂದಿ ಗಾಯಗೊಂಡಿದ್ದಾರೆ. ಲೆಬನಾನ್ ಮೇಲೆ ಇಸ್ರೇಲ್ ದಾಳಿ ಆರಂಭಿಸಿದ ನಂತರ ಅಲ್ಲಿ ಸುಮಾರು 10 ಲಕ್ಷಕ್ಕೂ ಹೆಚ್ಚು ಜನರು ಸೂರು ಕಳೆದುಕೊಂಡು ಬೀದಿಗೆ ಬಿದ್ದಿದ್ದಾರೆ. ಗಲ್ಫ್ ರಾಷ್ಟ್ರಗಳು ಮತ್ತು ವೆಸ್ಟ್ ಬ್ಯಾಂಕ್ ಭಾಗದಲ್ಲಿಯೂ ಸಾವುನೋವುಗಳು ಸಂಭವಿಸುತ್ತಲೇ ಇವೆ. ಈ ಎಲ್ಲಾ ಬೆಳವಣಿಗೆಗಳು ಜಗತ್ತನ್ನು ಆತಂಕಕ್ಕೆ ತಳ್ಳಿವೆ.

ಆತಂಕದ ಖರೀದಿ, ಪೂರೈಕೆ ಅಡಚಣೆಯಿಂದ ಇಂಧನ ಬಿಕ್ಕಟ್ಟು

ರೈತರು, ವಾಹನ ಹೊಂದಿರುವವರು, ಸಣ್ಣ ವ್ಯಾಪಾರಿಗಳು, ಕುಟುಂಬಗಳು ಅತ್ಯಂತ ಕಠಿಣ ಪರಿಸ್ಥಿತಿಯನ್ನು ಎದುರಿಸುವಂತಾಗಿದೆ.ವಾಸ್ತವ ಎಂದರೆ ಈ ಯುದ್ಧದಿಂದ ಆಗಿರುವ ಆರ್ಥಿಕ ಆಘಾತಗಳು ತಿಂಗಳುಗಳ ಕಾಲ ನಮ್ಮನ್ನು ಬಾಧಿಸಲಿವೆ .ಆಸ್ಟ್ರೇಲಿಯಾಕ್ಕೆ ಇಂಧನ ಹೊತ್ತ ನೌಕೆಗಳು ಬರುತ್ತಲೇ ಇವೆ. ಆದಾಗ್ಯೂ ಆತಂಕದ ಖರೀದಿಗಳು ಮತ್ತು ವಿತರಣಾ ಅಡಚಣೆಗಳಿಂದಾಗಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಪೆಟ್ರೋಲ್ ಮತ್ತು ತೈಲ ಉತ್ಪನ್ನಗಳ ಕೊರತೆ ಉಂಟಾಗಿದೆ ಎಂದು ಅವರು ವಿವರಿಸಿದರು. ಆಸ್ಟ್ರೇಲಿಯನ್ನರು ರೈಲುಗಳು, ಬಸ್ಸು ಅಥವಾ ಟ್ರಾಮ್(ವಿದ್ಯುತ್ ವಾಹನ)ಗಳ ಮೂಲಕ ಕೆಲಸದ ಸ್ಥಳಗಳಿಗೆ ಹೋದಲ್ಲಿ ಬಿಕ್ಕಟ್ಟನ್ನು ತಗ್ಗಿಸಲು ನೆರವಾಗಬಹುದು. ಇದರಿಂದ ದಾದಿಯರು, ಪಾಳಿಯ ಕೆಲಸಗಾರರು , ವ್ಯಾಪಾರಸ್ಥರು ಮತ್ತು ಗಣಿ ಕೆಲಸಗಾರರಿಗೆ ಅಗತ್ಯವಿರುವ ಇಂಧನಗಳನ್ನು ಉಳಿಸಲು ಸಾಧ್ಯವಾಗುತ್ತದೆ ಎಂದು ಅವರು ಜನತೆಗೆ ಕರೆ ನೀಡಿದರು.

- ತೈಲ ಪೂರೈಕೆ ಯಥಾಸ್ಥಿತಿ ಮರಳಲು ಆರು ವಾರಗಳಾದರೂ ಬೇಕು
- ಹಾನಿಗೊಳಗಾದ ತೈಲ ಮೂಲಸೌಕರ್ಯ ರಿಪೇರಿಗೆ 2 ವಾರ ಅಗತ್ಯ
- ಯುದ್ಧ ನಿಲ್ಲದಿದ್ದರೆ ತೈಲ ಪೂರೈಕೆಯಲ್ಲಿ ಅನಿಶ್ಚಿತತೆ ಏರಿಕೆ

2 ವಾರದಲ್ಲಿ ಯುದ್ಧ ನಿಂತರೆ?



ವಾಷಿಂಗ್ಟನ್: ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣ ತೆರೆಯಲು ಇರಾನ್ ಜತೆ ಯಾವುದೇ ಒಪ್ಪಂದವಾಗದಿದ್ದರೂ ಮುಂದಿನ ಎರಡು ವಾರಗಳೊಳಗೆ ಯುದ್ಧ ನಿಲ್ಲಬಹುದೆಂಬ ಸುಳಿವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ್ದಾರೆ. ಟ್ರಂಪ್ ಸೂಚನೆ ನೀಡಿದಂತೆ ಎರಡು ವಾರಗಳೊಳಗೆ ಯುದ್ಧ ನಿಂತರೆ, ತೈಲ ಪೂರೈಕೆ ಯಥಾಸ್ಥಿತಿಗೆ ಮರಳಲು ಆರು ವಾರಗಳ ಸಮಯ ಬೇಕಾಗುತ್ತದೆ ಎಂದು ವಾಣಿಜ್ಯ ವಿಶ್ಲೇಷಕರು ಲೆಕ್ಕಾಚಾರ ಹಾಕಿದ್ದಾರೆ.

ಇನ್ನುಳಿದಂತೆ, ಸದರಿ ಟೆಂಡರಿಗೆ ಸಂಬಂಧಿಸಿದ ಷರತ್ತು/ನಿಯಮಾವಳಿಗಳ ಮಾಹಿತಿಯನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ದಿನಾಂಕ : **31.03.2026** ರ ನಂತರ "https://kppp.karnataka.gov.in" ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಕಾಮಗಾರಿಗಳ ಟೆಂಡರ್‌ಗೆ ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ : **16.04.2026** ಎಂದು ಮತ್ತು ಟೆಂಡರ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ : **17.04.2026** ಎಂದು ನಿಗದಿಪಡಿಸಿದೆ. ಅದರಂತೆ, **Work Indent No : 4296** ಟೆಂಡರ್ ಕುರಿತು Pre-bid ಸಭೆಯನ್ನು ದಿನಾಂಕ : **08.04.2026** ರಂದು ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ-01 ಮುಂಡರಗಿ ಕಛೇರಿಯಲ್ಲಿ ನಿಗದಿಪಡಿಸಲಾಗಿರುತ್ತದೆ. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು **KPP-Procurement Helpdesk Phone No : 080-46010000, 080-68948777, 09240214000** & **09240214001** ಸಂಪರ್ಕಿಸಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆ ಶಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಸಿಂಗಟಾಲೂರು ಏತ ನೀರಾವರಿ ಯೋಜನೆ,
ನಂ. 1 ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಮುಂಡರಗಿ, ಗದಗ ಜಿಲ್ಲೆ.

ವಾಸಾಸಂಇ/ಗದಗ/ಕೆಎಸ್ಎಂಸಿಎ/01/2026-27

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಅಧೀನಕ್ಕೆ ಒಳಪಟ್ಟಿದೆ)

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೃಭಾಜನಿನಿ, ಐಬಿಸಿ, ನಿಮಪೋ ವಿಭಾಗ, ರಾಂಪೂರ (ಪ.ಅ). ದೂರವಾಣಿ ಸಂಖ್ಯೆ: 08488-224328,
ಇ-ಮೇಲ್:kbjnleerampur@gmail.com.

ಸಂಖ್ಯೆ:ಕೃಭಾಜನಿನಿ/ಐಬಿಸಿ/ನಿಮಪೋ/ವಿರಾಂ/ಪಿಬಿ-2/2025-26/3749 ದಿನಾಂಕ:31.03.2026

ಮರು-ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಪರವಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ, ರಾಂಪೂರ (ಪ.ಅ) ಇವರು 2025-26ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ 02 ಸಂಖ್ಯೆಯ ವಾರ್ಷಿಕ ಕಾಲೋನಿ ನಿರ್ವಹಣೆ ಕಾಮಗಾರಿಗಳ ಮೊತ್ತರೂ: 29.63 ಲಕ್ಷ ಮೊತ್ತದ ಶೇಕಡಾವಾರು ದರದ ಟೆಂಡರನ್ನು ಏಕಮಾತ್ರ ಲಕೋಟೆ ಪದ್ಧತಿಯ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ ಮೂಲಕ ವೆಬ್ ಸೈಟ್ https://kppp.karnataka.gov.in ಮಾಹಿತಿ ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು.

* ಕೆ.ಪಿ.ಪಿ.ಪಿ.ಪೋರ್ಟಲ್ https://kppp.karnataka.gov.in ವೆಬ್‌ಸೈಟ್ ನಿಂದ ಖಾಲಿ ಟೆಂಡರ್ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು ಮತ್ತು ಭರ್ತಿ ಮಾಡಿದ ಬಿಡ್ ದಾಖಲೆಗಳನ್ನು ಸಲ್ಲಿಸುವ **ದಿನಾಂಕ: 31.03.2026 ರಿಂದ 09.04.2026** ರ ಸಾಯಂಕಾಲ 5.30 ಗಂಟೆಯವರೆಗೆ ಸಲ್ಲಿಸುವುದು.
* ಗುತ್ತಿಗೆದಾರರು **ದಿನಾಂಕ: 31.03.2026 ರಿಂದ 09.04.2026** ಸಾಯಂಕಾಲ 5.30 ಗಂಟೆಯವರೆಗೆ ಇ-ಟೆಂಡರ ಪುಸ್ತಕವನ್ನು Access ಮಾಡಬಹುದು.
* ಭರ್ತಿಗೊಳಿಸಿದ ಇ-ಟೆಂಡರ ಪುಸ್ತಕವನ್ನು **ದಿನಾಂಕ: 31.03.2026 ರಿಂದ 09.04.2026** ರ ಸಾಯಂಕಾಲ 5.30 ಗಂಟೆಯವರೆಗೆ ಸಲ್ಲಿಸುವದು.
* ಏಕಮಾತ್ರ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ನಿಮಪೋ ವಿಭಾಗ ರಾಂಪೂರ (ಪಿಎ) ತಾ: ಸಿಂದಗಿ ಜಿಲ್ಲೆ: ವಿಜಯಪೂರ ಕಛೇರಿಯಲ್ಲಿ ದಿನಾಂಕ: **13.04.2026** ರ ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು.
* ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ ರಾಂಪೂರ (ಪ.ಅ) ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ https://eproc.karnataka.gov.in ವೆಬ್‌ಸೈಟ್ ನಿಂದ ಪಡೆಯಬಹುದು.
* ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವುದು.
* ಯಾವುದೇ ಕಾರಣ ನೀಡದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ಹೊಂದಿರುತ್ತಾರೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ನಿಮಪೋ ಐಬಿಸಿ ವಿಭಾಗ, ರಾಂಪೂರ (ಪ.ಅ)

ವಾಸಾಸಂಇ/ವಿಜಯಪುರ/850/ಕೆಎಸ್ಎಂಸಿಎ/2025-26

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ ,ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ, ಕೋಲಾರ – 563101.

e-mail : eepwdkolar07@gmail.com, website: www.kpwd.gov.in, ದೂರವಾಣಿ ಸಂಖ್ಯೆ: 08152-222022

ಇ-ಟೆಂಡರ್ ಪ್ರಕಟಣೆ- ಕೆಡಬ್ಲ್ಯು - 1 &4 ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ- 38/2025-26 ದಿನಾಂಕ: 31.03.2026

ಕೋಲಾರ ಜಿಲ್ಲೆ ಲೋಕೋಪಯೋಗಿ ಇಲಾಖೆ ಬಂಗಾರಪೇಟೆ, ಕೆ.ಜಿ.ಎಫ್ ತಾಲ್ಲೂಕು ವ್ಯಾಪ್ತಿಯಲ್ಲಿ **ಲೆಕ್ಕಶೀರ್ಷಿಕೆ: 4059-80-051-0-60-422 ಎಸ್.ಸಿ.ಪಿ. ಮುಖ್ಯ ಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು 5054-ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ** ಅಡಿಯಲ್ಲಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಅಂದಾಜು ಮೊತ್ತ: ಕನಿಷ್ಠ ರೂ.10.00 ಲಕ್ಷ ಮತ್ತು ಗರಿಷ್ಠ: 300.00 ಲಕ್ಷ **ಇ.ಎಂ.ಡಿ ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್ ನಲ್ಲಿ ನಮೂದಿಸಿರುತ್ತಾರೆ, ಕೆಡಬ್ಲ್ಯು-1&4 ರ ಕಾಮಗಾರಿಗೆ ಅರ್ಹ ನೊಂದಾಯಿತ** ಸಿವಿಲ್ **ಗುತ್ತಿಗೆದಾರರಿಗೆ** ಏಕ ಲಕೋಟೆ ಮತ್ತು ದ್ವಿ ಲಕೋಟೆ ಪದ್ಧತಿಯಲ್ಲಿ ಕೆಪಿಪಿಪಿ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು **ಕೆಡಬ್ಲ್ಯು-1&4** ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಕೆಪಿಪಿ ಪೋರ್ಟಲ್ **(Viz., http://kppp.karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ನಿಗದಿತ ದಿನಾಂಕಗಳ ವಿವರ	(ಕ್ರಮ ಸಂಖ್ಯೆ 10 ರ ಕಾಮಗಾರಿಗೆ) ದ್ವಿ ಲಕೋಟೆ ಪದ್ಧತಿ	(ಕ್ರಮಸಂಖ್ಯೆ 1 ರಿಂದ 9ರ ಕಾಮಗಾರಿಗಳಿಗೆ) ಏಕ ಲಕೋಟೆ ಪದ್ಧತಿ
1. ವಿಚಾರಣೆಗೆ ಕೊನೆಯ ದಿನಾಂಕ:	ದಿನಾಂಕಃ 07.04.2026 ರಂದು 17.30 ಗಂಟೆ ವರೆಗೆ	ದಿನಾಂಕಃ 07.04.2026 ರಂದು 17.30 ಗಂಟೆ ವರೆಗೆ
2. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ (ಆನ್‌ಲೈನ್ ಮೂಲಕ)	ದಿನಾಂಕಃ 08.04.2026 ರಂದು 16.00 ಗಂಟೆ ವರೆಗೆ	ದಿನಾಂಕಃ 08.04.2026 ರಂದು 16.00 ಗಂಟೆ ವರೆಗೆ
3. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕಃ	ದಿನಾಂಕಃ 09.04.2026 ರಂದು 16.30 ಗಂಟೆಯ ನಂತರ	-
4. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕಃ	ದಿನಾಂಕಃ 15.04.2026 ರಂದು 11.00 ಗಂಟೆಯ ನಂತರ	ದಿನಾಂಕಃ 09.04.2026 ರಂದು 16.30 ಗಂಟೆಯ ನಂತರ

ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕೆಪಿಪಿಪಿ ಪೋರ್ಟಲ್‌ನಲ್ಲಿ **(http://kppp.karnataka.gov.in)** ನಲ್ಲಿ ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು **ವಿಶೇಷ ಸೂಚನೆ:** ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋ.ಇ. ಕೋಲಾರ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:03/ಕೆಎಸ್ಎಂಸಿಎ/2026-27

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.1, ಸಕಲೇಶಪುರ, ಹಾಸನ ಜಿಲ್ಲೆ. ದೂರವಾಣಿ ಸಂಖ್ಯೆ:08173-244454
ನೋಂದಾಯಿತಕಛೇರಿ ವಿಳಾಸ: ನಂ.148, ಎಂಬೆಸಿ ಸ್ಕ್ವೇರ್, ಇನ್‌ಫೇಂಟ್ರಿ ರೋಡ್, ಬೆಂಗಳೂರು-560001
ಪೊ: 080-22289966/22256688, ಫ್ಯಾಕ್ಸ್: 080-22264477 ಇ-ಮೇಲ್: **mdvjnl@gmail.com**
ವೆಬ್‌ಸೈಟ್: **www.vjnl.in CIN No: U41000KA2016SGC097260**

ಸಂ:ಕಾಇಂ/ವಿಜನಿನಿ/ಎಯೋವಿ.1/ಸ/ಟೆಂಡರ್ ಪ್ರಕಟಣೆ/ TND-10/2025-26 ದಿನಾಂಕ:- 01/04/20266.02

ಶೇಕಡಾವಾರು ಟೆಂಡರ್ ಪ್ರಕಟಣೆ ಸಂಖ್ಯೆ : VJNL/EE/D1/SKP/FOREST/TND-10/2025-26/2024 Dated:- 25.03.2026 (Two Tender Document System) (ಕೆ.ಪಿ.ಪಿ.ಪಿ ಪೋರ್ಟಲ್ ಪದ್ಧತಿ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗದಡಿಯಲ್ಲಿ 01 ಕಾಮಗಾರಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ ರೂ. 15.00 ಲಕ್ಷಗಳು (ಜಿ.ಎಸ್.ಟಿ. ಮೊತ್ತ ಹೊರತುಪಡಿಸಿ) ಇರುತ್ತದೆ. ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಹಾಗೂ ಟೆಂಡರ್‌ಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತಿರುತ್ತದೆ

ಕ್ರ.ಸಂ	ಟೆಂಡರ್ ಕಾಮಗಾರಿ ಕ್ರ.ಸಂ.	ಟೆಂಡರ್ ದಸ್ತಾವೇಜುಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ	ಭರ್ತಿ ಮಾಡಿದ ಟೆಂಡರ್ ದಸ್ತಾವೇಜುಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ ಬಿಡ್ (ಲಕೋಟೆ-I) ತೆರೆಯುವ ದಿನಾಂಕ
1	01	02.04.2026 ರಿಂದ 15.04.2026 ಸಂಜೆ 5.30 ರ ವರೆಗೆ	15.04.2026 ಸಂಜೆ 5.30 ರ ವರೆಗೆ	ದಿನಾಂಕ: 17.04.2026 ರವರೆಗೆ ಬೆಳಿಗ್ಗೆ 11.00 ಗಂಟೆಗೆ

ತಾಂತ್ರಿಕ ಬಿಡ್‌ನ್ನು ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.1, ಸಕಲೇಶಪುರ ಇಲ್ಲಿ ತೆರೆಯಲಾಗುವುದು ಮತ್ತು ತಾಂತ್ರಿಕ ಬಿಡ್‌ಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಂಡ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಸದರಿ ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ/ಪೂರ್ವಾರ್ಹತ ಷರತ್ತುಗಳು/ಇ.ಎಂ.ಡಿ ಮೊತ್ತ/ಬಿಡ್ಡುದಾರರ ಅರ್ಹತೆ/ಟೆಂಡರ್ ನಿಭಂಧನೆಗಳು/ಪೂರ್ವ ಬಿಡ್ ಸಭೆಯ ವಿವರಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್‌ಗಳನ್ನು ಒಪ್ಪಿಕೊಳ್ಳುವ ಹಾಗೂ ಯಾವುದೇ ಕಾರಣ ನೀಡದೆ ಎಲ್ಲಾ ಅಥವಾ ಯಾವುದೇ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಸಕ್ಷಮ ಪ್ರಾಧಿಕಾರವು ಹೊಂದಿರುತ್ತದೆ ಹಾಗೂ ಕಡಿಮೆ ಮೊತ್ತದ ಟೆಂಡರ್ ಸ್ವೀಕರಿಸಲು ಬದ್ಧವಾಗಿರುವುದಿಲ್ಲ. ಯಾವುದೇ ಮಾರ್ಪಾಡುಗಳು ಅಥವಾ ತಿದ್ದುಪಡಿಗಳನ್ನು, ಕೆ.ಪಿ.ಪಿ.ಪಿ. ಪೋರ್ಟಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ಸಮಯದಲ್ಲಿ ಈ ಕೆಳ ಸಹಿದಾರರಿಂದ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ, https://kppp.karnataka.gov.in/#/portal/portal-home ರಲ್ಲಿ ಪಡೆಯಬಹುದಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ
ಯೋಜನಾ ವಿಭಾಗ, ನಂ.1 ಸಕಲೇಶಪುರ.

ವಾಸಾಸಂಇ/ಹಿಸನಿ/ಹಾಸನ/04/ಕೆಎಸ್ಎಂಸಿಎ/2026-27

ಸಾರಸ್ವತ್ ಬ್ಯಾಂಕ್
ಸಾರಸ್ವತ್ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ವಸೂಲಾತಿ ವಿಭಾಗ: ವಲಯ ಕಚೇರಿ ಕೊಲ್ಹಾಪುರ,
2127-ಸಿ, ಸಿ ವಾರ್ಡ್, ಭಹುಸಿಂಗ್‌ಜೀ ರಸ್ತೆ, ಕೊಲ್ಹಾಪುರ- 416002
ಫೋನ್ ನಂ. +91 231 2644542, 2644478

ಇ-ಹರಾಜು ಮಾರಾಟ ನೋಟಿಸ್

(ವೆಬ್‌ಸೈಟ್: https://sargaesi.auctiontiger.net ಮೂಲಕ ಮಾತ್ರವೇ ಹರಾಜು ಮಾರಾಟ/ಬಿಡ್ಡಿಂಗ್ ನಡೆಸಲಾಗುತ್ತದೆ)

ಸೆಕ್ಯುರಿಟೈಸೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ-2002 ಅನ್ವಯ ಬ್ಯಾಂಕಿಗೆ ಚಾರ್ಜ್ ಮಾಡಲಾದ ಸ್ಥಿರಸ್ತಿಗಳ ಮಾರಾಟ

ಸೆಕ್ಷನ್ 13(2)ರ ಅಡಿಯಲ್ಲಿ ನೀಡಲಾದ ಡಿಮ್ಯಾಂಡ್ ನೋಟಿಸ್‌ಗೆ ಅನುಸಾರ, ಈ ಕೆಳಗೆ ಸಹಿ ಮಾಡಿದ **ಸಾರಸ್ವತ್ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್**‌ನ ಅಧಿಕೃತ ಅಧಿಕಾರಿಯು ಈ ಕೆಳಗಿನ ಆಸ್ತಿಗಳನ್ನು ಸರ್ಫೇಸಿ ಕಾಯ್ದೆಯ ಸೆಕ್ಷನ್ **13(4)**ರ ಅನ್ವಯ **ಸ್ವಾಧೀನಕ್ಕೆ** ಪಡೆದಿರುತ್ತಾರೆ. ಸಾರ್ವಜನಿಕರಿಗೆ ವಿಸ್ತೃತವಾಗಿ ಮಾಹಿತಿ ನೀಡುವುದೇನೆಂದರೆ ಬ್ಯಾಂಕಿಗೆ ಬಾಕಿ ಇರುವ ಬಾಕಿ ಮೊತ್ತವನ್ನು ವಸೂಲಿ ಮಾಡಿಕೊಳ್ಳುವ ಸಲುವಾಗಿ ಈ ಕೆಳಗೆ ಹೆಸರಿಸಿದ ಪ್ರಕರಣಗಲ್ಲಿ ಚಾರ್ಜ್ ಮಾಡಲಾದ ಆಸ್ತಿಗಳನ್ನು **"ಎಲ್ಲಿದೆಯೋ ಅದು ಆಧಾರದಲ್ಲಿ" "ಏನಿದೆಯೋ ಅದು ಆಧಾರದಲಿ"** ಮತ್ತು **"ಮರುವಾಪಸ್ಸಾತಿ"** ಇಲ್ಲದ ಆಧಾರದಲ್ಲಿ ಈ ಕೆಳಗೆ ನಿರ್ದಿಷ್ಟಪಡಿಸಿದಂತೆ ಇ-ಹರಾಜು (ಸರ್ಫೇಸಿ ಕಾಯ್ದೆ-2002ರ ಅಡಿಯಲ್ಲಿ) ಮಾಡಲಾಗುತ್ತದೆ.

ಕ್ರ. ಸಂ.	ಸಾಲಗಾರರು, ಸಹ ಸಾಲಗಾರರು/ ಜಾಮೀನುದಾರರು/ ಅಡಮಾನದಾರರು, ಉತ್ತರಾಧಿಕಾರಿಗಳ (ಅನ್ವಯವಾಗುವುದಾದಲ್ಲಿ) ಹೆಸರು	ಎ. ಡಿಮ್ಯಾಂಡ್ ನೋಟಿಸ್ ದಿನಾಂಕ ಬಿ. ಸ್ವಾಧೀನ ವಿಧ/ ದಿನಾಂಕ ಸಿ. ಡಿಮ್ಯಾಂಡ್‌ಮೊತ್ತ	ಆಸ್ತಿಯ ವಿವರಣೆ	1. ಮೀಸಲು ಬೆಲೆ 2. ಇಎಂಡಿ 3. ಬಿಡ್ ಏರಿಕೆ ಮೊತ್ತ ತಪಾಸಣೆಯ ದಿನಾಂಕ/ ಸಮಯ ಇಎಂಡಿ & ಕೆವೈಸಿ ಸಲ್ಲಿಕೆಗೆ ಕೊನೆಯ ದಿನಾಂಕ/ ಸಮಯ ಇ-ಹರಾಜು ದಿನಾಂಕ/ ಸಮಯ
1)	ಸಾಲಗಾರ/ಅಡಮಾನದಾರರು **ಶ್ರೀಮತಿ ಗೀತಾ ಹನುಮಂತಪ್ಪ ದೊಡ್ಡಮನಿ** ಸಹ ಸಾಲಗಾರರು/ ಅಡಮಾನದಾರರು **1. ಭೂಷಣ್ ಫೈರಪ್ಪ ವಾಲ್ಮೀಕಿ**	ಎ. **03.10.2024** ಬಿ. ಭೌತಿಕ/ **17.07.2025** ಸಿ. **03.10.2024**ಕ್ಕೆ ಇದ್ದಂತೆ ರೂ. **35,47,016.46** ಮತ್ತು ಆ ಬಳಿಕದ ಬಡ್ಡಿ	**ಎನ್‌ಎ ಭೂಮಿ/ ಪ್ಲಾಟ್ ಎನ್‌ಎನ್** ಪ್ಲಾಟ್ ನಂ. 1/ಎ/2ಎ/1ಎ (ವಿಸ್ತೀರ್ಣ ಒಟ್ಟು 17364 ಚದರ ಅಡಿಯ ಪೈಕಿ ಸುಮಾರು 3427 ಚದರ ಅಡಿ ಸ್ಥಿರಾಸ್ತಿಯ ಎಲ್ಲ ತುಂಡು ಮತ್ತು ತುಣುಕುಗಳು. ಇದರಲ್ಲಿ ವಸತಿ ಕಟ್ಟಡ ಮತ್ತು ಮುಕ್ತ ಸ್ಥಳ ಇದೆ. ವಿಳಾಸ: **ಅತ್ತಿಕೊಳ್ಳ, ಧಾರವಾಡ, ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆ. ಇದರ ಒಡೆತನವನ್ನು ಶ್ರೀಮತಿ ಗೀತಾ ಹನುಮಂತಪ್ಪ ದೊಡ್ಡಮನಿ ಮತ್ತು ಶ್ರೀ ಭೂಷಣ್ ಫೈರಪ್ಪ ವಾಲ್ಮೀಕಿ ಹೊಂದಿದ್ದಾರೆ.**	ರೂ. 64.35 ಲಕ್ಷ ರೂ. 6.45 ಲಕ್ಷ ** ರೂ. 0.50 ಲಕ್ಷ 10.04.2026 ಮಧ್ಯಾಹ್ನ 2.00 ರಿಂದ ಸಂಜೆ 4.00 02.05.2026 ಸಂಜೆ 5.00 ಗಂಟೆವರೆಗೆ 05.05.2026 ಮಧ್ಯಾಹ್ನ 2.00 ರಿಂದ ಸಂಜೆ 4.00

*** ಪಾವತಿ ಮಾಡುವ ಮತ್ತು/ ಅಥವಾ ವಸೂಲಾತಿಯಾಗುವ ದಿನಾಂಕದವರೆಗೆ ಅನ್ವಯವಾಗುವ ಮುಂದಿನ ಬಡ್ಡಿ, ಸಾಂಧರ್ಬಿಕ ವೆಚ್ಚಗಳು, ಖರ್ಚುಗಳು, ಚಾರ್ಜ್‌ಗಳು ಇತ್ಯಾದಿ.**
**** ಯಶಸ್ವಿ ಬಿಡ್ಡರ್‌ಗಳು ಅಂತಿಮ ಬಿಡ್ ಮೊತ್ತದ ಶೇಕಡ 25ನ್ನು ಮುಂದಿನ ಕೆಲಸದ ದಿನಗಳ ಒಳಗಾಗಿ ಪಾವತಿಸಬೇಕಾಗುತ್ತದೆ.**


ಹರಾಜನ್ನು ಬ್ಯಾಂಕಿನ ಅನುಮೋದಿತ ಸೇವಾ ಪೂರೈಕೆದಾರರಾದ **ಮೆಸರ್ಸ್ ಇ-ಪ್ರೊಕ್ಯೂರ್‌ಮೆಂಟ್ ಟೆಕ್ನಾಲಜೀಸ್ ಲಿಮಿಟೆಡ್ (ಆಕ್ಷನ್ ಟೈಗರ್)** ಮೂಲಕ ನಡೆಸಲಾಗುತ್ತದೆ. ಬಿಡ್ ಫಾರ್ಮ್, ಮೇಲೆ ಹೇಳಿದ ಮಾರಾಟ/ಹರಾಜಿನ ಷರತ್ತು ಮತ್ತು ನಿಬಂಧನೆಗಳು, ಬಿಡ್/ಆಫರ್ ಸಲ್ಲಿಸುವ ವಿಧಿವಿಧಾನಗಳು ಅವರ ವೆಬ್‌ಸೈಟ್:**https://sarfaesi.auctiontiger.net** ನಲ್ಲಿ ಲಭ್ಯವಿರುತ್ತದೆ.

ಸರ್ಫೇಸಿ ಕಾಯ್ದೆ-2002ರ ನಿಯಮ 8(6) ಅನ್ವಯ ಶಾಸನಬದ್ಧ ನೋಟಿಸ್

ಈ ನೋಟಿಸನ್ನು ಮೇಲೆ ಹೇಳಿದ ಮಾರಾಟ ದಿನಾಂಕದ ಮೊದಲು ಸಂಪೂರ್ಣವಾಗಿ ಪಾವತಿಸುವಂತೆ ಸಾಲ ಖಾತೆಯ ಸಾಲಗಾರರು/ ಅಡಮಾನದಾರರು & ಜಾಮೀನುದಾರರಿಗೆ ನೀಡಲಾದ ನೋಟಿಸ್ ಎಂದೂ ಪರಿಗಣಿಸಬೇಕು. ತಪ್ಪಿದಲ್ಲಿ ಆಸ್ತಿಯನ್ನು ಮೇಲೆ ಹೇಳಿದ ದಿನಾಂಕದಂದು ಹರಾಜು ಮಾರಾಟ ಮಾಡಲಾಗುತ್ತದೆ.

ದಿನಾಂಕ: 02.04.2026
ಸ್ಥಳ: ಹುಬ್ಬಳ್ಳಿ

ಅಧಿಕೃತ ಅಧಿಕಾರಿ
ಸಾರಸ್ವತ್ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್



ಕಿರುಸುದ್ದಿ

ಜಿಂಬಾಬ್ವೆ ಸರಣಿಗೆ ವೇಳಾಪಟ್ಟಿ ಪ್ರಕಟ

ಮುಂಬೈ: ಇಂಡಿಯನ್ ಪ್ರೀಮಿಯರ್ ಲೀಗ್ ಮುಕ್ತಾಯಗೊಂಡ ನಂತರ ನಡೆಯಲಿರುವ ಭಾರತ ಹಾಗೂ ಜಿಂಬಾಬ್ವೆ ನಡುವಿನ ಟಿ20 ಸರಣಿಗೆ ವೇಳಾಪಟ್ಟಿ ಪ್ರಕಟಿಸಲಾಗಿದೆ. ವಿಶ್ವಚಾಂಪಿಯನ್‌ಗಳಾದ ಭಾರತ ತಂಡವು ಜುಲೈನಲ್ಲಿ ಜಿಂಬಾಬ್ವೆ ಪ್ರವಾಸ ಮಾಡುವ ಬಗ್ಗೆ ಈ ಹಿಂದೆ ಬಿಸಿಸಿಐ ಅಧಿಕೃತವಾಗಿ ಹೇಳಿತ್ತು. 2024ರಲ್ಲಿ ವಿಶ್ವಕಪ್ ಗೆದ್ದ ನಂತರವೂ ಭಾರತ ಜಿಂಬಾಬ್ವೆ ವಿರುದ್ಧವೇ ಸರಣಿಯನ್ನಾಡಿತ್ತು. ಇದೀಗ ಪಂದ್ಯಗಳ ಮಾಹಿತಿ ಬಿಸಿಸಿಐ ಪ್ರಕಟಿಸಿದ್ದು, ನಾಲ್ಕೇ ದಿನಗಳಲ್ಲಿ ಸರಣಿ ಮುಕ್ತಾಯಗೊಳ್ಳಲಿದೆ. ಎಲ್ಲಾ ಮೂರು ಪಂದ್ಯಗಳು ಹರಾರೆಯಲ್ಲಿ ನಡೆಯಲಿವೆ.

ಸರಣಿ ವೇಳಾಪಟ್ಟಿ

ಮೊದಲ ಪಂದ್ಯ ಜುಲೈ 23	ಹರಾರೆ
ಎರಡನೇ ಪಂದ್ಯ ಜುಲೈ 25	ಹರಾರೆ
ಮೂರನೇ ಪಂದ್ಯ ಜುಲೈ 26	ಹರಾರೆ

ಶ್ರೇಯಸ್ ಅಯ್ಯರ್‌ಗೆ ದಂಡ

ಮುಂಬೈ: ಪಂಜಾಬ್ ಕಿಂಗ್ಸ್ ತಂಡದ ನಾಯಕ ಶ್ರೇಯಸ್ ಅಯ್ಯರ್‌ಗೆ ಬಿಸಿಸಿಐ 12 ಲಕ್ಷ ರೂ. ದಂಡ ವಿಧಿಸಿದೆ. ಮಂಗಳವಾರ ನಡೆದ ಪಂಜಾಬ್ ಹಾಗೂ ಗುಜರಾತ್ ನಡುವಿನ ಪಂದ್ಯದಲ್ಲಿ ಗೆದ್ದ ನಂತರ ಕ್ರಮ ಕೈಗೊಳ್ಳಲಾಗಿದೆ. ನಿಧಾನಗತಿ ಓವರ್ ಮಾಡಿಸುವುದು ಐಪಿಎಲ್ ಮಾನದಂಡದಲ್ಲಿ ತಪ್ಪಾಗಿದ್ದು ನಾಯಕನಿಗೆ ದಂಡವೂ ವಿಧಿಸಲಾಗುತ್ತದೆ. ಮೊದಲನೇ ಪಂದ್ಯದಲ್ಲಿ 12 ಲಕ್ಷ ರೂ. ದಂಡ ವಿಧಿಸಲಾಗಿದೆ. ಇನ್ನೂ ಎರಡು ಪಂದ್ಯಗಳಲ್ಲಿ ಹೀಗೆ ಆದರೆ ಶ್ರೇಯಸ್ ಅಯ್ಯರ್ ಒಂದು ಪಂದ್ಯದಿಂದ ಹೊರಗೆ ಉಳಿಯಲೂ ಬಹುದು. ಕನಿಷ್ಠ ಓವರ್-ರೇಟ್ ಅಪರಾಧಗಳಿಗೆ ಸಂಬಂಧಿಸಿದ ಐಪಿಎಲ್ ನೀತಿ ಸಂಹಿತೆಯ ಆರ್ಟಿಕಲ್ 2.22 ರ ಅಡಿಯಲ್ಲಿ ಇದು ಅವರ ತಂಡದ ಮೊದಲ ಅಪರಾಧವಾಗಿರುವುದರಿಂದ, ಅಯ್ಯರ್ ಅವರಿಗೆ 12 ಲಕ್ಷ ರೂಪಾಯಿ ದಂಡ ವಿಧಿಸಲಾಗಿದೆ ಎಂದು ಬಿಸಿಸಿಐ ಮಾಧ್ಯಮ ಪ್ರಕಟಣೆ ತಿಳಿಸಿದೆ.

ಬಾಸ್ಕೆಟ್‌ಬಾಲ್: ಏಷ್ಯಾಕಪ್ ಅರ್ಹತಾ ಸುತ್ತಿಗೆ ಭಾರತ

ಹೊಸದಿಲ್ಲಿ: ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಮೊದಲನೇ ಸ್ಥಾನದಲ್ಲಿರುವ ಭಾರತ ಬಾಸ್ಕೆಟ್‌ಬಾಲ್ ತಂಡವು 3-3 ಫಿಬಾ ಏಷ್ಯಾಕಪ್ ಮುಖ್ಯ ಡ್ರಾಗೆ ಅರ್ಹತೆ ಪಡೆದುಕೊಂಡಿದೆ. ಅರ್ಹತಾ ಮಾನದಂಡಗಳಲ್ಲಿ ಬರುವ ಪ್ರಮುಖ ಸುತ್ತು ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಭಾರತ ತಂಡವು ಬುಧವಾರದ ಪಂದ್ಯದ ನಂತರ ಮೊದಲನೇ ಸ್ಥಾನದಲ್ಲೇ ಅರ್ಹತಾ ಸುತ್ತಿನ ಪಂದ್ಯಗಳನ್ನು ಮುಕ್ತಾಯಗೊಳಿಸಿತು. ಪಂದ್ಯಾವಳಿಯ ಮುಖ್ಯ ಡ್ರಾದಲ್ಲಿ ಭಾರತ ಸತತ ಎರಡನೇ ಬಾರಿ ಲಗ್ಗೆ ಹಾಕಿದೆ. ಪ್ರಣವ್, ಹರ್ಷ್, ಅರ್ವಿಂದ, ಕುಶಾಲ್ ಸಿಂಗ್ ಅವರಿದ್ದ ತಂಡವು ಪಂದ್ಯಾವಳಿಯಲ್ಲಿ ಡಿ ಗುಂಪಿನಲ್ಲಿತ್ತು. ಕಜಾಕಿಸ್ತಾನ, ಹಾಂಗ್‌ಕಾಂಗ್ ಹಾಗೂ ಬಹ್ರೇನ್ ತಂಡಗಳನ್ನು ಸೋಲಿಸಿತು. ಮೊದಲಿಗೆ ಕಜಾಕಿಸ್ಥಾನದೊಂದಿಗೆ 20-18 ಅಂಕಗಳಿಂದ, ಹಾಂಗ್ ಕಾಂಗ್ ತಮಡವನ್ನು 19-18ರಿಂದ ಮತ್ತು ಬಹ್ರೇನ್ ತಂಡವನ್ನು 21-12ರಿಂದ ಸೋಲಿಸಿ ಗೆದ್ದಿದೆ.

ತಾರತಮ್ಯ ವಿರೋಧಿ ಕಾಯ್ದೆ ಮುಂದುವರಿಕೆ

ಮುಂಬೈ: ತಾರತಮ್ಯ ವಿರೋಧಿ ಕೋಡ್ ಈಗ ಐಪಿಎಲ್ ಮುಗಿದ ನಂತರವೂ ಆಟಗಾರರು, ಅಧಿಕಾರಿಗಳು ಮತ್ತು ಸಂಬಂಧಿತ ಎಲ್ಲಾ ಹಿತಾಸಕ್ತಿಪಕ್ಷಗಳಿಗೆ ಅನ್ವಯವಾಗುತ್ತದೆ ಎಂದು ಬಿಸಿಸಿಐ ಬುಧವಾರ ಸ್ಪಷ್ಟಪಡಿಸಿದೆ. ಫ್ರಾಂಚೈಸಿಗಳಿಗೆ ಇತ್ತೀಚೆಗೆ ಹಂಚಿದ 11 ಪುಟಗಳ ದಸ್ತಾವೇಜಿನ ಪ್ರಕಾರ, ಆಟಗಾರರು ಹಾಗೂ ತಂಡದ ಅಧಿಕಾರಿಗಳು ತಮ್ಮ ಒಪ್ಪಂದ ಮುಗಿದ ನಂತರವೂ ಮೂರು ತಿಂಗಳುಗಳ ಕಾಲ ಈ ನಿಯಮಕ್ಕೆ ಒಳಪಟ್ಟಿರುತ್ತಾರೆ. ಈ ಅವಧಿಯಯಾವುದೇ ಉಲ್ಲಂಘನೆಗಳ ಮೇಲೆ ಬಿಸಿಸಿಐಗೆ ಕ್ರಮ ಕೈಗೊಳ್ಳುವ ಅಧಿಕಾರ ಮುಂದುವರಿಯುತ್ತದೆ. ಮುಖ್ಯ ಉದ್ದೇಶ ಐಪಿಎಲ್‌ನ ಪ್ರತಿಷ್ಠೆ ಕಾಪಾಡುವುದು. ಜಾತಿ ಅಥವಾ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡುವ ವರ್ತನೆ ತಡೆಯಲು ಇದು ಪರಿಣಾಮಕಾರಿಯಾಗಿದೆ.

ರಿಜ್ವಿ ಮಿಂಚಿನ ಆಟ | ಎನ್‌ಗಿಡಿ, ನಟರಾಜನ್ ಮಾರಕ ದಾಳಿ

ದಿಲ್ಲಿ ವೇಗಕ್ಕೆ ಲಖನೌ ತತ್ತರ

ಲಖನೌ: ಸಮೀರ್ ರಿಜ್ವಿ ಹಾಗೂ ಸ್ಟಬ್ಸ್ ಅವರ ತಾಳ್ಮೆಯಾಟದಿಂದಾಗಿ ಲಖನೌ ತಂಡವನ್ನು 6 ವಿಕೆಟ್‌ಗಳಿಂದ ಸೋಲಿಸಿದ ದಿಲ್ಲಿ ಕ್ಯಾಪಿಟಲ್ಸ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಆರಂಭಿಕ ಪಂದ್ಯದಲ್ಲಿ ಗೆಲುವು ಸಾಧಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಲಖನೌ ಮೊದಲಿಗೆ ಬ್ಯಾಟಿಂಗ್‌ನಲ್ಲಿ ವೈಫಲ್ಯ ಎದುರಿಸಿದರೆ, ಉಳಿಸಿಕೊಳ್ಳುವ ಸಮಯದಲ್ಲಿ ಬೌಲಿಂಗ್‌ನಲ್ಲೂ ಹಿನ್ನಡೆ ಅನುಭವಿಸಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಲಖನೌ, ಎನ್‌ಗಿಡಿ (3), ನಟರಾಜನ್(3) ಅವರ ಮಾರಕ ಬೌಲಿಂಗ್ ದಾಳಿಯಿಗೆ ತತ್ತರಿಸಿ 18.4 ಓವರ್‌ಗಳಲ್ಲಿ 141 ರನ್ ಗಳಿಸಿ ಆಲೌಟ್ ಆಯಿತು. ಗುರಿ ಬೆನ್ನತ್ತಿದ ದಿಲ್ಲಿ 17.1 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 145 ರನ್ ಗಳಿಸಿ ಪಂದ್ಯವನ್ನು ಗೆದ್ದಿತು.

ಆರಂಭಿಕ ಕುಸಿತ: ಬ್ಯಾಟಿಂಗ್ ಆಹ್ವಾನ ಪಡೆದ ನಂತರ ಅಷ್ಟೊಂದು ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾಗದೆ, ಪಂತ್ ಹಾಗೂ ಮಾರ್ಷ್ ಸೆಟ್ ಆಗುವ ಔಪಚಾರಿಕತೆಗೆ ಬಿದ್ದರು. 7 ರನ್‌ಗಳಿಸಿದ್ದ ಪಂತ್ ರನೌಟ್‌ಗೆ ಬಲಿಯಾದರು. ಮೂರನೇ ಕ್ರಮಾಂಕದಲ್ಲಿ ಬಂದ ಭರವಸೆಯ ಏಡನ್ ಮಾರ್ಕ್ರಂ 11 ರನ್‌ಗೆ ವಿಕೆಟ್ ಒಪ್ಪಿಸಿದರು. ಇನ್ನೊಂದು ಬದಿಯಲ್ಲಿ ನಿಂತಿದ್ದ ಮಾರ್ಷ್ ಒಂದೆರಡು ಕರಾರುವಾಕ್ ಬೌಂಡರಿಗಳನ್ನು ಬಾರಿಸಿ ಇನ್ನೇನು ಸೆಟ್ ಆದಂತೆ ಕಾಣುತ್ತಿದ್ದರು. ವಿಸ್ಫೋಟಕ ಬ್ಯಾಟರ್ ನಿಕೊಲಸ್ ಪೂರಣ್ 8 ರನ್ ಗಳಿಸಿರುವಾಗಲೇ ಎನ್‌ಗಿಡಿ ಅವರ ಸ್ಲೋವರ್‌ಗೆ ಔಟಾದರು. ಆಯುಷ್ ಬದೋನಿ ಕೂಡ ಹೆಚ್ಚು ಹೊತ್ತು ನಿಲ್ಲಲೇ ಇಲ್ಲ, ಇಷ್ಟೊತ್ತಿಗಾಗಲೇ 65 ರನ್ ಗಳಿಸಿ 4 ವಿಕೆಟ್ ಕಳೆದುಕೊಂಡಿತು. ಮಧ್ಯಮ ಓವರ್‌ಗಳಲ್ಲಿ ಅಲ್ಪ ಹೊತ್ತು ಆಸರೆಯಾದ ಸಮದ್ ಹಾಗೂ ಮಾರ್ಷ್ ಸಿಂಗಲ್‌ಗಳ ಮೂಲಕ ಒತ್ತಡ ನೀಗಿಸಲೆತ್ನಿಸಿದರು. ಆದರೆ 10ನೇ ಓವರ್‌ನಲ್ಲಿ ಮಾರ್ಷ್ ಔಟಾದರು. ತಂಡದ ಯುವ ಆಟಗಾರ, ಸ್ಫೋಟಕ ಬ್ಯಾಟರ್ ಮುಕುಲ್ ಚೌದರಿ ಮೊದಲೆರಡು ಎಸೆತದಲ್ಲಿ ಬೌಂಡರಿ ಬಾರಿಸಿ ಗಮನ ಸೆಳೆದರು. ಆದರೆ ಕುಲ್ದೀಪ್ ಅವರ ಸ್ಪಿನ್‌ಗೆ ವಿಕೆಟ್ ಒಪ್ಪಿಸಿದರು. ಸಮದ್ 36 ರನ್‌ಗಳಿಸಿ ತಮ್ಮ ಆಟ ನಿಲ್ಲಿಸಿದರು. ಸೆಹಬಾಜ್ ನಾನ್‌ಸ್ಟ್ರೈಕ್‌ನಲ್ಲಿ ನಿಂತರು ಅವರಿಗೆ ಸ್ಟ್ರೈಕ್ ಸಿಗಲೇ ಇಲ್ಲ ಇನ್ನಿಂಗ್ಸ್ 18.4 ಓವರ್‌ಗಳಿಗೆ ನಿಂತಿತು. ಲಖನೌ 141 ರನ್‌ಗಳಿಗೆ ಉರುಳಿತು.



ರಿಜ್ವಿ-ಸ್ಟಬ್ಸ್ ಗೆಲುವಿನಾಟ

ಗುರಿ ಬೆನ್ನತ್ತುವಾಗ ದಿಲ್ಲಿ ಕ್ಯಾಪಿಟಲ್ಸ್ ಭಾರೀ ಹಿನ್ನಡೆ ಅನುಭವಿಸಿತು. ಆರಂಭಿಕ ಐದು ಓವರ್‌ಗಳಲ್ಲಿ 26 ರನ್ ಮಾತ್ರ ಗಳಿಸಿದ್ದ ದಿಲ್ಲಿ ಪ್ರಮುಖ ನಾಲ್ಕು ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಪ್ರಿನ್ಸ್ ಯಾದವ್, ಮೊಹಮ್ಮದ್ ಶಮಿ ಹಾಗೂ ಮೋಹ್ಸಿನ್ ಖಾನ್ ಒತ್ತಡ ತಂದಿಟ್ಟರು. ದಿಲ್ಲಿ ಭಾರೀ ಆತಂಕದಲ್ಲಿ ಕಾಣಿಸಿಕೊಂಡಿತ್ತು. ಆದಾಗ್ಯೂ ಮಧ್ಯಮ ಕ್ರಮಾಂಕದಲ್ಲಿ ಒಂದಾದ ಸಮೀರ್ ರಿಜ್ವಿ ಹಾಗೂ ಟ್ರೈಸನ್ ಸ್ಟಬ್ಸ್ 72 ಬಾಲ್‌ಗಳಲ್ಲಿ 100 ರನ್ ಜೊತೆಯಾಟವಾಡುವ ಮೂಲಕ ಪಂದ್ಯ ಗೆಲ್ಲಿಸಿದರು. ಯಾವುದೇ ಕ್ಷಣದಲ್ಲೂ ಅತುರಕ್ಕೆ ಬೀಳದೆ ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದ ಈ ಜೋಡಿ ಒತ್ತಡದ ಸಮಯದಿಂದ ಪಂದ್ಯವನ್ನು ಗೆಲ್ಲಿಸುವವರೆಗೆ ದಿಲ್ಲಿ ತಂಡದ ಆಶಾ ಕಿರಣವಾಗಿ ಜವಾಬ್ದಾರಿ ನಿಭಾಯಿಸಿದರು. ಸಮೀರ್ ರಿಜ್ವಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಜೇಯ 70 ರನ್ ಬಾರಿಸಿದರೆ, ಸ್ಟಬ್ಸ್ 38 ರನ್ ಗಳಿಸಿದರು. ದಿಲ್ಲಿ ಪಂದ್ಯವನ್ನು 6 ವಿಕೆಟ್‌ಗಳಿಂದ ಗೆದ್ದಿತು.

ಸಂಕ್ಷಿಪ್ತ ಸ್ಕೋರ್

ಲಖನೌ ಸೂಪರ್ ಜೈಂಟ್ಸ್ 141/10 (18.4)
ಮಾರ್ಷ್ 35(28), ಸಮದ್ 36(25)
ಎನ್‌ಗಿಡಿ 27ಕ್ಕೆ 3, ನಟರಾಜನ್ 29ಕ್ಕೆ 3, ಕುಲ್ದೀಪ್ 31ಕ್ಕೆ 2, ಅಕ್ಷರ್ 17ಕ್ಕೆ 1
ದಿಲ್ಲಿ ಕ್ಯಾಪಿಟಲ್ಸ್ 145/4 (17.1)
ರಿಜ್ವಿ ಅಜೇಯ 70(47), ಸ್ಟಬ್ಸ್ ಅಜೇಯ 38(32), ಪ್ರಿನ್ಸ್ 20ಕ್ಕೆ 2, ಶಮಿ 28ಕ್ಕೆ 1, ಮೊಹ್ಸಿನ್ 19ಕ್ಕೆ 1

ಕೋಲ್ಕತ್ತಾ ಸವಾಲಿಗೆ ಹೈದರಾಬಾದ್ ಸಿದ್ಧ

ಇಂದು ಸೋತವರ ಕಾಳಗ

ಕೋಲ್ಕತ್ತಾ: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಎರಡನೇ ಸುತ್ತಿನ ಪಂದ್ಯಗಳ ಆರಂಭದಲ್ಲಿ ಸೋತವರ ಹಣಾಹಣಿ. ಸೋಲಿನಿಂದ ಹೊರಬಂದು ಪೈಪೋಟಿ ನಡೆಸುವ ಯೋಜನೆ ಹಾಕಿಕೊಂಡಿರುವ ಸನ್‌ರೈಸರ್ಸ್ ಹೈದರಾಬಾದ್ ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್ ನಡುವೆ ಸೆಣಸಾಟ ಗುರುವಾರ ಈಡನ್ ಗಾರ್ಡನ್ಸ್‌ನಲ್ಲಿ ನಡೆಯಲಿದೆ. ರಹಾನೆ ಪಡೆ ಮತ್ತು ಹಂಗಾಮಿ ನಾಯಕ ಇಶಾನ್ ಕಿಶನ್ ಬಳಗದ ನಡುವೆ ಗೆಲುವಿನ ಹುಡುಕಾಟದ ಕಾಳಗ ನಡೆಯಲಿದೆ.

ಉದ್ಘಾಟನಾ ಪಂದ್ಯದಲ್ಲಿ ಆರ್‌ಸಿಬಿ ಹಾಗೂ ಹೈದರಾಬಾದ್ ನಡುವೆ ಪಂದ್ಯ ನಡೆಯಿತು. ಅಲ್ಲಿ ಬೆಂಗಳೂರು 6 ವಿಕೆಟ್ ಗೆಲುವು ಸಾಧಿಸಿತ್ತು. ಇತ್ತ ಎರಡನೇ ದಿನ ಮುಂಬೈ ಹಾಗೂ ಕೆಕೆಆರ್ ತಂಡಗಳು ಎದುರಾಗಿದ್ದವು. ಅಲ್ಲಿ ಮುಂಬೈ ಗೆಲುವು ಸಾಧಿಸಿತ್ತು. ಮೊದಲನೇ ಸುತ್ತಿನ ಹಿನ್ನಡೆಯೊಂದಿಗೆ ಕಣಕ್ಕಿಳಿಯುತ್ತಿರುವ ತಂಡಗಳು ಪುಟಿದೇಳುವ ಸವಾಲನ್ನು ಹೊಂದಿರುವುದು ಪಂದ್ಯದ ವಿಶೇಷತೆ. ಗೆಲುವಿಗಾಗಿ ನಡೆಯುವ ಪೈಪೋಟಿ ದಿನದ ಸ್ವಾರಸ್ಯ. ಮುಖ್ಯವಾಗಿ ಉಭಯ ತಂಡಗಳು ಬ್ಯಾಟಿಂಗ್‌ನಲ್ಲಿ ಮಿಂಚಿದ್ದರೂ ಬೌಲಿಂಗ್‌ನಲ್ಲಿ ಹಿನ್ನಡೆ ಅನುಭವಿಸಿವೆ.

ಹೈದರಾಬಾದ್‌ಗೆ ಗೆಲುವಿನ ಹಂಬಲ: ಪ್ಯಾಟ್ ಕಮ್ಮಿನ್ಸ್ ಇಲ್ಲದಿದ್ದರೂ, ಬಲಿಷ್ಠ ಯುವಕರಿಂದ ಕೂಡಿಕೊಂಡಿರುವ ಹೈದರಾಬಾದ್ ಕಳೆದ ಪಂದ್ಯದಲ್ಲಿ ಭಾರೀ ಸೋಲನುಭವಿಸಿದೆ. ತಂಡದಲ್ಲಿ ಅಭಿಷೇಕ್ ಶರ್ಮಾ ಹಾಗೂ ಟ್ರಾವಿಸ್ ಹೆಡ್ ಅಂತಹ ಟಿ20 ಕ್ರಿಕೆಟ್ ಲೋಕದ ಸ್ಫೋಟಕ ಬ್ಯಾಟಿಗರು ತಂಡದಲ್ಲಿದ್ದಾರೆ. ಹಂಗಾಮಿ ನಾಯಕ ಇಶಾನ್ ಕಿಶನ್ ವಿಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚುತ್ತಿದ್ದಾರೆ. ಮೊದಲನೇ ಪಂದ್ಯದಲ್ಲೂ ಅವರು ಅಬ್ಬರಿಸಿದ್ದರು. ಮಧ್ಯಮ ಕ್ರಮಾಂಕದಲ್ಲಿ ಕ್ಲಾಸೆನ್ ಹಾಗೂ ಅನಿಕೇತ್ ವರ್ಮಾ ಭರವಸೆ ಹೆಚ್ಚಿಸಿದ್ದಾರೆ. ಆದರೆ ಇತ್ತಂಡಕ್ಕೆ ಬೌಲಿಂಗ್ ಅನುಭವದ ಕೊರತೆ ಆರ್‌ಸಿಬಿ ವಿರುದ್ಧದ ಪಂದ್ಯ ವೇಳೆ ಕಾಣಿಸಿಕೊಂಡಿತ್ತು. ಬಲಿಷ್ಠ ಬೌಲರ್‌ಗಳಿದ್ದರೂ ಅನುಭವಿಗಳಿಲ್ಲ, ಉನಾದ್‌ಕಟ್ ಹೊರತುಪಡಿಸಿ ಇನ್ನುಳಿದ ಬೌಲರ್‌ಗಳು ಕಡಿಮೆ ಅನುಭವ ಉಳ್ಳವರಿದ್ದಾರೆ. ಹೀಗಾಗಿ ಬೌಲಿಂಗ್ ಸಮಸ್ಯೆಯಿಂದ ಹೊರಬರುವ ತವಕದಲ್ಲಿದೆ ಎಸ್‌ಆರ್‌ಎಚ್.

ಕೆಕೆಆರ್‌ಗೆ ತವಕ: ಇನ್ನು ಬಹುತೇಕ ಅಂಥದ್ದೇ ಸಮಸ್ಯೆ ಎದುರಿಸುತ್ತಿರುವ ಕೆಕೆಆರ್ ಕೂಡ ಪುಟಿದೇಳುವ ತವಕದೊಂದಿಗೆ ಸವಾಲನ್ನೂ ಹೊಂದಿದೆ. ಹರ್ಷಿತ್ ರಾಣಾ ಅಂಥವರು ಹೊರಬಿದ್ದಿರುವುದು ತಂಡಕ್ಕೆ ಪೆಟ್ಟು ಬಿದ್ದಿದೆ. ಸ್ಪಿನ್ ವಿಭಾಗದಲ್ಲಿರುವ ಸುನಿಲ್ ನರೈನ್ ಹಾಗೂ ವರುಣ್ ಚಕ್ರವರ್ತಿ ತಂಡದ ಅನುಭವಿ ಬೌಲರ್‌ಗಳು. ಬ್ಯಾಟಿಂಗ್ ವಿಭಾಗದಲ್ಲಿ ಎರಡನೇ ಮಾತೇ ಇಲ್ಲ, ಫಿನ್ ಅಲೆನ್, ಅಜಿಂಕ್ಯಾ ರಹಾನೆ, ರಿಂಕು ಸಿಂಗ್, ಅಂಗ್ರಿಶ್ ರಘುವಂಶಿ, ಕ್ಯಾಮರನ್ ಗ್ರೀನ್ ಅಂಥ ಬಲಿಷ್ಠ ಬ್ಯಾಟರ್ಸ್ ಇದ್ದಾರೆ. ಬೆಂಚ್‌ನಲ್ಲೂ ಸೈಫರ್ಟ್, ಮನೀಷ್ ಪಾಂಡೆ ಅಂಥವರಿದ್ದಾರೆ.

ಪಿಚ್: ಬ್ಯಾಟರ್‌ಗಳು ಮಿಂಚಬಲ್ಲ ಪಿಚ್ ಈಡನ್ ಗಾರ್ಡನ್ಸ್‌ನಲ್ಲಿದೆ. ಎರಡನೇ ಇನ್ನಿಂಗ್ಸ್‌ನಲ್ಲಿ ಸ್ವಲ್ಪ ಇಬ್ಬನಿ ಕಾಟ ಕಾಡಬಹುದು. ಸ್ಫೋಟಕ ಹೊಡೆತಗಳಿಗೆ ಹೇಳಿ ಮಾಡಿಸಿದ ಗ್ರೌಂಡ್ ಕೋಲ್ಕತ್ತಾದಲ್ಲಿದೆ. ಮೊದಲು ಬೌಲಿಂಗ್ ಮಾಡುವ ತಂಡಕ್ಕೆ ಲಾಭ ಸಿಗಲಿದೆ.



ಪಂದ್ಯದ ಮಾಹಿತಿ:
ಯಾವಾಗ?: ಗುರುವಾರ, ಎಲ್ಲಿ: ಈಡನ್ ಗಾರ್ಡನ್ಸ್, ಕೋಲ್ಕತ್ತಾ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಚೆಸ್: ಪ್ರಜ್ಞಾನಂದ ಪರಾಭವ

ಹೊಸದಿಲ್ಲಿ: ಭಾರತ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಫಿಡೆ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಮೂರನೇ ಸುತ್ತಿನಲ್ಲಿ ಉಜ್ಬೆಕಿಸ್ತಾನದ ಜವೋಖಿರ್ ಸಿಂದಾರೋವ್ ವಿರುದ್ಧ ಸೋಲು ಒಪ್ಪಿಕೊಂಡರು. ಸೈಪ್ರಸ್‌ನಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ ಸಿಂದಾರೋವ್ 2.5 ಅಂಕಗಳೊಂದಿಗೆ ಫ್ಯಾಬಿಯಾನೊ ಕಾರುವಾನಾ ಜೊತೆಗೆ ಸಂಯುಕ್ತ ಮುನ್ನಡೆಯಲ್ಲಿದ್ದಾರೆ.

ಕಾರುವಾನಾ ಕೂಡ ಮೂರನೇ ಸುತ್ತಿನಲ್ಲಿ ಚೀನಾದ ವೆಯ್ ಯಿ ಅವರನ್ನು ಸೋಲಿಸಿ ಎರಡು ಜಯಗಳೊಂದಿಗೆ ಉತ್ತಮ ಸ್ಥಿತಿಯಲ್ಲಿ ಮುಂದುವರಿದಿದ್ದಾರೆ. ಮುಂದಿನ ಸುತ್ತಿನಲ್ಲಿ ಅವರು ಸಿಂದಾರೋವ್ ವಿರುದ್ಧ ಎದುರಿಸಲಿದ್ದಾರೆ. ಇನ್ನು ಮಹಿಳಾ ವಿಭಾಗದಲ್ಲಿ ಮೊದಲ ಎರಡು ಸುತ್ತುಗಳಲ್ಲಿ ಎಲ್ಲಾ ಪಂದ್ಯಗಳು ಡ್ರಾಗಳಾಗಿದ್ದರೆ, ಮೂರನೇ ಸುತ್ತಿನಲ್ಲಿ ಬಿಬಿಸಾರಾ ಅಸೌಬಯೇವಾ ಝು ಜಿನರ್ ವಿರುದ್ಧ ಗೆದ್ದು ಮೊದಲ ನಿರ್ಣಾಯಕ ಫಲಿತಾಂಶ ದಾಖಲಿಸಿದರು. ಇನ್ನೊಂದು ಪಂದ್ಯದಲ್ಲಿ ಕಟೆರಿನಾ ಲಾಗ್ನೋ ಚೀನಾದ ತಾನ್ ಝೋಂಗ್ ವಿರುದ್ಧ ಜಯ ಸಾಧಿಸಿದರು. ಪ್ರಜ್ಞಾನಂದ ಮಧ್ಯಭಾಗದ ಆಟದಲ್ಲಿ ಉತ್ತಮ ಸ್ಥಾನ ಹೊಂದಿದ್ದರೂ ಎಡವಿದರು. 35. ಕ್ಯೂಎಫ್-7 ನಡೆ ನಂತರ ಸಿಂದಾರೋವ್ ನಿಖರ ಆಟದಿಂದ ಪಂದ್ಯವನ್ನು ತಮ್ಮತ್ತ ತಿರುಗಿಸಿಕೊಂಡರು. ಆರ್. ವೈಶಾಲಿ ಮತ್ತು ಅನ್ನಾ ಮುಜಿಚುಕ್ ನಡುವಿನ ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿತು. ಇನ್ನೊಂದು ಪಂದ್ಯದಲ್ಲಿ ದಿವ್ಯ ದೇಶಮುಖ್, ಅಲೆಕ್ಸಾಂಡ್ರಾ ಗೋರ್ಯಾಚ್ಕಿನಾ ಮಾಡಿದ ತಪ್ಪನ್ನು ಪ್ರಯೋಜನಕ್ಕೆ ಬಳಸಿಕೊಂಡು ಸೋಲಿನಿಂದ ಪಾರಾಗಿ ಡ್ರಾ ಸಾಧಿಸಿದರು. ಇತರ ಪಂದ್ಯಗಳಲ್ಲಿ ಹಿಕಾರು ನಕಮುರಾ ಮತ್ತು ಅನಿಶ್ ಗಿರಿ ಕೇವಲ 19 ನಡೆಯಲ್ಲೇ ಡ್ರಾಗೆ ಒಪ್ಪಿಕೊಂಡರೆ, ಮಥಿಯಾಸ್ ಬ್ಲೂಬಾಮ್ ಮತ್ತು ಆಂಡ್ರೇ ಎಸಿಪೆಂಕೋ ಕೂಡ ಅಂಕ ಹಂಚಿಕೊಂಡರು.



ಕೊನೊಲಿ ಕ್ಲಾಸ್ ಆಟಕ್ಕೆ ಕರಗಿದ ಗುಜರಾತ್

ಚಂಡೀಗಢ: ಹಾಲಿ ರನ್ನರ್-ಅಪ್ ಪಂಜಾಬ್ ಕಿಂಗ್ಸ್ ತಂಡವು ಪ್ರತಿಷ್ಠಿತ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ತನ್ನ ಮೊದಲ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ತಂಡವನ್ನು 3 ವಿಕೆಟ್‌ಗಳಿಂದ ಮಣಿಸಿ ಗೆಲುವಿನ ನಾರಂಭ ಮಾಡಿದೆ.

ವಿಜಯ್‌ಕುಮಾರ್ ವೈಶಾಖ್ ಅವರ ಕರಾರುವಾಕ್ ಬೌಲಿಂಗ್ ಮತ್ತು ಕೂಪರ್ ಕೋನೊಲಿ ಅವರ ಕ್ಲಾಸ್ ಬ್ಯಾಟಿಂಗ್‌ನೊಂದಿಗೆ ಪಂಜಾಬ್ ಕಿಂಗ್ಸ್ ಸುಲಭದ ಪಂದ್ಯವನ್ನು ಅಲ್ಪ ಪೈಪೋಟಿ ನಡೆಸಿ ಗೆದ್ದಿತು. ಕಳೆದ ಪಂದ್ಯಾವಳಿಯಲ್ಲಿ ಫೈನಲ್‌ಗೇರಿದ್ದ ತಂಡವು ಯಥಾ ಪ್ರಕಾರ ಗೆಲುವಿನಾಟ ಆಡಿತು. ಟಾಸ್ ಗೆದ್ದು ಬೌಲಿಂಗ್ ತೆಗೆದುಕೊಂಡ ನಂತರ ಗುಜರಾತ್ ಪಡೆಯನ್ನು 162 ರನ್‌ಗೆ ತಡೆಹಿಡಿಯಿತು. ವಿಜಯ್‌ಕುಮಾರ್ ವೈಶಾಖ್ 3 ವಿಕೆಟ್‌ಗಳನ್ನು ಕಿತ್ತರೆ, ಚಾಹಲ್ ಪ್ರಮುಖ ಬ್ಯಾಟಿಗರನ್ನು ಪೆವಿಲಿಯನಗಟ್ಟಿದರು. ತಂಡದ ಪರ ಶುಭಮನ್ ಗಿಲ್ 39, ಜಾಸ್ ಬಟ್ಲರ್ 38 ರನ್ ಗಳಿಸಿದರು.

ಗುರಿ ಬೆನ್ನತ್ತುವಾಗ ಮೊದಲಿನಿಂದಲೂ ಉತ್ತಮ ಬ್ಯಾಟಿಂಗ್ ಮಾಡಿದ ಪಂಜಾಬ್ ಪಂದ್ಯ ಮುಕ್ತಾಯದ ವೇಳೆ ಪ್ರಸಿದ್ಧ ಕೃಷ್ಣ ಅವರ ದಾಳಿಗೆ ತತ್ತರಿಸಿತು. ಆದಾಗ್ಯೂ ತಮ್ಮ ಮೊದಲ ಐಪಿಎಲ್ ಪಂದ್ಯದಲ್ಲಿ ಅದ್ಭುತ ಪ್ರದರ್ಶನ ನೀಡಿದ ಕೂಪರ್ ಕೊನೊಲಿ ಗೆಲುವಿನ ದಡ ಸೇರಿಸಿದರು. ಪಂಜಾಬ್ 7 ವಿಕೆಟ್ ಕಳೆದುಕೊಂಡು ಗುರಿ ಪೇರಿಸಿತು.

ಕೃಷ್ಣ ಕಡಿವಾಣ: ಲಯದಲ್ಲಿದ್ದ ಪಂಜಾಬ್‌ಗೆ ನಾಗಾಲೋಟ. ಸ್ಫೋಟಕ ಆರಂಭದಲ್ಲಿ ಪ್ರಭಸಿಮ್ರನ್ ಮಿಂಚಿದರು. ಆರಂಭಿಕ ಪ್ರಿಯಾಂಶ್ ಆರ್ಯ ಬೇಗನೆ ವಿಕೆಟ್ ಒಪ್ಪಿಸಿದ್ದಾದರೂ, ಮೊದಲ ಐಪಿಎಲ್ ಪಂದ್ಯವಾಡಿದ ಕೂಪರ್ ಕೊನೊಲಿ ಅಂಟಿ ಕೊಂಡು ನಿಂತರು. ಪ್ರಭಸಿಮ್ರನ್(37) ಬೇಕಾದ ಆರಂಭ ಒದಗಿಸಿದ್ದರು. ಕೊನೊಲಿ ಸೆಟ್ ಆಗಿದ್ದರು. ಶ್ರೇಯಸ್(18)ಕ್ಕೆ ವಿಕೆಟ್ ಒಪ್ಪಿಸಿದರು. ಆದಾಗ್ಯೂ ಪಂಜಾಬ್‌ಗೆ ದೊಡ್ಡ ಸವಾಲೇನು ಇಲ್ಲ, ಗೆಲ್ಲಬಹುದಾದ ಪಂದ್ಯ, ಔಪಚಾರಿಕತೆ ಮುಗಿಸಿಕೊಂಡು ಬಿಟ್ಟರೆ ಸಾಕಿತ್ತು. ಮುಖ್ಯವಾಗಿ ಕೂಪರ್ ಅವರ ಆಟ ಗೆಲುವಿನತ್ತ ಸಾಗುತ್ತಿತ್ತು. ಮಧ್ಯಮ ಆಟದಲ್ಲಿ ಇಂಪ್ಯಾಕ್ಟ್ ಆಟಗಾರನಾಗಿ ಬಂದ ಪ್ರಸಿದ್ಧ ಕೃಷ್ಣ ಪಂಜಾಬ್‌ಗೆ ಕಾಟ ಕೊಟ್ಟರು. ಕರಾರುವಾಕ್ ಬೌಲಿಂಗ್ ದಾಳಿಯೊಂದಿಗೆ ಸರಸರನೇ ವಧೇರಾ, ಶಶಾಂಕ್ ಸಿಂಗ್ ಅವರ ವಿಕೆಟ್ ಕಿತ್ತರು. ಅಲ್ಲಿಂದ ಪಂದ್ಯ ಹೊಳ್ಳಿತು, ಒಂದು ಹೊತ್ತಲ್ಲಿ ಬಾಲ್-ಟು-ಬಾಲ್ ರನ್ ಇದ್ದ ಪಂದ್ಯವನ್ನು ಕೊನೆಯ ಎರಡು ಓವರ್‌ಗಳಲ್ಲಿ 16 ರನ್ ಬೇಕಾದ ಅನಿವಾರ್ಯತೆಗೆ ಕೃಷ್ಣ ಕೊಂಡೊಯ್ದರು. ಆದರೆ ಬಾರ್ಟಲೆಟ್ 11, ರನ್ ಗಳಿಸಿದರೆ, ಬಿಡದ ಕೊನೊಲಿ ಅಜೇಯ 72 ರನ್ ಬಾರಿಸಿ ಪಂದ್ಯ ಗೆಲ್ಲಿಸಿದರು.

ಸಂಕ್ಷಿಪ್ತ ಸ್ಕೋರ್

ಗುಜರಾತ್: 20 ಓವರ್‌ಗಳಲ್ಲಿ 162/6, ಗಿಲ್ 39, ಬಟ್ಲರ್ 38; ವೈಶಾಖ್ 34/3, ಚಾಹಲ್ 28/2
ಪಂಜಾಬ್: 19.1 ಓವರ್‌ಗಳಲ್ಲಿ 165/7, ಕೊನೊಲಿ 72★, ಪ್ರಭಸಿಮ್ರನ್ 37; ಪ್ರಸಿದ್ಧ 29/3

ಆರ್‌ಸಿಬಿ ಕೀ ವಿಶುವಲ್ ಅನಾವರಣ: ಅಭಿಮಾನಿಗಳಿಗೆ ವಿಶೇಷ ಗೌರವ


ಬೆಂಗಳೂರು: ಟಾಟಾ ಐಪಿಎಲ್ 2026ಗಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ತನ್ನ ಕೀ ವಿಶುವಲ್ ಅನ್ನು ಅನಾವರಣಗೊಳಿಸಿದ್ದು, ಈ ಬಾರಿ ಅಭಿಮಾನಿಗಳನ್ನು ವಿಶೇಷವಾಗಿ 12ನೇ ಆಟಗಾರರ ಎಂದು ಬಣ್ಣಿಸಿ, ಅವರನ್ನು ಕೇಂದ್ರಬಿಂದುವಾಗಿ ಮಾಡಲಾಗಿದೆ. ಈ ಕ್ರಿಯೇಟಿವ್, ತಂಡ ಮತ್ತು ಅಭಿಮಾನಿಗಳ ನಡುವಿನ ಬಲವಾದ ಬಾಂಧವ್ಯವನ್ನು ಪ್ರತಿಬಿಂಬಿಸುತ್ತದೆ. ಆರ್‌ಸಿಬಿ ಕೇವಲ ಒಂದು ತಂಡವಲ್ಲ, ಅಭಿಮಾನಿಗಳ ಭಾವನೆ ಮತ್ತು ನಿಷ್ಠೆಯ ಸಂಕೇತವಾಗಿದೆ ಎಂಬ ಸಂದೇಶವನ್ನು ಇದು ಸಾರುತ್ತದೆ. ಈ ಕೀ ವಿಶುವಲ್ ಅಭಿಮಾನಿಯ ದೃಷ್ಟಿಕೋನ ವನ್ನು ಮುಖ್ಯವಾಗಿ ತೋರಿಸಲಾಗಿದ್ದು, ಅವರ ಅಚಲ ನಂಬಿಕೆ ಮತ್ತು ತಂಡದ ಮೇಲಿನ ಪ್ರೀತಿಯನ್ನು ಪ್ರತಿನಿಧಿಸುತ್ತದೆ. ತಂಡದ ಬಸ್ ಹಿನ್ನೆಲೆಯಾಗಿ ಬಳಸಿರುವ ಈ ವಿನ್ಯಾಸ, ಆಟಗಾರರು ಅಭಿಮಾನಿಗಳ ಆಶೆ- ಆಕಾಂಕ್ಷೆಗಳನ್ನು ಹೊತ್ತು ಸಾಗುವ ಪ್ರಯಾಣದ ಸಂಕೇತವಾಗಿಯೂ ಕಾಣಿಸುತ್ತದೆ. ಆರ್‌ಸಿಬಿ ಎಲ್ಲಿಗೆ ಹೋದರೂ ಅಭಿಮಾನಿಗಳ ಉತ್ಸಾಹ ಜೊತೆ ಸಾಗುತ್ತದೆ.



12ನೇ ಆಟಗಾರರೊಂದಿಗೆ ನಮ್ಮ ಬಾಂಧವ್ಯ ಅತ್ಯಂತ ವಿಶೇಷ. ನಮ್ಮ ಅಭಿಮಾನಿಗಳು ವಿಶ್ವದಲ್ಲೇ ಅತ್ಯುತ್ತಮರು. ಅವರ ನಂಬಿಕೆ ಮತ್ತು ಬೆಂಬಲ ನಮಗೆ ಪ್ರತಿ ಬಾರಿ ಮೈದಾನದಲ್ಲಿ ಶ್ರೇಷ್ಠ ಪ್ರದರ್ಶನ ನೀಡಲು ಪ್ರೇರಣೆ ನೀಡುತ್ತದೆ.
■ ರಜತ್ ಪಾಟೀದಾರ್, ಆರ್‌ಸಿಬಿ ನಾಯಕ

ಪದಬಂಧ

ರಾಜಾ ಸಂಗಮೇಶ ಹಿರೇಮಠ



5941

ಎಡದಿಂದ ಬಲಕ್ಕೆ
3. ತಾವರೆಯಂತಹ ಕಣ್ಣುಳ್ಳವನು-ವಿಷ್ಣು (5)
5. ನಮ್ಮ ಭಾಷೆಯಲ್ಲಿ ಆಡುವ ಮಾತು (5)
6. ವಿದೇಶಿ ತಳಿಗಳ ವಿರುದ್ಧವಾದದ್ದು (2)
7. ಗ್ರಾಮದ ಮುಖ್ಯಸ್ಥ-ಪಟೇಲ (2)
9. ಭ್ರಮರವಿಲ್ಲಿ ತಿರುಗಿ ಹಾರುತ್ತಿದೆ (4)
11. ನಾಟಕದ ಪರದೆ ಉಲ್ಟಾ ಕಾಣುತ್ತಿದೆ (4)
15. ಇದು ಜಮಾ ಖರ್ಚಿನ ಪುಸ್ತಕ (2)
16. ಪ್ರತಿಫಲವನ್ನು ನಿರೀಕ್ಷಿಸದೆ ನೀಡುವುದು (2)
17. ಧರ್ಮರಾಯ ನರಕಾಧಿಪತಿಯ ಸುತನಾಗಿ (5)
19. ಆಮರ ಒಳಗೊಂಡ ರಾಕ್ಷಸ ಗುಣ (5)

ಮೇಲಿನಿಂದ ಕೆಳಕ್ಕೆ
1. ಮೊಸಳೆಗಳ ವಾಸಸ್ಥಾನ-ಸಮುದ್ರ (5)
2. ಸಸಿಗಳನ್ನು ನೆಡುವ ಮಣ್ಣಿನ ಪಾತ್ರೆ (2)
3. ಹಳ್ಳಿಗಳಲ್ಲಿ ಹಗ್ಗ ತಯಾರಿಸಲು ಬಳಸುವಂಥಾದ್ದು (4)
4. ಇದು ಕೆಲಸದ ಮಹತ್ವ (5)
8. ನೆಂಟ-ಸಂಬಂಧಿಕನೀತ (2)
10. ತೀರ ಅಲ್ಪ ಬೆಲೆಯ ನಾಣ್ಯ (5)
12. ಪ್ರತಿದಿನದ ಸಮಾನಪದ (2)
13. ಗಂಗೆಯ ಒಂದು ಉಪ ನದಿ (5)
14. ಮುಕ್ಕಣ್ಣ-ಶಿವನೀತ (4)
18. ವಿಶ್ವಾಸವಿಡು (2)

5940 ಉತ್ತರ

ಎಡದಿಂದ ಬಲಕ್ಕೆ:
1. ಮೋರೆ 2. ಕಾಯಿಕಡುಬು
4. ಕಾಪಾಡು 5. ಮತದಾರ
7. ರಸಮಯ 9. ಪದಬಂಧ
13. ನನೆಕೊನೆ 15. ಬವರ
16. ಜಯಮಂಗಲ
17. ಕೇರಿ

ಮೇಲಿನಿಂದ ಕೆಳಕ್ಕೆ :
1. ಮೋಜಣಿದಾರ
2. ಕಾಡುಮನೆ 3. ಬುಡ
4. ಕಾವ್ಯನಾಮ 6. ಬಂಗಾರ
8. ಸಮಾನ 10. ದಫೇದಾರ
11. ಧವಳಗಿರಿ 12. ಆನೆಬಲ
14. ಬೀಜ

ಪ್ರಸ್ತುತ ನಾಯಕ ನಟರ ಧೋರಣೆ ಮತ್ತು ನಿರ್ಮಾಪಕರ ಬವಣೆ, ಇವರ ಮಧ್ಯೆ ಸಣ್ಣ-ಪುಟ್ಟ ಕಲಾವಿದರು ಹಾಗೂ ಸಿನಿಮಾ ತಂತ್ರಜ್ಞರು ಕೆಲಸವಿಲ್ಲದೆ ಪರದಾಡುತ್ತಿರುವುದರ ಬಗ್ಗೆ ಕೆ.ಜೆ. ಕುಮಾರ್ ಅವರು ತೀವ್ರ ವ್ಯಾಕುಲಗೊಳ್ಳುತ್ತಿದ್ದರು. ನಾಯಕ ನಟರು ದುಬಾರಿ ಸಂಭಾವನೆ ಕೈಬಿಟ್ಟು, ನಿರ್ಮಾಪಕ ಬದುಕುವಂಥ ಸಣ್ಣ ಬಜೆಟ್ಟಿನ ಉತ್ತಮ ಚಿತ್ರಗಳು ನಿರ್ಮಾಣವಾದರೆ ಕನ್ನಡ ಚಿತ್ರರಂಗ ಉಳಿಯುತ್ತೆ. ಕನ್ನಡದ ಜನಪ್ರಿಯ ನಟರು ವರ್ಷಕ್ಕೆ ಕನಿಷ್ಟ ಮೂರ್‍ನಾಲ್ಕು ಚಿತ್ರಗಳಲ್ಲಿ ಅಭಿನಯಿಸಿದರೆ, ಸಿನಿಮಾ ವೃತ್ತಿ ನಂಬಿ ಬದುಕುವ ಸಾವಿರಾರು ಜನ ನೆಮ್ಮದಿ ಕಾಣುತ್ತಾರೆ ಎಂದು ಅವರು ಭಾವಿಸಿದ್ದರು.

ಪ್ರಭಾವಿ-ಧೀಮಂತ ಪತ್ರಕರ್ತ ಕೆ.ಜೆ.ಕುಮಾರ್

ಸಂದೀಶ್ ಪ್ರೀತಮ್ ಎಚ್.ಎಸ್.

ನನಗೆ ಅಣ್ಣನಂತೆ ಒಲವನ್ನು, ಗುರುವಿನಂತೆ ಮಾರ್ಗ ತೋರಿಸುತ್ತಿದ್ದ ಕೆ.ಜೆ.ಕುಮಾರ್ ನನ್ನ ತಂದೆ ಎಚ್.ಎಸ್. ಶಂಕರಲಿಂಗೇಗೌಡರೊಂದಿಗೂ ಆತ್ಮೀಯವಾಗಿದ್ದವರು. 2013ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಬಿಟ್ಟು ಜೆಡಿಎಸ್ ಸೇರುವಾಗ ನಾಲ್ಕು ಬಾರಿ ಶಾಸಕರಾಗಿ, ಸತತ ಐದನೇ ಬಾರಿ ಗೆಲ್ಲುವ ಅವಕಾಶವನ್ನು ಕಳೆದುಕೊಳ್ಳುತ್ತೀರಾ, ಪಕ್ಷ ಬದಲಾಯಿಸಬೇಡಿ ಎಂದು ನನ್ನ ತಂದೆಯನ್ನು ಮೊದಲಿಗೆ ಎಚ್ಚರಿಸಿದ್ದೇ ಕೆ.ಜೆ.ಕುಮಾರ್. ಆದರೆ ತಂದೆ ಅವರ ಮಾತನ್ನು ಕಡೆಗಣಿಸಿದರು. ವಿಧಾನಪರಿಷತ್ ಮಾಜಿ ಸದಸ್ಯರಾದ ಎ.ರಾಮಣ್ಣರ ಗರಡಿಯಲ್ಲಿ ಬೆಳೆದಿದ್ದರಿಂದ ರಾಜಕೀಯ ಒಳತೋಟಿ ಚೆನ್ನಾಗಿ ಕೆ.ಜೆ.ಕುಮಾರ್ ತಿಳಿದಿದ್ದರು. ಜನತಾ ಪರಿವಾರದಲ್ಲಿ ಪ್ರಭಾವಿಗಳಾಗಿದ್ದ ಎ.ರಾಮಣ್ಣ ಅವರನ್ನು ಕಾಣಲು ಮೈಸೂರಿನ ಯಾದವಗಿರಿ ಮನೆಗೆ ಮಾಜಿ ಪ್ರಧಾನಿ ಚಂದ್ರಶೇಖರ್, ಮಾಜಿ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆ ಮತ್ತು ಎಸ್.ಎಂ.ಕೃಷ್ಣ ಬಂದರೂ ರಾಜಕೀಯವಾಗಿ ಲಾಭ ಮಾಡಿಕೊಳ್ಳಲು ಕೆ.ಜೆ.ಕುಮಾರ್ ಎಂದಿಗೂ ಯೋಚಿಸಲೇ ಇಲ್ಲ. ನಿಷ್ಠಾವಂತ ಪತ್ರಕರ್ತರಾಗಿ ತಮ್ಮ ವೃತ್ತಿ ಬದ್ಧತೆ ಕಾಪಾಡಿಕೊಳ್ಳುತ್ತಿದ್ದರು. ಶರಣರ ಗುಣವ ಮರಣದಲ್ಲಿ ಕಾಣು ಎಂಬ ಸಾರ್ವತ್ರಿಕ ಸತ್ಯ ನಿರೂಪಿಸುವಂತೆ ಪತ್ರಕರ್ತರಾಗಿ, ಪತ್ರಿಕಾ ವಿತರಕರಾಗಿ ಸುಮಾರು 60 ವರ್ಷ ಕಾಲ ಕೆ.ಜೆ.ಕುಮಾರ್ ನಡೆಸಿದ ಸೇವೆಯ ಸ್ಮರಿಸಿ ಸೂಪರ್ ಸ್ಟಾರ್ ರಜನಿಕಾಂತ್ ಸಹಿತ ಅನೇಕರು ಸಂತಾಪ ಸೂಚಿಸಿದ್ದರು.

ಇಂಥ ಪ್ರಭಾವಿ-ಧೀಮಂತ ಪತ್ರಕರ್ತ ಕೆ.ಜೆ.ಕುಮಾರ್ ಹುಟ್ಟಿದ್ದು 1952ರ ನವಂಬರ್ 6 ರಂದು ಉಡುಪಿ ಜಿಲ್ಲೆ ಕೊರಂಗ್ರಪಾಡಿ ಎಂಬ ಒಂದು ಕುಗ್ರಾಮದಲ್ಲಿ. ಬಾಲ್ಯದ ದಿನಗಳು ಸುಖವಾಗೇನೂ ಇರಲಿಲ್ಲ, ಕಡು ಕಷ್ಟದಲ್ಲೇ ಬೆಳೆದರು. ಅವರು ಮೈಸೂರಿಗೆ ಬಂದಿದ್ದು ದೈವ ಸಂಕಲ್ಪವಾಗಿದ್ದಿರಬೇಕು. ಹುಟ್ಟೂರಲ್ಲಿ ಬದುಕು ಕಟ್ಟಿಕೊಳ್ಳಲಾಗದೆ ಪರಿತಪಿಸುತ್ತಿದ್ದ ತಂದೆ ರಘುರಾಮ್ ಶೆಟ್ಟರಿಗೆ ಮಂತ್ರಾಲಯ ಮಠದವರು ನಂಜನಗೂಡು ಮುದ್ರಣಾಲಯವೊಂದರಲ್ಲಿ ಉದ್ಯೋಗ ಕೊಡಿಸಿಕೊಟ್ಟರು. ರಘುರಾಮ್ ಶೆಟ್ಟರನ್ನು ನಂಜನಗೂಡಿನಿಂದ ಮೈಸೂರಿಗೆ ಕರೆಸಿಕೊಂಡ ಎ.ರಾಮಣ್ಣ, ತಮ್ಮ ದಿನಪತ್ರಿಕೆ, ಪ್ರಿಂಟಿಂಗ್ ಪ್ರೆಸ್ ನೋಡಿಕೊಳ್ಳುವ ಜವಾಬ್ದಾರಿ ನೀಡಿದರು. ಸ್ವತಂತ್ರ ಹೋರಾಟಗಾರರೂ, ಅಂದಿನ ಜನತಾಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿದ್ದ ಎ.ರಾಮಣ್ಣ ಸಂಪಾದಕತ್ವದಲ್ಲಿ ಹೊರತರುತ್ತಿದ್ದ ವಿಜಯ ದಿನಪತ್ರಿಕೆಯನ್ನು ತಂದೆ ರಘುರಾಮ್‌ಶೆಟ್ಟರು ಮುದ್ರಿಸುತ್ತಿದ್ದರೆ, ಮಕ್ಕಳಾದ ಕುಮಾರ್ ಮತ್ತು ಸುರೇಶ್ ಪತ್ರಿಕೆ ವಿತರಣೆ ಮಾಡುತ್ತಿದ್ದರು. ಹೀಗೆ ಹನ್ನೆರಡು ವರ್ಷದ ಹುಡುಗನಾಗಿದ್ದಾಗಲೇ ಪತ್ರಿಕೆಯೊಂದಿಗೆ ಒಡನಾಟ ಬೆಳೆಸಿಕೊಂಡ ಕೆ.ಜೆ.ಕುಮಾರ್, ತಮ್ಮ ಕೊನೆ ಉಸಿರಿನವರೆಗೂ ಅದರೊಂದಿಗೆ ಒಡನಾಡಿದರು. ಹೀಗೆ ಪತ್ರಿಕೆಯನ್ನೇ ಉಸಿರಾಗಿಸಿಕೊಂಡ ಕೆಲವೇ ಕೆಲವು ಪತ್ರಕರ್ತರಲ್ಲಿ ಕೆ.ಜೆ.ಕುಮಾರ್ ಸಹ ಒಬ್ಬರು.

1977ರ ಏಪ್ರಿಲ್‌ನಲ್ಲಿ ಮಣಿಪಾಲದಿಂದ ಆರಂಭವಾದ ಸಿನಿ ಮಾಸಿಕವೊಂದರ ವರದಿಗಾರರಾದ ನಂತರ ಕೆ.ಜೆ.ಕುಮಾರ್ ಮತ್ತಷ್ಟು ಪ್ರವರ್ಧಮಾನಕ್ಕೆ ಬಂದರು. ಕೆ.ಜೆ.ಕುಮಾರ್ ಪತ್ರಿಕಾ ವಿತರಣೆಯಲ್ಲಿ ಮೈಸೂರಿಗೇ ಅಗ್ರಮಾನ್ಯ ವಿತರಕರಾಗಿಬಿಟ್ಟರು. ಪತ್ರಿಕಾ ವಿತರಣೆಯೊಂದಿಗೆ ಕೆ.ಜೆ.ಕುಮಾರ್ ಪ್ರಭಾವಿ ಪತ್ರಕರ್ತರಾಗಿ ಬೆಳೆದರು. ಇವರ ಬರಹದ ವೈಖರಿಯನ್ನು ಕಂಡೇ ಸೂಪರ್‌ಸ್ಟಾರ್ ರಜನಿಕಾಂತ್ ಬೆರಗಾಗಿದ್ದರು. 1975ರಲ್ಲಿ ಮೈಸೂರಿನ ಉತ್ತನಹಳ್ಳಿಯಲ್ಲಿ ನಡೆಯುತ್ತಿದ್ದ 'ಕಥಾ ಸಂಗಮ' ಚಿತ್ರದ ಚಿತ್ರೀಕರಣ ಸಂದರ್ಭದಲ್ಲಿ ತಮ್ಮ ಬಗ್ಗೆ ಬರೆದದ್ದನ್ನು ಯಾವತ್ತೂ ಮರೆಯಲಿಲ್ಲ. ಸುಮಾರು 50 ವರ್ಷಗಳ ಹಿಂದೆ ತಮ್ಮ ಬಗ್ಗೆ ಬರೆದ ಲೇಖನವನ್ನು ಸ್ಮರಿಸಿ ರಜನಿಕಾಂತ್ ತಮ್ಮ ಎಕ್ಸ್ ಖಾತೆಯಲ್ಲಿ ಕೆ.ಜೆ. ಕುಮಾರ್ ಬಗ್ಗೆ ಹೃದಯ ತುಂಬಿದ ಶ್ರದ್ಧಾಂಜಲಿ ಸಲ್ಲಿಸಿದ್ದರು.



ಕನ್ನಡ ಚಿತ್ರರಂಗ ಉಳಿದು ಬೆಳೆಯುವುದರ ಬಗ್ಗೆ ಸದಾ ಚಿಂತಿಸುತ್ತಿದ್ದ ಕೆ.ಜೆ.ಕುಮಾರ್ ಮೈಸೂರಿನ ಹೆಸರಾಂತ ಪ್ರೀಮಿಯರ್ ಸ್ಟುಡಿಯೋ ಉಳಿವಿಗಾಗಿ ಬಹಳಷ್ಟು ಹೋರಾಟ ನಡೆಸಿದರು. ಪ್ರೀಮಿಯರ್ ಸ್ಟುಡಿಯೋ ಮುಚ್ಚಿದರೆ, ಇದನ್ನೆ ನಂಬಿಕೊಂಡು ಬದುಕುತ್ತಿರುವ ಸ್ಥಳೀಯ ಸಹ ಕಲಾವಿದರು, ತಂತ್ರಜ್ಞರ ಬದುಕು ಸಂಕಷ್ಟಕ್ಕೆ ಸಿಲುಕುತ್ತೆ ಅಂತ ಸರ್ಕಾರಕ್ಕೂ ಮನವಿ ಮಾಡಿದ್ದರು. ಸಹಕಲಾವಿದರ ಸಂಘದ ಗೌರವ ಅಧ್ಯಕ್ಷರಾಗಿ ಅವರು ನಡೆಸಿದ ಹೋರಾಟ ನಿಷ್ಫಲವಾದಾಗ ಹತಾಶರಾಗಿದ್ದರು. ಅಂಬರೀಶ್ ಅವರನ್ನು ಯಾವ ಮಟ್ಟಿಗೆ ಪ್ರೋತ್ಸಾಹಿಸಿದರೆಂದರೆ, 1982ರಲ್ಲಿ ರಾಜೇಂದ್ರಸಿಂಗ್ ಬಾಬು ನಿರ್ದೇಶನದ ಹಿಂದಿ ಚಿತ್ರ 'ಶರಾರಾ' ಚಿತ್ರೀಕರಣ ಮೈಸೂರಿನಲ್ಲಿ ನಡೆಯುತ್ತಿದ್ದಾಗ ಆ ಚಿತ್ರದ ನಾಯಕ ಶತ್ರುಘ್ನಸಿನ್ಹರನ್ನು ಸಂದರ್ಶಿಸಿದ್ದರು. ಈ ಸಂದರ್ಭದಲ್ಲಿ ಅಂಬರೀಶ್ ಮತ್ತು ಶತ್ರುಘ್ನಸಿನ್ಹ ಮುಖ ಚಹರೆ ಒಂದೇ ರೀತಿ ಇರುವುದನ್ನು ಉಲ್ಲೇಖಿಸಿ ಬರೆದಿದ್ದರು.

1991ರ ದಸರಾ ಚಲನಚಿತ್ರೋತ್ಸವದ ಸಿನಿಮಾ ಆಯ್ಕೆ ಸಮಿತಿ ಅಧ್ಯಕ್ಷರಾಗಿ ಅತ್ಯುತ್ತಮ ಚಿತ್ರಗಳನ್ನು ಪ್ರದರ್ಶನಕ್ಕೆ ಸಿದ್ಧಪಡಿಸಿಕೊಟ್ಟಿದ್ದರು. ಹೀಗೆ ಪತ್ರಿಕಾ ವರದಿಗಾರರಾಗಿ, ವಿತರಕರಾಗಿ ಪ್ರಭಾವಿಯಾಗಿ ಬೆಳೆದಿದ್ದ ಕೆ.ಜೆ.ಕುಮಾರ್ 2004ರಲ್ಲಿ ಹೋಟೆಲ್ ಉದ್ಯಮಕ್ಕೆ ಕೈ ಹಾಕಿ ನಷ್ಟ ಅನುಭವಿಸಿದರು. 2012ರಲ್ಲಿ ಹೊಸ ದಿಗಂತ ದಿನಪತ್ರಿಕೆಗೆ ಸಿನಿಮಾ ವಿಭಾಗದ ಮುಖ್ಯಸ್ಥರಾಗಿ ಕೊನೆ ಉಸಿರೆಳೆಯುವವರೆಗೂ ಬದ್ಧತೆಯಿಂದ ಕೆಲಸ ಮಾಡುತ್ತಿದ್ದರು. ಕೊನೆಯ ದಿನಗಳಲ್ಲೂ ಕನ್ನಡ ಚಿತ್ರರಂಗದ ಕುರಿತು ಯೋಚಿಸುತ್ತಿದ್ದರೇ ಹೊರತು, ತಮ್ಮ ವೈಯಕ್ತಿಕ ಬದುಕಿನ ಕಡೆ ಚಿಂತಿಸುತ್ತಿರಲಿಲ್ಲ.

ಪ್ರಸ್ತುತ ನಾಯಕ ನಟರ ಧೋರಣೆ ಮತ್ತು ನಿರ್ಮಾಪಕರ ಬವಣೆ, ಇವರ ಮಧ್ಯೆ ಸಣ್ಣ-ಪುಟ್ಟ ಕಲಾವಿದರು ಹಾಗೂ ಸಿನಿಮಾ ತಂತ್ರಜ್ಞರು ಕೆಲಸವಿಲ್ಲದೆ ಪರದಾಡುತ್ತಿರುವುದರ ಬಗ್ಗೆ ತೀವ್ರ ವ್ಯಾಕುಲಗೊಳ್ಳುತ್ತಿದ್ದರು. ನಾಯಕ ನಟರು ದುಬಾರಿ ಸಂಭಾವನೆ ಕೈಬಿಟ್ಟು, ನಿರ್ಮಾಪಕ ಬದುಕುವಂಥ ಸಣ್ಣ ಬಜೆಟ್ಟಿನ ಉತ್ತಮ ಚಿತ್ರಗಳು ನಿರ್ಮಾಣವಾದರೆ ಕನ್ನಡ ಚಿತ್ರರಂಗ ಉಳಿಯುತ್ತೆ. ಕನ್ನಡದ ಜನಪ್ರಿಯ ನಟರು ವರ್ಷಕ್ಕೆ ಕನಿಷ್ಟ ಮೂರ್‍ನಾಲ್ಕು ಚಿತ್ರಗಳಲ್ಲಿ ಅಭಿನಯಿಸಿದರೆ, ಸಿನಿಮಾ ವೃತ್ತಿ ನಂಬಿ ಬದುಕುವ ಸಾವಿರಾರು ಜನ ನೆಮ್ಮದಿ ಕಾಣುತ್ತಾರೆ ಎಂದು ಭಾವಿಸಿದ್ದರು. ಹೀಗೆ ಕನ್ನಡ ಚಿತ್ರರಂಗದ ಪುನಶ್ಚೇತನದ ಬಗ್ಗೆ ಯೋಚಿಸುತ್ತಿದ್ದ ಕೆ.ಜೆ. ಕುಮಾರ್, ಕಳೆದ ಮಾರ್ಚ್ 11 ರಂದು ಬುಧವಾರ ಸಂಜೆ 5.10 ಗಂಟೆ ಸುಮಾರಿಗೆ ಕಾಮಾಕ್ಷಿ ಆಸ್ಪತ್ರೆಯಲ್ಲಿ ನನ್ನ ಕೈ ಹಿಡಿದುಕೊಂಡೇ ನನ್ನತ್ತ ನೋಡುತ್ತಾ ಪ್ರಾಣಬಿಟ್ಟರು. ಅವರ ನಿಸ್ತೇಜ ನೋಟದ ಹಿಂದೆ ಮಾಡಬೇಕಾದ ಬೆಟ್ಟದಷ್ಟು ಕೆಲಸ ಬಿಟ್ಟು ಹೋಗುತ್ತಿದ್ದೇನೆ ಎಂಬ ಅಸಹಾಯಕತೆ ಇತ್ತೆನಿಸುತ್ತೆ. ತಮಗಾಗಿ ಏನನ್ನೂ ಮಾಡಿಕೊಳ್ಳದೆ ಜೀವನ ನಡೆಸಿದ ಕೆ.ಜೆ.ಕುಮಾರ್ ನಮಗೆಲ್ಲಾ ಆದರ್ಶವಾಗಿದ್ದಾರೆ. ಅವರ ಕನಸಿನ ಆಸೆಗಳನ್ನು ಈಡೇರಿಸುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ ಅನ್ನಿಸುತ್ತೆ.

ಕಿರುಸುದ್ದಿ

ಸ್ಕೌಟ್ಸ್ ಪಾರಿತೋಷಕ ಪದಕ



◆ **ನರಗುಂದ:** ಪಟ್ಟಣದ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಯುವ ಕಲಾವಿದ ಪಂ. ಚಂದ್ರಕಾಂತ ಇನಾಮದಾರ ಅವರು ನ್ಯಾಷನಲ್ ಯೂತ್ ಅಡ್ವೆಂಚರ್ ಇನ್ಸ್ಟಿಟ್ಯೂಟ್, ಹರಿಯಾಣ ವತಿಯಿಂದ ಗೋವಾ ರಾಜ್ಯದಲ್ಲಿ ಆಯೋಜಿಸಲಾಗಿದ್ದ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಶಿಬಿರದಲ್ಲಿ ಕರ್ನಾಟಕ ರಾಜ್ಯದ 16 ಕೇಂದ್ರ ಸರ್ಕಾರದ ಶಾಲೆಗಳ ವಿದ್ಯಾರ್ಥಿಗಳೊಂದಿಗೆ ಸ್ಕೌಟ್ಸ್ ಮಾಸ್ಟರ್ ಆಗಿ ಭಾಗವಹಿಸಿ ಗಣನೀಯ ಸಾಧನೆ ಮೆರೆದಿದ್ದಾರೆ. ಯುವಜನರಲ್ಲಿ ಆತ್ಮಸ್ಥೈರ್ಯ, ಶಿಸ್ತು, ಸೇವಾ ಮನೋಭಾವ ಹಾಗೂ ನಾಯಕತ್ವ ಗುಣಗಳನ್ನು ಬೆಳೆಸುವ ಜೊತೆಗೆ ದೈಹಿಕ, ಬೌದ್ಧಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಬೋಧಿಸುವ ಉದ್ದೇಶದ ಆಯೋಜನೆಯು ಈ ತರಬೇತಿ ಹೊಂದಿದೆ. ಸಮಾಜದಲ್ಲಿ ಸುಸಂಸ್ಕೃತ, ಜವಾಬ್ದಾರಿಯುತ ನಾಗರಿಕರನ್ನು ರೂಪಿಸುವ ದಿಸೆಯಲ್ಲಿ ಇಂತಹ ಶಿಬಿರಗಳು ಮಹತ್ವದ ಪಾತ್ರ ವಹಿಸುತ್ತವೆ. 16 ಶಾಲೆಗಳ ವಿದ್ಯಾರ್ಥಿಗಳ ಪ್ರತಿನಿಧಿಯಾಗಿ, ಸ್ಕೌಟ್ಸ್ ಮಾಸ್ಟರ್ ಆಗಿ ಹಾಗೂ ವಿಶೇಷ ಸಂಗೀತ ಸಂಪನ್ಮೂಲ ವ್ಯಕ್ತಿಯಾಗಿ ಅತ್ಯುತ್ತಮ ಸೇವೆ ಸಲ್ಲಿಸಿದ ಪಂ. ಚಂದ್ರಕಾಂತ ಇನಾಮದಾರ ಅವರಿಗೆ ಸ್ಕೌಟ್ ಅಧಿಕಾರಿಗಳಾದ ಯಶವಾಲ ಹೊಣಾ, ಕೆ.ಪಿ. ಶರ್ಮಾ, ಲಕ್ಷ್ಮಣ ಚಲವಾದಿ, ಬಾಬುರಾವ ಮತ್ತು ಸಾಹು ಅವರ ಸಮ್ಮುಖದಲ್ಲಿ ಪಾರಿತೋಷಕ ಪದಕ ನೀಡಿ ಸನ್ಮಾನಿಸಲಾಯಿತು.

ಇಂದಿನಿಂದ ಜಾತ್ರೆ



◆ **ಲಕ್ಷ್ಮೇಶ್ವರ:** ಪಟ್ಟಣದ ಕೋಡಿ ಯಲ್ಲಮ್ಮ ದೇವಿಯ ಈ ದೇವಸ್ಥಾನದಲ್ಲಿ ಅನೇಕ ಪವಾಡಗಳು ನಡೆದಿರುವುದು ಪುರಾಣಗಳಲ್ಲಿ ಉಲ್ಲೇಖವಿದೆ. ತನ್ನಲ್ಲಿ ಭಕ್ತಿಯಿಂದ ಭಕ್ತರಿಗೆ ಇಷ್ಟಾರ್ಥಗಳನ್ನು ಕರುಣಿಸುವ ಜಾಗೃತ ದೇವತೆ ಇವಳಾಗಿದ್ದು, ಈ ದೇವಸ್ಥಾನದ ಜಾತ್ರೆ ಏ.2ರಂದು ನಡೆಯಲಿದೆ. ಶರೀಫ ಶಿವಯೋಗಿಗಳು ಹಾಗೂ ಗೋವಿಂದಭಟ್ಟರು ಎಂಬ ಶ್ರೇಷ್ಠ ಸಂತರಿಂದ ನಡೆದ ಘಟನೆ ಇಂದಿಗೂ ಜನಜನಿತವಾಗಿದೆ. ಅಮವಾಸ್ಯೆಯ ದಿವಸ ಹುಣ್ಣಿಮೆಯ ಚಂದ್ರನನ್ನು ದರ್ಶನ ಮಾಡಿಸಿ ಪವಾಡ ನಡೆಸಿದಂತ ಸ್ಥಳ ಇದಾಗಿದೆ ಎಂಬ ಪ್ರತೀತಿಯಿದೆ. ಈ ವರ್ಷದ ಕೋಡಿ ಯಲ್ಲಮ್ಮದೇವಿಯ ಜಾತ್ರಾ ಮಹೋತ್ಸವ ಪ್ರತಿವರ್ಷದಂತೆ ದವನದ ಹುಣ್ಣಿಮೆಯ ದಿನ ನೆರವೇರಲಿದೆ. ಏ.2ರಂದು ಬೆಳಗ್ಗೆ ಗಂಗಪೂಜೆ ಕೋಡಿ ಯಲ್ಲಮ್ಮದೇವಿಯ ಭಾವಚಿತ್ರ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಹಾಯ್ದು ದೇವಸ್ಥಾನಕ್ಕೆ ತಲುಪುವುದು. ಸಂಜೆ 5ಕ್ಕೆ ರಥೋತ್ಸವ ಜರುಗಲಿದ್ದು, ಏ.3ರಂದು ಸಂಜೆ 5ಕ್ಕೆ ಕಡುಬಿನ ಕಾಳಗ ಜರುಗಲಿದೆ. ಏ.4ರಿಂದ 6ರ ವರೆಗೆ ನಾಡಿನ ಜಂಗಿ ಬಯಲು ಕುಸ್ತಿಗಳು ಜರುಗಲಿವೆ ಎಂದು ಭಕ್ತ ಕಮಿಟಿ ಪ್ರಕಟಣೆ ನೀಡಿದೆ.

ಜಯಂತಿ ಇಂದು

◆ **ಗದಗ:** ಇಲ್ಲಿನ ಕಳಸಾಪೂರ ರಸ್ತೆಯ ವಿಶ್ವೇಶ್ವರಯ್ಯ ನಗರದ ವಿಘ್ನೇಶ್ವರ ಸೇವಾ ಸಮಿತಿಯ ಏ.2 ರಂದು ಆಂಜನೇಯ ಸ್ವಾಮಿ ಜಯಂತ್ಯುತ್ಸವ, ಮಹಾಲಿಂಗೇಶ್ವರರಿಗೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ, ಬೆಳಗ್ಗೆ 5ಕ್ಕೆ ಮಹಾರುದ್ರಾಭಿಷೇಕ, ಬೆಳಗ್ಗೆ 6 ರಿಂದ 6.30 ರವರೆಗೆ ಪ್ರಾರ್ಥನೆ, 6.30ಕ್ಕೆ ಬಾಲಹನುಮ ತೊಟ್ಟಿಲೋತ್ಸವ, ಜೋಗುಳ, ಮುತ್ತೈದೆಯರಿಗೆ ಉಡಿ ತುಂಬುವುದು, ಕೋಟಿ ಓಂ ನಾಮ ಶಿವಾಯ ಜಪ ಮುಕ್ತಾಯದ ಅಂಗವಾಗಿ ರುದ್ರ ಹೋಮ, ಸಂಜೆ 6ಕ್ಕೆ ಪಲ್ಲಕ್ಕಿ ಉತ್ಸವ ಜರುಗುವುದು.

ಮಾರುಕಟ್ಟೆ ಧಾರಣೆ

ಗದಗ — ಕ್ವಿಂಟಾಲ್

ಗೆಜ್ಜೆ ಶೇಂಗಾ	3124-7306
ಅಜವಾನ	8169-8819
ಅಲಸಂದಿಕಾಳು	1009-6210
ಕಡಲೆ	1165-5401
ಉದ್ದು	1712-6044
ಅವರೆ	1012-4609
ಗೋವಿನಜೋಳ	1461-1829
ಹೆಸರು	1080-8659
ಹುರಳಿ	3079-4379
ಗುರೆಳ್ಳು	11000-11400
ಒಣಮೆಣಸಿನಕಾಯಿ	2786-51786
ಜೋಳ	1401-4637
ಸೋಯಾಬಿನ	4044-4044
ಕುಸುಬಿ	4609-5374
ಸೂರ್ಯಕಾಂತಿ	5469-6670
ಕುಸುಬಿ	4609-5374
ಸೂರ್ಯಕಾಂತಿ	5469-6670
ತೊಗರಿ	4209-4644
ಮಡಕಿ	2209-2209
ನವಣೆ	2361-2361
ಗೋಧಿ	1409-5177
ಕಾಟನ್	7000-7000



ಗದಗ: ತಾಲೂಕಿನ ಲಕ್ಕುಂಡಿ ಗ್ರಾಮದ ಕೋಟಿ ವೀರಭದ್ರೇಶ್ವರ ರಥೋತ್ಸವವು ಸಾವಿರಾರು ಭಕ್ತಾದಿಗಳ ಮಧ್ಯೆ ಸಂಭ್ರಮದಿಂದ ಜರುಗಿತು. ಡೋಣಿಯ ನಂದಿವೇರಿಮಠದ ಶಿವಕುಮಾರ ಸ್ವಾಮೀಜಿ, ಹರ್ಲಾಪೂರ ಡಾ. ಕೊಟ್ಟೂರೇಶ್ವರ ಸ್ವಾಮೀಜಿ ಹಾಗೂ ಅಲ್ಲಮಪ್ರಭುದೇವರ ಮಠದ ಸಿದ್ದಲಿಂಗೇಶ್ವರ ಸ್ವಾಮೀಜಿ ವಿಧಿ ವಿಧಾನಗಳೊಂದಿಗೆ ರಥಕ್ಕೆ ಪೂಜೆ ಸಲ್ಲಿಸುವದರೊಂದಿಗೆ ರಥೋತ್ಸವಕ್ಕೆ ಚಾಲನೆ ನೀಡಿದರು.

ಲಿಂ. ವೀರಗಂಗಾಧರ ಶ್ರೀ ಸರ್ವರಿಗೂ ದಾರಿದೀಪ

◆ **ಲಕ್ಷ್ಮೇಶ್ವರ:** ಜೀವನದುದ್ದಕ್ಕೂ ಧರ್ಮ, ಸಂಸ್ಕೃತಿ, ಪರಂಪರೆ, ಕಾಯಕನಿಷ್ಠೆ, ಸಮನ್ವಯತೆ ಹೀಗೆ ಲೋಕಕಲ್ಯಾಣಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡು ಇಂದಿಗೂ ಎಂದೆಂದಿಗೂ ದಾರಿ ದೀಪವಾಗಿರುವವರು ಆಧ್ಯಾತ್ಮಿಕ ಲೋಕದ ಕೀರ್ತಿ ಕಲಶ ಲಿಂ. ವೀರಗಂಗಾಧರ ಜಗದ್ಗುರುಗಳು ಎಂದು ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರು ಹೇಳಿದರು. ಅವರು ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ಲಿಂ. ವೀರಗಂಗಾಧರ ಜಗದ್ಗುರುಗಳ 123ನೇ ಜಯಂತಿ ನಿಮಿತ್ತ ಕರ್ತೃಗದ್ದಿಗೆಗೆ ಮಹಾರುದ್ರಾಭಿಷೇಕ, ಅಷ್ಟೋತ್ತರ, ಮಹಾ ಮಂಗಳಾರತಿ ನೆರವೇರಿಸಿ ಮಾತನಾಡಿ, ತನಗಾಗಿ ಬಯಸುವುದು ಜೀವಗುಣ. ಎಲ್ಲರಿಗಾಗಿ ಬಯಸುವುದು ದೇವಗುಣ. ಅಂಥ ದೇವಗುಣಗಳ ಅಕ್ಷಯ ನಿಧಿ ಲಿಂ. ರಂಭಾಪುರಿ ವೀರಗಂಗಾಧರ ಜಗದ್ಗುರುಗಳು ಎಂಬುದನ್ನು ಯಾರೂ ಮರೆಯಬಾರದೆಂದರು. ಹೆತ್ತ ತಾಯಿ-ಹೊತ್ತ ಭೂಮಿಯನ್ನು ಹೇಗೆ ಮರೆಯಲು ಸಾಧ್ಯವಿಲ್ಲವೋ ಅದೇ ರೀತಿ ನಮ್ಮ ನೆಲದ ಧರ್ಮ, ಸಂಸ್ಕಾರ, ಸಂಸ್ಕೃತಿ, ಪರಂಪರೆ, ಆದರ್ಶ ಮೌಲ್ಯಗಳನ್ನು ಎತ್ತಿ ಹಿಡಿಯುವ ಮೂಲಕ ಸಮಾಜದಲ್ಲಿ ಸಮಾನತೆ, ಶಾಂತಿ-ಸಮೃದ್ಧಿ ನೆಲೆಗೊಳ್ಳುವಂತಾಗಲು ಲಿಂ. ರಂಭಾಪುರಿ ವೀರಗಂಗಾಧರ ಜಗದ್ಗುರುಗಳು ಸಾರಿದ ವಿಶ್ವ ಶಾಂತಿಯ ಸಂದೇಶ ಮಾನವ ಧರ್ಮಕ್ಕೆ ಜಯವಾಗಲಿ-ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಮಂತ್ರ ಎಲ್ಲರ ಉಸಿರಾಗಬೇಕು ಎಂದರು. ಕಲಾದಗಿಯ ಗಂಗಾಧರ ಶಿವಾಚಾರ್ಯರು ಪೂಜಾ ಕೈಂಕರ್ಯ ನೆರವೇರಿಸಿದರು.



ಲಕ್ಷ್ಮೇಶ್ವರ: ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ಲಿಂ. ವೀರಗಂಗಾಧರ ಜಗದ್ಗುರುಗಳ 123ನೇ ಜಯಂತಿ ನಿಮಿತ್ತ ಕರ್ತೃಗದ್ದಿಗೆಗೆ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರು ಮಹಾರುದ್ರಾಭಿಷೇಕ, ಅಷ್ಟೋತ್ತರ, ಮಹಾ ಮಂಗಳಾರತಿ ನೆರವೇರಿಸಿದರು. ಕಲಾದಗಿಯ ಗಂಗಾಧರ ಶಿವಾಚಾರ್ಯರು ಪೂಜಾ ಕೈಂಕರ್ಯ ನೆರವೇರಿಸಿದರು.

ಈಜುಗೊಳದಿಂದ ಸರ್ಕಾರಕ್ಕೆ ಉತ್ತಮ ಆದಾಯ | ರಂಗೇರಿದ ಸ್ವಿಮ್ಮಿಂಗ್‌ಪೂಲ್

ಈಜುಕೊಳದಲ್ಲಿ ಮಕ್ಕಳ ಕಲರವ

▸ ರುದ್ರಗೌಡ ಪಾಟೀಲ

ದಿಗಂತ ವಿಶೇಷ

◆ **ಗದಗ:** ಬೇಸಿಗೆಯ ರಜೆ ಸಿಕ್ಕಿದ್ದೇ ತಡ ಪುಟಾಣಿಗಳಿಂದ ಹಿಡಿದು ಎಲ್ಲಾ ವಯೋಮಾನದ ಮಕ್ಕಳು ಈಜುಕೊಳದಲ್ಲಿ ಮೀನಿನಂತೆ ಈಜುತ್ತಿದ್ದಾರೆ. ಸಂತಸ, ಸಂಭ್ರಮದಲ್ಲಿ ತೇಲುತ್ತಿದ್ದಾರೆ. ಬಿಸಿಲತಾಪದಿಂದ ಬಳಲಿ ಬೆಂಡಾದ ಮಕ್ಕಳು ತಣ್ಣೀರಿನ ಈಜುಕೊಳದಲ್ಲಿ ಈಜಿ ದೇಹ ತಂಪು ಮಾಡಿಕೊಳ್ಳುವ ಜತೆಗೆ ಈಜು ಕಲಿಕೆಗೆ ಹೆಚ್ಚು ಆಸಕ್ತಿ ತೋರುತ್ತಿದ್ದಾರೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದ ಆವರಣದಲ್ಲಿರುವ ಈಜುಕೊಳಗಳು ಬೆಳಗ್ಗೆಯಿಂದ ಸಂಜೆವರೆಗೆ ತುಂಬಿತುಳುಕುತ್ತಿವೆ. ಬೇಸಿಗೆ ಸಂದರ್ಭದಲ್ಲೇ ಬಹುತೇಕ ಪೋಷಕರು ಮಕ್ಕಳಿಗೆ ಈಜು ಕಲಿಸುವ ಆಲೋಚನೆ ಮಾಡುತ್ತಾರೆ. ಪರೀಕ್ಷೆಗಳೆಲ್ಲ ಮುಗಿದು ರಜೆಯ ಮಜಾ ಅನುಭವಿಸುತ್ತಿರುವ ಮಕ್ಕಳಿಗೆ ಪೋಷಕರು ಲಭ್ಯವಿರುವ ಕಡೆ ಈಜು ಕಲಿಸಲು ಉತ್ಸಾಹ ತೋರುತ್ತಿದ್ದಾರೆ. ನೃತ್ಯ, ಚಿತ್ರಕಲೆ, ನಾಟಕ, ಸಂಗೀತ ಮುಂತಾದವುಗಳಿಗೆ ಆದ್ಯತೆ ನೀಡಿದ ಬೇಸಿಗೆ ಶಿಬಿರಗಳಿಗೆ ಮಕ್ಕಳನ್ನು ಕಳುಹಿಸಿ ಚಟುವಟಿಕೆಯಿಂದ ಇರಲಿ ಎಂದು ಆಲೋಚನೆ ಮಾಡುತ್ತಿದ್ದರೆ, ಇನ್ನೂ ಕೆಲವರು ಮಕ್ಕಳಿಗೆ ಈಜು ಕಲಿಸುವುದು ಉತ್ತಮ ಎಂದುಕೊಂಡು ಈಜುಕೊಳದತ್ತ ಮುಖಮಾಡುತ್ತಿದ್ದಾರೆ. ಗ್ರಾಮೀಣ ಭಾಗದ ಮಕ್ಕಳು, ಯುವಕರು ಅಪರೂಪಕ್ಕೆ ಇನ್ನೂ ಅಲ್ಲಲ್ಲಿ ಇರುವ ಬಾವಿಗಳನ್ನು ಹುಡುಕಿಕೊಂಡು ಹೋಗಿ ಬೇಸಿಗೆ ಧಗೆಯಿಂದ ಪಾರಾಗಲು ಪ್ರಯತ್ನಿಸುತ್ತಿದ್ದಾರೆ. ಬೆಳಗ್ಗೆ 10 ಗಂಟೆಯಿಂದಲೇ ಈಜಲು ಯೋಗ್ಯವಾದ ಬಾವಿಗಳು ಸಂಜೆ ನಾಲ್ಕು ಗಂಟೆವರೆಗೂ ಮಕ್ಕಳಿಂದ ತುಂಬಿ ತುಳುಕುತ್ತಿರುವುದು ಕಂಡುಬರುತ್ತಿದೆ.



- ಈಜುಗೊಳಗಳಿಂದ ಉತ್ತಮ ಆದಾಯ
- ಬೆಳಗ್ಗೆ 6ರಿಂದ ಸಂಜೆ 4ರ ವರೆಗೆ ಪುರುಷರಿಗೆ ಅವಕಾಶ
- ಸಂಜೆ 4ರಿಂದ 6ರ ವರೆಗೂ ಮಹಿಳೆಯರಿಗೆ ಸಮಯಾವಕಾಶ
- ಸೋಮರದಿಂದ ಶುಕ್ರವಾರವರೆಗೆ ಆದಾಯ ಸಾಮಾನ್ಯವಾಗಿದ್ದು ವಾರಾಂತ್ಯದಲ್ಲಿ ದಿನಕ್ಕೆ 25 ಸಾವಿರ ರೂ.ಗಳವರೆಗೂ ಹಣ ಸಂಗ್ರಹ
- ಬೇಸಿಗೆ ರಜೆ ಪ್ರಾರಂಭವಾದರೆ ಇನ್ನೂ ಹೆಚ್ಚು ಹಣ ಹರಿದು ಬರುವ ನಿರೀಕ್ಷೆ

> ವಾರಾಂತ್ಯದಲ್ಲಿ ಹೆಚ್ಚು ಜನ ಬರುತ್ತಿದ್ದಾರೆ. ಸರ್ಕಾರದ 4 ಈಜುಗೊಳ ಸೇರಿ ದಿನಕ್ಕೆ 25 ಸಾವಿರ ವರೆಗೆ ಹಣ ಸಂಗ್ರಹವಾಗುತ್ತದೆ. ಶಾಲಾ ಕಾಲೇಜು ರಜೆ ನೀಡಿದ ಮೇಲೆ ಇನ್ನೂ ಹೆಚ್ಚು ಬರುವ ನಿರೀಕ್ಷೆಯಲ್ಲಿದ್ದೇವೆ.
> ■ **ಶರಣು ಗೋಗೇರಿ,** ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ

ಈಜು ಕಲಿಕೆ

ಪೋಷಕರು ತಮ್ಮ ಮಕ್ಕಳೊಂದಿಗೆ ಹಾಜರಾಗಿ ಮಕ್ಕಳ ಈಜಿನ ನೋಟವನ್ನು ಕಣ್ತುಂಬಿಸಿಕೊಳ್ಳುತ್ತಿದ್ದಾರೆ. ಮುಂಜಾನೆ ಆರರಿಂದ ಆರಂಭವಾಗಿ ಸಂಜೆ ತನಕ ಒಂದು ಬ್ಯಾಚ್‌ನಂತೆ ಈಜು ಕಲಿಕೆಯನ್ನು ಬೇಸಿಗೆ ಅಂಗವಾಗಿ ಕಲಿಸುತ್ತಿದ್ದು, ಪ್ರತಿಬ್ಯಾಚ್‌ನಲ್ಲಿ 20 ರಿಂದ 40 ಮಕ್ಕಳು ಬಂದು ಈಜು ಕಲಿಯುತ್ತಿದ್ದಾರೆ. ಕಲಿತವರು ಮೇಲಿಂದ ಜಿಗಿಯುವುದು, ಮುಳುಗಿ ಈಜುವುದು ಹೀಗೆ ತರಾವರಿ ಕಸರತ್ತಿನ ಮೂಲಕ ಆಕರ್ಷಣೆಗೆ ಒಳಗಾಗುತ್ತಿದ್ದಾರೆ. ಈಜು ಕಲಿಕೆ ಆರಂಭಿಸಿರುವ ಚಿಣ್ಣರು ಕೈಗೆ ರಕ್ಷಾ ಕವಚ ತೊಟ್ಟು, ತಲೆಗೆ ಬಣ್ಣ, ಬಣ್ಣದ ಟೋಪಿ ಹಾಕಿಕೊಂಡು ಮುಂಜಾಗ್ರತೆಯೊಂದಿಗೆ ಸ್ವಿಮ್ಮಿಂಗ್‌ಪೂಲ್ ರಂಗೇರುವಂತೆ ಮಾಡಿದ್ದಾರೆ.

ನಾಲ್ಕು ಈಗುಗೊಳ

ನಗರದ ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣ, ನಂದೀಶ್ವರ ನಗರ, ರಾಜೀವಗಾಂಧಿ ನಗರ, ಬೆಟಗೇರಿಯ ವಸಂತಸಿಂಗ್ ಜಮಾದಾರ ನಗರ ಸೇರಿದಂತೆ ಒಟ್ಟು ನಾಲ್ಕು ಸರ್ಕಾರಿ ಈಜುಗೊಳವಿದ್ದು ಪ್ರತಿದಿನ ಬೆಳಗ್ಗೆ 6 ರಿಂದ ಸಂಜೆ 6 ಗಂಟೆಯ ವರೆಗೆ ಈಜುಗೊಳ ತೆರೆದಿರಲಿದ್ದು, ಯುವಕರಿಗೆ ಬೇಸಿಗೆಯ ಬಿಸಿಲಿಂದ ಕೊಂಚ ಪಾರಾಗಲು ಉತ್ತಮ ಅವಕಾಶವಾಗಿದೆ.



ಪೊಲೀಸ್ ಕಣ್ಗಾವಲು ಗೋಪುರಕ್ಕೆ ಮೆರಗು



◆ **ಲಕ್ಷ್ಮೇಶ್ವರ:** ಅನಾಥವಾಗಿದ್ದ ಪೊಲೀಸ್ ಕಣ್ಗಾವಲು ಗೋಪುರಕ್ಕೆ ಇದೀಗ ವಿಶೇಷ ಮೆರಗು ನೀಡಲಾಗಿದ್ದು, ಸಾರ್ವಜನಿಕರ ಹಲವು ದಿನಗಳ ಬೇಡಿಕೆ ಅಂತೂ ಈಡೇರಿದಂತಾಗಿದೆ.

ಕಳೆದ 10 ವರ್ಷದ ಹಿಂದೆ ಲಕ್ಷ್ಮೇಶ್ವರದಲ್ಲಿ ಹೆಚ್ಚಿನ ವಾಹನ ನಿಯಂತ್ರಣ ಮಾಡಲು ಸಾರ್ವಜನಿಕರಿಗೆ ಪೊಲೀಸ್ ಇಲಾಖೆಯಿಂದ ಟ್ರಾಫಿಕ್ ರೂಲ್ಸ್ ಇನ್ನುಳಿದ ಮಾಹಿತಿ ನೀಡಲು ಹಾಗೂ ವಾಹನ ತಪಾಸಣೆ ಮಾಡುವ ಉದ್ದೇಶದಿಂದ ಅಂದಿನ ಪಿಎಸ್ಐ.ಡಿ. ರವಿಚಂದ್ರ ಅವರು ಸಾರ್ವಜನಿಕರಿಂದ ಹಣ ಸಂಗ್ರಹ ಮಾಡಿ ವ್ಯವಸ್ಥಿತವಾದ ಪೊಲೀಸ್ ಕಣ್ಣಾವಲು ಗೋಪುರ ನಿರ್ಮಾಣ ಮಾಡಿ ಜನರ ಸೇವೆಗಾಗಿ ಅನುಕೂಲ ಮಾಡಿಕೊಟ್ಟಿದ್ದರು. ಆದರೆ ಈಗ ಅದು ಅನಾಥವಾಗಿದೆ. ಆ ಪೊಲೀಸ್ ಚೌಕಿಗಳು ಸಧ್ಯ ಹಲವು ವರ್ಷಗಳಿಂದನಿರುಪಯುಕ್ತವಾಗಿಬಿದ್ದಿದ್ದು, ಈ ಬಗ್ಗೆ ಪೊಲೀಸ್ ಇಲಾಖೆ ಗಮನ ಹರಿಸುತ್ತಿಲ್ಲ ಎಂದು ಜನವರಿ 31ರಂದು ಹೊಸದಿಗಂತ ಪತ್ರಿಕೆಯಲ್ಲಿ ಅನಾಥವಾದ ಪೊಲೀಸ್ ಕಣ್ಣಾವಲು ಗೋಪುರ ಎಂಬ ಶೀರ್ಷಿಕೆ ಅಡಿಯಲ್ಲಿ ಸುದ್ದಿ ಪ್ರಕಟ ಮಾಡಿತ್ತು. ಇದನ್ನು ಗಮನಿಸಿದ್ದ ಸಿಪಿಐ ಬಿ.ವಿ. ನ್ಯಾಮಗೌಡ ಹಾಗೂ ಪಿಎಸ್‌ಐ ನಾಗರಾಜ ಗಡದ ಅವರು ಶಿಗ್ಲಿ ಕ್ರಾಸ್ ಹಾಗೂ ದೂದನಾನಾ ದರ್ಗಾ ಹತ್ತಿರ ಇರುವ ಪೊಲೀಸ್ ಕಣ್ಗಾವಲು ಗೋಪುರಕ್ಕೆ ವಿಶೇಷ ಮೆರಗುಕೊಡಿಸಿದ್ದಾರೆ.

ದಿಗಂತ ವರದಿ ಪರಿಣಾಮ



ಸೇವೆಗೆ ಸನ್ನದ್ಧ

ಗೋಪುರ ಬಣ್ಣಗಳಿಂದ ಕಂಗೊಳಿಸುತ್ತಿದ್ದು, ಸುತ್ತಲೂ ಜಾಗೃತಿ ಮೂಡಿಸುವ ಮನೆ ಕಳ್ಳತನ, ವಾಹನ ಕಳ್ಳರಿಂದ ಸರಗಳ್ಳತನ, ಸೈಬರ್ ಅಪರಾಧ ಬಗ್ಗೆ ಜಾಗೃತಿ ಮೂಡಿಸುವ ಬರಹಗಳು, ತುರ್ತು ಸಹಾಯವಾಣಿ, ಮಕ್ಕಳ ಸಹಾಯವಾಣಿ ಸೈಬರ್ ಅಪರಾದ ಸಹಾಯವಾಣಿ ಹೀಗೆ ಪೊಲೀಸ್ ಇಲಾಖೆ ಜನ ಸೇವೆಗೆ ಸನ್ನದ್ಧವಾಗಿದೆ.

ನೀರಿನ ಅಪವ್ಯಯ ತಡೆಯಿರಿ: ನ್ಯಾ. ನಾಗವೇಣಿ

◆ **ಗದಗ:** ನೀರಿನ ಕೊರತೆಯ ಬಗ್ಗೆ ಅರಿವು ಮೂಡಿಸಿ ಅದರ ಅಪವ್ಯಯವನ್ನು ತಡೆಯಬೇಕು. ಮಳೆನೀರು ಸಂಗ್ರಹಣೆ, ಪ್ಲಾಸ್ಟಿಕ್ ವಸ್ತುಗಳನ್ನು ಬಳಸಿ ನೀರು ಸಂರಕ್ಷಿಸುವ ಕ್ರಮಗಳನ್ನು ಅನುಸರಿಸಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ನಾಗವೇಣಿ ಹೇಳಿದರು.

ನಗರದ ಜಿಲ್ಲಾ ನ್ಯಾಯಾಲಯದ ಎರಡನೇ ಮಹಡಿಯ ವಿ.ಸಿ.ಸಭಾಂಗಣದಲ್ಲಿ ಬುಧವಾರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಹಾಗೂ ವಾಟರ್ ಫಾರ್ ವಾಯ್ಸ್‌ಲೆಸ್ ಸಂಸ್ಥೆಯ ಸಹಯೋಗದಲ್ಲಿ ವಿಶ್ವ ಜಲ ದಿನಾಚರಣೆ ಅಂಗವಾಗಿ ಹಮ್ಮಿಕೊಂಡ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಾಟರ್ ಫಾರ್ ವಾಯ್ಸ್‌ಲೆಸ್ ಸಂಸ್ಥೆಯ ಸಂಸ್ಥಾಪಕ ಜೈನ್ ಸನ್ನಿ ಹಸ್ತಿಮಲ್ ಮಾತನಾಡಿ, ಪ್ರಾಣಿ, ಪಕ್ಷಿಗಳಿಗೆ ಶುದ್ಧ ನೀರು ಸಿಗದಿದ್ದರೆ ಅವುಗಳು ವಲಸೆ ಹೋಗುವ ಪರಿಸ್ಥಿತಿ ಎದುರಾಗುತ್ತದೆ. ನೀರಿನ ಕೊರತೆ ಕಾಡುಪ್ರಾಣಿಗಳನ್ನು ಗ್ರಾಮಗಳತ್ತ ಸೆಳೆಯುತ್ತಿದೆ. ಒಂದು ಆಕಳಿಗೆ ದಿನಕ್ಕೆ ಸುಮಾರು 40 ಲೀಟರ್ ನೀರು ಅಗತ್ಯವಿದ್ದು, ನೀರಿನ ಕೊರತೆಯಿಂದ ಅನೇಕ ರೋಗಗಳಿಗೆ ತುತ್ತಾಗುತ್ತವೆ. ಗರ್ಭಿಣಿ ಪ್ರಾಣಿಗಳು ನೀರಿಗಾಗಿ ಹೆಚ್ಚು ಸಂಕಷ್ಟ ಅನುಭವಿಸುತ್ತವೆ ಎಂದರು.

ಕುಟುಂಬ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶ ಗಂಗಾಧರ ಸಿ.ಎಂ., ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೇ ಗೀತಾ ಶಿಂಧೆ, ಹಿರಿಯ ಸಿವಿಲ್ ನ್ಯಾಯಾಧೀಶ ಗಿರಿಮಲ್ಲಪ್ಪ ಆರ್. ಶೆಟ್ಟರ್, ಜಿಲ್ಲಾ ವಕೀಲಕ ಸಂಘದ ಉಪಾಧ್ಯಕ್ಷ ಎಂ.ಎ. ಸಂಗನಾಳ ಇತರರಿದ್ದರು.

> ಪ್ರತಿ ಮನೆಯ ಮುಂಭಾಗದಲ್ಲಿ ಪ್ರಾಣಿ, ಪಕ್ಷಿಗಳಿಗಾಗಿ ತೆಂಗಿನ ಚಿಪ್ಪು ಅಥವಾ ಪಾತ್ರೆಗಳಲ್ಲಿ ನೀರು ಇಡುವ ಅಭ್ಯಾಸ ಬೆಳೆಸಿಕೊಳ್ಳಬೇಕು. ನೀರು ಮಾನವರಿಗೆ ಮಾತ್ರವಲ್ಲ, ಪ್ರಾಣಿ, ಪಕ್ಷಿಗಳ ಬದುಕಿಗೂ ಮುಖ್ಯವಾಗಿದೆ.
> ■ **ನಾಗವೇಣಿ,** ಸತ್ರ ನ್ಯಾಯಾಧೀಶೆ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ

> ನೀರಿನ ಮಹತ್ವವನ್ನು ವರ್ಷದಿಂದ ವರ್ಷಕ್ಕೆ ಜಾಗೃತಿಯ ಮೂಲಕ ಸಾರಬೇಕಿದೆ. ಇಂದಿನ ಪರಿಸ್ಥಿತಿಯಲ್ಲಿ ನೀರನ್ನು ಖರೀದಿಸುವ ಮಟ್ಟಕ್ಕೆ ತಲುಪಿರುವುದು ಆತಂಕಕಾರಿ ಬೆಳವಣಿಗೆ.
> ■ **ಆರ್.ಜಿ. ಕಲ್ಲೂರ,** ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ



ಭಾರೀ ಗಾತ್ರದ ಟಿಪ್ಪರ್ ತಡೆದು ಯಳವತ್ತಿ ರೈತರಿಂದ ಪ್ರತಿಭಟನೆ

◆ **ಲಕ್ಷ್ಮೇಶ್ವರ:** ತಾಲೂಕಿನ ಯಳವತ್ತಿ ಗ್ರಾಮದಿಂದ ಲಕ್ಷ್ಮೇಶ್ವರ ಪಟ್ಟಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಮೂಲಕ ಗಾಳಿಯಂತ್ರ ಸ್ಥಾಪನೆ ಮಾಡುವ ಕಂಪನಿಯ ಭಾರೀ ಗಾತ್ರದ ಟಿಪ್ಪರ್‌ಗಳು ಅತಿಯಾದ ಭಾರ ಹೊತ್ತು ಸಾಗುವುದರಿಂದ ರಸ್ತೆಗಳು ಹಾಳಾಗುತ್ತಿವೆ ಎಂದು ಯಳವತ್ತಿ ಗ್ರಾಮದ ರೈತರು ಭಾರೀ ಗಾತ್ರದ ಟಿಪ್ಪರ್ ತಡೆದು ಪ್ರತಿಭಟನೆ ಮಾಡಿದ ಘಟನೆ ನಡೆದಿದೆ.

ಈ ವೇಳೆ ಗ್ರಾಮದ ರೈತ ಮುಖಂಡರಾದ ಬಾಪುಗೌಡ ಭರಮಗೌಡರ, ಸುರೇಶ ಬೀರಣ್ಣವರ, ರಾಚಪ್ಪ ಅಜ್ಜನ ಗೌಡರ ಅವರು ಮಾತನಾಡಿ, ಕಳೆದ 3-4 ವರ್ಷಗಳ ಹಿಂದೆ ಪ್ರಧಾನ ಮಂತ್ರಿ ಗ್ರಾಮ ಸಿಂಡಿಕೇಟ್ ಯೋಜನೆ ಅಡಿಯಲ್ಲಿ ನಿರ್ಮಿಸಿದ ರಸ್ತೆಯಿಂದ ರೈತರು ತಮ್ಮ ಹೊಲಗಳಿಗೆ ಹೋಗಿ ಬರಲು ಅನಕೂಲವಾಗಿವೆ. ಆದರೆ ಗಾಳಿ ಯಂತ್ರ ಅಳವಡಿಸಲು ಹೋಗುತ್ತಿರುವ ಟ್ರಕ್ ಮತ್ತು ಟಿಪ್ಪರ್‌ಗಳು ಅತಿಯಾದ ಭಾರ ಹೊತ್ತು ಸಾಗುವುದರಿಂದ ರಸ್ತೆಗಳು ಕೆಲವೇ ತಿಂಗಳಲ್ಲಿ ಹಾಳಾಗಿ ಹೋಗುವುದರಿಂದ ರೈತರ ಎತ್ತಿನ ಚಕ್ಕಡಿ ಹಾಗೂ ಟ್ರ್ಯಾಕ್ಟರ್‌ಗಳು ಸಂಚಾರ ಮಾಡಲು ಸಾಧ್ಯವಿಲ್ಲದಂತಾಗಿದೆ. ಗಾಳಿ ಯಂತ್ರ ಅಳವಡಿಸಲು ಮುಂದಾಗಿರುವ ಕಂಪನಿಗಳ ಮಾಲೀಕರು ಹಾಗೂ ಜಿಪಂ ಇಲಾಖೆಯ ಅಧಿಕಾರಿಗಳು ಬಂದು ನಮ್ಮ ಸಮಸ್ಯೆಗೆ ಪರಿಹಾರ ನೀಡುವವರೆಗೆ ಭಾರೀ ವಾಹನ ಸಂಚಾರಕ್ಕೆ ಅವಕಾಶ ನೀಡುವುದಾಲ್ಲವೆಂದು ಗ್ರಾಮಸ್ಥರು ಹೇಳಿದರು. ಆರ್.ಬಿ. ಅಜ್ಜನಗೌಡ್ರು, ಸುರೇಶ ಬೀರಣ್ಣವರ್, ಉಮೇಶಜೋಶಿ ಫಕೀರೇಶ ಜವಳಿ, ವಸಂತಗೌಡ ಬಾಗೇವಾಡಿ, ಹುಸೇನಸಾಬ ಮಸೂತಿ, ಶಿವಣ್ಣ ಗಡಿಯನ್ನವರ, ನಾಗಪ್ಪ ಹೂಗಾರ, ಬಸವರಾಜ ನೀಲಗುಂದ, ರಾಜಪ್ಪ ಬ್ಯಾಟಿ, ಉದಯ್ ಹೂಗಾರ, ಬಸು ಗಡೆಣ್ಣವರ, ರುದ್ರಗೌಡ ಪಾಟೀಲ ಸೇರಿದಂತೆ ಗ್ರಾಮದ ರೈತರು ಇದ್ದರು.



ವೃತ್ತಿ ರಂಗಭೂಮಿ ಕಲಾವಿದರಿಗೆ ಪ್ರೋತ್ಸಾಹ ಅಗತ್ಯ: ರಾಮಕೃಷ್ಣ ದೊಡ್ಡಮನಿ

◆ **ಮುಂಡರಗಿ:** ಭಾರತದ ಹೆಮ್ಮೆಯ ವೃತ್ತಿ ನಾಟಕ ಸಂಸ್ಥೆ ದಾವಣಗೇರಿಯ ಕೆ.ಬಿ.ಆರ್.ಡ್ರಾಮಾ ಕಂಪನಿ. ನೂರು ವರ್ಷದ ಹೊಸ್ತಿಲಿನಲ್ಲಿರುವ ಈ ಕಂಪನಿ ನುರಿತ ಕಲಾವಿದರಿಂದ ಸಮಾಜವನ್ನು ತಿದ್ದುವ ನಾಟಕಗಳನ್ನು ಪ್ರದರ್ಶಿಸುತ್ತಾ ಬಂದಿರುವುದು ವಿಶೇಷ. ವೃತ್ತಿ ರಂಗಭೂಮಿಯ ಕಲಾವಿದರನ್ನು ಪ್ರೋತ್ಸಾಹಿಸುವುದೊಂದಿಗೆ ವೃತ್ತಿ ರಂಗಭೂಮಿಯನ್ನು ಉಳಿಸಿ ಬೆಳೆಸುವುದು ನಮ್ಮ ಕರ್ತವ್ಯವಾಗಬೇಕು ಎಂದು ಮಾಜಿ ಶಾಸಕ, ಕಲಾವಿದ ರಾಮಕೃಷ್ಣ ದೊಡ್ಡಮನಿ ಹೇಳಿದರು.

ಅವರು ಚಿಂದೋಡಿ ಶ್ರೀಕಂಠೇಶ್ ಅವರ ದಾವಣಗೇರಿಯ ಕೆ.ಬಿ.ಆರ್.ಡ್ರಾಮಾ ಕಂಪನಿ ಅವರು ಇಲ್ಲಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಮಠದ ಜಾಗದಲ್ಲಿ ಹಾಕಿರುವ ಸುಸಜ್ಜಿತ ರಂಗಸಜ್ಜಿಕೆಯಲ್ಲಿ ಅಕ್ಕ ಪಾಪರ್ ತಂಗಿ ಸೂಪರ್ ಎಂಬ ನಾಟಕದ ಮೊದಲ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದರು.

ರಂಗ ಕಲಾವಿದರ ಬದುಕಿನಲ್ಲಿ ಸಾಕಷ್ಟು ಕಷ್ಟ-ಕಾರ್ಪಣ್ಯಗಳು ಇದ್ದರೂ ಅವರು ಎಲ್ಲವನ್ನೂ ಮರೆತು ರಂಗಭೂಮಿಯಮೇಲೆ ಪಾತ್ರಕ್ಕೆ ಜೀವ ತುಂಬಿ ಅಭಿನಯಿಸುತ್ತಾರೆ. ಅವರ ಬದುಕಿಗೆ ಆಸರೆಯಾಗಬೇಕು ಎಂದರೆ ಎಲ್ಲರೂ ನಾಟಕ ನೋಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕುರಿ ಹಾಗೂ ಉಣ್ಣೆ ನಿಗಮದ ಮಾಜಿ ಅಧ್ಯಕ್ಷವೈ.ಎನ್.ಗೌಡರ ಮಾತನಾಡಿ, ಚಿಂದೋಡಿ ವೀರಪ್ಪನವರು ಸ್ಥಾಪಿಸಿದ ಈ ನಾಟಕ ಕಂಪನಿ ನುರಿತ ಕಲಾವಿದರಿಂದ ಕೂಡಿದ್ದರಿಂದ ಒಳ್ಳೆಯ ನಾಟಗಳನ್ನು ಆಯ್ಕೆಮಾಡಿ ಪ್ರದರ್ಶಿಸುವುದರಿಂದ ಎಲ್ಲರ ಪ್ರೋತ್ಸಾಹ ಅಗತ್ಯವಾಗಿ ಬೇಕು ಎಂದರು. ಕರಬಸಪ್ಪ ಹಂಚಿನಾಳ, ಕೊಟ್ರೇಶ ಅಂಗಡಿ, ಡಿ.ಡಿ.ಮೋರನಾಳ, ಮಂಜುನಾಥ ಮುಂಡವಾಡ, ಶೇಖರ ಜುಟ್ಲಣ್ಣವರ, ವೀರಣ್ಣ ಘಟ್ಟಿ, ರಾಜಾಭಕ್ಷಿ ಬೆಟಗೇರಿ, ಧೃವಕುಮಾರ ಹೊಸಮನಿ ಇದ್ದರು. ರಾಘವೇಂದ್ರ ಬೆಂಗಳೂರ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಚಿಂದೋಡಿ ಶಂಭುಲಿಂಗಪ್ಪ ಸ್ವಾಗತಿಸಿ, ಪ್ರಾಸ್ತಾವಿಸಿದರು. ಮಂಜುನಾಥ ಮುಧೋಳ ನಿರೂಪಿಸಿ, ವಂದಿಸಿದರು.



ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



◆ **ಮುಂಡರಗಿ:** ಮಹಿಳೆಯರು ಇತ್ತೀಚಿನ ದಿನಮಾನದಲ್ಲಿ ಜಾಗತೀಕರಣದ ಮಟ್ಟದಲ್ಲಿ ಸಮಾಜಮುಖಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮಹಿಳೆಯುರು ವಿವಿಧ ರಂಗಗಳಲ್ಲಿ ತಮ್ಮದೇ ಆದ ಪ್ರಭುತ್ವತೆಯನ್ನು ಸಾಧಿಸುತ್ತಿದ್ದಾರೆ ಎಂದು ಶ್ರೀ ಜಗದ್ಗುರು ಅನ್ನದಾನೀಶ್ವರ ವಿದ್ಯಾ ಸಮಿತಿಯ ಆಡಳಿತಾಧಿಕಾರಿ ಡಾ.ಬಿ.ಜಿ.ಜವಳಿ ಹೇಳಿದರು.

ಪಟ್ಟಣದ ಕ.ರಾ.ಬೆಲ್ಲದ ಮಹಾವಿದ್ಯಾಲಯದಲ್ಲಿ ಸಮಾಜಶಾಸ್ತ್ರ ಎನ್‌ಎಸ್‌ಎಸ್ ರೋವರ್ ಮತ್ತು ಮಹಿಳಾ ವೇದಿಕೆಗಳ ಸಂಯುಕ್ತ ಆಶ್ರಯದಲ್ಲಿ ಮಂಗಳವಾರ ಜರುಗಿದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಚೈತನ್ಯ ಶಿಕ್ಷಣ ಸಂಸ್ಥೆ ನಿರ್ದೇಶಕಿ ವೀಣಾ ಪಾಟೀಲ ಮಾತನಾಡಿ, ಸಾಮಾಜಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮಹಿಳೆಯರು ಸಬಲೀಕರಣ ಹೊಂದಿ ಸಾಧನೆಯ ಹಾದಿಯಲ್ಲಿ ಮುನ್ನಡೆಯುತ್ತಿದ್ದಾರೆ ಎಂದರು. ಅಧ್ಯಕ್ಷತೆವಹಿಸಿದ್ದ ಕಾಲೇಜು ಮೇಲ್ವಿಚಾರಣಾ ಸಮಿತಿ ಸದಸ್ಯ ಎಂ.ಜಿ.ಗಚ್ಚಣ್ಣನವರ ಅವರು, ವಿದ್ಯಾರ್ಥಿ ಜೀವನದಲ್ಲಿ ಶಿಸ್ತು ಮತ್ತು ಸಮಯದ ಪ್ರಜ್ಞೆ ಹಾಗೂ ಕಠಿಣ ಶ್ರಮದಿಂದ ತಮ್ಮ ಬದುಕನ್ನು ಉಜ್ವಲವಾಗಿಸಿಕೊಳ್ಳಬೇಕು. ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದರು. ಪ್ರಾಚಾರ್ಯ ಡಾ.ಸಂತೋಷ ಹಿರೇಮಠ, ಡಾ.ಸಚಿನ ಉಪ್ಪಾರ, ಡಾ.ವನಜಾಕ್ಷಿ ಭರಮಗೌಡರ, ಶಂಭುಲಿಂಗಯ್ಯ ಮುಂಡರಗಿಮಠ, ಕೋಟೆಪ್ಪ ಜಿ, ರಘುವೀರ ಕೆ, ಕೆ.ಕೆ. ಉಳ್ಳಾಗಡ್ಡಿ, ಲತಾ ಕಡ್ಡಿ, ಜ್ಯೋತಿಕಾ ಪಿ., ತೇಜಸ್ವಿನಿ ಪಾಟೀಲ, ಬೋಧಕೇತರ ಸಿಬ್ಬಂದಿ ಇದ್ದರು. ಡಾ.ಪ್ರವೀಣಕುಮಾರ ಬಿ. ಪ್ರಾಸ್ತಾವಿಸಿದರು. ಡಾ.ಕುಮಾರ ಜೆ. ನಿರೂಪಿಸಿದರು.

ಉಚಿತ ಬೇಸಿಗೆ ಶಿಬಿರ ಉದ್ಘಾಟನೆ

◆ **ನರಗುಂದ:** ಶಿಬಿರದಲ್ಲಿ ಆಧ್ಯಾತ್ಮಿಕ ಜೀವನ ಮೌಲ್ಯಗಳು, ಏಕಾಗ್ರತೆ, ನೈತಿಕ ಶಿಕ್ಷಣ, ಆಧ್ಯಾತ್ಮಿಕ ಆಟ ಪಾಠಗಳು, ಭಗವದ್ಗೀತೆಯ ಶ್ಲೋಕಗಳು, ಶರಣರ ವಚನಗಳು, ಹಾಡು ನೃತ್ಯಗಳು, ಇನ್ನಿತರ ಚಟುವಟಿಕೆಗಳನ್ನು ಕಲಿಸಲಾಗುತ್ತದೆ ಎಂದು ಸವದತ್ತಿ ಸೇವಾಕೇಂದ್ರದ ಚಂಪಾ ಅಕ್ಕನವರು ಹೇಳಿದರು.

ಪಟ್ಟಣದಪ್ರಜಾಪಿತಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಮಕ್ಕಳಿಗಾಗಿ ಹಮ್ಮಿಕೊಂಡ ಹತ್ತು ದಿನಗಳ ಉಚಿತ ಬೇಸಿಗೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ರಾಜಯೋಗಿನಿ ಬ್ರ.ಕು ರಾಜೇಶ್ವರಿ ಅಕ್ಕ ಮಾತನಾಡಿ, ಇಂದಿನ ದಿನಮಾನದಲ್ಲಿ ಶಾಲೆಯ ಬಗ್ಗೆ, ಶಿಕ್ಷಕರ ಬಗ್ಗೆ, ಗುರುಹಿರಿಯರ ಬಗ್ಗೆ, ವಿದ್ಯಾರ್ಥಿಗಳು ಪರಸ್ಪರ ಹೇಗಿರಬೇಕು ಎಂಬುದನ್ನು ತಿಳಿಸಿಕೊಟ್ಟರು. ರಾಜಯೋಗಿನಿ ಬಿ.ಕೆ. ಪ್ರಭಕ್ಕನವರು ಹಾಗೂ ಬ್ರ.ಕು ರಾಜೇಶ್ವರಿ ಅಕ್ಕನವರು ಮಾತನಾಡಿದರು. ಸುಧಾ ಮುಧೋಳೆ, ಜಯಶ್ರೀ ಗಡಾದ, ವಿಶಾಲ ವಾಳದ, ಸ್ಮಿತಾ ಗೊಂಬಿ, ಅರುಣಾ ವಾಳದ, ಉಮಾ ನಾಶಿ, ಉಮೇಶ ಸುಬೇದಾರ, ತಾನಾಜಿ ಅವತಾಡೆ ಇತರರಿದ್ದರು.



174 ಕುಟುಂಬದವರಿಗೆ ದಿನಸಿ ಕಿಟ್



◆ **ಮುಂಡರಗಿ:** ತಾಲೂಕಿನ ಚಿಕ್ಕವಡ್ಡಟ್ಟಿ ಗ್ರಾಮದಲ್ಲಿ ಇತ್ತೀಚೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದ ನಡುವೆ ನಡೆದ ಗಲಾಟೆಯಲ್ಲಿ ನೊಂದ 174 ಕುಟುಂಬದವರಿಗೆ ತಾಲೂಕು ಸಮಾಜ ಕಲ್ಯಾಣ ಇಲಾಖೆಯಿಂದ ಮಂಗಳವಾರ ದಿನಸಿ ಕಿಟ್ ವಿತರಿಸಲಾಯಿತು.

ಸಮಾಜ ಕಲ್ಯಾಣ ಇಲಾಖೆ ಗದಗ ಉಪನಿರ್ದೇಶಕಿ ಡಾ.ನಂದಾ ಹಣಬರಟ್ಟಿ ಮಾತನಾಡಿ, ಎರಡು ಸಮಾಜದವರು ಸಾಮರಸ್ಯದಿಂದ ಜೀವನ ನಡೆಸಬೇಕು ಎಂದು ತಿಳಿಸಿದರು.

ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಉದಯಕುಮಾರ ಯಲಿವಾಳ ಮಾತನಾಡಿ, ಎಸ್ಸಿ 107ಕುಟುಂಬ ಮತ್ತು ಎಸ್ಟಿ 67ಕುಟುಂಬ ಸೇರಿ ಒಟ್ಟು 174 ಕುಟುಂಬಗಳಿಗೆ ರೇಷನ್ ಕಿಟ್ ವಿತರಿಸಲಾಗಿದೆ. ಊರಿನಲ್ಲಿ ಶಾಂತಿ ಕದಡದಂತೆ ಎಲ್ಲರೂ ಒಗ್ಗಟ್ಟಾಗಿ ಮಾದರಿಯ ಜೀವನ ನಡೆಸುವಂತಾಗಬೇಕು. ಏನೇ ಸಮಸ್ಯೆಗಳಿದ್ದರೂ ಕುಳಿತು ಮಾತನಾಡುವ ಮೂಲಕ ಬಗೆಹರಿಸಿಕೊಳ್ಳಬೇಕೇ ಹೊರತು ಒಬ್ಬರ ಮೇಲೆ ಒಬ್ಬರು ಹಲ್ಲೆ ಮಾಡುವ ಹತಕ್ಕೆ ಹೋಗಬಾರದು ಎಂದರು.

ಸಮಾಜ ಕಲ್ಯಾಣ ಇಲಾಖೆ ವಸತಿ ನಿಲಯ ಮೇಲ್ವಿಚಾರಕರಾದ ಶ್ರೀಕಾಂತ ಅರಹುಣಸಿ, ಎಲ್.ಎಂ.ಗಚ್ಚಿನಮನಿ, ಯಲ್ಲಪ್ಪ ನಾಗಮ್ಮನವರ, ಮಂಜುನಾಥ, ಗ್ರಾಮ ಪಂಚಾಯತಿ ಕಾರ್ಯದರ್ಶಿ ಖೇಮ್ಯಾನಾಯ್ಕ್, ಬಿಲ್ ಕಲೆಕ್ಟರ್ ನದಾಫ್, ವಾಲಿಕಾರ ಚೆನ್ನಪ್ಪ, ನೀರಗಂಟಿ ದುರುಗಪ್ಪ ಈರಣ್ಣ ಇತರರಿದ್ದರು.

ಇಂದಿನಿಂದ ಕಳಕಮಲ್ಲನ ಜಾತ್ರೆ

◆ **ಗಜೇಂದ್ರಗಡ:** ಉತ್ತರ ಕರ್ನಾಟಕದಲ್ಲಿಯೇ ದಕ್ಷಿಣಕಾಶಿ ಎಂದೇ ಹೆಸರುವಾಸಿವಾಗಿರುವ ಕಾಲಕಾಲೇಶ್ವರ ಜಾತ್ರೆಯು ಏ.2ರ ದವನದ ಹುಣ್ಣಿಮೆಯಂದು ಸಂಜೆ ಅದ್ದೂರಿಯಾಗಿ ನಡೆಯಲಿದೆ.

ಪ್ರತಿ ವರ್ಷದಂತೆ ಯುಗಾದಿಯ ಪಾಡ್ಯ ದಿನದಂದು ಕಾಲಕಾಲೇಶ್ವರ ದೇವಾಲಯದ ಕೊಠರಿಯಲ್ಲಿ(ಮಾಡದಲ್ಲಿ) ಮಳೆ ಬೆಳೆಯ ಭವಿಷ್ಯ ತಿಳಿಯುತ್ತದೆ. ಅದರಂತೆ ಈ ಬಾರಿ ರೈತರ ಮೊಗದಲ್ಲಿ ಸಂತಸ ತರುವ ಸಮೃದ್ಧ ಬೆಳೆಯ ಭವಿಷ್ಯವನ್ನು ಕಳಕಮಲ್ಲಯ್ಯ ನೀಡಿದ್ದಾನೆ ಹಾಗೂ ಸುಣ್ಣ ಸುರುಮ ತಾನಾಗಿಯೇ ಸಮವಾಗಿ ಹಚ್ಚಿಕೊಂಡು ಮಸಾರಿಭೂಮಿ(ಕೆಂಪು ಮಣ್ಣಿನ ಭೂಮಿ) ಎರೆಭೂಮಿ(ಕಪ್ಪು ಮಣ್ಣಿನ ಭೂಮಿ) ಎಲ್ಲಿನ ಫಲಗಳು ಸಮೃದ್ಧ ಬೆಳೆಯನ್ನು ಬೆಳೆಯಲಿದೆ ಎನ್ನುವ ಭವಿಷ್ಯ ವಾಣಿ ಈ ವರ್ಷದ ಕಳಕಮಲ್ಲನ ಬೆಳೆಯ ಮಳೆಯ ಭವಿಷ್ಯವಾಗಿದೆ. ಏ.2ರಂದು ಬೆಳಗ್ಗೆ ಕಳಕಮಲ್ಲನಿಗೆ ರುದ್ರಾಭಿಷೇಕ, ದವನ ಅರ್ಪಣೆ, ಸೇವೆ ನಡೆದು ಸಾಯಂಕಾಲ ಮಹಾರಥೋತ್ಸವ ಜರುಗಲಿದೆ. ಏ.3 ರಂದು ಕಡುಬಿನ ಕಾಳಗ, ಕಳಕಮಲ್ಲನಿಗೆ ಬೆಳಗ್ಗೆ ರುದ್ರಾಭಿಷೇಕ, ಸಂಜೆ ಬೋರಾದೇವಿಯನ್ನು ಒಪ್ಪಿಸುವ ಕಾರ್ಯಕ್ರಮ ಬಳಿಕ ತೊಟ್ಟಿಲು, ಗುಲಾಲ ಸೇವೆ ನಡೆಯಲಿದೆ. ಏ.4ರಂದು ಪವಿತ್ರ ಪುಷ್ಕರಣಿಯಲ್ಲಿ ಕಳಕಮಲ್ಲ ಹಾಗೂ ಬೋರಾದೇವಿಗೆ ಅಮೃತ ಸ್ನಾನ ನಡೆಯಲಿದೆ. ಭೋವಿ ಸಮಾಜದಿಂದ ತೇರನ್ನು ಎಳೆದು ಸೇವೆ ಸಲ್ಲಿಸಲಾಗುತ್ತದೆ.



2023ರಿಂದ ಅರ್ಹ ಮಹಿಳಾ ಫಲಾನುಭವಿಗಳಿಗೆ ಬಾರದ ಹಣ

ಉದ್ಯೋಗಿನಿ ಯೋಜನೆಗೆ ಗ್ರಹಣ!

▸ ವಿಜಯಕುಮಾರ ಬೆಳ್ಳೇರಿಮಠ

◆ **ಹುಬ್ಬಳ್ಳಿ:** ಮಹಿಳೆಯರು ಸ್ವಯಂ ಉದ್ಯೋಗ ಮಾಡುವ ಮೂಲಕ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳುವ ರಾಜ್ಯ ಸರ್ಕಾರ ಪ್ರಮುಖ ಯೋಜನೆಯಾದ ಉದ್ಯೋಗಿನಿ ಯೋಜನೆಗೆ ಗ್ರಹಣ ಹಿಡಿದಿದೆ. 2023 ರಿಂದ ಇಲ್ಲಿವರೆಗೂ ಆಯ್ಕೆಯಾದ ಅರ್ಹ ಮಹಿಳಾ ಫಲಾನುಭವಿಗಳಿಗೆ ಒಂದು ರೂಪಾಯಿ ಬಂದಿಲ್ಲ. ಇದರಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಸೇರಿದಂತೆ ಆರ್ಥಿಕವಾಗಿ ಹಿಂದುಳಿದ ಮಹಿಳೆಯರು ಉದ್ಯಮಿಗಳಾಗುವ ಕನಸಿಗೆ ತಣ್ಣೀರೆರಚಿದಂತೆ ಆಗಿದೆ.

2023-24 ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ 31 ಮಹಿಳಾ ಫಲಾನುಭವಿಗಳಿಗೆ ಯೋಜನೆ ಸದುಪಯೋಗ ಪಡೆಯಲು ಅವಕಾಶವಿತ್ತು. ಅದರಲ್ಲಿ 27 ಜನ ಅರ್ಹ ಮಹಿಳಾ ಫಲಾನುವಿಗಳನ್ನು ಆಯ್ಕೆ ಮಾಡಲಾಗಿದ್ದು, ಓರ್ವ ಮಹಿಳಾ ಫಲಾನುಭವಿ ಯೋಜನೆ ಸದುಪಯೋಗ ಪಡೆದುಕೊಂಡಿದ್ದಾರೆ. 2024-25 ನೇ ಸಾಲಿನಲ್ಲಿ 42 ಜನ ಮಹಿಳಾ ಫಲಾನುಭವಿಗಳಿಗೆ ಗುರಿ ನಿಗದಿ ಪಡಿಸಲಾಗಿತ್ತು. ಆದರೆ, 20 ಜನ ಅರ್ಹ ಫಲಾನುಭವಿಗಳಿಗೆ ಆಯ್ಕೆ ಮಾಡಿದ್ದು, ನಾಲ್ಕು ಜನ ಮಹಿಳಾ ಫಲಾನುಭವಿಗಳು ಯೋಜನೆ ಸದುಪಯೋಗ ಪಡೆದಿದ್ದಾರೆ.

2025-26 ನೇ ಸಾಲಿನಲ್ಲಿ 2,300 ಜನರು ಯೋಜನೆಗೆ ಪಡೆಯಲು ಅರ್ಜಿ ಸಲ್ಲಿಸಲಾಗಿದೆ. ಅದರಲ್ಲಿ 31 ಜನರಿಗೆ ಯೋಜನೆ ಪಡೆಯಲು ಗುರಿ ನೀಡಲಾಗಿದ್ದು, ಇನ್ನು ಅರ್ಹ ಫಲಾನುಭವಿಗಳ ಆಯ್ಕೆ ಮಾಡಬೇಕಿದೆ. ಆದರೆ, 2023-24 ಹಾಗೂ 2024-25 ನೇ ಸಾಲಿನಲ್ಲಿ ಆಯ್ಕೆಯಾದ ಅರ್ಹ ಫಲಾನುಭವಿಗಳಿಗೆ ಅನುದಾನ ಬಾರದಿರುವುದು ಅಸಮಾಧಾನಕ್ಕೆ ಕಾರಣವಾಗಿದೆ.

2023 ರಿಂದ ಇಲ್ಲಿಯವರೆಗೆ ಆಯ್ಕೆ ಮಾಡಲಾದ ಬಹುತೇಕ ಅರ್ಹ ಮಹಿಳಾ ಫಲಾನುಭವಿಗಳಿಗೆ ಯೋಜನೆಯಡಿ ಅನುದಾನ ಬಂದಿಲ್ಲ. ತಾಂತ್ರಿಕ ದೋಷ ಹಾಗೂ ಇನ್ನಿತರ ಕಾರಣಗಳನ್ನು ನೀಡಲಾಗುತ್ತಿದೆ. ಹಲವು ಬಾರಿ ಮೇಲಾಧಿಕಾರಿಗಳ ಗಮನಕ್ಕೆ ತರಲಾಗಿದೆ ಎಂದು ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.



> ಉದ್ಯೋಗಿನಿ ಯೋಜನೆಯಡಿ ಅನುದಾನ ಏಕೆ ಬಂದಿಲ್ಲ ಎಂಬುವುದರ ಬಗ್ಗೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು
> ■ **ಸ್ನೇಹಲ್ ಆರ್.** ಜಿಲ್ಲಾಧಿಕಾರಿ

ಯೋಜನೆ ಪ್ರಯೋಜನಗಳೇನು?

ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯರಿಗೆ, ಕನಿಷ್ಠ 1 ಲಕ್ಷದಿಂದ ಗರಿಷ್ಠ 3 ಲಕ್ಷದ ವರೆಗೂ ಸಾಲ ಸಿಗಲಿದೆ. ಸಾಲದಲ್ಲಿ ಶೇ. 50 ರಷ್ಟು ಸಹಾಯ ಧನವಿದ್ದು, ಇದನ್ನು ಪಡೆಯಲು ಕುಟುಂಬ ವಾರ್ಷಿಕ ಆದಾಯ 2 ಲಕ್ಷಕ್ಕಿಂತ ಕಡಿಮೆ ಇರಬೇಕು. ವಿಶೇಷ ವರ್ಗ ಹಾಗೂ ಸಾಮಾನ್ಯ ವರ್ಗಕ್ಕೆ ಸೇರಿದ ಮಹಿಳೆಯರಿಗೆ 3 ಲಕ್ಷದ ವರೆಗೂ ಸಾಲ ದೊರೆಯಲಿದೆ. ಸರ್ಕಾರದಿಂದ ಶೇ. 30 ರಷ್ಟು ಅಥವಾ 90 ಸಾವಿರ ವರೆಗೆ ಸಹಾಯಧನ ಸಿಗಲಿದೆ.

ಏನಿದು ಯೋಜನೆ?

ಮಹಿಳೆಯರು ಸ್ವ-ಉದ್ಯೋಗ ಕೈಗೊಳ್ಳಲು ಹಣಕಾಸು ನೆರವನ್ನು ನೀಡುವ ಈ ಯೋಜನೆ ಪ್ರಮುಖ ಉದ್ದೇಶವಾಗಿದೆ. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲ ಪಡೆಯಲು ಅವಕಾಶವಿದೆ. ಈ ಯೋಜನೆ ಸಾಲ ಪಡೆದು ಗೃಹ ಉದ್ಯಮ ಮಾಡಬಹುದು. ಬುಕ್ ಬೈಂಡಿಗ್, ನೋಟ್‌ಬುಕ್ ತಯಾರಿಕೆ, ಜಾಮ್, ಜೆಲ್ಲಿ, ಉಪ್ಪಿನಕಾಯಿ ತಯಾರಿಕೆ, ಸೀರೆ ಹಾಗೂ ಕಸೂತಿ ಕೆಲಸ, ಉಣ್ಣೆಯ ಬಟ್ಟೆ ತಯಾರಿಕೆ ಮಾಡುವ ಮಹಿಳೆಯರಿಗೆ ಯೋಜನೆ ಅನುಕೂಲವಾಗಲಿದೆ.

ದಿಗಂತ ವಿಶೇಷ

> 2023-24 ನೇ ಸಾಲಿನಲ್ಲಿ ಉದ್ಯೋಗಿನಿ ಯೋಜನೆ ಸದುಪಯೋಗ ಪಡೆಯಲು ಅರ್ಜಿ ಸಲ್ಲಿಸಿ, ಆಯ್ಕೆಯೂ ಸಹ ಆಗಿದ್ದೆ. ಆದರೆ, ಸರ್ಕಾರದಿಂದ ಅನುದಾನ ಬಾರದ ಕಾರಣ ಉದ್ಯಮ ಆರಂಭಿಸುವುದು ಕೈಬಿಡಲಾಗಿದೆ.
> ■ **ಮಂಜುಳಾ ಕುಂದಗೋಳ,** ಫಲಾನುಭವಿ

ಆಗಾಗ್ಗೆ ಕಾಡುವ ಮಳೆ | ಸಕಾಲಕ್ಕೆ ಸಿಗದ ಕಟಾವು ಯಂತ್ರಗಳು

ರಾಗಿ ಕಟಾವಿಗೆ ಯಂತ್ರಗಳದ್ದೇ ಕೊರತೆ

▸ ಕಿರಣ ಮಾಸಣಗಿ

◆ **ಹಾವೇರಿ:** ನಿರಂತರವಾಗಿ ಪ್ರಕೃತಿ, ಸರ್ಕಾರದೊಂದಿಗೆ ಸೆಣಸುವ ಜಿಲ್ಲೆಯ ರಾಗಿ ಬೆಳೆಗಾರರಿಗೆ ಕೃಷಿ ಯಂತ್ರೋಪಕರಣಗಳು ಹಾಗೂ ಕೃಷಿ ಕೂಲಿಕಾರ್ಮಿಕರ ಕೊರತೆಯಿಂದ ಕಂಗಾಲಾಗಿದ್ದಾರೆ. ಸಕಾಲಕ್ಕೆ ಯಂತ್ರೋಪಕರಣಗಳು ಲಭ್ಯವಾಗದೇ ಆತಂಕ ಎದುರಿಸುವಂತಾಗಿದೆ.

ರಾಗಿಯತ್ತ ರೈತರ ಚಿತ್ತ: ಈಗಾಗಲೇ ಜಿಲ್ಲೆಯಲ್ಲಿ 'ಸಿರಿಧಾನ್ಯಗಳ ರಾಣಿ ರಾಗಿ'ಯತ್ತ ರೈತರ ಚಿತ್ತ ನೆಟ್ಟಿದೆ. ಕಳೆದ 3-4 ವರ್ಷಗಳಿಂದ ಹಿಂಗಾರಿಯಲ್ಲಿ ರಾಗಿ ಬಿತ್ತನೆ ವ್ಯಾಪಕವಾಗಿ ಹೆಚ್ಚಳವಾಗುತ್ತಲೇ ಇದೆ. ಪ್ರಸಕ್ತ ಸಾಲಿನಲ್ಲಿ ರಾಗಿಯನ್ನು ಈ ಹಿಂದಿಗಿಂತಲೂ ಹೆಚ್ಚಿನಪ್ರಮಾಣದಲ್ಲಿ ಬೆಳೆಯಲಾಗಿದೆ. ಇದೀಗ ಈ ಬೆಳೆಯು ಹುಲುಸಾಗಿ ಬೆಳೆದು ಕಟಾವು ಹಂತಕ್ಕೆ ತಲುಪಿದ್ದು, ಅವುಗಳ ಕಟಾವು ರೈತರನ್ನು ಸವಾಲಿಗೆ ನೂಕಿದೆ. ಈಗಾಗಲೇ ಹಾವೇರಿ, ರಟ್ಟೀಹಳ್ಳಿ, ಹಿರೇಕೆರೂರ, ಬ್ಯಾಡಗಿ, ರಾಣೆಬೆನ್ನೂರ ತಾಲೂಕಿನ ಅಲ್ಲಲ್ಲಿ ರಾಗಿ ಕಟಾವು ವ್ಯಾಪಕವಾಗಿ ನಡೆದಿದ್ದು, ಕೂಲಿಕಾರರ ಕೊರತೆ ನಡುವೆ, ರಾಗಿ ಕಟಾವು ಯಂತ್ರಗಳ ಅಲಭ್ಯತೆ ಅಥವಾ ಸಕಾಲಕ್ಕೆ ಯಂತ್ರಗಳು ಸಿಗದೇ ರಾಗಿ ಬೆಳೆಗಾರರು ಆತಂಕಕ್ಕೆ ಸಿಲುಕಿದ್ದಾರೆ.

ಸಿಎಚ್‌ಎಸ್‌ಸಿ ಸೆಂಟರ್: ಕೃಷಿ ಯಂತ್ರೋಪಕರಣಗಳನ್ನು ನೀಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ 'ಕೃಷಿ ಯಂತ್ರಧಾರೆ' ಯೋಜನೆಯಡಿ ಕೃಷಿಗೆ ಅಗತ್ಯವಾದ ಯಂತ್ರೋಪಕರಣಗಳನ್ನು ನೀಡುವ ಯೋಜನೆ ರೂಪಿಸಿ ಆರಂಭದಲ್ಲಿ ಉತ್ತಮ ಯಶಸ್ಸನ್ನೇ ತೋರಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಈ ಕುರಿತು ಅನಾಧರ ಅಥವಾ ಅಗತ್ಯ ಕೃಷಿ ಸಲಕರಣೆಗಳು ಲಭ್ಯವಾಗದೇ ಕೃಷಿಕರು ಹೊರಸಂಪನ್ಮೂಲಗಳನ್ನೇ ನಂಬುವಂತಾಗಿದೆ. ಹೀಗಾಗಿ ಖಾಸಗಿ ವ್ಯಕ್ತಿಗಳಿಂದ ಬಾಡಿಗೆ ಆಧಾರದಲ್ಲಿ ಯಂತ್ರೋಪಕರಣ ಪಡೆಯುವುದು ಕೊಂಚ ದುಬಾರಿಯಾದರೂ ಸಕಾಲಕ್ಕೆ ಕೆಲಸಗಳು ನಡೆಯುತ್ತವೆ ಎಂಬ ಕಾರಣಕ್ಕೆ ಖಾಸಗಿ ಯಂತ್ರೋಪಕರಣಗಳನ್ನೇ ನಂಬಿಕೊಳ್ಳುವಂತಾಗಿದೆ.

ರಾಗಿ ಬೆಳೆ ಕ್ಷೇತ್ರ ವಿಸ್ತರಣೆ: ಕಳೆದ ಐದು ವರ್ಷಗಳಲ್ಲಿ ಜಿಲ್ಲೆಯಲ್ಲಿ ರಾಗಿ ಬೆಳೆಯನ್ನು ವ್ಯಾಪಕವಾಗಿ ಬೆಳೆಯಾಗುತ್ತಿದೆ. ಹಿಂಗಾರಿಯಲ್ಲಿ 2021-22ರಲ್ಲಿ 185.01 ಹೆಕ್ಟೇರ್, 2022-23ರಲ್ಲಿ 71.42 ಹೆಕ್ಟೇರ್, 2023-24ರಲ್ಲಿ 152.46 ಹೆಕ್ಟೇರ್, 2024-25ರಲ್ಲಿ 621.96 ಹೆಕ್ಟೇರ್ ಮತ್ತು ಪ್ರಸಕ್ತ ಸಾಲಿನಲ್ಲಿ ಅಂದರೆ 2025-26ರಲ್ಲಿ 1692.61 ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬೆಳೆಯಲಾಗಿದೆ. ಆದರೆ ಅಂತಿಮ ಹಂತವಾದ ಬೆಳೆ ಕಟಾವು ಅಥವಾ ಕೊಯ್ಲು ಸವಾಲಾಗಿದೆ. ಹೀಗಾಗಿ ಖಾಸಗಿ ಯಂತ್ರೋಪಕರಣಗಳನ್ನು ಅನಿವಾರ್ಯವಾಗಿ ನಂಬಿಕೊಂಡು ಅವರು ಹೇಳಿದಾಗ ಬೆಳೆಯನ್ನು ಕೊಯ್ಲು ಮಾಡುವ ಗತ್ಯಂತರಕ್ಕೆ ಸಿಲುಕಿದ್ದಾರೆ.

ಯಂತ್ರೋಪಕರಣಗಳ ಕೊರತೆ: ರಾಗಿ ಕಟಾವು ಯಂತ್ರಗಳ (ರಾಗಿ ಹಾರ್ವೆಸ್ಟರ್ ಅಥವಾ ತ್ರಾಷಿಂಗ್ ಯಂತ್ರ) ಕೊರತೆ ಜಿಲ್ಲೆಯ ರೈತರನ್ನು ಬಾಧಿಸುತ್ತಿದ್ದು ಈ ಬಾರಿ ರಾಗಿ ಬೆಳೆ ಕ್ಷೇತ್ರ ಹೆಚ್ಚಿದ್ದರಿಂದಾಗಿ ಇದರ ತೊಂದರೆ ಮತ್ತಷ್ಟು ಬಾಧಿಸಿದೆ. ಜಪಾನ್ ತಾಂತ್ರಿಕತೆಯ ಸಣ್ಣ ಮತ್ತು ದೊಡ್ಡ ಯಂತ್ರಗಳು ರಾಗಿ ಬೆಳೆಯನ್ನು ಕತ್ತರಿಸುವ ಜತೆಗೆ ಕಾಳು ಮತ್ತು ಹುಲ್ಲನ್ನು ಬೇರೆಯಾಗಿಸಿ ಹೊರಹಾಕುತ್ತವೆ. ಇನ್ನು ರಾಗಿ ಕಟಾವು ಮಾಡಿದ ಸುಮಾರು 10-20 ದಿನಗಳ ನಂತರ ಮತ್ತೆ ಯಂತ್ರದ ಮೂಲಕ ರಾಗಿ ಹುಲ್ಲನ್ನು ಪೆಂಡೆಯಾಗಿ ಕಟ್ಟಿ ಸಂಗ್ರಹ ಮಾಡಿಟ್ಟುಕೊಳ್ಳಬೇಕಿದೆ. ಆದರೆ ಜಿಲ್ಲೆಯಲ್ಲಿ ರಾಗಿ ಕೊಯ್ಲು ಯಂತ್ರ ಹೊಂದಿದ ರೈತರೇ ಇಲ್ಲ. ಹೀಗಾಗಿ ನೆರೆಯ ಜಿಲ್ಲೆಗಳಿಂದ ಇದನ್ನು ಬಾಡಿಗೆ ಆಧಾರದ ಮೇಲೆ ತರಿಸಬೇಕಿದ್ದು, ಪ್ರತಿ ಗಂಟೆಗೆ ರೂ.2500 ರಿಂದ ರೂ.4000 ವರೆಗೂ ಹಣ ನೀಡಬೇಕಿದೆ. ಇನ್ನು ಇವುಗಳ ದರ ಕನಿಷ್ಟ 20 ಲಕ್ಷಗಳಿಂದ ಕೋಟಿಯವರೆಗೂ ಇದ್ದು ಇವುಗಳನ್ನು ಸ್ಥಳೀಯರು ಖರೀದಿಸಿ ನಿರ್ವಹಿಸುವುದು ಕಷ್ಟಕರ. ಈ ಹಿನ್ನೆಲೆಯಲ್ಲಿ ಬಾಡಿಗೆ ಯಂತ್ರಗಳನ್ನೇ ನಂಬುವುದು ಅನಿವಾರ್ಯವಾಗಿದೆ.


ಒಟ್ಟಿನಲ್ಲಿ ಜಿಲ್ಲೆಯಲ್ಲಿ ಈ ಬಾರಿಗೆ ನೆರೆ-ಬರದ ನಡುವೆ ರಾಗಿ ಬೆಳೆದು ಯಶಸ್ಸು ಕಂಡಿರುವ ರೈತರಿಗೆ ಇದೀಗ ಬೆಳೆ ಕೊಯ್ಲು ಮಾಡುವ ಜತೆಗೆ ಆಗಾಗ್ಗೇ ಸುರಿಯುವ ಧಾರಾಕಾರದ ಮಳೆ ಕೂಡ ಹೊಸ ಸವಾಲನ್ನು ಎಸೆದಿದೆ. ಇದರಿಂದಾಗಿ ಬೆಳೆಯ ಕಟಾವಿನ ಜೊತೆಗೆ ಅದನ್ನು ಉಳಿಸಿಕೊಳ್ಳಲೂ ಸಹ ರೈತರು ಹೋರಾಟ ಮಾಡುವಂತಾಗಿದೆ.



> ಕೃಷಿ ಇಲಾಖೆಯ ಶಿಫಾರಸಿನ ಮೇರೆಗೆ ಈ ಬಾರಿ ರಾಗಿ ಬೆಳೆದಿದ್ದೇವೆ, ಉತ್ತಮ ಫಸಲೂ ಬಂದಿದೆ. ಆದರೆ ಕಟಾವು ಮಾಡಲು ಅಗತ್ಯವಾದ ತ್ರಾಷಿಂಗ್ ಮಿಷನ್ ಸಕಾಲಕ್ಕೆ ಸಿಗುತ್ತಿಲ್ಲ. ಆಗಾಗ್ಗೇ ಓಡಾಡುವ ಮಳೆಯಿಂದಾಗಿ ಬೆಳೆ ಉಳಿಸಿಕೊಂಡು ಕಟಾವು ಮಾಡಿಸಿ ಮಾರುಕಟ್ಟೆಗೆ ಸಾಗಿಸಿದರೆ ಸಾಕಪ್ಪಾ ಎನಿಸಿದೆ.
> ■ **ಮೂಕಪ್ಪ ಅಗಸೀಬಾಸಿಲ,** ತಿಮಕಾಪುರ ರೈತ.

> ಜಿಲ್ಲೆಯಲ್ಲಿ ಈ ಬಾರಿ ಹೆಚ್ಚಿನ ಕ್ಷೇತ್ರದಲ್ಲಿ ರಾಗಿ ಬೆಳೆಯಲಾಗಿದ್ದು, ಖಾಸಗಿ ಯಂತ್ರೋಕಕರಣಗಳ ಮೂಲಕವೇ ಕಟಾವು ಮಾಡಬೇಕಿದೆ. ಆಸಕ್ತ ದೊಡ್ಡ ರೈತರು ಇದಕ್ಕೆ ಅರ್ಜಿ ಹಾಕಿದಲ್ಲಿ ಸರ್ಕಾರದ ಸಹಾಯಧನದ ಅಡಿಯಲ್ಲಿ ಯಂತ್ರೋಪಕರಣ ಒದಗಿಸಲು ಇಲಾಖೆ ಮುಂದಾಗಲಿದೆ.
> ■ **ಕೆ. ಮಲ್ಲಿಕಾರ್ಜುನ,** ಜೆಡಿ, ಕೃಷಿ ಇಲಾಖೆ

ಕಿರುಸುದ್ದಿ



ಗೋಕಾಕ: ಕುಡಿಯುವ ನೀರಿನ ಉದ್ದೇಶದಿಂದ ಹಿಡಕಲ್ ಜಲಾಶಯದಿಂದ ನೀರು ಹರಿಬಿಟ್ಟ ಹಿನ್ನಲೆ ಗೋಕಾಕ ಜಲಪಾತ ಹಾಲ್ನೊರೆಯಂತೆ ಹರಿಯುತ್ತಿದೆ.

ನಿವೃತ್ತ ನ್ಯಾಯಾಧೀಶೆಗೆ 2 ತಿಂಗಳು ಜೈಲು: ಕೋರ್ಟ್ ಆದೇಶ

◆ **ವಿಜಯನಗರ:** ತುಂಗಭದ್ರಾ ಬೋರ್ಡ್ ಮಾಲೀಕತ್ವದ ಜಾಗೆಯನ್ನು ಅಕ್ರಮವಾಗಿ ಖರೀದಿ ಮಾಡಿರುವ ಆರೋಪ ಸಾಬೀತಾಗಿರುವ ಹಿನ್ನೆಲೆಯಲ್ಲಿ ನಿವೃತ್ತ ನ್ಯಾಯಾಧೀಶರೊಬ್ಬರಿಗೆ 2 ತಿಂಗಳು ಜೈಲು ಶಿಕ್ಷೆ ವಿಧಿಸಿ ಹೊಸಪೇಟೆ 1ನೇ ಹೆಚ್ಚುವರಿ ಜೆಎಂಎಫ್ ಸಿ ನ್ಯಾಯಾಲಯ ಆದೇಶಿಸಿದೆ. ಹೊಸಪೇಟೆ ಟಿಬಿ ಡ್ಯಾಂ ನಿವಾಸಿಯಾಗಿರುವ ನಿವೃತ್ತ ನ್ಯಾಯಾಧೀಶೆ ಜಯಶ್ರೀ ಎಂಬುವವರು ಶಿಕ್ಷೆಗೆ ಒಳಗಾಗಿದ್ದಾರೆ. ಟಿಬಿ ಡ್ಯಾಂನ ನಿಶಾನಿ ಕ್ಯಾಂಪ್‌ನಲ್ಲಿರುವ ಬೋರ್ಡ್ ಆಸ್ಪತ್ರೆ ಬಳಿಯಿರುವ ಬೋರ್ಡ್ ಆಸ್ತಿಯನ್ನು ಖಾಸಗಿ ವ್ಯಕ್ತಿಯೊಬ್ಬರು ನಕಲಿ ದಾಖಲೆಗಳನ್ನು ಸೃಷ್ಟಿಸಿ ನಿವೃತ್ತ ನ್ಯಾಯಾಧೀಶೆ ಜಯಶ್ರೀ ಎಂಬುವವರಿಗೆ ಮಾರಾಟ ಮಾಡಿದ್ದಾರೆ. ಅದನ್ನು ಖರೀದಿಸಿದ್ದ ಜಯಶ್ರೀ ಅವರು ಮನೆ ನವೀಕರಣಕ್ಕೆ ಮುಂದಾಗಿದ್ದರು. ಇದಕ್ಕೆ ಸಂಬಂಧಿಸಿದ ಟಿಬಿ ಬೋರ್ಡ್ ಅಧಿಕಾರಿಗಳು ನೋಟಿಸ್ ನೀಡಿದ್ದರು. ಈ ಕುರಿತಂತೆ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿತ್ತು. ಈ ಕುರಿತು ವಿಚಾರಣೆ ನಡೆಸಿದ ಕೋರ್ಟ್ ನಿವೃತ್ತ ನ್ಯಾಯಾಧೀಶೆ ಜಯಶ್ರೀ ಅವರಿಗೆ ಎರಡು ತಿಂಗಳು ಜೈಲು ಶಿಕ್ಷೆ ವಿಧಿಸಿ ಮಾರ್ಚ್ 28 ರಂದು ಆದೇಶಿಸಿದೆ.

ಅಕ್ರಮವಾಗಿ ಜಾಗ ಖರೀದಿ ಪ್ರಕರಣ

ಬೀದಿ ನಾಯಿಗಳ ದಾಳಿ: ಓರ್ವ ಬಲಿ

◆ **ಬೆಳಗಾವಿ:** ಜಿಲ್ಲೆಯಲ್ಲಿ ಬೀದಿನಾಯಿಗಳ ಕಾಟ ಮಿತಿಮೀರಿದ್ದು, ಹುಕ್ಕೇರಿ ತಾಲೂಕಿನ ಹುಲ್ಲೋಳಿ ಹಟ್ಟಿಯಲ್ಲಿ 8-10 ನಾಯಿಗಳ ಹಿಂಡು ಯುವಕನೋರ್ವನನ್ನು ಬೆನ್ನಟ್ಟಿ ಭೀಕರವಾಗಿ ದಾಳಿ ನಡೆಸಿವೆ. ಈ ದಾಳಿಯಿಂದ ತೀವ್ರವಾಗಿ ಗಾಯಗೊಂಡ ಬಸವರಾಜ ಹೆಬ್ಬಾಳೆ (30) ಎಂಬುವವರು ಪ್ರಸ್ತುತ ಕೋಮಾ ಸ್ಥಿತಿ ತಲುಪಿದ್ದು, ಸಾವು-ಬದುಕಿನ ನಡುವೆ ಹೋರಾಡುತ್ತಿದ್ದಾರೆ. ಹುಕ್ಕೇರಿ ತಾಲೂಕಿನ ಹುಲ್ಲೋಳಿ ಹಟ್ಟಿ ಗ್ರಾಮದಲ್ಲಿ ಈ ಘಟನೆ ನಡೆದಿದೆ. ದೇಹದ ವಿವಿಧ ಭಾಗಗಳಿಗೆ ನಾಯಿಗಳು ಮನಬಂದಂತೆ ಕಚ್ಚಿದ್ದು, ಗಂಭೀರ ಸ್ಥಿತಿಯಲ್ಲಿರುವ ಯುವಕನನ್ನು ಬೆಳಗಾವಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಬೆಳಗಾವಿ ನಗರದಲ್ಲೂ ತಾವರಪ್ಪ (48) ಎಂಬುವವರ ಮೇಲೆ ನಾಯಿ ದಾಳಿ ನಡೆದಿದ್ದು, ಅವರು ಬಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೇವಲ 15 ದಿನಗಳ ಹಿಂದಷ್ಟೇ ಇದೇ ಗ್ರಾಮದಲ್ಲಿ 4 ವರ್ಷದ ಮಗುವಿನ ಮೇಲೂ ನಾಯಿಗಳು ದಾಳಿ ನಡೆಸಿದ್ದವು. ಸರಣಿ ನಾಯಿ ದಾಳಿಗಳಿಂದ ಜಿಲ್ಲೆಯ ಜನತೆ ಕಂಗಾಲಾಗಿದ್ದು, ಕೂಡಲೇ ಬೀದಿನಾಯಿಗಳ ಹಾವಳಿ ತಡೆಗಟ್ಟಲು ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಜಿಲ್ಲಾಡಳಿತದ ವಿರುದ್ಧ ಅಸಮಾಧಾನವನ್ನು ಹೊರ ಹಾಕುತ್ತಿದ್ದಾರೆ.

ಕನ್ನಡ ಸಾಹಿತ್ಯ ಸಮ್ಮೇಳನ ಬಹುಸಂಖ್ಯಾತರ ವಿರೋಧಿಸುವ ವೇದಿಕೆ: ಅರುಣ ಜೋಶಿ

◆ **ಧಾರವಾಡ:** ಕನ್ನಡ ಸಾಹಿತ್ಯ ಪರಿಷತ್ ಕೇವಲ ಮಾಕ್ಸವಾದಿಗಳಿಗೆ ಮಾತ್ರ ಮನೆ ಹಾಕಿದ್ದು, ಇಲ್ಲಿ ಅನ್ಯರಿಗೆ ವಿಷಯ ಮಂಡನೆಗೆ ಅವಕಾಶ ನೀಡಿಲ್ಲ ಎಂದು ಹಿರಿಯ ನ್ಯಾಯವಾದಿ ಹಾಗೂ ಧಾರವಾಡ ಹೈಕೋರ್ಟ್ ನ ಮಾಜಿ ಸಾಲಿಸೀಟರ್ ಜನರಲ್ ಅರುಣ ಜೋಶಿ ಪ್ರಶ್ನಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಸಾಹಿತ್ಯ ಸಮ್ಮೇಳನಗಳು ಎಲ್ಲ ಬಗೆಯ ವಿಷಯಗಳ ಮಂಡನೆಗೆ ಸಮಾನ ಅವಕಾಶ ನೀಡಬೇಕು. ಅದನ್ನು ಬಿಟ್ಟು ಕೇವಲ ಒಂದು ವರ್ಗದ ಹಿತಕಾಯುವ ಮತ್ತು ಹಿಂದೂ ವಿರೋಧಿ ವಿಷಯ ಮಾತನಾಡುವವರ ವೇದಿಕೆಯಾಗಿದೆ ಅಷ್ಟೆ. ಇದನ್ನು ಡಾ.ರಾಜೇಂದ್ರ ಕುಮಾರ್ ಮಠ ಅವರು ಪ್ರಶ್ನಿಸುತ್ತಿದ್ದಂತೆಯೇ ವಿಷಯವನ್ನು ಅಲ್ಲಿಗೆ ನಿಲ್ಲಿಸಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿದ್ದು, ಕಸಾಪ ಶೋಚನೀಯ ಸ್ಥಿತಿಯನ್ನು ತೋರಿಸುತ್ತದೆ ಎಂದು ಜೋಶಿ ಟೀಕಿಸಿದ್ದಾರೆ.

ಹಿಂದೂ ವಿರೋಧಿ ಮತ್ತು ದೇಶವಿರೋಧಿ ವ್ಯಕ್ತಿಗಳನ್ನೇ ಅತಿಥಿಗಳಾಗಿ ಭಾಷಣಕ್ಕೆ ಕರೆಯುವುದನ್ನು ನೋಡಿದರೆ, ಕಸಾಪ ಎಡಪಂಥೀಯ ವೈಚಾರಿಕ ಅಖಾಡದ ಭಾಗವೇ ಆಗಿದೆ.

ಧಾರವಾಡದಲ್ಲಿ 3-4 ವರ್ಷಗಳಲ್ಲಿ ನಡೆದ ಸಾಹಿತ್ಯ ಸಮ್ಮೇಳನಗಳಲ್ಲಿ ಇರುವ ವೈಚಾರಿಕ ಭಾಷಣಕಾರರ ಪಟ್ಟಿಯನ್ನು ನೋಡಿದರೆ ಸತ್ಯ ಯಾರಿಗಾದರೂ ತಿಳಿಯುತ್ತದೆ ಎಂದು ಅರುಣ ಜೋಶಿ ಕುಟುಕಿದ್ದಾರೆ. ವಿನಯಾ ಒಕ್ಕುಂದ ಅವರು ಕಲ್ಲಂಗಡಿ ಅಂಗಡಿ ನಾಶ ಮಾಡಿದ್ದನ್ನು ಜಾತಿ ಕಾರಣದಿಂದ ಅಲ್ಲ, ಶ್ರಮದ ಕಾರಣದಿಂದ ಪ್ರಸ್ತಾಪಿಸಿದ್ದಾಗಿ ಹೇಳಿದ್ದಾರೆ.

ಹಾಗಾದರೆ ಜಿಲ್ಲೆಯಲ್ಲಿಯೇ ಪೊಲೀಸ್ ಠಾಣೆಗಳ ಮೇಲೆ ಮಾಡಿದ ಹಾನಿ ಇವರಿಗೆ ಕಂಡಿಲ್ಲವೇ ?

ಒಂದು ಕೋಮಿನ ಹೆಣ್ಣು ಮಗಳಿಗೆ ಎಲ್ಲೋ ಅನ್ಯಾಯವಾಗಿದ್ದು ಕಂಡಾಗ ಮಮ್ಮಲ ಮರಗುವ ಇವರಿಗೆ ಪಕ್ಕದ ಹುಬ್ಬಳ್ಳಿಯಲ್ಲಿ ಕಾಲೇಜಿನಲ್ಲಿಯೇ ಹೆಣ್ಣು ಮಗಳಿಗೆ ಚೂರಿ ಹಾಕಿದ್ದು ಕಂಡಿಲ್ಲವೇ ? ಎಂದು ಆಕ್ರೋಶ ವ್ಯಕ್ತ ಪಡಿಸಿದ್ದಾರೆ.

ಪಾಕಿಸ್ತಾನ ವೈಭವೀಕರಿಸುವ ಭಜರಂಗಿ ಭಾಯಿಜಾನ ಸಿನೆಮಾದ ಬಗ್ಗೆ ಮಾತನಾಡುವ ಇವರಿಗೆ ಕೇರಳ ಸ್ಟೋರಿ, ಕಾಶ್ಮೀರ ಫೈಲ್ಸ್ ಚಿತ್ರಗಳ ಬಗ್ಗೆ ಮಾತನಾಡಲು ಆಗುವುದಿಲ್ಲವೇಕೆ?

ವಂದೆ ಮಾತರಂ ಗೀತೆಗೆ 150 ವರ್ಷ ತುಂಬಿ ದೇಶಭಕ್ತಿಯಿಂದ ಎಲ್ಲಡೆ ಅದನ್ನು ಹಾಡಲಾಗುತ್ತಿದೆ. ಆದರೆ, ಸಾಹಿತ್ಯ ಸಮ್ಮೇಳನದಲ್ಲಿ ಈ ಬಗ್ಗೆ ಒಂದೇ ಒಂದು ಮಾತು ಕೂಡ ಯಾರು ಮಾತನಾಡಿದಲ್ಲ. ಇವರಿಗೆ ಭಾರತೀಯ ಸೇನೆ ಕಾರ್ಯಾಚರಣೆ ಟೀಕಿಸುವುದೇ ಮುಖ್ಯ ಎನಿಸುತ್ತಿದೆ ಎಂದು ಕಿಡಿ ಕಾರಿದ್ದಾರೆ.

▸▸ ಸಾಹಿತಿ ವಿನಯಾ ಒಕ್ಕುಂದಗೆ ಕೇರಳ, ಬಾಂಗ್ಲಾ ಹೆಣ್ಣುಮಕ್ಕಳ ನೋವು ಕಾಣಿಸುವುದಿಲ್ಲವೇ : ಅರುಣ ಜೋಶಿ ಪ್ರಶ್ನೆ

> ಕಸಾಪ ಜಿಲ್ಲಾ ಸಮ್ಮೇಳನಕ್ಕೆ ಹು-ಧಾ ಮಹಾನಗರ ಪಾಲಿಕೆಯಿಂದ 2 ಲಕ್ಷ ರೂ. ಅನುದಾನ ನೀಡಲಾಗಿದೆ. ಕರದಾತರು ನೀಡಿದ ಹಣ ಬಹುಸಂಖ್ಯಾತ ವಿರೋಧಿ ವಿಚಾರ ಪ್ರಸಾರಕ್ಕೆ ಬಳಕೆಯಾಗುವುದನ್ನು ಇನ್ನು ಪ್ರಜ್ಞಾವಂತ ನಾಗರಿಕರು ಸಹಿಸುವುದಿಲ್ಲ.
> ■ **ಅರುಣ ಜೋಶಿ,** ಹೈಕೋರ್ಟ್ ನ್ಯಾಯವಾದಿ

ನುಗ್ಗಿಕೇರಿ ಹನುಮ ದೇವರ ರಥೋತ್ಸವ

◆ **ಧಾರವಾಡ:** ದವನದ ಹುಣ್ಣಿಮೆ ಅಂಗವಾಗಿ ಸಮೀಪದ ನುಗ್ಗಿಕೇರಿ ದೇವಸ್ಥಾನದಲ್ಲಿ ಹನುಮ ಜಯಂತಿ ಬುಧವಾರ ಅತ್ಯಂತ ಸಂಭ್ರಮ-ಸಡಗರ, ಶ್ರದ್ಧಾಭಕ್ತಿಯಿಂದ ಜರುಗಿತು.

ಬೆಳಿಗ್ಗೆ 4ಕ್ಕೆ ಹನುಮ ದೇವರಿಗೆ ಪೂಜೆ, ಅಭಿಷೇಕ, ಅಲಂಕಾರ, ಬೆಳಿಗ್ಗೆ 6.25ಕ್ಕೆ ಬಾಲ ಹನುಮ ತೊಟ್ಟಿಲೋತ್ಸವ ನಡೆಯಿತು. ಮುತ್ತೈದೆಯರು ತೊಟ್ಟಿಲು ತೂಗಿ ಹಾಡಿದರು.

ಬೆಳಿಗ್ಗೆ 11 ರಥೋತ್ಸವ ನಂತರ ಪಲ್ಲಕ್ಕಿ ಉತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಅತ್ಯಂತ ಶ್ರದ್ಧಾ ಭಕ್ತರ ಹರ್ಷೋದ್ಗಾರಗಳೊಂದಿಗೆ ಸಾಗಿತು. ಮಹಾಮಂಗಳಾರತಿ ನಡೆಯಿತು.

ಪರ್ಯಾಯಸ್ಥ ಸುಧೀಂದ್ರ ದೇಸಾಯಿ, ಅರುಣಾ ದೇಸಾಯಿ, ವ್ಯಾಸ್ ದೇಸಾಯಿ, ವಾಮನ್ ದೇಸಾಯಿ ಸೇರಿದಂತೆ ಎಲ್ಲ ದೇಸಾಯಿ ಮನೆತನದ ಸದಸ್ಯರು, ಭಕ್ತರು ಪಾಲ್ಗೊಂಡಿದ್ದರು.



ಅಹಿಂದ ಸಮುದಾಯಕ್ಕೆ ಅನ್ಯಾಯ: ಅರವಿಂದ ಲಿಂಬಾವಳಿ

◆ **ಬಾಗಲಕೋಟೆ:** ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರದ ಅಭಿವೃದ್ಧಿ ಶೂನ್ಯವಾಗಿದೆ. ಮುಖ್ಯಮಂತ್ರಿಗಳು ಅಹಿಂದ ನಾಯಕ ಎಂದು ಪದೇ ಪದೆ ಹೇಳಿಕೊಳ್ಳುತ್ತಾರೆ. ಅಹಿಂದ ಸಮುದಾಯಕ್ಕೆ, ದಲಿತ ಸಮುದಾಯಗಳಿಗೆ ಅನ್ಯಾಯ ಆಗಿರುವ ಬಗ್ಗೆ ಜನರಿಂದ ಆಕ್ರೋಶ ವ್ಯಕ್ತವಾಗುತ್ತಿದೆ ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಅಧಿಕಾರದ ಅವಧಿಯಲ್ಲಿ ನಾವು ಎಸ್‌ಸಿ, ಎಸ್‌ಟಿ ಸಮುದಾಯಗಳ ಮೀಸಲಾತಿಯನ್ನು ಹೆಚ್ಚಿಸಿದ್ದೆವು. ಅದನ್ನು ಈ ಸರ್ಕಾರ ಕಡಿಮೆ ಮಾಡಿದೆ. ಈ ದೊಡ್ಡ ಕೊಡುಗೆಯನ್ನು ಸಿದ್ದರಾಮಯ್ಯನವರ ಸರ್ಕಾರ ನೀಡಿದೆ ಎಂದು ವ್ಯಂಗ್ಯವಾಡಿದರು. ಈ ಸಮಾಜವನ್ನು ತ್ರಿಶಂಕು ಸ್ಥಿತಿಗೆ ತಳ್ಳಿದ್ದಾರೆ ಎಂದು ಟೀಕಿಸಿದರು.

ಎಸ್‌ಸಿ, ಎಸ್‌ಟಿ ಸಮುದಾಯಗಳ ಅಭಿವೃದ್ಧಿಗೆ ಮೀಸಲು ಹಣವನ್ನು ಅನ್ಯ ಉದ್ದೇಶಕ್ಕೆ ಬಳಸುತ್ತಿದ್ದಾರೆ. ಉಚಿತ ಯೋಜನೆಗಳಿಗೆ ಹಣ ಬಳಸಿಕೊಳ್ಳಲು ಆರಂಭಿಸಿದ್ದಾರೆ ಎಂದು ದೂರಿದರು.

ಒಳ ಮೀಸಲಾತಿಯಲ್ಲೂ ಗೊಂದಲ ಸೃಷ್ಟಿಸಿದ್ದಾರೆ ಎಂದು ಟೀಕಿಸಿದರು. ಕಾಂಗ್ರೆಸ್ಸಿನ ಜನವಿರೋಧಿ, ದಲಿತ ವಿರೋಧಿ ನೀತಿಗೆ ಜನತೆ ಎರಡೂ ಕಡೆಗಳಲ್ಲಿ ಪಾಠ ಕಲಿಸುತ್ತಾರೆ ಎಂದು ತಿಳಿಸಿದರು. ಯುವಜನರ ಹಿತದೃಷ್ಟಿಯಿಂದ ತಕ್ಷಣವೇ ಖಾಲಿ ಹುದ್ದೆ ಭರ್ತಿ ಮಾಡಲು ಆಗ್ರಹಿಸಿದರು. ವಿಧಾನಪರಿಷತ್ ಮಾಜಿ ಸದಸ್ಯ ಅರುಣ್ ಶಹಾಪುರ ಇದ್ದರು.

ಹುಬ್ಬಳ್ಳಿ ಸಿದ್ಧಾರೂಢ ಮಠದ ಟ್ರಸ್ಟ್ ಕಮಿಟಿಗೆ ಆಯ್ಕೆ

ಬಾಳು ಮಗಜಿಕೊಂಡಿ ನೂತನ ಚೇರಮನ್

◆ **ಹುಬ್ಬಳ್ಳಿ:** ನಗರದ ಸಿದ್ಧಾರೂಢ ಸ್ವಾಮಿ ಮಠದ ಟ್ರಸ್ಟ್ ಕಮಿಟಿಗೆ ನೂತನ ಚೇರಮನ್ ಆಗಿ ಬಾಳು ಮಗಜಿಕೊಂಡಿ ಅವರನ್ನು ಆಯ್ಕೆ ಮಾಡಲಾಗಿದೆ. ಮಂಗಳವಾರ ಧರ್ಮದರ್ಶಿ ಅಂದಾನಪ್ಪ ಚಾಕಲಬ್ಬಿ ಅವರ ಅಧ್ಯಕ್ಷತೆಯಲ್ಲಿ ನಡೆದ ನೂತನ ಪದಾಧಿಕಾರಿಗಳ ಆಯ್ಕೆಯ ಸಭೆಯಲ್ಲಿ ವೈಸ್ ಚೇರಮನ್ ಆಗಿ ಗೀತಾ ಕಲಬುರ್ಗಿ ಆಯ್ಕೆಯಾಗಿದ್ದಾರೆ.

◆ ಗೌರವ ಕಾರ್ಯದರ್ಶಿ ವಿನಾಯಕ ಘೋಡ್ಕೆ ಅವರನ್ನು ಆಯ್ಕೆ ಮಾಡಲಾಗಿದೆ. ಧರ್ಮದರ್ಶಿಗಳಾದ ರಮೇಶ ಎಸ್. ಬೆಳಗಾವಿ, ಮಂಜುನಾಥ ಎಸ್. ಮುನವಳ್ಳಿ, ವೀರಪ್ಪ ಮಲ್ಲಾಪೂರ, ಡಾ. ಗೋವಿಂದ ಮಣ್ಣೂರ, ಬಸವರಾಜ ಕಲ್ಯಾಣಶೆಟ್ಟರ, ಸರ್ವಮಂಗಳಾ ಎನ್. ಪಾಠಕ, ಉದಯಕುಮಾರ ಡಿ. ನಾಯ್ಕ, ಚನ್ನವೀರ ಡಿ. ಮುಂಗುರವಾಡಿ, ಕೆ.ಎಲ್.ಪಾಟೀಲ, ಶಾಮಾನಂದ ಬಾ. ಪೂಜೇರಿ, ವ್ಹಿ.ಡಿ.ಕಾಮರಡ್ಡಿ, ವಸಂತ ವಾಯ್. ಸಾಲಗಟ್ಟಿ ಹಾಗೂ ಶ್ರೀಮಠದ ಮ್ಯಾನೇಜರ್ ಈರಣ್ಣ ಸೋ. ತುಪ್ಪದ ಪ್ರಕಟಣೆಗೆ ತಿಳಿಸಿದ್ದಾರೆ.



ಪಾಲಿಕೆಯ ಸಭೆಯಲ್ಲಿ ಖಮೇನಿಗೆ ಸಂತಾಪ: ಆಕ್ರೋಶ

◆ **ಕಲಬುರಗಿ:** ಕಲಬುರಗಿ ಮಹಾನಗರ ಪಾಲಿಕೆಯ 2025-26ನೇ ಸಾಲಿನ ಮುಂಗಡ ಪತ್ರದ ಸಭೆಯ ಮುನ್ನ, ಇರಾನ್‌ನ ಪರಮೋಚ್ಚ ನಾಯಕ ಆಯಾತುಲ್ಲ ಖಮೇನಿ ಅವರ ಹತ್ಯೆ ಹಿನ್ನೆಲೆ ಪಾಲಿಕೆ ಸಭೆಯಲ್ಲಿ ಸದಸ್ಯರಿಂದ ಸಂತಾಪ ಸೂಚಿಸಿದ ಘಟನೆ ಮಂಗಳವಾರ ನಡೆದಿದೆ. ಇದಕ್ಕೆ ರಾಜ್ಯಾದ್ಯಂತ ವಿರೋಧ ವ್ಯಕ್ತವಾಗುತ್ತಿದೆ.



ನಗರದ ಇಂದಿರಾ ಸ್ಮಾರಕ ಟೌನ್ ಹಾಲ್ ಸಭಾಂಗಣದಲ್ಲಿ ನಡೆದ ಬಜೆಟ್ ಮುಂಗಡ ಪತ್ರದ ಸಭೆಯ ಆರಂಭದಲ್ಲೇ ಸಂತಾಪ ಪತ್ರ ಓದಿದ ವಾರ್ಡ್ ನಂ. 24 ರ ಪಾಲಿಕೆ ಸದಸ್ಯೆ ಸಯೀದಾ ನೂರ್ ಫಾತೀಮ ಅವರು ಖಮೇನಿ ಅವರ ನಿಧನಕ್ಕೆ ಸಂಬಂಧಿಸಿದಂತೆ ಸಂತಾಪ ಸೂಚಿಸುವ ನಿರ್ಣಯವನ್ನು ಮಂಡಿಸಿದರು.

ನಿರ್ಣಯ ಮಂಡನೆಯ ಬಳಿಕ ಪಾಲಿಕೆ ಮೇಯರ್, ಆಯುಕ್ತರು ಹಾಗೂ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷದ ಸದಸ್ಯರು ಸೇರಿ ಖಮೇನಿ ಅವರ ಆತ್ಮಕ್ಕೆ ಶಾಂತಿ ಕೋರಿ ಸಂತಾಪ ಸಲ್ಲಿಸಿದರು. ಸಂತಾಪ ಬಳಿಕ ಮುಂಗಡ ಪತ್ರದ ಸಭೆಯ ಬಜೆಟ್ ಚರ್ಚೆಗಳು ನಡೆದವು. ಇದಕ್ಕೆ ಎಲ್ಲೆಡೆ ವಿರೋಧ ವ್ಯಕ್ತವಾಗುತ್ತಿದೆ.

> ರಾಷ್ಟ್ರಕ್ಕೆ ಬೇಡವಾದ ನಾಯಕ ನಮಗೇಕೆ. ಪಾಲಿಕೆಯ ಕಮಿಷನರ್ ತಡೆಯಬಹುದಾಗಿತ್ತು. ಆಗಿಲ್ಲ. ಮುಸ್ಲಿಂ ತುಷ್ಟೀಕರಣ, ಭಯೋತ್ಪಾದಕರಿಗೆ ಕುಮ್ಮಕ್ಕು ನೀಡುವವರ ವಿರುದ್ಧ ಕ್ರಮವಾಗಲೇಬೇಕು.
> ■ **ಸಿದ್ದಲಿಂಗ ಸ್ವಾಮೀಜಿ** ರಾಜ್ಯಾಧ್ಯಕ್ಷ, ಶಿವಸೇನೆ

ನಾವು ಹಾಕುವ ಕೇಸರಿ ಮುಸ್ಲಿಂ ರಾಷ್ಟ್ರಗಳಿಂದ ಬರುತ್ತದೆ ಎಂದು ಖರ್ಗೆ ಹೇಳಿದ ಮಾತು ಬಹುದೊಡ್ಡ ಸುಳ್ಳು. ನಮ್ಮ ನೆಲದ ಮೂಲದ ಆಹಾರ ಪದಾರ್ಥಗಳಿಂದ ಕೇಸರಿ ಮಾಡಲಾಗುತ್ತದೆ.

ಆದರೆ, ನಮ್ಮ ರೈತರು ತಯಾರಿಸಿದ ಹತ್ತಿಯಿಂದ ಮುಸ್ಲಿಮರು ಹಾಕುವ ಟೋಪಿ, ಆಹಾರ ಪದಾರ್ಥ, ಬಟ್ಟೆ ಭಾರತದ ಕೊಡುಗೆ ಎಂದ ಅವರು, ಈ ರೀತಿ ಭಾಷಣ ಮಾಡಿ, ನೆಲಕ್ಕೆ ಅಪಮಾನ ಮಾಡುವುದು ಶೋಭೆಯಲ್ಲ ಎಂದು ಸಿದ್ದಲಿಂಗ ಶ್ರೀಗಳು ಹೇಳಿದರು.

ಅನ್ಯಾಯ ಖಂಡಿಸದ ಪಾಲಿಕೆ

ಇರಾನಿನ ಸರ್ವೋಚ್ಚ ನಾಯಕ ಆಯಾತುಲ್ಲ ಖಮೇನಿ ಸಾವಿನ ಬಳಿಕ ಸ್ವತಃ ಇರಾನಿನ ನಾಗರೀಕತೆಯೇ ಸಂಭ್ರಮಿಸಿದೆ. ವಿಶ್ವದ ಹಲವು ಮುಸ್ಲಿಂ ರಾಷ್ಟ್ರಗಳು ಖಮೇನಿ ಸಾವಿಗಾಗಿ ಸಂತಾಪ ಸೂಚಿಸಿಲ್ಲ. ಮೇಲಾಗಿ ನಮ್ಮ ದೇಶದ ಲೋಕಸಭೆಯಲ್ಲಾಗಲಿ ಅಥವಾ ವಿಧಾನ ಸಭೆಯಲ್ಲಿ ಸಲ್ಲಿಸದ ಸಂತಾಪ (ಮೌನಾಚರಣೆ) ಕಲಬುರಗಿ ಮಹಾನಗರ ಪಾಲಿಕೆಯಲ್ಲೇಕೆ ಮಾಡಲಾಗಿದೆ ಎಂದು ಶಿವಸೇನಾ ಪಕ್ಷದ ರಾಜ್ಯಾಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ ಪಾಲಿಕೆಯ ನಡೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪೆಹಲ್ಗಾಂನಲ್ಲಿ ನಡೆದ ದಾಳಿಗೆ ಇವರು ಸಂತಾಪ ಸೂಚಿಸಿಲ್ಲ. ಮುಸ್ಲಿಂ ಸಮುದಾಯದ ಯುವತಿಯರ ಹತ್ಯೆಯಾದಾಗ ಖಂಡಿಸದ ಪಾಲಿಕೆ ಸದಸ್ಯೆ ಸೈಯದ್ ನೂರ ಫಾತಿಮಾ ಅವರಿಗೂ ಖಮೇನಿಗೆ ಏನು ಸಂಬಂಧ? ಈ ಸಂತಾಪದಲ್ಲಿ ಬಿಜೆಪಿ ಕೂಡ ಸಾತ್ ನೀಡಿದ್ದು ದುರಂತ ಎಂದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಶಿವರಾಜ್ ಬಾಳ್ಳಿ, ರಾಕೇಶ್ ಜಮಾದಾರ್, ರೋಹಿತ್ ಪಿಸ್ಕೆ, ಶರಣು, ಭಾಗೇಶ್ ಸೇರಿದಂತೆ ಇತರರು ಇದ್ದರು.

ಪಂಪಾ ವಿರೂಪಾಕ್ಷೇಶ್ವರ ಜಾತ್ರೆ ಇಂದು

◆ **ವಿಜಯನಗರ:** ದಕ್ಷಿಣಕಾಶಿ ಖ್ಯಾತಿ ಹಂಪಿ ವಿರೂಪಾಕ್ಷೇಶ್ವರ ಸ್ವಾಮಿ ಹಾಗೂ ಶ್ರೀಚಂದ್ರಮೌಳೇಶ್ವರ ಸ್ವಾಮಿಯ ಬ್ರಹ್ಮ ರಥೋತ್ಸವ ಏ.2ರಂದು ವಿಜೃಂಭಣೆಯಿಂದ ಜರುಗಲಿದೆ. ಬೆಳಿಗ್ಗೆ 10.35ಕ್ಕೆ ಮಡಿತೇರು, ಸಂಜೆ 430ಕ್ಕೆ ಧ್ವಜ ಮುಕ್ತಿ ಭಾವುಟ ಹರಾಜು, ಸಂಜೆ 4.45ಕ್ಕೆ ಬ್ರಹ ರಥೋತ್ಸವ ನಡೆಯಲಿದೆ. ಏ.3ರಂದು ರಜತ ಅಶ್ವವಾಹನೋತ್ಸವ ಮೃಗಯಾತ್ರೆ)ಕಿರಾತಾಲಂಕಾರ, ಕಡಬಿನ ಕಾಳಗ, ಏ.4 ಬೆಳಿಗ್ಗೆ 10ಕ್ಕೆ ಶ್ರೀಚಕ್ರತೀರ್ಥ ಕೋದಂಡರಾಮಸ್ವಾಮಿ ಕಲ್ಯಾಣೋತ್ಸವ ಹಾಗೂ ರಥೋತ್ಸವ, ಏ.4ರಂದು ರಾತ್ರಿ 8ಗಂಟೆಗೆ ಪಂಪಾ ವಿರೂಪಾಕ್ಷೇಶ್ವರ ಸ್ವಾಮಿಯ ತೆಪ್ಪೋತ್ಸವ ನಡೆಯಲಿದೆ ಎಂದು ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಗೇಟ್ ಪರೀಕ್ಷೆ: ವಿದ್ಯಾರ್ಥಿಗಳ ಸಾಧನೆ




ಹಳಿಯಾಳ: ಗ್ರಾಜುಯೇಟ್ ಆಪ್ಟಿಟ್ಯೂಡ್ ಟೆಸ್ಟ್ ಇನ್ ಇಂಜಿನಿಯರಿಂಗ್ (ಗೇಟ್) 2026 ನೇ ಸಾಲಿನ ರಾಷ್ಟ್ರ ಮಟ್ಟದ ಪರೀಕ್ಷೆಯಲ್ಲಿ ಪಟ್ಟಣದ ಕೆಎಲ್ಎಸ್ ವಿಡಿಐಟಿಯ ಇಬ್ಬರು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಕಂಪ್ಯೂಟರ್ ಸೈನ್ಸ್ ವಿಭಾಗದ ಕೊನೆಯ ವರ್ಷದ ವಿದ್ಯಾರ್ಥಿಗಳಾದ ಸಹನಾ ಮಲಿನ್ ಹಾಗೂ ಸುಕುಮಾರ್ ಚವಾಣ ಈ ಸಾಧನೆಗೈದಿದ್ದಾರೆ. ಪ್ರತಿಷ್ಠಿತ ವಿದ್ಯಾ ಸಂಸ್ಥೆಗಳಾದ ಐಐಟಿ, ಎನಐಟಿ ಗಳಲ್ಲಿ ಸ್ನಾತಕೋತ್ತರ ಪ್ರವೇಶಾತಿಗೆ ಮತ್ತು ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ನೇರ ನೇಮಕಾತಿಗಳಲ್ಲಿ ಗೇಟ್ ಅಂಕವನ್ನು ಪರಿಗಣಿಸಲಾಗುತ್ತದೆ.ಮಹಾವಿದ್ಯಾಲಯದ ವಿದ್ಯಾರ್ಥಿಗಳು ರಾಷ್ಟ್ರ ಮಟ್ಟದ ಪ್ರತಿಷ್ಠಿತ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವುದು ಸಂತಸ ತಂದಿದೆ ಎಂದು ಆಡಳಿತ ಮಂಡಳಿ ಅಧ್ಯಕ್ಷ ಪ್ರಶಾಂತ ಕುಲಕರ್ಣಿ ಮತ್ತು ಪ್ರಾಚಾರ್ಯ ಡಾ. ವಿ.ಎ ಕುಲಕರ್ಣಿ ಹೇಳಿದ್ದಾರೆ. ಕಂಪ್ಯೂಟರ್ ಸೈನ್ಸ್ ವಿಭಾಗ ಮುಖ್ಯಸ್ಥ ಡಾ. ವೆಂಕಟೇಶ್ ಶಂಕರ್ ಹಾಗೂ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

ಶಿವಕುಮಾರ ಶ್ರೀಗಳ 119ನೇ ಜನ್ಮದಿನ ಆಚರಣೆ



ಮುಂಡಗೋಡ: ರಾಜ್ಯ ಅನ್ನದಾತ ರೈತ ಸಂಘ ಮತ್ತು ಹಸಿರು ಸೇನೆ ವತಿಯಿಂದ ನಡೆದಾಡುವ ದೇವರು, ತ್ರಿವಿಧ ದಾಸೋಹಿ, ತುಮಕೂರಿನ ಸಿದ್ದಗಂಗಾ ಮಠದ ಡಾ.ಶಿವಕುಮಾರ ಸ್ವಾಮೀಜಿಯವರ 119ನೇ ಜನ್ಮದಿನವನ್ನು ಬುಧವಾರ ಆಚರಿಸಲಾಯಿತು. ಸಂಘಟನೆ ರಾಜ್ಯಾಧ್ಯಕ್ಷ ಚಿದಾನಂದ ಹರಿಜನ, ಪದಾಧಿಕಾರಿಗಳಾದ ಭೀಮಸಿ ವಾಲ್ಮೀಕಿ, ಗೋವಿಂದಪ್ಪ ಬೆಂಡಲಗಟ್ಟಿ, ಸೋಮಲಿಂಗ ಬೆಣ್ಣಿ, ಶಂಕ್ರಣ್ಣ ತಿಪ್ಪಣ್ಣನವರ, ಖೇಮಣ್ಣ ಲಮಾಣಿ, ಶಿವಪ್ಪ ಭಜಂತ್ರಿ, ಗಣಪತಿ ಹಳೂರ, ಪ್ರಶಾಂತ ಕರಿಗಾರ, ಹುಲಿಗೆಮ್ಮದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಮಂಜುನಾಥ ವಡ್ಡರ ಇದ್ದರು.

ಅಧ್ಯಕ್ಷರ ಆಯ್ಕೆ





ಗೋಕರ್ಣ: ಕರ್ನಾಟಕ ರಕ್ಷಣಾ ವೇದಿಕೆಯ(ನಾರಾಯಣ ಗೌಡ ಬಣ) ಉತ್ತರ ಕನ್ನಡದ ಜಿಲ್ಲಾ ಉಪಾಧ್ಯಕ್ಷರಾಗಿ ವಿನಾಯಕ ನಾಯಕ, ಜಿಲ್ಲಾ ಕಾರ್ಮಿಕ ಘಟಕದ ಅಧ್ಯಕ್ಷರಾಗಿ ನಾಗರಾಜ ನಾಯ್ಕ, ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿ ಶ್ರೀಪಾದ ಶೇಟ್ ರವನ್ನ ಕ.ರ.ವೇ. ಜಿಲ್ಲಾಧ್ಯಕ್ಷ ಅರುಣ್ ಹರ್ಕಡೆ ಆದೇಶದ ಮೇರೆಗೆ ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗಣಪತಿ ನಾಯ್ಕ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎ.5ರಂದು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ

ಶಿರಸಿ: ಬೆಂಗಳೂರಿನ ಸಪ್ತಕ ಮತ್ತು ಬಿಜಾಪುರೆ ಹಾರ್ಮೋನಿಯಮ್ ಫೌಂಡೇಶನ್ ಸಾಗರ ಸಂಸ್ಥೆಗಳಿಂದ ಋತು ಗಾನ ವ್ಯಾಖ್ಯಾನ ಎಂಬ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ನಗರದ ನೆಮ್ಮದಿ ರಂಗಧಾಮದಲ್ಲಿ ಏ. 5ರ ಸಂಜೆ 5ಗಂಟೆಯಿಂದ ರಂಗಧಾಮದಲ್ಲಿ ನಡೆಯಲಿದೆ. ಈ ಸಂದರ್ಭದಲ್ಲಿ ಡಾ. ರವೀಂದ್ರ ಕಾಟೋಟಿ ಅವರು ರಚಿಸಿ ಸಂಗೀತ ಸಂಯೋಜಿಸಿರುವ ಆರು ಋತುಗಳ ವರ್ಣನೆಯಿರುವ ರಾಗಾಧಾರಿತ ಕನ್ನಡದ ಬಂದಿಶ್‌ಗಳ ಜೊತೆಗೆ ಅವೇ ರಾಗಗಳ ಪಾರಂಪರಿಕ ಬಂದಿಶ್‌ಗಳನ್ನು ರೇಷ್ಮಾ ಭಟ್ ಮತ್ತು ಆದಿತ್ಯ ಪಲ್ಲಕ್ಕಿ ಅವರು ಹಾಡಲಿದ್ದಾರೆ. ಈ ರಚನೆಗಳಿಗೆ ಸಂದರ್ಭಸೂಚಿ ವ್ಯಾಖ್ಯಾನವನ್ನು ಡಾ. ಶತಾವಧಾನಿ ಆರ್. ಗಣೇಶ್ ಮಾಡಲಿದ್ದಾರೆ. ಡಾ. ರವೀಂದ್ರ ಕಾಟೋಟಿ ಅವರು ಹಾರ್ಮೋನಿಯಮ್ ಮತ್ತು ಗುರುರಾಜ ಆಡುಕಳ ಅವರು ತಬಲಾ ಸಹವಾದನ ಸಹಕಾರ ನೀಡಲಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಈ ವಿಶಿಷ್ಟ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಸಪ್ತಕದ ಜಿ ಎಸ್ ಹೆಗಡೆ, ಹಾಗೂ ಡಾ. ರವೀಂದ್ರ ಕಾಟೋಟಿ ಪ್ರಕಟನೆಯಲ್ಲಿ ಕೋರಿದ್ದಾರೆ.



ದಾಂಡೇಲಿ: ತಾಲೂಕಾಡಳಿತ ಮತ್ತು ನಗರಾಡಳಿತದ ಸಂಯುಕ್ತ ಆಶ್ರಯದಡಿ 31 ವಾರ್ಡ್ ಗಳಲ್ಲಿಯೂ ಸ್ವಚ್ಛತಾ ಅಭಿಯಾನವು ಬುಧವಾರ ಎರಡನೇ ದಿನಕ್ಕೆ ಮುಂದುವರೆದಿದೆ.ತಹಶೀಲ್ದಾರ್ ಶೈಲೇಶ ಪರಮಾನಂದ ಹಾಗೂ ಪೌರಾಯುಕ್ತ ವಿವೇಕ್ ಬನ್ನೆ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಸ್ವಚ್ಛತಾ ಅಭಿಯಾನದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, ಸದಸ್ಯರು, ಅಂಗನವಾಡಿ ಕಾರ್ಯಕರ್ತೆಯರು ಸದಸ್ಯರು ಮತ್ತಿತರರು ಇದ್ದರು.

ಹೊಲಿಗೆ ತರಬೇತಿ ಸಮಾರೋಪ ಸಮಾರಂಭ

ಜೋಯಿಡಾ: ಕೆನರಾ ಬ್ಯಾಂಕ್ ದೇಶಪಾಂಡೆ ಆರ್ಸೆಟ್ ಸಂಸ್ಥೆ ಹಳಿಯಾಳ ವಿಸ್ತರಣಾ ಶಾಖೆ ಜೋಯಿಡಾ ಹಾಗೂ ಟಾಟಾ ಮೋಟರ್ಸ್ ಲಿಮಿಟೆಡ್ ಧಾರವಾಡ ಇವರ ಸಹಯೋಗದೊಂದಿಗೆ ಹೊಲಿಗೆ ತರಬೇತಿ ಸಮಾರೂಪ ಸಮಾರಂಭ ಗಣೇಶ್ ಗುಡಿಯಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ಸುನಿತಾ ಟಿ. ಎಲೆಕ್ಟ್ರಿಕಲ್ ಡಿಪಾರ್ಟ್ಮೆಂಟ್ ಮುಖ್ಯ ಅಭಿಯಂತರು ಕರ್ನಾಟಕ ಪವರ್ ಕಾರ್ಪೊರೇಷನ್ ಲಿಮಿಟೆಡ್ ಗಣೇಶಗುಡಿ ಶಿಬಿರಾರ್ಥಿಗಳಿಗೆ ಸರ್ಟಿಫಿಕೇಟ್ ವಿತರಿಸುವ ಮೂಲಕ ಟೈಲರಿಂಗ್ ತರಬೇತಿಯು ಒಂದು ಒಳ್ಳೆಯ ಉದ್ಯೋಗ ಹೀಗೆ ಇದನ್ನು ಮುಂದುವರೆಸಿಕೊಂಡು ಹೋಗಿ ಎಂದು ಹೇಳಿದರು. ಲೀನಾ ಪಿಡಿಒ ಅವೇಡ ಗ್ರಾಪಂ ಇವರು ಶಿರಾರ್ಥಿಗಳಿಗೆ ಜೀವನದಲ್ಲಿ ಸಾಧಿಸುವ ಛಲವಿರಬೇಕು ಎನ್ನುವುದರ ಬಗ್ಗೆ ಮಾತನಾಡಿದರು. ವಿನಾಯಕ್ ಚವಾನ್ ಯೋಜನಾ ಸಂಯೋಜಕರು ಕೆನರಾ ಬ್ಯಾಂಕ್ ದೇಶಪಾಂಡೆ ಆರ್ಸೆಟ್ ಸಂಸ್ಥೆ ಹಳಿಯಾಳ, ಅಧ್ಯಕ್ಷರಾಗಿ ಪ್ರಶಾಂತ್ ಬಡ್ಡಿ ನಿರ್ದೇಶಕರು ಕೆನರಾ ಬ್ಯಾಂಕ್ ದೇಶಪಾಂಡೆ ಆರ್ಸೆಟ್ ಸಂಸ್ಥೆ ಹಳಿಯಾಳ ಇವರು ಕಮ್ಯುನಿಕೇಷನ್ ಸ್ಕಿಲ್, ಟೈಮ್ ಮ್ಯಾನೇಜ್ಮೆಂಟ್, ಸಾವಲಂಬಿ ಜೀವನದ ಕುರಿತು ಮಾತನಾಡಿದರು. ಅಶೋಕ್ ಸೂರ್ಯವಂಶಿ ಯೋಜನಾಧಿಕಾರಿಗಳು ಕೆನರಾ ಬ್ಯಾಂಕ್ ದೇಶಪಾಂಡೆ ಆರ್ಸೆಟ್ ಸಂಸ್ಥೆ ವಿಸ್ತರಣಾ ಶಾಖೆ ಜೋಯಿಡಾ ಇವರು ಕಾರ್ಯಕ್ರಮ ಆಯೋಜಿಸಿ ವಂದಿಸಿದರು. ಶಿಬಿರಾರ್ಥಿಗಳಾದ ಪೂಜಾ ಮತ್ತು ರಂಜಿತ ತರಬೇತಿ ಕುರಿತು ಮಾತನಾಡಿದರು. ವೇದಿಕೆಯಲ್ಲಿ ಶರಣಪ್ಪ ಗದ್ದಿ ಮಾಜಿ ಅಧ್ಯಕ್ಷರು ಗ್ರಾಪಂ ಅವೇಡ, ದೀಕ್ಷಿತಾ ವೇಲಿಪ್ ಸಂಪನ್ಮೂಲ ವ್ಯಕ್ತಿ ಉಪಸ್ಥಿತರಿದ್ದರು.



ಜೋಯಿಡಾ: ಕೆನರಾ ಬ್ಯಾಂಕ್ ದೇಶಪಾಂಡೆ ಆರ್ಸೆಟ್ ಸಂಸ್ಥೆ ಹಳಿಯಾಳ ವಿಸ್ತರಣಾ ಶಾಖೆ ಜೋಯಿಡಾ ಹಾಗೂ ಟಾಟಾ ಮೋಟರ್ಸ್ ಲಿಮಿಟೆಡ್ ಧಾರವಾಡ ಇವರ ಸಹಯೋಗದೊಂದಿಗೆ ಹೊಲಿಗೆ ತರಬೇತಿ ಸಮಾರೂಪ ಸಮಾರಂಭ ನಡೆಯಿತು. ಈ ವೇಳೆ ಎಲೆಕ್ಟ್ರಿಕಲ್ ಡಿಪಾರ್ಟ್ಮೆಂಟ್ ಮುಖ್ಯ ಅಭಿಯಂತರು ಸುನಿತಾ ಟಿ. ಶಿಬಿರಾರ್ಥಿಗಳಿಗೆ ಸರ್ಟಿಫಿಕೇಟ್ ವಿತರಿಸಿದರು.

2027ರ ಜನಗಣತಿಗೆ ಎಲ್ಲರೂ ಕೈ ಜೋಡಿಸಿ ಲಕ್ಷ್ಮೀಪ್ರಿಯಾ

ಸ್ವಯಂ ಗಣತಿ ದಾಖಲಿಸಿದ ಡಿಸಿ

ಕಾರವಾರ: ಕೇಂದ್ರ ಸರ್ಕಾರವು ಜನಗಣತಿ 2027ರ ಅಂಗವಾಗಿ ಸ್ವಯಂ ಗಣತಿ ವ್ಯವಸ್ಥೆಯನ್ನು ಪರಿಚಯಿಸಿದ್ದು, ಬುಧವಾರ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಅವರು ತಮ್ಮ ಮೊಬೈಲ್ ಮೂಲಕ ತಮ್ಮ ಸ್ವಯಂ ಗಣತಿ ದಾಖಲಾತಿಯನ್ನು ಪೂರ್ಣಗೊಳಿಸುವ ಮೂಲಕ ಜಿಲ್ಲೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಕೂಡಾ ಸ್ವಯಂ ಗಣತಿ ಮಾಡಿಕೊಳ್ಳಲು ಪ್ರೇರಣೆ ನೀಡಿದರು.



ನಮ್ಮ ಜನಗಣತಿ-ನಮ್ಮ ಅಭಿವೃದ್ಧಿ ಎಂಬ ಧ್ಯೇಯ ವಾಕ್ಯದೊಂದಿಗೆ ಸರ್ಕಾರ ಜನಗಣತಿ 2027ನ್ನು ಹಮ್ಮಿಕೊಂಡಿದ್ದು, ಇದರ ಅಂಗವಾಗಿ ಸರ್ಕಾರ ಸ್ವಯಂ ಗಣತಿ ವ್ಯವಸ್ಥೆಯನ್ನು ಪರಿಚಯಿಸಿದೆ. 2026ರ ಏಪ್ರಿಲ್ 1 ರಿಂದ 15 ರವರೆಗೆ ಜಿಲ್ಲೆಯ ಎಲ್ಲಾ ನಾಗರಿಕರು ಅಧಿಕೃತ ಪೋರ್ಟಲ್ se.census.gov.in ಮೂಲಕ ತಮ್ಮ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ದಾಖಲಿಸಿಕೊಳ್ಳಬಹುದಾಗಿದ್ದು, ಈ ಪ್ರಕ್ರಿಯೆಯು ಅತ್ಯಂತ ಸರಳ ಮತ್ತು ಸುರಕ್ಷಿತವಾಗಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳು ತಮ್ಮ ಸ್ವಯಂ ಗಣತಿಯ ಮಾಹಿತಿಯನ್ನು ಜಿಲ್ಲಾ ಮಟ್ಟದ ಅಧಿಕಾರಿಗಳ ವಾಟ್ಸಾಪ್ ಗ್ರೂಪ್‌ನಲ್ಲಿ ಹಂಚಿಕೊಂಡ ಕೂಡಲೇ ಜಿಲ್ಲಾ ಮತ್ತು ತಾಲೂಕು ಮಟ್ಟದ ಹಲವು ಅಧಿಕಾರಿಗಳು ತಾವೂ ಕೂಡಾ ಸ್ವಯಂ ಗಣತಿ ಪ್ರಕ್ರಿಯೆಯಲ್ಲಿ ಉತ್ಸಾಹದಿಂದ ಭಾಗವಹಿಸಿ, ಸ್ವಯಂ ಗಣತಿ ಪೂರ್ಣಗೊಂಡ ತಮ್ಮ ಮಾಹಿತಿಯನ್ನು ಹಂಚಿಕೊಳ್ಳುವ ಮೂಲಕ ಜಿಲ್ಲಾಧಿಕಾರಿಗಳ ಮಾದರಿ ನಡೆಯನ್ನು ಅನುಸರಿಸಿದ್ದು, ಮಾತ್ರವಲ್ಲದೇ ತಮ್ಮ ಅಧೀನ ಸಿಬ್ಬಂದಿಗೆ ಪ್ರೇರಣೆ ನೀಡಿದರು.

ಜನಗಣತಿ ನಮ್ಮ ರಾಜ್ಯ ಮತ್ತು ದೇಶದ ಭವಿಷ್ಯ ರೂಪಿಸುವ ಮಹತ್ವದ ಕಾರ್ಯವಾಗಿದ್ದು, ಇದು ದತ್ತಾಂಶ ಆಧಾರಿತ ನಿರ್ಧಾರಗಳಿಗೆ ಸಹಾಯ ಮಾಡುತ್ತದೆ. ಆರೋಗ್ಯ, ಶಿಕ್ಷಣ, ವಸತಿ ಮತ್ತು ಮೂಲಸೌಕರ್ಯ ಕ್ಷೇತ್ರಗಳಲ್ಲಿ ಸಮರ್ಪಕ ಸಂಪನ್ಮೂಲ ಹಂಚಿಕೆಗೆ ದಾರಿ ತೋರುತ್ತದೆ. ಜನಗಣತಿಯಲ್ಲಿ ನಮ್ಮ ಭಾಗವಹಿಸುವಿಕೆ ಅತ್ಯಂತ ಮುಖ್ಯವಾಗಿದ್ದು, ಇಂದು ನಾವು ನೀಡುವ ನಿಖರ ಮಾಹಿತಿಯು, ನಾಳೆಯ ಉತ್ತಮ ನೀತಿಗಳು ಮತ್ತು ಸೇವೆಗಳಿಗೆ ಆಧಾರವಾಗುತ್ತದೆ. ಜನಗಣತಿಯಿಂದ ಯಾರು ಬಿಟ್ಟು ಹೋಗದಂತೆ ಸರ್ಕಾರ ಮುತುವರ್ಜಿ ವಹಿಸಿದೆ. ನಿಗದಿತ ಅವಧಿಯಲ್ಲಿ ಸ್ವಯಂ ಗಣತಿಯನ್ನು ಪೂರ್ಣಗೊಳಿಸಿ, ಜಿಲ್ಲೆಯಲ್ಲಿ ಜನಗಣತಿ 2027 ಅನ್ನು ಯಶಸ್ವಿಗೊಳಿಸಲು ನಾವೆಲ್ಲರೂ ಕೈ ಜೋಡಿಸೋಣ ಎಂದು ಜಿಲ್ಲಾಧಿಕಾರಿಗಳು ಜಿಲ್ಲೆಯ ನಾಗರಿಕರಲ್ಲಿ ಮನವಿ ಮಾಡಿದ್ದಾರೆ.

> **ಮೊಬೈಲ್ ಸಂಖ್ಯೆ ಮತ್ತು OTP ಮೂಲಕ ಸುಲಭವಾಗಿ 5 ರಿಂದ 10 ನಿಮಿಷಗಳಲ್ಲಿ ಸ್ವಯಂ ಗಣತಿ ಪೂರ್ಣಗೊಳಿಸಬಹುದಾಗಿದ್ದು, ಈ ಪ್ರಕ್ರಿಯೆ ಪೂರ್ಣಗೊಂಡ ನಂತರ ನಿಮ್ಮ ಅರ್ಜಿಯ ಸಂಖ್ಯೆ ದೊರೆಯುವುದು. ಈ ಸಂಖ್ಯೆಯನ್ನು ಏಪ್ರಿಲ್ 16 ರಿಂದ ಮೇ 15 ರವರೆಗೆ ಮನೆಮನೆಗೆ ಭೇಟಿ ನೀಡುವ ಗಣತಿದಾರರಿಗೆ ನೀಡಿದಲ್ಲಿ, ಗಣತಿದಾರರು ಅತೀ ಕಡಿಮೆ ಸಮಯದಲ್ಲಿ ಗಣತಿ ಪೂರ್ಣಗೊಳಿಸಲು ಸಾಧ್ಯವಾಗಲಿದೆ.**
> ■ **ಕೆ.ಲಕ್ಷ್ಮೀಪ್ರಿಯಾ,ಜಿಲ್ಲಾಧಿಕಾರಿ**

ವೆಂಕಟರಮಣ ದೇವರ ದೊಡ್ಡ ತೇರು ಉತ್ಸವ ಇಂದು

ಅಂಕೋಲಾ: ತಾಲೂಕಿನ ದೊಡ್ಡ ದೇವರು ಖ್ಯಾತಿಯ ಶ್ರೀ ವೆಂಕಟರಮಣ ದೇವರ ತೇರು ಉತ್ಸವದ ಅಂಗವಾಗಿ ಸಣ್ಣ ತೇರನ್ನು ಎಳೆಯುವ ಸಂಪ್ರದಾಯ ಸಂಭ್ರಮದಿಂದ ನಡೆಯಿತು.

ವೆಂಕಟರಮಣ ದೇವಾಲಯದಿಂದ ದೇವರ ಉತ್ಸವ ಮೂರ್ತಿಯನ್ನು ಪಲ್ಲಕಿಯಲ್ಲಿ ತಂದು ಪುಷ್ಪರಥದಲ್ಲಿ ವಿರಾಜಮಾನಗೊಳಿಸಿ ಪೂಜೆ ಸಲ್ಲಿಸಿ ರಥ ಎಳೆಯಲಾಯಿತು. ವಾದ್ಯ ಘೋಷಗಳೊಂದಿಗೆ ನೂರಾರು ಜನ ಭಕ್ತರು ರಥಬೀದಿಯಿಂದ ಹರ್ಷೋದ್ಗಾರಗಳೊಂದಿಗೆ ಸಣ್ಣ ತೇರನ್ನು ಕಣಕಣೇಶ್ವರ ದೇವಾಲಯದ ಎದುರಿನ ವರೆಗೆ ಎಳೆದು ತಂದು ಪೂಜೆ ಸಲ್ಲಿಸಿ ಮತ್ತೆ ರಥಬೀದಿಗೆ ಮರಳಲಾಯಿತು.ದೇವಾಲಯದ ಆಡಳಿತ ಮಂಡಳಿಯ ಪ್ರಮುಖರು ಭಕ್ತರು ಪಾಲ್ಗೊಂಡಿದ್ದರು.ಇಂದು



ಏಪ್ರಿಲ್ 2 ರಂದು ಸಂಜೆ ದೊಡ್ಡ ತೇರು ಉತ್ಸವ ನಡೆಯಲಿದ್ದು ಏಪ್ರಿಲ್ 3 ರಂದು ದೇವರ ಪಲ್ಲಕಿ ಉತ್ಸವ ಬೇಲಾ ಬಂದರಿಗೆ ತೆರಳಿ ಅಲ್ಲಿ ದೋಣಿ ವಿಹಾರ, ಓಕುಳಿಯಾಟ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.



ಯಲ್ಲಾಪುರ : ಪಪಂ ಆಯವ್ಯಯ(ಬಜೆಟ್)26-27ಪಟ್ಟಿಯನ್ನು ಆಡಳಿತಾಧಿಕಾರಿಯಾದ ತಹಶೀಲ್ದಾರ್ ಚಂದ್ರ ಶೇಖರ್ ಹೊಸಮನಿ ಬಿಡುಗಡೆ ಗೊಳಿಸಿದರು. ಒಟ್ಟು 20.87ಕೋಟಿ ರೂ ಬಜೆಟ್ ಇದ್ದು ಅದರಲ್ಲಿ 8.04 ಕೋಟಿ ರಾಜಸ್ವ ನಿಧಿ ಮತ್ತು 9.96 ಬಂಡವಾಳ ಪಾವತಿ, 2.77 ಕೋಟಿ ಅಸಾಧಾರಣ ಪಾವತಿ ಇದ್ದು ಒಟ್ಟು 30.86 ಲಕ್ಷ ಉಳಿತಾಯ ಬಜೆಟ್ ಆಗಿದೆ ಎಂದು ಮುಖ್ಯಧಿಕಾರಿ ಕೇಶವ ಚೌಗಲೇ ಮಾಹಿತಿ ನೀಡಿದರು. ಲೆಕ್ಕಧಿಕಾರಿ ಅರ್ಚನಾ ಇದ್ದರು.



ಕುಮಟಾ: ಹೋಟೆಲ್‌ಗಳಿಗೆ ವಾಣಿಜ್ಯ ಗ್ಯಾಸ್ ಸಿಲಿಂಡರ್‌ಗಳ ಪೂರೈಕೆಯಲ್ಲಿ ಉಂಟಾಗಿರುವ ಅಭಾವವದಿಂದ ಸಮಸ್ಯೆ ಉಂಟಾಗಿದ್ದು ಕುಮಟಾದ ಹೋಟೆಲ್ ಮಾಲಕರು ಈಬಗ್ಗೆ ಆಡಳಿತ ಸೌಧದಲ್ಲಿರುವ ಶಾಸಕರ ಕಚೇರಿಗೆ ತೆರಳಿ ಶಾಸಕರಲ್ಲಿ ಮನವಿ ಸಲ್ಲಿಸಿದರು.

ಏ.11ರಿಂದ ಮಕ್ಕಳ ಬೇಸಿಗೆ ಶಿಬಿರ



ಯಲ್ಲಾಪುರ: ರಂಗ ಸಹ್ಯಾದ್ರಿಯಿಂದ 20ನೇ ವರ್ಷದ ಮಕ್ಕಳ ಬೇಸಿಗೆ ಶಿಬಿರವನ್ನು ಏ.11 ರಿಂದ ಮೇ 3ರವರೆಗೆ ಪಟ್ಟಣದ ಮಾದರಿ ಶಾಲೆಯಲ್ಲಿ ಆಯೋಜಿಸಲಾಗಿದೆ ಎಂದು ರಂಗ ಸಹ್ಯಾದ್ರಿ ಅಧ್ಯಕ್ಷ ಡಿ.ಎನ್. ಗಾಂವ್ಕರ ಹೇಳಿದರು.

ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 2 ನೇ ತರಗತಿಯಿಂದ 12 ನೇ ತರಗತಿಯವರೆಗಿನ ಮಕ್ಕಳು ಶಿಬಿರದಲ್ಲಿ ಭಾಗವಹಿಸಬಹುದು. ಪ್ರತಿದಿನ ಬೆಳಗ್ಗೆ 9.30 ರಿಂದ ಸಂಜೆ 5 ರವರೆಗೆ ಶಿಬಿರ ನಡೆಯಲಿದೆ ಎಂದು ವಿವರಿಸಿದರು.ಶಿಬಿರದಲ್ಲಿ ಭಗವದ್ಗೀತೆ ಶ್ಲೋಕ ಪಠಣ, ಯೋಗ, ಸಂಗೀತ, ನೃತ್ಯ, ನಾಟಕ, ಚಿತ್ರಕಲೆ, ಕರಾಟೆ, ಮರಕಾಲು ನಡಿಗೆ, ಆರ್ಟ್ ಮತ್ತು ಕ್ರಾಫ್ಟ್, ರಿಂಗ್ ಡಾನ್ಸ್, ಬಾಲ್ ಜಗ್ಲಿಂಗ್, ರೂಬೀಸ್ ಕ್ಯೂಬ್, ಕಂಪ್ಯೂಟರ್, ರಾಮಾಯಣ-ಮಹಾಭಾರತ ಕಥೆಗಳು, ನೈತಿಕ ಶಿಕ್ಷಣ ಸೇರಿದಂತೆ ಹಲವು ಕೌಶಲ್ಯಗಳನ್ನು ತಜ್ಞರ ಮೂಲಕ ಕಲಿಸಲಾಗುತ್ತದೆಎಂದರು.ಬೇಸಿಗೆರಜೆಯನ್ನು ಮಕ್ಕಳು ಮೊಬೈಲ್ ಗೀಳಿನಲ್ಲಿ, ಇನ್ನಾವುದೋ ಅನಗತ್ಯ ವಿಷಯಗಳಲ್ಲಿ ತೊಡಗಿಸಿಕೊಂಡು ವ್ಯರ್ಥವಾಗಿ ಕಳೆಯುವುದನ್ನು ತಪ್ಪಿಸಬೇಕೆಂಬುದು ಶಿಬಿರದ ಪ್ರಮುಖ ಉದ್ದೇಶ. ಆಸಕ್ತರು ಮುಂಚಿತವಾಗಿ ಹೆಸರು ನೋಂದಾಯಿಸಿಕೊಳ್ಳುವಂತೆ ವಿನಂತಿಸಿದರು. ರಂಗ ಸಹ್ಯಾದ್ರಿಯ ಪದಾಽಕಾರಿಗಳಾದ ಪಾರ್ವತಿ ಕಟ್ಟಿಮನಿ, ಪರಮೇಶ್ವರ ನಾಯ್ಕ, ಸೋನು ಭಟ್ಟ, ಲಕ್ಷ್ಮೀ ಶಂಕರ, ಸುಮಂಗಲಾ ಜೋಶಿ ಉಪಸ್ಥಿತರಿದ್ದರು.



ಕುಮಟಾ: ಲಯನ್ಸ್ ಅಂತಾರಾಷ್ಟ್ರೀಯ ಸಂಘಟನೆಯ ಜಿಲ್ಲಾ 317 ಬಿಯ ಜಿಲ್ಲಾ ಗವರ್ನರ್ ಪಿಎಂಜೆಎಫ್ ಲಯನ್ ಜೈಮೋಲ್ ಜಿ. ನಾಯ್ಕ್ ಅವರು ಲಯನ್ಸ್ ಕ್ಲಬ್ ಕುಮಟಾಕ್ಕೆ ಅಧಿಕೃತ ಭೇಟಿ ನೀಡಿ, ಸಂಸ್ಥೆ ಕೈಗೊಂಡಿರುವ ವಿವಿಧ ಸಮಾಜಮುಖಿ ಸೇವಾ ಕಾರ್ಯಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಮಕ್ಕಳಿಗೆ ಅಮೂಲ್ಯ ಜೀವಿಗಳ ಮಾಹಿತಿ ಸಿಗುವಂತಾಗಲಿ: ಸಂಜು ಕೋಳೂರ

ಹಳಿಯಾಳ: ಮಾನವ ಆಹಾರ ಸರಪಳಿ ಕೊಂಡಿಯ ಶೇಕಡಾ 80 % ಮೂಲ ಜೇನು ಹುಳು. ಅಂತಹ ಜೇನು ಹುಳುವಿನ ಬಗ್ಗೆ ಇದುವರೆಗೂ ಯಾವುದೇ ಪಠ್ಯಪುಸ್ತಕಗಳಲ್ಲಿ ಸರಿಯಾದ ಮಾಹಿತಿ ಇರದೇ ಇರುವುದು ದುರದೃಷ್ಟಕರ. ಭಾರತ ದೇಶ ಜೇನಿನ ತವರೂರು. ವಿಶ್ವದ ಐದು ಜೇನು ತಳಿಗಳಲ್ಲಿ ನಾಲ್ಕು ತಳಿಗಳ ಮೂಲ ಭಾರತ ದೇಶ ಎಂದು ಜೇನು ಕೃಷಿ ತಜ್ಞ ನರಸಿಂಹ ಹೆಗಡೆ ಹೇಳಿದರು.

ಪಟ್ಟಣದ ತಾಲೂಕು ಕಾರಾಗೃಹ ಮತ್ತು ಸುಧಾರಣಾ ಇಲಾಖೆಯಿಂದ ಕೈಗೊಳ್ಳಲಾಗಿದ್ದ ಜೇನು ಕೃಷಿ ತರಬೇತಿಯ ಕಾರ್ಯಕ್ರಮವನ್ನುದ್ದೇಶಿಸಿ ಉಪನ್ಯಾಸ ನೀಡಿದರು.

ತಹಶೀಲ್ದಾರ ಫಿರೋಜಷಾ ಸೋಮನಕಟ್ಟಿಯವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಹಲವಾರು ಉಪಯುಕ್ತ ಪ್ರಶ್ನೆ ಕೇಳುವ ಮೂಲಕ ಶುದ್ಧ ಜೇನಿನ ಮಾಹಿತಿ ದೊರಕುವಂತೆ ಮಾಡಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಪತ್ರಕರ್ತ ಹಾಗೂ ಸಮಾಜ ಸೇವಕ ಸಂಜು ಕೋಳೂರ ಮಾತನಾಡಿ, ಜೇನು ಹುಳು ಎಂದರೆ ಸಾಕ್ಷಾತ್ ಧನ್ವಂತರಿಯ ಅವತಾರ ಎನ್ನಬಹುದಾಗಿದ್ದು, ಅತಿಯಾದ ರಾಸಾಯನಿಕ ಗಳ ಉಪಯೋಗ ಕೃಷಿಯಲ್ಲಿ ಮಾಡುತ್ತಿರುವುದರಿಂದಾಗಿ ವಿಷಪ್ರಾಶನವಾಗಿ ಜೇನುಹುಳುಗಳ ದೊಡ್ಡ ಸಂತತಿ ಸಾಯುತ್ತಾ ಸಾಗುತ್ತಿದೆ.



ಕಾಲ ಕಾಲಕ್ಕೆ ಶಾಲಾ ಮಕ್ಕಳಿಗೆ ಪರಿಸರ ಸಮತೋಲನ ಹಾಗೂ ಮಾನವ ಆಹಾರ ಸರಪಳಿಯಲ್ಲಿ ಪ್ರಮುಖ ಪಾತ್ರ ವಹಿಸುವ ಜೇನು ಹುಳು, ಹಾವುಗಳು ಮತ್ತು ಹಾರ್ನ್ ಬಿಲ್ ಹಕ್ಕಿಯಂತಹ ಅಮೂಲ್ಯ ಜೀವಿಗಳ ಮಾಹಿತಿ ಕಡ್ಡಾಯವಾಗಿ ಸಿಗುವಂತಾಗಬೇಕು ಮತ್ತು ಜಾಗೃತಿ ಕಾರ್ಯಕ್ರಮ ಮತ್ತು ಲೇಖನಗಳು ಪ್ರಕಟವಾಗಬೇಕು ಎಂದರು.ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಕಾರಾಗೃಹ ಮತ್ತು ಸುಧಾರಣಾ ಇಲಾಖೆಯ ಸುಪರಿಂಟೆಂಡೆಂಟ್ ಕಲ್ಲಪ್ಪ ಗಸ್ತಿ ಮಾತನಾಡಿದರು. ಹಿರಿಯ ಪತ್ರಕರ್ತರಾದ ಓರ್ವಿಲ್ ಫರ್ನಾಂಡೀಸ್, ಮಂಜುನಾಥ ಶೇರಖಾನೆ , ಧ್ರುವ ಹೆಗಡೆ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಹಾಗೂ ಜೈಲ್‌ನ ಸಿಬ್ಬಂದಿ ಮತ್ತಿತರರಿದ್ದರು.

ಪಂಪ್ ಹೌಸ್‌ಗೆ ತಹಶೀಲ್ದಾರ್ ಸೋಮನಕಟ್ಟಿ ಭೇಟಿ

ದಾಂಡೇಲಿ: ಹಳಿಯಾಳ ತಾಲೂಕಿನ 46 ಕೆರೆಗಳು ಹಾಗೂ 19 ಬಾಂದಾರುಗಳಿಗೆ ಕಾಳಿ ನದಿಯಿಂದ ನೀರು ತುಂಬಿಸುವ ಮಹತ್ವಾಕಾಂಕ್ಷಿ ಯೋಜನೆಯ ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿದ್ದು, ಇನ್ನುಳಿದಂತೆ ಕೆಲ ತಾಂತ್ರಿಕ ಸೇರಿದಂತೆ ಸಣ್ಣಪುಟ್ಟ ಕೆಲಸ ಕಾರ್ಯಗಳು ಅಂತಿಮ ಹಂತದಲ್ಲಿದೆ ಎಂದು ಹಳಿಯಾಳದ ತಹಶೀಲ್ದಾರ್ ಫಿರೋಜ್ ಷಾ ಸೋಮನಕಟ್ಟಿ ಅವರು ಹೇಳಿದರು.

ಅವರು ಬುಧವಾರ ದಾಂಡೇಲಿ ನಗರದ ಹಳಿಯಾಳ ರಸ್ತೆಯಲ್ಲಿರುವ ಕಾಳಿ ನದಿಯಿಂದ ಹಳಿಯಾಳದ ಕೆರೆ ಬಾಂದಾರುಗಳಿಗೆ ನೀರು ತುಂಬಿಸುವ ಯೋಜನೆಯ ಪಂಪ್ ಹೌಸಿಗೆ ಭೇಟಿ ನೀಡಿ ಪರಿಶೀಲನೆಯನ್ನು ನಡೆಸಿದರು.

ಈ ಸಂದರ್ಭದಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು ಶಾಸಕ ಆರ್.ವಿ.ದೇಶಪಾಂಡೆ ಅವರ ವಿಶೇಷ ಮುತುವರ್ಜಿಯಿಂದ ಈ ಯೋಜನೆ ಜಾರಿಗೊಂಡು, ಇದೀಗ ಕಾಮಗಾರಿ ಅಂತಿಮ ಹಂತದಲ್ಲಿದೆ. ಈ ಯೋಜನೆಯ ಕಾಮಗಾರಿ ತ್ವರಿತವಾಗಿ ಮುಕ್ತಾಯಗೊಳಿಸುವಂತೆ ಆಗ್ರಹಿಸಿ ಹಳಿಯಾಳದಲ್ಲಿ ರೈತರು ಹೋರಾಟವನ್ನು ನಡೆಸಿರುವುದನ್ನು ಉಲ್ಲೇಖಿಸಿದ ಅವರು ಕಾಮಗಾರಿ ತ್ವರಿತ ಮುಕ್ತಾಯವಾಗಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಕೆಲವೊಂದು ತಾಂತ್ರಿಕ



ಸಮಸ್ಯೆಗಳಿಂದಾಗಿ ವಿಳಂಬವಾಗಿದೆಯೆ ಹೊರತು ಬೇರೆ ಯಾವ ಕಾರಣದಿಂದ ಅಲ್ಲ ಎಂದು ಸ್ಪಷ್ಟಪಡಿಸಿದರು. ರೈತರು ಈ ದೇಶದ ಬೆನ್ನೆಲುಬು. ಆ ನಿಟ್ಟಿನಲ್ಲಿ ಈ ಯೋಜನೆಯ ತ್ವರಿತ ಅನುಷ್ಠಾನಕ್ಕೆ ಮೊದಲ ಆದ್ಯತೆಯನ್ನು ನೀಡಲಾಗಿದೆ ಎಂದರು. ಆದಷ್ಟು ಶೀಘ್ರದಲ್ಲಿ ರೈತರ ಬಹು ವರ್ಷಗಳ ನೀರಾವರಿ ಸಮಸ್ಯೆ ಪರಿಹಾರವಾಗಲಿದೆ ಎಂದು ಹೇಳಿದರು.

ರೈತ ಮುಖಂಡರಾದ ನಾಗೇಂದ್ರ ಜಿವೋಜಿ, ಕುಮಾರ್ ಬೋಬಾಟಿ, ಗಿರೀಶ ಠೋಸೂರು, ಶಂಕರ ಕಾಜುಗಾರ, ಸಾತೇರಿ ಗೊಡಿಮನಿ, ಮಹೇಶ ಪಾಲೇಕರ, ರಾಮದಾಸ ಬೆಳಗಾಂವಕರ, ಸುರೇಶ ಶಿವಣ್ಣನವರ ಉಪಸ್ಥಿತರಿದ್ದರು.

ಬಂಗಾರಮಕ್ಕಿಯಲ್ಲಿ ರಂಜಿಸಿದ ಸುಗಮ ಸಂಗೀತ



ಹೊನ್ನಾವರ: ಬಂಗಾರಮಕ್ಕಿಯ ಸಂಸ್ಕೃತಿ ಕುಂಭ ಮಲೆನಾಡ ಉತ್ಸವದ ನಿಮಿತ್ತ ವೀರಾಂಜನೇಯ ಸಾಂಸ್ಕೃತಿಕ ವೇದಿಕೆಯಲ್ಲಿ ನಡೆದ ಅಂಕೋಲಾ ಸಹೋದರಿಯರಾದ ಡಾ.ದರ್ಶಿನಿ ಶೆಟ್ಟಿ ಮತ್ತು ವರ್ಷಿಣಿ ಶೆಟ್ಟಿ ಯವರ ಸುಗಮ ಸಂಗೀತ ಕಾರ್ಯಕ್ರಮ ಜನಮನ ರಂಜಿಸಿತು. ಇವರಿಗೆ ಕೀಬೋರ್ಡ್‌ನಲ್ಲಿ ಚಂದ್ರಶೇಖರ ಭಂಡಾರಿ ಕುಮಟಾ, ತಬಲಾದಲ್ಲಿ ಗುರುರಾಜ ಹೆಗಡೆ ಆಡುಕಳ, ಹೊನ್ನಾವರರವರು ಸಾಥ್ ನೀಡಿದರು.

ಭಕ್ತಿ ಗೀತೆ, ಭಾವಗೀತೆ, ದಾಸರಪದ ಮುಂತಾದ ಪದ್ಯಗಳನ್ನು ಸುಶ್ರಾವ್ಯವಾಗಿ ಹಾಡಿದ ಎದೆತುಂಬಿ ಹಾಡುವೆನು ಖ್ಯಾತಿಯ ಈ ಸಹೋದರಿಯರನ್ನು ಕಾರ್ಯಕ್ರಮದ ಕೊನೆಯಲ್ಲಿ ಶ್ರೀಮಾರುತಿ ಗುರೂಜಿಯವರು ಸನ್ಮಾನಿಸಿ ಅಭಿನಂದಿಸಿ ಆಶೀರ್ವದಿಸಿದರು.

ಹನುಮಂತ ದೇವರ ವರ್ಧಂತ್ಯುತ್ಸವ

ಭಟ್ಕಳ: ಶಿರಾಲಿಯ ಸಾರದಹೊಳೆಯ ಕ್ಷೇತ್ರ ಹಳೇಕೋಟೆ ಹನುಮಂತ ದೇವರ ನಾಲ್ಕನೇ ವರ್ಷ ವರ್ಧಂತ್ಯುತ್ಸವ ಬುಧವಾರದಿಂದ ಆರಂಭಗೊಂಡಿದೆ.

ಬುಧವಾರ ಸಂಜೆ ವಿವಿಧ ಧಾರ್ಮಿಕ ಕಾರ್ಯಕ್ರಮ, 108 ಕಲಶ ಸ್ಥಾಪನೆ ಹಾಗೂ ಸಂಜೆ 6 ಗಂಟೆಯಿಂದ ರಾತ್ರಿ 8.30ರ ವರೆಗೆ ಸೀತಾರಾಮ ಕಲ್ಯಾಣೋತ್ಸವ ನೆರವೇರಿತು. ರಾತ್ರಿ ಸಾವಿರಾರು ಭಕ್ತರು ಅನ್ನಪ್ರಸಾದ ಭೋಜನ ಸವಿದರು. ಏ.2ರಂದು ಗುರುವಾರ ಬೆಳಗ್ಗೆ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯಲಿದ್ದು, ಬೆಳಗ್ಗೆ 10 ಗಂಟೆಗೆ ಉಜಿರೆಯ ಶ್ರೀರಾಮ ಕ್ಷೇತ್ರ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿಯವರಿಗೆ ಪೂರ್ಣಕುಂಭ ಸ್ವಾಗತ, ಮಧ್ಯಾಹ್ನ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯರಿಗೆ ಸನ್ಮಾನ, ಗುರುಗಳ ಪಾದಪೂಜೆ, ಗುರುಗಳಿಂದ ಆಶೀರ್ವಚನ ಹಾಗೂ ಮಂತ್ರಾಕ್ಷತೆ ವಿತರಣೆ ನಡೆಯಲಿದೆ. ಮಧ್ಯಾಹ್ನ ಅನ್ನ ಸಂತರ್ಪಣೆ, ಸಂಜೆ ಕೋಟಿ ಜಟಗನ ಪೂಜೆ ಮತ್ತು ಪಲ್ಲಕ್ಕಿ ಮೆರವಣಿಗೆ, ರಾತ್ರಿ ರಂಗಪೂಜೆ, ದೇವರ



ಶಯನೋತ್ಸವ,ರಾತ್ರಿ ಅನ್ನಸಂತರ್ಪಣೆ , ರಾತ್ರಿ 10 ಗಂಟೆಗೆ ದೈವ ಸಂಕಲ್ಪ ದೈವಿಕ ನಾಟಕ ಪ್ರದರ್ಶನ ನಡೆಯಲಿದೆ. ಏ. 3ರಂದು ಬೆಳಗ್ಗೆ 7.30ರಿಂದ 9.30ರ ವರೆಗೆ ಓಕುಳಿ ನಡೆಯಲಿದ್ದು, ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ದೇವರ ಹಾಗೂ ಗುರುಗಳ ಕೃಪೆ ಪಾತ್ರರಾಗಬೇಕೆಂದು ದೇವಸ್ಥಾನಕ ಮೊಕ್ತೇಸರ ಸುಬ್ರಾಯ ನಾಯ್ಕ ಹಾಗೂ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ನಾಗೇಂದ್ರ ಡಿ ನಾಯ್ಕ ಕೋರಿದ್ದಾರೆ.

ಸಾರಿಗೆ ಇಲಾಖೆ ನಿರ್ಲಕ್ಷ್ಯ ಖಂಡಿಸಿ ಏ.14ಕ್ಕೆ ಪ್ರತಿಭಟನೆ

ಬನವಾಸಿ: ಸಾರಿಗೆ ಇಲಾಖೆಯ ನಿರ್ಲಕ್ಷ್ಯಯನ್ನು ಖಂಡಿಸಿ ಬಿಜೆಪಿ ಯುವ ಮೋರ್ಚಾದಿಂದ ಏ.14ರಂದು ರಸ್ತೆ ತಡೆದು ಪ್ರತಿಭಟನೆ ಕೈಗೊಳ್ಳಲಾಗುವುದು ಎಂದು ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಪ್ರೇಮ್ ಕುಮಾರ್ ನಾಯ್ಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕನ್ನಡಿಗರ ಪ್ರಥಮ ರಾಜಧಾನಿಯಾಗಿರುವ ಬನವಾಸಿಯ ಬಸ್ ನಿಲ್ದಾಣದ ಶೋಚನೀಯ ಸ್ಥಿತಿಯನ್ನು ಕಂಡು ಪ್ರವಾಸಿಗರು, ಪ್ರಯಾಣಿಕರು ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಐತಿಹಾಸಿಕ ಪ್ರವಾಸಿ ತಾಣವಾಗಿರುವ ಬನವಾಸಿಗೆ ಪ್ರತಿನಿತ್ಯ ಸಾವಿರಾರು ಪ್ರವಾಸಿಗರು ಆಗಮಿಸುತ್ತಾರೆ. ಆದರೆ ಇಲ್ಲಿನ ಬಸ್ ನಿಲ್ದಾಣದ ಅವ್ಯವಸ್ಥೆಯನ್ನು ಕಂಡು ಸಾರಿಗೆ ಇಲಾಖೆಯ ಅಧಿಕಾರಿಗಳ ಕಾರ್ಯವೈಖರಿಗೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ನಿತ್ಯ ಸಾವಿರಾರು ಪ್ರವಾಸಿಗರು, ಗ್ರಾಮೀಣ ಪ್ರದೇಶದ ಪ್ರಯಾಣಿಕರು ಭೇಟಿ ನೀಡುವ ಈ ನಿಲ್ದಾಣ ದುರ್ವಾಸನೆಯಿಂದ ಕೂಡಿದ್ದು ಪ್ರಯಾಣಿಕರು ಮೂಗು ಮುಚ್ಚಿಕೊಂಡು ನಿಲ್ಲುವಂತಾಗಿದೆ. ರಾಜ್ಯದ ಬೇರೆ ಬೇರೆ ಕಡೆಗಳಿಂದ ಬರುವ ಪ್ರವಾಸಿಗರು ಇಲ್ಲಿನ ಬಸ್ ನಿಲ್ದಾಣದ ಅವ್ಯವಸ್ಥೆಯ ಕಂಡು ಬೇಸರ ವ್ಯಕ್ತಪಡಿಸುತ್ತಿದ್ದರೆ, ಗ್ರಾಮೀಣ ಭಾಗದಿಂದ ಪ್ರತಿನಿತ್ಯ ಬಸ್ ನಿಲ್ದಾಣಕ್ಕೆ ಬರುವ ಸಾವಿರಾರು ವಿದ್ಯಾರ್ಥಿಗಳು ಸಾಂಕ್ರಾಮಿಕ ರೋಗ ಹರಡುವ ಭೀತಿಯಲ್ಲಿದ್ದಾರೆ. ಬಸ್ ನಿಲ್ದಾಣದಲ್ಲಿ ಅಗತ್ಯ ಸೌಲಭ್ಯಗಳ ಕೊರತೆ ಎದ್ದುಕಾಣುತ್ತಿದೆ. ಪ್ರಯಾಣಿಕರಿಗೆ ಕುಡಿವ ನೀರಿನ ವ್ಯವಸ್ಥೆಯಿಲ್ಲ, ಕುಡಿಯುವ ನೀರಿನ ಟ್ಯಾಂಕ್ ಇದ್ದರು ಸಹ ಸ್ವಚ್ಚತೆ ಇಲ್ಲವಾಗಿದೆ. ಕುಡಿಯುವ ನೀರಿನ ನಳದ ಸುತ್ತಲೂ ಪಾಚಿ ಕಟ್ಟಿರುವುದು ಒಂದು ಭಾಗವಾದರೇ, ಗುಟ್ಕಾ, ಎಲೆ ಅಡಿಕೆ ತಿಂದು ಅಲ್ಲಿಯೇ ಉಗುಳುವುದರಿಂದ ಕುಡಿಯುವ ನೀರಿನ ಜಾಗ ಗಲೀಜು ಆಗಿದೆ.

ಶೌಚಾಲಯದ ನಿರ್ವಹಣೆಯು ಸರಿಯಾಗಿಲ್ಲದ ಕಾರಣ ಪ್ರಯಾಣಿಕರು ಮೂಗು ಮುಚ್ಚಿಕೊಂಡು ಹೋಗಬೇಕಾದ ಪರಿಸ್ಥಿತಿ ಎದುರಾಗಿದೆ. ಭದ್ರತೆಯಿಲ್ಲದ ಬಾಗಿಲುಗಳು, ಸಮರ್ಪಕವಾದ ನೀರಿನ ವ್ಯವಸ್ಥೆ ಇಲ್ಲದೇ ಇರುವುದು ಇದಕ್ಕೆ ಮುಖ್ಯ ಕಾರಣ. ನಿಲ್ದಾಣದಲ್ಲಿ ಸಮರ್ಪಕ ಲೈಟಿಂಗ್ ವ್ಯವಸ್ಥೆಯಿಲ್ಲದ ಕಾರಣ ಕಟ್ಟಡ ಪಕ್ಕದಲ್ಲಿಯೇ ಪ್ರಯಾಣಿಕರಿಂದ ಮೂತ್ರ ವಿಸರ್ಜನೆ ನಡೆಯುವುದು ಸಾಮಾನ್ಯವಾಗಿದೆ. ಶೌಚಾಲಯ ಮತ್ತು ಬಸ್ ನಿಲ್ದಾಣ ಆವರಣದಲ್ಲಿ ಗಿಡ ಗಂಟೆಗಳು ಬೆಳೆದಿರುವುದು, ಅಲ್ಲಲ್ಲಿ ಕಸದ ರಾಶಿ, ಬಣ್ಣ ಕಾಣದ ಕಟ್ಟಡ, ಬಸ್ ನಿಲ್ದಾಣದ ಮುಂಭಾಗದಲ್ಲಿ ಡಾಂಬರ್ ಇಲ್ಲದೇ ಅಲ್ಲಲ್ಲಿ ಬಿದ್ದಿರುವ ದೊಡ್ಡ ದೊಡ್ಡ ಗುಂಡಿಗಳು ಬನವಾಸಿಯ ಅಂದಕ್ಕೆ ಮಸಿ ಬಳಿಯುವಂತಿದೆ.

ಕೆಲ ದಿನಗಳ ಹಿಂದೆ ಸಾರಿಗೆ ಇಲಾಖೆಯ ಅಧಿಕಾರಿಗಳಿಗೆ ಈ ಬಗ್ಗೆ ಮನವಿ ಮಾಡಿಕೊಂಡಿದ್ದರು.ಯಾವುದೇ ಪ್ರಯೋಜನವಾಗಿಲ್ಲ, ಬನವಾಸಿಯ ಜಾತ್ರೆಯ ಸಂದರ್ಭದಲ್ಲಿ ಜಾತ್ರೆಗೆ ಬರುವ ಭಕ್ತರಿಗೆ ಅನುಕೂಲಕರವಾಗಲೆಂದು ಅಧಿಕಾರಿಗಳಿಗೆ ಮನವಿ ಮಾಡಲಾಗಿತ್ತು. ಆದರೆ ನಮ್ಮ ಮನವಿಯನ್ನು ಗಾಳಿಗೆ ತೂರಿದ್ದಾರೆ. ನಿಲ್ದಾಣದ ಅವ್ಯವಸ್ಥೆಯ ಬಗ್ಗೆ ಯಾವ ಅಧಿಕಾರಿಗಳು ಗಮನಹರಿಸದೇ ಇರುವುದರಿಂದ ಬಿಜೆಪಿ ಯುವ ಮೋರ್ಚಾ ಪ್ರತಿಭಟನೆ ಕೈಗೊಳ್ಳುವ ನಿರ್ಧಾರ ತೆಗೆದುಕೊಂಡಿದ್ದು ಏ.14ರಂದು ಬಾಬಾ ಸಾಹೇಬ್ ಅಂಬೇಡ್ಕರ್ ಫೋಟೋ ಹಿಡಿದುಕೊಂಡು ರಸ್ತೆ ತಡೆ ಮಾಡಲಾಗುವುದು ಎಂದು ತಿಳಿಸಿದರು.



ಗದಗ: ತಾಲೂಕಿನ ಲಕ್ಕುಂಡಿ ಗ್ರಾಮದ ಕೋಟೆ ವೀರಭದ್ರೇಶ್ವರ ರಥೋತ್ಸವವು ಸಾವಿರಾರು ಭಕ್ತಾದಿಗಳ ಮಧ್ಯೆ ಸಂಭ್ರಮದಿಂದ ಜರುಗಿತು. ಡೋಣಿಯ ನಂದಿವೇರಿಮಠದ ಶಿವಕುಮಾರ ಸ್ವಾಮೀಜಿ, ಹರ್ಲಾಪೂರ ಡಾ. ಕೊಟ್ಟೂರೇಶ್ವರ ಸ್ವಾಮೀಜಿ ಹಾಗೂ ಅಲ್ಲಮಪ್ರಭುದೇವರ ಮಠದ ಸಿದ್ಧಲಿಂಗೇಶ್ವರ ಸ್ವಾಮೀಜಿ ವಿಧಿ ವಿಧಾನಗಳೊಂದಿಗೆ ರಥಕ್ಕೆ ಪೂಜೆ ಸಲ್ಲಿಸುವದರೊಂದಿಗೆ ರಥೋತ್ಸವಕ್ಕೆ ಚಾಲನೆ ನೀಡಿದರು.

ಇಂದು ದುಂಡಿಬಸವೇಶ್ವರ ಜಾತ್ರೆ

ಶಿಗ್ಗಾಂವಿ/ತಡಸ: ಮಲೆನಾಡಿನ ಸೊಬಗಿನ ಬೀಡು ತಡಸ ಗ್ರಾಮದಲ್ಲಿ ಸ್ವಯಂ ಉದ್ಭವ ಮೂರ್ತಿ, ಭಕ್ತರ ಕಾಮಧೇನು ಎಂದೇ ಖ್ಯಾತಿ ಪಡೆದ ದುಂಡಿ ಬಸವೇಶ್ವರ ದೇವರ 46ನೇ ವರ್ಷದ ಜಾತ್ರಾ ಮಹೋತ್ಸವವು ಏ.2ರಂದು ಅತ್ಯಂತ ವಿಜೃಂಭಣೆಯಿಂದ ಜರುಗಲಿದೆ.



ಗ್ರಾಮದ ನಾಗರಿಕರು ಹಾಗೂ ಸದ್ಭಕ್ತ ಮಂಡಳಿಯ ವತಿಯಿಂದ ಆಯೋಜಿಸಲಾಗಿರುವ ಈ ಧಾರ್ಮಿಕ ಕಾರ್ಯಕ್ರಮವು ಶಾಲಿವಾಹನ ಶಕೆ 1948ರ ಪರಾಭವನಾಮ ಸಂವತ್ಸರದ ಚೈತ್ರ ಶುದ್ಧ ಹುಣ್ಣಿಮೆಯಂದು ಸಕಲ ವಾದ್ಯ ವೈಭವಗಳೊಂದಿಗೆ ನಡೆಯಲಿದೆ.

ಧಾರ್ಮಿಕ ಕಾರ್ಯಕ್ರಮ: ದುಂಡಿ ಬಸವೇಶ್ವರ ದೇವರಿಗೆ ವೈದಿಕವಾಗಿ ರುದ್ರಾಭಿಷೇಕ ಹಾಗೂ ಬಿಲ್ವಾರ್ಚನೆ ನೆರವೇರಲಿದೆ.

ಪಲ್ಲಕ್ಕಿ ಉತ್ಸವ: ಬೆಳಗ್ಗೆ 9.12 ಗಂಟೆಗೆ ಪಲ್ಲಕ್ಕಿ ಉತ್ಸವ ಹಾಗೂ ಸಾಮೂಹಿಕ ವಿವಾಹ ನಡೆಯಲಿವೆ. ಮಧ್ಯಾಹ್ನ 12.30ಕ್ಕೆ ಭಕ್ತಾದಿಗಳಿಗೆ ಅನ್ನದಾಸೋಹವಿರಲಿದೆ.

ಸಂಜೆ 4.30 ಗಂಟೆಗೆ ಹನಮನಹಳ್ಳಿಯ ಸಿದ್ಧಾರೂಢ ಮಠದ ಪ.ಪೂ. ಶ್ರೀ ಶಿವಬಸವ ಸ್ವಾಮಿಗಳ ಘನ ನೇತೃತ್ವದಲ್ಲಿ, ಶಿವಮೂರ್ತಯ್ಯ ಹಿರೇಮಠ ಹಾಗೂ. ಅಜ್ಜಯ್ಯ ಕಂಬಾಳಿಮಠ ಅವರ ವೈದಿಕತ್ವದಲ್ಲಿ ಭವ್ಯ ರಥೋತ್ಸವ ಜರುಗಲಿದೆ.



ಲಕ್ಷ್ಮೇಶ್ವರ: ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ಲಿಂ. ವೀರಗಂಗಾಧರ ಜಗದ್ಗುರುಗಳ 123ನೇ ಜಯಂತಿ ನಿಮಿತ್ತ ಕರ್ತೃಗದ್ದಿಗೆಗೆ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರು ಮಹಾರುದ್ರಾಭಿಷೇಕ, ಅಷ್ಟೋತ್ತರ, ಮಹಾ ಮಂಗಳಾರತಿ ನೆರವೇರಿಸಿದರು. ಕಲಾದಗಿಯ ಗಂಗಾಧರ ಶಿವಾಚಾರ್ಯರು ಪೂಜಾ ಕೈಂಕರ್ಯ ನೆರವೇರಿಸಿದರು.

ಕಿರುಸುದ್ದಿ

ಪುಸ್ತಕ ಬಹುಮಾನಕ್ಕೆ ಕೃತಿಗಳ ಆಹ್ವಾನ

ಹಾವೇರಿ: ಕರ್ನಾಟಕ ಸಾಹಿತ್ಯ ಅಕಾಡೆಮಿಯು 2025ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡಿರುವ ಸಾಹಿತ್ಯದ ವಿವಿಧ ಪ್ರಕಾರಗಳ ಕೃತಿಗಳನ್ನು ಬಹುಮಾನಕ್ಕಾಗಿ ಆಹ್ವಾನಿಸಿದೆ. ಲೇಖಕರು, ಪ್ರಕಾಶಕರು, ಸಾಹಿತ್ಯಾಸಕ್ತ ಸಾರ್ವಜನಿಕರು ನಾಲ್ಕು ಪ್ರತಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು-560002 ಈ ವಿಳಾಸಕ್ಕೆ ರಿಜಿಸ್ಟರ್ಡ್ ಅಂಚೆ, ಕೊರಿಯರ್ ಮೂಲಕ ಅಥವಾ ಖುದ್ದಾಗಿ 30 ಜೂನ್ 2026ರೊಳಗೆ ಕಳುಹಿಸಬೇಕು. ಹೆಚ್ಚಿನ ಮಾಹಿತಿಗಾಗಿ ಅಕಾಡೆಮಿಯ ವೆಬ್‌ಸೈಟ್ ಮಾಹಿತಿಗಾಗಿ ಅಕಾಡೆಮಿಯ ವೆಬ್‌ಸೈಟ್ www.sahithyaacademy.karnataka.gov.in ಸಂಪರ್ಕಿಸಬಹುದು ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೀರಭದ್ರೇಶ್ವರ ಜಾತ್ರೆ ಸಂಪನ್ನ



ಬ್ಯಾಡಗಿ: ತಾಲೂಕಿನ ರಾಮಗುಂಡೇನಹಳ್ಳಿ ಗ್ರಾಮದಲ್ಲಿ ಬುಧವಾರ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ನಡೆಯಿತು. ಬೆಳಗಿನಿಂದಲೇ ವೀರಭದ್ರೇಶ್ವರನಿಗೆ ಅಭಿಷೇಕ ಹಾಗೂ ಗುಗ್ಗಳ ಮಾಡುವ ಮೂಲಕ ವೀರಭದ್ರೇಶ್ವರನ ಸಂಪನ್ನ ಮಾಡಿದರು. ನಂತರ ದೊಡ್ಡ ತೇರು ರಥೋತ್ಸವದೊಂದಿಗೆ ದೇವಸ್ಥಾನದಿಂದ ಪ್ರಾರಂಭಗೊಂಡು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿ ದೇವಸ್ಥಾನವನ್ನು ತಲುಪಿತು. ರಥೋತ್ಸವದಲ್ಲಿ ನೂರಾರು ಭಕ್ತರು ಪಾಲ್ಗೊಂಡು ವೀರಭದ್ರೇಶ್ವರ ಕೃಪೆಗೆ ಪಾತ್ರರಾದರು

ಸ್ಕೌಟ್ಸ್ ಪಾರಿತೋಷಕ ಪದಕ

ನರಗುಂದ: ಪಟ್ಟಣದ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಯುವ ಕಲಾವಿದ ಪಂ. ಚಂದ್ರಕಾಂತ ಇನಾಮದಾರ ಅವರು ನ್ಯಾಷನಲ್ ಯೂತ್ ಅಡ್ವೆಂಚರ್ ಇನ್ಸ್ಟಿಟ್ಯೂಟ್, ಹರಿಯಾಣ ವತಿಯಿಂದ ಗೋವಾ ರಾಜ್ಯದಲ್ಲಿ ಆಯೋಜಿಸಲಾಗಿದ್ದ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಶಿಬಿರದಲ್ಲಿ ಕರ್ನಾಟಕ ರಾಜ್ಯದ 16 ಕೇಂದ್ರ ಸರ್ಕಾರದ ಶಾಲೆಗಳ ವಿದ್ಯಾರ್ಥಿಗಳೊಂದಿಗೆ ಸ್ಕೌಟ್ಸ್ ಮಾಸ್ಟರ್ ಆಗಿ ಭಾಗವಹಿಸಿ ಗಣನೀಯ ಸಾಧನೆ ಮೆರೆದಿದ್ದಾರೆ. ಯುವಜನರಲ್ಲಿ ಆತ್ಮಸ್ಥೈರ್ಯ, ಶಿಸ್ತು, ಸೇವಾ ಮನೋಭಾವ ಹಾಗೂ ನಾಯಕತ್ವ ಗುಣಗಳನ್ನು ಬೆಳೆಸುವ ಜೊತೆಗೆ ದೈಹಿಕ, ಬೌದ್ಧಿಕ, ಸಾಮಾಜಿಕ ಮತ್ತು ಅಧ್ಯಾತ್ಮಿಕ ಮೌಲ್ಯಗಳನ್ನು ಬೋಧಿಸುವ ಉನ್ನತ ಆಶಯವನ್ನು ಈ ತರಬೇತಿ ಹೊಂದಿದೆ. ಸಮಾಜದಲ್ಲಿ ಸುಸಂಸ್ಕೃತ, ಜವಾಬ್ದಾರಿಯುತ ನಾಗರಿಕರನ್ನು ರೂಪಿಸುವ ದಿಸೆಯಲ್ಲಿ ಇಂತಹ ಶಿಬಿರಗಳು ಮಹತ್ವದ ಪಾತ್ರ ವಹಿಸುತ್ತವೆ. 16 ಶಾಲೆಗಳ ವಿದ್ಯಾರ್ಥಿಗಳ ಪ್ರತಿನಿಧಿಯಾಗಿ, ಸ್ಕೌಟ್ಸ್ ಮಾಸ್ಟರ್ ಆಗಿ ಹಾಗೂ ವಿಶೇಷ ಸಂಗೀತ ಸಂಪನ್ಮೂಲ ವ್ಯಕ್ತಿಯಾಗಿ ಅತ್ಯುತ್ತಮ ಸೇವೆ ಸಲ್ಲಿಸಿದ ಪಂ. ಚಂದ್ರಕಾಂತ ಇನಾಮದಾರ ಅವರಿಗೆ ಸ್ಕೌಟ್ ಅಧಿಕಾರಿಗಳಾದ ಯಶಪಾಲ ಹೋಡಾ, ಕೆ.ಪಿ. ಶರ್ಮಾ, ಲಕ್ಷ್ಮಣ ಚಲವಾದಿ, ಬಾಬುರಾವ ಮತ್ತು ಸಾಹು ಅವರ ಸಮ್ಮುಖದಲ್ಲಿ ಪಾರಿತೋಷಕ ಪದಕ ನೀಡಿ ಸನ್ಮಾನಿಸಲಾಯಿತು.



ಲಿಂ. ವೀರಗಂಗಾಧರ ಶ್ರೀ ಸರ್ವರಿಗೂ ದಾರಿದೀಪ

ಲಕ್ಷ್ಮೇಶ್ವರ: ಜೀವನದುದ್ದಕ್ಕೂ ಧರ್ಮ, ಸಂಸ್ಕೃತಿ, ಪರಂಪರೆ, ಕಾಯಕನಿಷ್ಠೆ, ಸಮನ್ವಯತೆ ಹೀಗೆ ಲೋಕಕಲ್ಯಾಣಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡು ಇಂದಿಗೂ ಎಂದೆಂದಿಗೂ ದಾರಿ ದೀಪವಾಗಿರುವವರು ಆಧ್ಯಾತ್ಮಿಕ ಲೋಕದ ಕೀರ್ತಿ ಕಲಶ ಲಿಂ. ವೀರಗಂಗಾಧರ ಜಗದ್ಗುರುಗಳು ಎಂದು ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರು ಹೇಳಿದರು. ಅವರು ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ಲಿಂ. ವೀರಗಂಗಾಧರ ಜಗದ್ಗುರುಗಳ 123ನೇ ಜಯಂತಿ ನಿಮಿತ್ತ ಕರ್ತೃಗದ್ದುಗೆಗೆ ಮಹಾರುದ್ರಾಭಿಷೇಕ, ಅಷ್ಟೋತ್ತರ, ಮಹಾ ಮಂಗಳಾರತಿ ನೆರವೇರಿಸಿ ಮಾತನಾಡಿದರು. ಕಲಾದಗಿಯ ಗಂಗಾಧರ ಶಿವಾಚಾರ್ಯರು ಪೂಜಾ ಕೈಂಕರ್ಯ ನೆರವೇರಿಸಿದರು.

ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಅಗತ್ಯ ಕ್ರಮ: ಡಿಸಿ

ಹಾವೇರಿ: ಬೇಸಿಗೆಕಾಲದಲ್ಲಿ ಜಿಲ್ಲೆಯಲ್ಲಿ ಉದ್ಭವಿಸಬಹುದಾದ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈಗಾಗಲೇ 24 ಗ್ರಾಮಗಳಿಗೆ 31 ಖಾಸಗಿ ಕೊಳವೆ ಬಾವಿಗಳ ಮೂಲಕ ನೀರು ಪೂರೈಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೇಸಿಗೆ ಸಮಯದಲ್ಲಿ ಜಲಮೂಲಗಳು ಒಣಗುವುದು ಸಾಮಾನ್ಯ, ಜಿಲ್ಲೆಯ 8ತಾಲೂಕುಗಳಲ್ಲಿ ಮಾ.15ರಿಂದ ಜೂನ್ 15ರವರೆಗೆ ಗ್ರಾಮೀಣ ಪ್ರದೇಶಗಳಲ್ಲಿ ಕುಡಿವ ನೀರಿನ ಸಮಸ್ಯೆ ಉದ್ಭವಿಸಬಹುದಾದ 286 ಪ್ರದೇಶ ಹಾಗೂ ನಗರ ಪ್ರದೇಶದ 238 ವಾರ್ಡ್‌ಗಳನ್ನು ಗುರುತಿಸಲಾಗಿದೆ. ಅಲ್ಲಿ ನೀರು ಪೂರೈಕೆಗೆ ಕ್ರಮವಹಿಸಲಾಗಿದೆ. ಜಿಲ್ಲಾ ಹಾಗೂ ತಾಲೂಕಾಮಟ್ಟದ ಟಾಸ್ಕ್‌ಫೋರ್ಸ್ ಸಮಿತಿ ಸಭೆ ನಡೆಸಿ, ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ ಎಂದರು.

ಬೋರವೆಲ್‌ಗಳ ದುರಸ್ಥಿಗೆ ಸೂಚನೆ: ಜಿಲ್ಲೆಯಲ್ಲಿ ಇರುವ ಬೋರವೆಲ್‌ಗಳು ಹಾಗೂ ಆರ್‌ಒ ಘಟಕಗಳನ್ನು ಕಡ್ಡಾಯವಾಗಿ ಪರಿಶೀಲಿಸಿ, ದುರಸ್ಥಿಯಲ್ಲಿದ್ದರೆ ತುರ್ತಾಗಿ ಕ್ರಮಕೈಗೊಳ್ಳಲು ತಹಶೀಲ್ದಾರ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಜಿಲ್ಲೆಯ ಎಂವಿಎಸ್‌ಗಳ ಮೂಲಕ ನೀರು ಪೂರೈಕೆ ಬಗ್ಗೆ ಖುದ್ದಾಗಿ ಪರಿಶೀಲಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ.

ನೀರಿನ ಮೂಲಗಳು: ಗ್ರಾಮೀಣ ಪ್ರದೇಶದಲ್ಲಿ 576 ಖಾಸಗಿ ಬೋರ್‌ವೆಲ್ ಹಾಗೂ 3,591 ಸಾರ್ವಜನಿಕ ಬೋರ್‌ವೆಲ್ ಗುರುತಿಸಲಾಗಿದೆ. ನಗರ ಪ್ರದೇಶದಲ್ಲಿ 1,444 ಸಾರ್ವಜನಿಕ ಕೊಳವೆ ಬಾವಿಗಳು, ವರದಾ, ತುಂಗಭದ್ರ, ಧರ್ಮ ನದಿಗಳಿಂದ ಹಾಗೂ ಹೆಗ್ಗೆರಿ, ಆನೆಕೇರಿ, ನಾಗನೂರು ಕೆರೆಗಳಿಂದ ಕುಡಿಯುವ ನೀರಿನ ಮೂಲಗಳನ್ನು ಗುರುತಿಸಲಾಗಿದೆ ಎಂದರು. ಬೆಂಗಳೂರು IMD, KSNDMC ಅವರು ಹವಾಮಾನ, ಮಳೆ ಹಾಗೂ ಗುಡುಗು ಸಿಡಿಲಿನ ಬಗ್ಗೆ ನೀಡುವ ಮುನ್ಸೂಚನೆಗಳನ್ನು ದೃಶ್ಯ ಹಾಗೂ ಮುದ್ರಣ ಮಾಧ್ಯಮಗಳ ಮೂಲಕ ತುರ್ತು ಸಂದರ್ಭಗಳಲ್ಲಿ ಗ್ರಾಮಗಳಲ್ಲಿ ಡಂಗೂರ ಸಾರುವ ಮೂಲಕ ಅಪಾಯಗಳನ್ನು ತಗ್ಗಿಸುವ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವಂತೆ ಪಿಡಿಒ ಹಾಗೂ ಗ್ರಾಮ ಲೆಕ್ಕಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.ವಿದ್ಯುತ್ ಸರಬರಾಜು ಮೇಲೆ ಉಂಟಾಗಬಹುದಾದ ಅಂಶಗಳನ್ನು ಗಮನದಲ್ಲಿರಿಸಿ ವಿದ್ಯುತ್ ಮೂಲ ಸೌಕರ್ಯಗಳನ್ನು ಬಲಪಡಿಸಲು, ಮಳೆಗಾಲದಲ್ಲಿ ಉಂಟಾಗಬಹುದಾದ ಸಾಂಕ್ರಾಮಿಕ ರೋಗದ ಬಗ್ಗೆ ಮುನ್ನೆಚ್ಚರಿಕೆ ವಹಿಸಲು ಸೂಚಿಸಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಜಿಪಂ ಸಿಇಒ ರುಚಿ ಬಿಂದಲ್, ಎಡಿಸಿ ಡಾ.ನಾಗರಾಜ ಎಲ್, ಎಎಸ್ಪಿ ಲಕ್ಷ್ಮಣ ಶಿರಕೋಳ, ಜಿಪಂ ಉಪಕಾರ್ಯದರ್ಶಿ ಡಾ.ಪುನಿತ್ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ತುರ್ತು ನಿರ್ವಹಣಾ ಕೇಂದ್ರ

ಜಿಲ್ಲಾ ತುರ್ತು (ಸಹಾಯ ವಾಣಿ) ನಿರ್ಹವಣಾ ಕೇಂದ್ರಗಳನ್ನು ಹಾಗೂ ತಾಲೂಕುಮಟ್ಟದಲ್ಲಿ ಸಹ ದಿನದ 24/7 ಗಂಟೆ ಕಾರ್ಯನಿರ್ವಹಿಸುವಂತೆ ಸಿಬ್ಬಂದಿ ನಿಯೋಜಿಸಿ ಪ್ರಾರಂಭಿಸಲಾಗಿದೆ. 'ಸಿಡಿಲು' ತಂತ್ರಾಂಶವನ್ನು ಮೊಬೈಲ್ ಫೋನ್‌ಗಳಲ್ಲಿ ನಿರ್ವಹಿಸಿ ಮುನ್ನೆಚ್ಚರಿಕಾ ಕ್ರಮ ಪಾಲಿಸಲು ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ. ಜಿಲ್ಲೆಯ 8 ತಾಲೂಕುಗಳಿಗೆ ಜಿಲ್ಲಾಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳೆಂದು ನೇಮಿಸಿ ತುರ್ತು ಸಂದರ್ಭಗಳಲ್ಲಿ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಅಗತ್ಯ ಪರಿಹಾರ ಕ್ರಮ ಕೈಗಳೊಳ್ಳಲು ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಭದ್ರಾ ಜಲಾಶಯದಿಂದ ನೀರು ಬಿಡುವ ಕುರಿತು ಭದ್ರಾ ಜಲಾಶಯ ಶಿವಮೊಗ್ಗ ಪ್ರಾಧಿಕಾರಕ್ಕೆ 0.3754 ಟಿಎಂಸಿ ನೀರು ಬಿಡುವ ಬಗ್ಗೆ ಮೈಸೂರು ಪ್ರಾದೇಶಿಕ ಆಯುಕ್ತರಿಗೆ ಪತ್ರ ಬರೆಯಲಾಗಿದೆ. ಜಲಾಶಯದಿಂದ ನೀರು ಬಿಡುವ ಸಮಯದಲ್ಲಿ ನದಿಯಿಂದ ಅನಧಿಕೃತವಾಗಿ ಪಂಪ್‌ಸೆಟ್ ಮತ್ತು ಟ್ಯಾಂಕರ್ ಮೂಲಕ ನೀರು ಕೊಂಡೊಯ್ಯುವದನ್ನು ನಿಷೇದಿಸಲು ತಹಶೀಲ್ದಾರ ಹಾಗೂ ಎಸಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.

■ ಡಾ.ವಿಜಯಮಹಾಂತೇಶ ದಾನಮ್ಮನವರ, ಜಿಲ್ಲಾಧಿಕಾರಿ

ಶತಮಾನದ ಕೆರೆ ಸ್ವಚ್ಛಗೊಳಿಸದಿದ್ದರೆ ಏ.10ಕ್ಕೆ ಪ್ರತಿಭಟನೆ: ಚಿಕ್ಕಣ್ಣನವರ

ಬ್ಯಾಡಗಿ: ಪಟ್ಟಣದ ಗಾಂಧಿನಗರ ಹಾಗೂ ಇಸ್ಲಾಂಪುರವರಿಗೆ ಹೊಂದಿಕೊಂಡಿರುವ ಶತಮಾನ ಕಂಡಿರುವ ಬಸನಕಟ್ಟಿ ಕೆರೆ ಇದ್ದು, ಇದರಲ್ಲಿ ಕೊಳಚೆ ನೀರು ಹಾಗೂ ರಾಜಕಾಲುವೆ ನೀರು ಬಂದು ಸೇರಿ ಕೆರೆ ಗಬ್ಬೆದ್ದು ನಾರುತ್ತಿದೆ ಶೀಘ್ರವೇ ಕೆರೆಯನ್ನು ಸ್ವಚ್ಛಗೊಳಿಸದೆ ಇದ್ದರೆ ಏ.10ರಂದು ರಸ್ತೆ ಬಂದ್ ಮಾಡಿ ಬೃಹತ್ ಪ್ರತಿಭಟನೆ ಮಾಡಲಾಗುವುದು ಎಂದು ಮಾಜಿ ಸೈನಿಕ ಮಲೇಶಪ್ಪ ಚಿಕ್ಕಣ್ಣನವರ ಎಚ್ಚರಿಕೆ ನೀಡಿದರು.

ಪುರಸಭೆಯ ಆವರಣದಲ್ಲಿ ಮುಖ್ಯಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿದ ಅವರು, ಪಟ್ಟಣದ ಗಾಂಧಿ ನಗರದ ದೊಡ್ಡ ನೀರಿನ ಟ್ಯಾಂಕ್ ಹತ್ತಿರ ಇರುವ ಬಸವನಕಟ್ಟೆ ಕೆರೆಯಲ್ಲಿ ಹುಳು, ಗಿಡ ಗಂಟೆ ಹಾಗೂ ಕೊಳಚೆ ನೀರಿನಿಂದ ತುಂಬಿಕೊಂಡು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ ಇತ್ತೀಚೆಗೆ ನಿರ್ಮಿಸಿರುವ ರಾಜ ಕಾಲುವೆ ಕೊಳಚೆ ನೀರು ಸಹ ಈ ಬಸವನ ಕಟ್ಟಿಗೆ ಕೆರೆಗೆ ಬಂದು ಸೇರುತ್ತದೆ ಸಂಜೆಯಾದೊಡನೆ ಸೊಳ್ಳೆಗಳ ಕಾಟ ಶುರುವಾಗುತ್ತದೆ. ಕೂಡಲೇ ಕೆರೆ ಸ್ವಚ್ಛಗೊಳಿಸಿ ಕೊಳಚೆ ನೀರು ಕೆರೆಗೆ ಬರದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಕೆರೆ ಕೂಡಿ ದುರ್ಗಾದೇವಿ ದೇವಸ್ಥಾನದ ಕಮಿಟಿಯ ಅಧ್ಯಕ್ಷ ಗಂಗಣ್ಣ ಎಲಿ ಮಾತನಾಡಿ, ಈ ಬಸವನಕಟ್ಟೆಕೆರೆಯು ರೈತರ ದನಗಳು ಕರಗಳು ನೀರು ಕುಡಿಯಲು ಈ ಕೆರೆಯನ್ನು ಉಪಯೋಗಿಸುತ್ತಿದ್ದರು ಈ ಕೆರೆಗೆ ಬೆಟ್ಟದ ಮಲ್ಲೇಶ್ವರ ಗುಡ್ಡದಿಂದ ಮಳೆಯ ನೀರು ಬಂದು ಸೇರುತ್ತಿತ್ತು ಇದೀಗ ರಾಜಕಾಲುವೆ ಕೊಳಚೆ ನೀರು ಬಂದು ಸೇರಿ ಗಬ್ಬು ನಾರುತ್ತಿದೆ.

ಈ ಕೆರೆಯ ಪಕ್ಕದಲ್ಲಿ ಕುಡಿಯುವ ನೀರಿನ ಹೊಂಡವಿದ್ದು ಅದಕ್ಕೂ ಸಹ ಈ ಕೊಳಚೆ ನೀರು ಹೋಗಿ ಸೇರುವ ಪರಿಸ್ಥಿತಿ ಉಂಟಾಗಿದೆ ಕೂಡಲೇ ಅಧಿಕಾರಿಗಳು ಎಚ್ಚೆತ್ತು ಕೆರೆಯನ್ನು ಶುಭ್ರಗೊಳಿಸುವಂತೆ ಮನವಿ ಮಾಡಿದರು.

ಬಿಎಂ ಕೋರಿ ಶೆಟ್ಟರ್, ಎಸ್ ಜಿ ಕುಡಕೇರ, ಆನಂದ್ ಚೌತಿಹಾಳ್, ಎಸ್.ಜಿ. ಕುಡಕೇರ, ಸಿ.ಸಿ. ಮಧ್ಯಾಹ್ನದ, ಸಿ.ಎನ್.ಹುಚ್ಚೇರಿ, ಎಂ.ಬಿ.ಬಣಕಾರ, ಚೌಡಪ್ಪ ಹೊನ್ನಮ್ಮನವರ, ಫಕ್ಕೀರೇಶ ಹೊನ್ನಮ್ಮನವರ, ಮೊದಿನಸಾಬ ಬಡಿಗೇರ, ಶಂಕರ್ ಬಾರ್ಕಿ, ಮಂಜಣ್ಣ ಬಾಕಿ, ಸದಾನಂದ ಚನ್ನಗೌಡ ಹಾಗೂ ಇತರರಿದ್ದರು.



ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯ

ಹಾವೇರಿ: ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರಿಗೆ ಸಿಗುವ ಸರ್ಕಾರಿ ಸೌಲಭ್ಯಗಳು ಅಸಂಘಟಿತ ಕೆಲಸಗಾರರಿಗೆ ಸಿಗುತ್ತಿಲ್ಲ. ಅಸಂಘಟಿತ ಕೆಲಸಗಾರರು ಶೇ.72ರಷ್ಟು ದೇಶದ ಆರ್ಥಿಕತೆಗೆ ಕೊಡುಗೆ ನೀಡಿದ್ದಾರೆ. ಸರ್ಕಾರ ಈ ಕೂಡಲೇ ಹೆರಿಗೆ ಭತ್ಯೆ, ಇಎಸ್‌ಐ ಸೌಲಭ್ಯ, ಪಿಂಚಣಿ ಸೌಲಭ್ಯ ಇತ್ಯಾದಿಗಳನ್ನು ಈಡೇರಿಸಬೇಕೆಂದು ಕರ್ನಾಟಕ ವ್ಯವಸಾಯ ಕೂಲಿ ವೃತ್ತಿಪರ ಯೂನಿಯನ್ ರಾಜ್ಯ ಕಾರ್ಯದರ್ಶಿ ಕಾಮಾಕ್ಷಿ ರೇವಣಕರ ಒತ್ತಾಯಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೇಶದ ಒಟ್ಟು ಕೆಲಸದ ಶೇ.93ರಷ್ಟು ಅಸಂಘಟಿತ ಕೆಲಸಗಾರರು ದೇಶದ ಆರ್ಥಿಕತೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಬಹುತೇಕ ಕೆಲಸಗಾರರು ದಿನಕ್ಕೆ 100 ರೂ.ಪಡೆಯುತ್ತಿದ್ದಾರೆ. ದೇಶದಲ್ಲಿ 500 ದಶಲಕ್ಷ ಜನಸಂಖ್ಯೆ ಅಸಂಘಟಿತ ಕಾರ್ಮಿಕರಿದ್ದಾರೆ. ಈ ಕಾರ್ಮಿಕರಿಗೆ ಯಾವುದೇ ಜೀವನ ಭದ್ರತೆಯಾಗಲಿ, ಸಾಮಾಜಿಕ ರಕ್ಷಣೆಯಾಗಲಿ ದೊರೆಯುತ್ತಿಲ್ಲ. ಕೇಂದ್ರ ಸರ್ಕಾರ ದೇಶದಲ್ಲಿರುವ ಅಸಂಘಟಿತ ಕಾರ್ಮಿಕರನ್ನು 16 ಕಾರ್ಮಿಕ ಕಲ್ಯಾಣ ಕಾನೂನುಗಳಲ್ಲಿ ಸಾಮಾಜಿಕ ಭದ್ರತೆಯೊಂದಿಗೆ ವಿಲೀನಗೊಳಿಸುವ ಕಾರ್ಮಿಕ ಕೋಡ್‌ನ್ನು ಯೋಚಿಸುತ್ತಿದೆ. ಇದನ್ನು ಹೊರತುಪಡಿಸಿಯೂ ನಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿದರು.

ಪ್ರಮುಖವಾಗಿ ನಾವು ಕೆಲಸಗಾರರು ನಮ್ಮನ್ನು ಗುರುತಿಸಿದೆ. ನಮಗೆ 50ಸಾವಿರ ರೂ.ಹೆರಿಗೆ ಭತ್ಯೆ ಪರಿಹಾರವನ್ನು ನೀಡಬೇಕು. ಇಎಸ್‌ಐ ಸೌಲಭ್ಯವನ್ನು ಕಲ್ಪಿಸಬೇಕು. 50ವರ್ಷ ಪೂರ್ಣಗೊಂಡ ಮಹಿಳೆಯರಿಗೆ ಮಾಸಿಕ 5ಸಾವಿರ ಪಿಂಚಣಿ ನೀಡಬೇಕು. ಅಂಗವೈಕಲ್ಯಕ್ಕೆ ಮತ್ತು ಸಾವಿಗೆ ಕನಿಷ್ಠ ಪರಿಹಾರವಾಗಿ 10ಲಕ್ಷ ರೂ. ಪರಿಹಾರ ಘೋಷಣೆ ಮಾಡಬೇಕು. ಎಸ್ಸಿ, ಎಸ್ಟಿ ಇತರೆ ಭೂರಹಿತ ಜನಾಂಗದವರಿಗೆ ಯಾವುದೇ ಭೂಮಿಯನ್ನು ನೀಡಿಲ್ಲ, ಕನಿಷ್ಠ 2ಎಕರೆ ಭೂಮಿಯನ್ನು ನೀಡಬೇಕು. 30ವರ್ಷಗಳಿಂದ ವಾಸ ಮಾಡುತ್ತಿರುವ ಮನೆಗಳಿಗೆ ಪಟ್ಟ ನೀಡಿಲ್ಲ, ಅಂತಹವರಿಗೆ ಪಟ್ಟಾ ನೀಡಿ ಈ ಸ್ವತ್ತು ಉತಾರ ಸೌಲಭ್ಯ ಒದಗಿಸಬೇಕು. ಜತೆ ಉದ್ಯೋಗ ಖಾತ್ರಿ ಹಣವು ಸುಮಾರು 5ತಿಂಗಳಿನಿಂದ ಪಾವತಿಯಾಗಿಲ್ಲ, ಈ ಕೂಡಲೇ ಬಾಕಿ ಇರುವ ಹಣವನ್ನು ಪಾವತಿಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ನವೀನ ಹುಲ್ಲತ್ತಿ, ನಾಗರಾಜ ಮಳ್ಳೂರ, ಶ್ವೇತಾ ಚನ್ನಗೌಡ್ರ, ನಿರ್ಮಲಾ ಚನ್ನಳ್ಳಿ ಇದ್ದರು.



ಎಲ್ಪಿಜಿ ಗ್ಯಾಸ್ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ

ರಾಣೇಬೆನ್ನೂರ: ಆಟೋ ರಿಕ್ಷಾಗಳಿಗೆ ತುಂಬಿಸುವ ಎಲ್ಪಿಜಿ ಗ್ಯಾಸ್ ಬಂಕ್‌ಗಳ ಮಾಲೀಕರು ಏಕಾಏಕಿ ಬೆಲೆ ಏರಿಕೆ ಮಾಡಿ ಆಟೋರಿಕ್ಷಾದವರಿಗೆ ವಂಚನೆ ಮಾಡುತ್ತಿದ್ದಾರೆ ಎಂದು ಆರೋಪಿಸಿ ನಗರದ ಆಟೋರಿಕ್ಷಾ ಚಾಲಕರು ಮತ್ತು ಮಾಲೀಕರು ಬುಧವಾರ ನಗರದ ಗ್ಯಾಸ್ ಬಂಕ್ ಎದುರು ಪ್ರತಿಭಟನೆ ನಡೆಸಿದರು.



ನೇತೃತ್ವ ವಹಿಸಿದ್ದ ರೈತ ಸಂಘದ ತಾಲೂಕು ಅಧ್ಯಕ್ಷ ಹನುಮಂತಪ್ಪ ಕಬ್ಬಾರ ಮಾತನಾಡಿ, ಗ್ಯಾಸ್ ಬಂಕ್ ನವರು ಸಂಗ್ರಹವಿದ್ದರೂ ಗ್ಯಾಸ್ ಇಲ್ಲವೆಂದು ಹೇಳಿ ಆಟೋದವರನ್ನು ವಾಪಸ್ ಕಳುಹಿಸುತ್ತಿದ್ದಾರೆ. ಇದಾದ ಎರಡು ದಿನದಲ್ಲಿ 82 ರೂ.ಗೆ ಕೆ.ಜಿ. ಇರುವ ಗ್ಯಾಸ್‌ಅನ್ನು 102 ರೂ.ಗೆ ಏರಿಕೆ ಮಾಡಿ ಮಾರಾಟ ಮಾಡುತ್ತಿದ್ದಾರೆ.

ನಗರದಲ್ಲಿ 500ಕ್ಕೂ ಅಧಿಕ ಆಟೋರಿಕ್ಷಾಗಳು ಗ್ಯಾಸ್ ಮೇಲೆ ಅವಲಂಬಿತವಾಗಿವೆ. ಬಂಕ್‌ನವರ ಕಣ್ಣಾಮುಚ್ಚಾಲೇ ಆಟದಿಂದ ಎಲ್ಲರೂ ಬೇಸತ್ತು ಹೋಗಿದ್ದಾರೆ. ಜೀವನ ನಡೆಸುವುದೇ ಕಷ್ಟಕರವಾಗಿದೆ. ಆದ್ದರಿಂದ ವಿನಾಕಾರಣ ಬೆಲೆಯಲ್ಲಿ ತಾರತಮ್ಯ ಮಾಡುತ್ತಿರುವ ಮತ್ತು ಗ್ಯಾಸ್ ಅಭಾವ ಸೃಷ್ಟಿಸುತ್ತಿರುವ ಗ್ಯಾಸ್ ಬಂಕ್ ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸ್ಥಳಕ್ಕೆ ಬಂದ ಆಹಾರ ನಿರೀಕ್ಷಕ ಸ್ಟಿವನ್ ಮೂಲಕ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು. ಪ್ರಮುಖರಾದ ನಾಗರಾಜ ಹಾರೋಗೊಪ್ಪ, ಅಜಯ ಹುಲ್ಲತ್ತಿ, ರಮೇಶ ಪೂಜಾರ, ಕೃಷ್ಣ ಸಾಳೇರ, ಮಾಲತೇಶ ಕರೂರ, ನಟರಾಜ ಗುಡ್ಡದ, ಪರಶುರಾಮ ಎಳಮಲಿ, ನಾಗರಾಜ ಲಮಾಣಿ, ಎಂ.ಐ. ಬೇವಿನಮರದ ಮತ್ತಿತರರು ಇದ್ದರು.

ಭಗವಾನ್ ಮಹಾವೀರರ 2625 ನೇ ಜಯಂತಿ ಆಚರಣೆ

ಶಿಗ್ಗಾವಿ: ಸಿಟ್ಟು ತ್ಯಾಗ, ಅಹಂಕಾರ, ಮಯಾಚಾರತೆ, ಅತೀ ಆಸೆಯನ್ನ ತ್ಯಾಗ ಮಾಡಿ, ನಮ್ಮ ಒಳಗಿನ ಶತ್ರುತ್ವವನ್ನ ಗೆದ್ದವರು ಪೂಜೆಗೆ ಅರ್ಹರಾಗುತ್ತಾರೆ ಎಂದು ಸೋಂದಾ-ಶಿರಸಿ ಕ್ಷೇತ್ರದ ಸ್ವಸ್ತಿ ಭಟ್ಟಾಕಲಂಕ ಭಟ್ಟಾರಕ ಪಟ್ಟಾಚಾರ್ಯವರ್ಯ ಶ್ರೀಗಳು ಹೇಳಿದರು.



ಪಟ್ಟಣದ ಸಂಗನಬಸವ ಕಲ್ಯಾಣ ಮಂಟಪದಲ್ಲಿ ತಾಲೂಕು ದಿಗಂಬರ ಜೈನ ಕಮಿಟಿ ಹಮ್ಮಿಕೊಂಡ ಭಗವಾನ್ ಶ್ರೀ 1008 ಮಹಾವೀರ ತೀರ್ಥಂಕರರ 2625ನೇ ಜಯಂತಿಯ ಸಾನಿಧ್ಯ ವಹಿಸಿ ಮಾತನಾಡಿದರು.

ವಿರಕ್ತಮಠದ ಸಂಗನಬಸವ ಶ್ರೀಗಳು ಮಾತನಾಡಿ, ಪ್ರಸ್ತುತ ವಿಶ್ವವು ಎದುರಿಸುತ್ತಿರುವ ಹಿಂಸೆಗೆ ಮಹಾವೀರರು ಪ್ರತಿಪಾದಿಸಿ ರುವ ಅಹಿಂಸೆಯೊಂದೆ ಮದ್ದಾಗಿದೆ ಎಂದರು.

ವರೂರ ಶ್ರೀಕ್ಷೇತ್ರದ ಸ್ವಸ್ತಿಶ್ರೀ ಧರ್ಮಸೇನ ಭಟ್ಟಾರಕ ಪಟ್ಟಾಚಾರ್ಯವರ್ಯ ಶ್ರೀಗಳು,ಸಾಹಿತಿ ಶಿವಾನಂದ ಮ್ಯಾಗೇರಿ ಮಾತನಾಡಿದರು. ತಾಲೂಕು ದಿಗಂಬರ ಜೈನ ಕಮಿಟಿಯ ಅಧ್ಯಕ್ಷ ರವೀಂದ್ರ ಪಾಸರ್ ಅಧ್ಯಕ್ಷತೆ ವಹಿಸಿದ್ದರು.

ಇದಕ್ಕೂ ಮುನ್ನ ಪಟ್ಟಣದ ಚನ್ನಮ್ಮ ಸರ್ಕಲ್‌ನಿಂದ ಆರಂಭವಾದ ಮಹಾವೀರರ ಭಾವಚಿತ್ರದ ಮೆರವಣಿಗೆ ಪಟ್ಟಣದ ಹಳೆ ಬಸ್ ನಿಲ್ದಾಣದ ಮೂಲಕ ಸಾಗಿ ಕಲ್ಯಾಣ ಮಂಟಪ ಸೇರಿತು.

ಭಾರತ ಸೇವಾ ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ ದುಂಡಿಗೌಡ್ರ, ಯುವಮುಖಂಡ ನರಹರಿ ಕಟ್ಟಿ, ಖ್ಯಾತ ಕಲಾವಿದೆ ಭಾರತಿ ಛಬ್ಬಿ, ಮಾಣಿಕಚಂದ್ ಲಾಡರ್, ಪ್ರಶಾಂತ ಬಿಶೆಟ್ಟಿ, ಪ್ರಕಾಶ ಹೊನ್ನಪ್ಪನವರ, ಪ್ರಕಾಶ ಧರಣೆಪ್ಪನವರ, ಬಾಹುಬಲಿ ಅಕ್ಕಿ, ಅಭಿನಂದನ ಔರಾದಿ, ಪವನಕುಮಾರ ದೇಸಾಯಿ, ವೀರೇಂದ್ರ ಬಳಿಗಾರ, ಧರಣೇಂದ್ರ ಮಣಕಟ್ಟಿ, ಸಂತೋಷ ಮುಂಡಗೋಡ ಸೇರಿದಂತೆ ಜೈನ ಸಮಾಜದ ಶ್ರಾವಕ, ಶ್ರಾವಕಿಯರು ಮತ್ತಿತರರಿದ್ದರು.

ಮಹಾದೇವಪ್ಪನವರ ರಾಷ್ಟ್ರಪ್ರೇಮ ಎಲ್ಲರಿಗೂ ಆದರ್ಶ: ದಾನಮ್ಮನವರ

ಹಾವೇರಿ: ಕರ್ನಾಟಕದ ಭಗತ್ ಸಿಂಗ್ ಎಂದು ಕರೆಸಿಕೊಳ್ಳುವ ಹುತಾತ್ಮ ಮೈಲಾರ ಮಹಾದೇವಪ್ಪ ಅವರ ದೇಶಪ್ರೇಮ, ತ್ಯಾಗ ಮತ್ತು ಬಲಿದಾನ ನಮ್ಮೆಲ್ಲರಿಗೂ ಆದರ್ಶವಾಗಿದೆ ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಹೇಳಿದರು.

ನಗರದ ಹುತಾತ್ಮರ ವೀರಸೌಧದಲ್ಲಿ ಬುಧವಾರ ಹುತಾತ್ಮ ಮೈಲಾರ ಮಹಾದೇವಪ್ಪನವರ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಮೋಟೇಬೆನ್ನೂರು ಬಳ್ಳಾರಿ ರುದ್ರಪ್ಪ ಬಿ.ಎಡ್. ಕಾಲೇಜು ಹಾಗೂ ಟಿ.ಎಂ.ಎ.ಇ.ಎಸ್ ಶಿಕ್ಷಣ ಮಹಾವಿದ್ಯಾಲಯದ ಸಹಯೋಗದಲ್ಲಿ ಆಯೋಜಿಸಲಾದ ಹುತಾತ್ಮ ಮೈಲಾರ ಮಹಾದೇವಪ್ಪ, ವೀರಯ್ಯ ಹಿರೇಮಠ ಹಾಗೂ ತಿರಕಪ್ಪ ಮಡಿವಾಳ ಅವರುಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ 1943 ಏ.1ರಂದು ಜೀವಬಲಿದಾನ ಮಾಡಿದ ಸ್ಮರಣಾರ್ಥ 83ನೇ ಹುತಾತ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಭಾರತದಲ್ಲಿ 1857ರಲ್ಲಿ ನಡೆದ ಸಿಪಾಯಿದಂಗೆ ದೇಶದ ಮೊದಲ ಸ್ವಾತಂತ್ರ್ಯ ಸಮರವಾಗಿದ್ದು, ಇದರಲ್ಲಿ ಅನೇಕ ಮಹಾನ್ ನಾಯಕರುಗಳು ತಮ್ಮ ಪ್ರಾಣ ತ್ಯಾಗ ಮಾಡಿದರು. ಅದೇ ರೀತಿ ಸ್ವಾತಂತ್ರ್ಯ ಹೋರಾಟದಲ್ಲಿ ಹಾವೇರಿ ಜಿಲ್ಲೆ ಸಹ ಮುಂಚೂಣಿಯಲ್ಲಿತ್ತು. ಈ ಚಳುವಳಿಯಲ್ಲಿ ಮೈಲಾರ ಮಹಾದೇವಪ್ಪ, ವೀರಯ್ಯ ಹಿರೇಮಠ ಮತ್ತು ತಿರಕಪ್ಪ ಮಡಿವಾಳ ಅವರ ಹೆಸರುಗಳು ಇತಿಹಾಸದಲ್ಲಿ ಅಚ್ಚಳಿಯದೆ ಉಳಿದಿವೆ. ಮೈಲಾರ ಮಹಾದೇವಪ್ಪ ಬಹಳ ಸಾತ್ವಿಕ ವ್ಯಕ್ತಿ, ಹತ್ತು ವರ್ಷದ ಬಾಲಕನಾಗಿದ್ದಾಗಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರು. ಅವರು ಮಹಾತ್ಮ ಗಾಂಧೀಜಿಯವರ ಅಹಿಂಸಾ ಮಾರ್ಗವನ್ನು ಅನುಸರಿಸಿ ಹೋರಾಟ ನಡೆಸಿದವರು. 43ನೇ ವಯಸ್ಸಿನಲ್ಲಿ ಬ್ರಿಟಿಷರ ಗುಂಡಿಗೆ ಬಲಿಯಾದ ಅವರು ದೇಶಪ್ರೇಮದ ಪ್ರತೀಕವಾಗಿದ್ದಾರೆ ಎಂದು ಬಣ್ಣಿಸಿದರು.

ಮೈಲಾರರ ಹೆಸರಿನಲ್ಲಿ ಸ್ಥಾಪಿತವಾಗಿರುವ ಟ್ರಸ್ಟ್ ಮೂಲಕ ಅನೇಕ ಪುಸ್ತಕಗಳು ಪ್ರಕಟವಾಗಿವೆ. ವೀರಸೌಧದ ಆವರಣದಲ್ಲಿ ಮೈಲಾರ ರ ಜೀವನ ಚಿತ್ರಣ ನೀಡುವ ಸುಸಜ್ಜಿತ ಸಂಗ್ರಹಾಲಯ ನಿರ್ಮಿಸುವ ಚಿಂತನೆ ಇದೆ. ಕೊರಡೂರು ಸೇವಾಶ್ರಮವನ್ನು ನವೀಕರಿಸಲಾಗಿದ್ದು, ಈ ಬಾರಿ ಜೂನ್ 8ರಂದು ಅವರ ಜನ್ಮದಿನವನ್ನು ಸಡಗರದಿಂದ ಆಚರಿಸಲಾಗುವುದು. ಇಂದಿನ ಯುವಪೀಳಿಗೆ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಮತ್ತು ಬಲಿದಾನವನ್ನು ಯುವಕರಿಗೆ ಪರಿಚಯಿಸುವ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್. ಗಾಜಿಗೌಡ್ರ ಮಾತನಾಡಿ, ಮೈಲಾರ ಮಹಾದೇವಪ್ಪನವರ ತ್ಯಾಗ, ಧೈರ್ಯ ಮತ್ತು ದೇಶಭಕ್ತಿ ಯುವಪೀಳಿಗೆಗೆ ಆದರ್ಶವಾಗಬೇಕು. ಅವರ ಜೀವನ ಚರಿತ್ರೆಯನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಹರಿಹರದ ಹಿರಿಯ ಸಾಹಿತಿ ಪ್ರೊ.ಲಿಂಗರಾಜ ಕಮ್ಮಾರ ಅವರು ಮೈಲಾರ ಮಹಾದೇವಪ್ಪನವರ ಕುರಿತು ಉಪನ್ಯಾಸ ನೀಡಿದರು.

ಈ ವೇಳೆ ತಾಲೂಕುಮಟ್ಟದ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಎಂ.ಎಂ. ಮೈದೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ಅಲ್ಪಸಂಖ್ಯಾತರ ಆಯೋಗದ ಸದಸ್ಯೆ ಪರಿಮಳಾ ಜೈನ್, ಸಾಹಿತಿ ಸತೀಶ ಕುಲಕರ್ಣಿ, ಎಚ್.ಎಸ್. ಮಹಾದೇವ, ವಿ.ಎನ್. ತಿಪ್ಪನಗೌಡ, ನಾಗೇಂದ್ರ ಕಟಕೋಳ, ಡಾ. ಎಸ್.ಕೆ. ಪ್ರಸಾದಿಮಠ, ಬಳ್ಳಾರಿ ರುದ್ರಪ್ಪ ಬಿ.ಎಡ್. ಕಾಲೇಜಿನ ಪ್ರಾಂಶುಪಾಲ ಸುರೇಶ್ ಎಂ, ಜಿಲ್ಲಾ ಕಸಾಪ ಅಧ್ಯಕ್ಷ ಲಿಂಗಯ್ಯ ಹಿರೇಮಠ ಸೇರಿದಂತೆ ಹಲವರಿದ್ದರು.

ಸದಸ್ಯತ್ವ ನೋಂದಣಿ ಮಾಡಿಸಿಕೊಳ್ಳಿ: ಬಿಂದಲಗಿ

ಹಾವೇರಿ: ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದಿಂದ ಸದಸ್ಯತ್ವ ನೋಂದಣಿ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದ್ದು, ಆಸಕ್ತ ಕಾರ್ಯಕರ್ತರು ಸದಸ್ಯತ್ವ ನೋಂದಣಿ ಮಾಡಿಸಿ ಕೊಳ್ಳಬಹುದು ಈಗಾಗಲೇ ಜಿಲ್ಲೆಯಲ್ಲಿ 2,645 ಕಾರ್ಯಕರ್ತರು ನೊಂದಣಿ ಮಾಡಿಸಿಕೊಂಡಿದ್ದಾರೆ ಎಂದು ಕೆಆರ್‌ಎಸ್ ಪಕ್ಷದ ಜಿಲ್ಲಾಧ್ಯಕ್ಷ ಧರ್ಮರಾಜ ಬಿಂದಲಗಿ ಹೇಳಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೆಆರ್‌ಎಸ್ ಪಕ್ಷ ಅನ್ಯಾಯ, ಅಕ್ರಮ, ಭ್ರಷ್ಟಾಚಾರದ ವಿರುದ್ಧ ನಿರಂತರವಾಗಿ ಧ್ವನಿ ಎತ್ತಿ ಸಾರ್ವಜನಿಕರಿಗೆ, ಅನ್ಯಾಯಕ್ಕೊಳಗಾದವರಿಗೆ ನ್ಯಾಯ ಒದಗಿಸುವ ಕೆಲಸ ಮಾಡುತ್ತಿದೆ. ಜನಪರ ಹಿತಾಸಕ್ತಿಯುಳ್ಳ ಪಕ್ಷಕ್ಕೆ ನೂತನವಾಗಿ ಸೇರ್ಪಡೆಆಗಬೇಕೆನ್ನುವ ಕಾರ್ಯಕರ್ತರು ಆನ್‌ಲೈನ್ ಮೂಲಕ ನೋಂದಣಿ ಮಾಡಿಸಿಕೊಳ್ಳಬೇಕು. ರಾಜ್ಯಾದ್ಯಂತ ಸುಮಾರು 66 ಸಾವಿರಕ್ಕೂ ಅಧಿಕ ಕಾರ್ಯಕರ್ತರು ನೋಂದಣಿಯಾಗಿದ್ದಾರೆ ಎಂದರು.



ಪಕ್ಷಕ್ಕೆ ಸೇರ್ಪಡೆಯಾಗಬಯಸುವವರು ಗೂಗಲ್‌ನಲ್ಲಿ ಕೆಆರ್‌ಎಸ್‌ಪಾರ್ಟಿ.ಇನ್ ವೆಬ್‌ಸೈಟ್‌ನಲ್ಲಿ ತಮ್ಮ ಹೆಸರು, ವಿಳಾಸ, ಫೋನ್ ನಂಬರ್ ಹೀಗೆ ವೈಯಕ್ತಿಕ ಮಾಹಿತಿ, ವಿಧಾನಸಭಾ ಕ್ಷೇತ್ರ ತಿಳಿಸಬೇಕು. 100 ರೂ.ಸದಸ್ಯತ್ವ ಶುಲ್ಕವಿದ್ದು, ಆನ್‌ಲೈನ್ ಮೂಲಕವೇ ಹಣವನ್ನು ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಇದನ್ನು ಸದ್ಬಳಕೆ ಮಾಡಿಕೊಂಡು ನೋಂದಣಿ ಮಾಡಿಕೊಳ್ಳಬಹುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಲ್ಲಪ್ಪ ಕಾಡಶೆಟ್ಟಿಹಳ್ಳಿ, ಜಿಲ್ಲಾ ಕಾರ್ಯದರ್ಶಿ ಚರಣ್‌ರಾಜ ರೊಡ್ಡನವರ, ಮಹಿಳಾ ಅಧ್ಯಕ್ಷೆ ಅನ್ನಪೂರ್ಣ ಬಡಿಗೇರ, ಗದಿಗೆಪ್ಪ ಕುಂದೂರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಇಂದು ಸಂವಾದ

ಹುಬ್ಬಳ್ಳಿ: ಬಾಲಾಜಿ ಆಸ್ಪತ್ರೆ ಮತ್ತು ಕನಕದಾಸ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ವಿಶ್ವ ತಲೆ ಗಾಯ ಜಾಗೃತಿ ದಿನದ ಅಂಗವಾಗಿ ಏ.2ರಂದು ಬೆಳಗ್ಗೆ 9.30ಕ್ಕೆ ಕಾಲೇಜಿನ ಡಾ. ಬಿ.ಎಫ್. ದಂಡಿನ ಸಭಾಂಗಣದಲ್ಲಿ ಆರೋಗ್ಯ ಅರಿವು ಮತ್ತು ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ. ಬಾಲಾಜಿ ಆಸ್ಪತ್ರೆ ಚೇರ್ಮನ್ ಮತ್ತು ನರರೋಗ ತಜ್ಞ ಡಾ. ಕ್ರಾಂತಿಕಿರಣ ಅವರು ಅಪಘಾತ ಮತ್ತು ಮಿದುಳಿನ ಗಾಯಗಳಿಂದ ರಕ್ಷಿಸಿಕೊಳ್ಳುವ ವಿಧಾನ ಮತ್ತು ಮಿದುಳಿನ ಮಹತ್ವದ ಕುರಿತು ಅರಿವು ಮೂಡಿಸಿ ಸಂವಾದ ನಡೆಸಲಿದ್ದಾರೆ.

ಕಿರುಸುದ್ದಿ

ಅಕ್ಷರ ಸಿರಿ ಪ್ರಶಸ್ತಿ ಪ್ರದಾನ





ಕಕಮರಿ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕಕರ ಸಂಘ ಬೆಂಗಳೂರು ತಾಲೂಕ ಘಟಕ ಅಥಣಿ ಹಾಗೂ ಮಹಿಳಾ ವೇದಿಕೆ ಅಥಣಿ ಇವರ ಸಹಯೋಗದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನಿಮಿತ್ತ ತಾಲೂಕಿನ ಅತ್ಯುತ್ತಮ ಶಿಕ್ಷಕರನ್ನು ಗುರುತಿಸಿ ಮಾತೆ ಸಾವಿತ್ರಿಬಾಯಿ ಪುಲೆ ಅಕ್ಷರ ಸಿರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಭೀಮಣ್ಣ ಶಿವಪ್ಪ ಅಡಹಳ್ಳಿ, ಹಾಗೂ ಸರಕಾರಿ ಪ್ರಾಥಮಿಕ ಶಾಲೆ ಕುಂಬಾರ ತೋಟ ಕೋಹಳ್ಳಿ ಶಿಕ್ಷಕಿಯಾದ ಸುನಂದಾ ಓಗೆಪ್ಪ ಮೈಲಾಪೂರ ಅವರಿಗೆ ಅತ್ಯುತ್ತಮ ಅಕ್ಷರ ಸಿರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಇಂದಿನಿಂದ ಸಿದ್ಧರಾಮೇಶ್ವರ ಜಾತ್ರಾ ಮಹೋತ್ಸವ

ತೆಲಸಂಗ: ಸಮೀಪದ ಸುಕ್ಷೇತ್ರ ಕನ್ನಾಳ ಗ್ರಾಮದಲ್ಲಿ ಶ್ರೀ ಸಿದ್ಧರಾಮೇಶ್ವರ ಜಾತ್ರಾ ಮಹೋತ್ಸವವು ಏ.2ರಿಂದ ಏ.4ರವರೆಗೆ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಅತ್ಯಂತ ವಿಜೃಂಭಣೆಯಿಂದ ಜರುಗಲಿದೆ. ವೇದಮೂರ್ತಿ ಮಲ್ಲಯ್ಯಾ ಸ್ವಾಮಿಗಳವರ ದಿವ್ಯ ಆಶೀರ್ವಾದದೊಂದಿಗೆ ಮೂರು ದಿನ ನಡೆಯುವ ಈ ಉತ್ಸವದಲ್ಲಿ ಸುತ್ತಮುತ್ತಲಿನ ಗ್ರಾಮಗಳ ಭಕ್ತಾದಿಗಳು ಪಾಲ್ಗೊಳ್ಳಲಿದ್ದಾರೆ.

ಏ.2 ರಂದು ಬೆಳಗ್ಗೆ 8 ಗಂಟೆಗೆ ಶ್ರೀ ಸಿದ್ಧರಾಮೇಶ್ವರ ಕರ್ತೃ ಗದ್ದುಗೆಗೆ ರುದ್ರಾಭಿಷೇಕ ನೆರವೇರಲಿದೆ. ಸಂಜೆ 7 ಗಂಟೆಗೆ ತೆಲಸಂಗ, ಬನ್ನೂರ, ಐಗಳಿ ಸೇರಿದಂತೆ ಸುತ್ತಮುತ್ತಲಿನ ವಿವಿಧ ಗ್ರಾಮಗಳ ಪಲ್ಲಕ್ಕಿಗಳನ್ನು ಬರಮಾಡಿಕೊಳ್ಳಲಾಗುವುದು. ರಾತ್ರಿ ಗಂಗೆ ಸೀತಾಳ ಮುಗಿದ ನಂತರ ಅನ್ನಪ್ರಸಾದ ಸೇವೆ ಹಾಗೂ ಕನ್ನಾಳದ ಸೋಮನಿಂಗ ದಳವಾಯಿ ಮತ್ತು ಬೀರಪ್ಪ ಮಾಸ್ತರ ತಂಡದವರಿಂದ ಜಾಗರಣೆ ನಿಮಿತ್ತ ಡೊಳ್ಳಿನ ಪದಗಳ ಕಾರ್ಯಕ್ರಮ ಜರುಗಲಿದೆ.

ಏ.3 ರಂದು ಬೆಳಿಗ್ಗೆ ಹೊರಗಿನ ಗುಡಿಯಿಂದ ಪಲ್ಲಕ್ಕಿಗಳ ಭವ್ಯ ಮೆರವಣಿಗೆ ಆರಂಭವಾಗಲಿದ್ದು, ಕುಂಭಮೇಳ, ವಾಲಗ, ಕರಡಿ ಮಜಲು ಕಾರ್ಯಕ್ರಮಕ್ಕೆ ಮೆರುಗು ನೀಡಲಿವೆ. ಇದೇ ವೇಳೆ ಅಗಸಿಯಲ್ಲಿ ಹಾಗೂ ದೇವಸ್ಥಾನದ ಮುಂದೆ ಗುರಪ್ಪ ಪೂಜಾರಿ ಮತ್ತು ರವಿ ನಿಡೋಣಿ ಅವರಿಂದ ಆಲಗ್ ಹಾಯುವ ಸಾಹಸ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ ಮಹಾ ಅನ್ನಪ್ರಸಾದ ಸೇವೆ ಇರಲಿದ್ದು, ಕೈಪಟ್ಟು, ಕುದುರೆ ಕುಣಿತದಂತಹ ಸಾಂಸ್ಕೃತಿಕ ವೈಭವಗಳು ಜರುಗಲಿವೆ.

ಏ.4 ರಂದು ಬೆಳಗ್ಗೆ 10 ಗಂಟೆಗೆ ಕರಿ ಹರಿಯುವ ಸಂಪ್ರದಾಯದೊಂದಿಗೆ ಜಾತ್ರಾ ಮಹೋತ್ಸವವು ಅಧಿಕೃತವಾಗಿ ಮುಕ್ತಾಯಗೊಳ್ಳಲಿದೆ. ಇದಕ್ಕೂ ಮುನ್ನ ಶುಕ್ರವಾರ ರಾತ್ರಿ ವಿಜಯಪುರ ಜಿಲ್ಲೆಯ ಗುಣಕಿ ಮತ್ತು ಗೂಗದಡ್ಡಿ ಗ್ರಾಮದ ಪ್ರಸಿದ್ಧ ತಂಡಗಳಿಂದ ಡೊಳ್ಳಿನ ಹಾಡುಗಳ ಸ್ಪರ್ಧೆ ಏರ್ಪಡಿಸಲಾಗಿದೆ.

ಪೂರ್ವಭಾವಿ ಸಭೆ ನಾಳೆ

ರಾಮದುರ್ಗ: ಏ.20 ರಂದು ನಡೆಯಲಿರುವ ವಿಶ್ವಗುರು, ಕರ್ನಾಟಕದ ಸಂಸ್ಕೃತೀಕ ನಾಯಕ ಬಸವೇಶ್ವರ ಜಯಂತಿ ಆಚರಣೆ ನಿಮಿತ್ತ ಏ.3 ರಂದು ಸಂಜೆ 6 ಗಂಟೆಗೆ ವಿರಕ್ತಮಠದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ವೀರಕ್ತಮಠ ಟ್ರಸ್ಟ್ ಅಧ್ಯಕ್ಷ ಪ್ರದೀಪಕುಮಾರ ಪಟ್ಟಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸಭೆಗೆ ಜಾಗತಿಕ ಲಿಂಗಾಯತ ಮಹಾಸಭಾ, ವೀರಶೈವ ಲಿಂಗಾಯತ ಸಂಘಟನಾ ವೇದಿಕೆ, ಅಕ್ಕನ ಬಳಗ, ಬಸವಪರ ಸಂಘಟನೆಗಳು, ರಾಮದುರ್ಗ ತಾಲೂಕಿನ ಲಿಂಗಾಯತ ಸಮಾಜದ ಎಲ್ಲ ಒಳ ಪಂಗಡಗಳ ಸಂಘ ಸಂಸ್ಥೆಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಮತ್ತು ಬಸವ ಜಯಂತಿ ಉತ್ಸವ ಸಮಿತಿಯ ಸದಸ್ಯರುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸಲಹೆ ಸೂಚನೆ ನೀಡಲು ಮನವಿ ಮಾಡಿದ್ದಾರೆ. ಸಭೆಯಲ್ಲಿ ಬಸವಜಯಂತಿ ಉತ್ಸವ ಆಚರಿಸಲು ಕೈಗೊಳ್ಳಬೇಕಾದ ಕ್ರಮಗಳು ಮತ್ತು ಯಶಸ್ವಿ ಆಚರಣೆಗೆ ವಿವಿಧ ಸಮಿತಿಗಳನ್ನು ರಚಿಸಲಾಗುವುದು ಕಾರಣ ಬಸವಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಪ್ರಕಟಣೆ ಮೂಲಕ ವಿನಂತಿಸಿದ್ದಾರೆ.

ಕಾಶವ್ವ ಪಟಾಯತ್ ನಿಧನ



ಕುಡಚಿ: ರಾಯಬಾಗ ತಾಲೂಕಿನ ಯಲ್ಪಾರಟ್ಟಿ ಗ್ರಾಮದ ಮಾಜಿ ಗ್ರಾಪಂ ಅಧ್ಯಕ್ಷೆ ಕಾಶವ್ವ ದನಪಾಲ್ ಪಟಾಯತ್ (85) ನಿಧನರಾದರು. ಮೃತರು ಪತಿ, ನಾಲ್ವರು ಪುತ್ರರು, ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.



ಯಮಕನಮರಡಿ: ಸ್ಥಳೀಯ ಪಾರಿಶ್ವನಾಥದಿಗಂಬರ ಜೈನ ಮಂದಿರದಲ್ಲಿ ಪ್ರತಿವರ್ಷದ ಪದ್ಧತಿಯಂತೆ ದೇವಸ್ಥಾನದ ನೂತನ ಕಮಿಟಿಯ ಸರ್ವ ಸದಸ್ಯರು ಮಂಗಳವಾರ ಭಗವಾನ್ ಮಹಾವೀರರ 200625ನೇ ಜನ್ಮ ಕಲ್ಯಾಣ ಮಹೋತ್ಸವ ಆಚರಿಸಿದರು. ಅಪಾರ ಭಕ್ತ ಸಮೂಹ ಶ್ರಾವಕ ಶ್ರಾವಕಿಯರು, ಆಡಳಿತ ಮಂಡಳಿ ಸರ್ವ ಸದಸ್ಯರು ಉಪಸ್ಥಿತರಿದ್ದರು.

ರಂಗಸಮ್ಮಾನಕ್ಕೆ ನಿರ್ಮಲಾ ಆಯ್ಕೆ



ಬೆಳಗಾವಿ: ಬೆಳಗಾವಿಯ ರಂಗ ಸೃಷ್ಟಿ ಸಾಂಸ್ಕೃತಿಕ ಸಂಘ (ರಿ) ಕೊಡ ಮಾಡುವ 2025ನೇ ಸಾಲಿನ ರಂಗಸಮ್ಮಾನ ಪ್ರಶಸ್ತಿಗೆ ಹಿರಿಯ ನಟಿ, ಗಾಯಕಿ ಹಾಗೂ ಸಪ್ತಸ್ವರ ಸಂಗೀತ ವಿದ್ಯಾಲಯದ ಮುಖ್ಯಸ್ಥೆ ನಿರ್ಮಲ ಪ್ರಕಾಶ್ ಭಾಜನರಾಗಿದ್ದಾರೆ. ರಂಗ ಸೃಷ್ಟಿ ತಂಡವು ಪ್ರತಿ ವರ್ಷ ವಿಶ್ವರಂಗ ಭೂಮಿ ದಿನಾಚರಣೆಯಲ್ಲಿ ರಂಗಭೂಮಿಯಲ್ಲಿ ಸಾಧನೆ ಮಾಡಿದ ರಂಗಕರ್ಮಿಗೆ ಈ ಗೌರವ ಇತ್ತು ಸನ್ಮಾನಿಸುತ್ತಿದೆ. ಈ ವರ್ಷದ ರಂಗಸಮ್ಮಾನಕ್ಕೆ ಪಾತ್ರರಾದ ನಿರ್ಮಲಾ ಪ್ರಕಾಶ್ ಕಳೆದ 30 ವರ್ಷಗಳಿಂದ ರಂಗಭೂಮಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು, ತಮ್ಮ ಪ್ರಬುದ್ಧ ಅಭಿನಯದಿಂದ ಹಲವು ನಾಟಕಗಳಲ್ಲಿ ವಿಭಿನ್ನ ಬಗೆಯ ಪಾತ್ರಗಳಿಗೆ ಜೀವ ತುಂಬಿದ್ದರು. ವಿವಿಧ ರಂಗ ತಂಡಗಳಲ್ಲಿ ಸಹ ಅವರು ಕಾರ್ಯನಿರ್ವಹಿಸಿದ್ದಾರೆ. ಇತ್ತೀಚೆಗೆ ಅವರು ಸಂಗೀತ ಕ್ಷೇತ್ರದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡು ನೂರಾರು ವಿದ್ಯಾರ್ಥಿಗಳಿಗೆ ಸಂಗೀತ ಶಿಕ್ಷಣವನ್ನು ನೀಡುತ್ತಿದ್ದಾರೆ. ಈ ವರ್ಷದ ಪ್ರಶಸ್ತಿಗಾಗಿ ರಂಗ ಸೃಷ್ಟಿಯು ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಿತು. ಸಭೆಯಲ್ಲಿ ರಂಗ ಸೃಷ್ಟಿಯ ಅಧ್ಯಕ್ಷ ರಮೇಶ್ ಜಂಗಲ್, ಉಪಾಧ್ಯಕ್ಷ ಎಂ. ಕೆ. ಹೆಗಡೆ, ಶೈಲಜಾ ಭಿಂಗೆ, ಕಾರ್ಯದರ್ಶಿ ಶರಣಗೌಡ ಪಾಟೀಲ್, ಕೋಶಾಧಿಕಾರಿ ಶಾಂತಾ ಆಚಾರ್ಯ, ಕಾರ್ಯಕಾರಿ ಮಂಡಳಿಯ ಸದಸ್ಯರಾದ ಡಾ. ರಾಮಕೃಷ್ಣ ಮರಾಠೆ, ಶಿರೀಷ ಜೋಶಿ, ಸುನೀತಾ ಸುರೇಶ್, ರಮೇಶ್ ಮಿರ್ಜಿ, ಶರಣಯ್ಯ ಮಠಪತಿ, ಕಲಾವಿದರಾದ ವಿಶ್ವನಾಥ ದೇಸಾಯಿ, ವಾಮನ ಮಳಗಿ, ಶಾಂತಾ ಜಂಗಲ್ ಇದ್ದರು.



ರಾಯಬಾಗ: ತಾಲೂಕಿನ ಮೇಖಳಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರದ ಅನುಚರ ಹುದ್ದೆಯ ಸತ್ಯಪ್ಪ ಕರಿಗಾರ ಸೇವಾ ನಿವೃತ್ತಿ ಹೊಂದಿದ್ದು, ಮಂಗಳವಾರ ಬೀಳ್ಕೊಡಲಾಯಿತು. ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರದ ಮುಖ್ಯಸ್ಥ ಲಕ್ಕಪ್ಪ ಬಬಲಿ, ರಾಜು ಖರ್ಚಣ್ಣವರ, ಶಶಿಕಲಾ ಕಾಗೆ, ಲಕ್ಕಪ್ಪ ಜಾಧವ, ಕುಮಾರ ಹರಕೆ, ಶಿವಾನಂದ ಪಾಟೀಲ, ಕುಮಾರ ಕಾಳಗೆ, ಸಹದೇವ ಡೊಂಗರೆ, ಸಾಗರ ನಾಯಿಕ, ಪಶುಸಖಿಯರಾದ ಪ್ರಿಯಾಂಕಾ ಮಾಂಗ್, ಗಂಗವ್ವ ಕಾಪಸೆ ಸೇರಿ ಇತರರಿದ್ದರು.

ಖಾಲಿ ಸಿಲಿಂಡರ್ ಇಟ್ಟು ಎಂಕೆ ಹುಬ್ಬಳ್ಳಿ ಗ್ರಾಮಸ್ಥರ ಆಗ್ರಹ

ಎಲ್‌ಪಿಜಿ ಗ್ಯಾಸ್ ಒದಗಿಸಲು ಒತ್ತಾಯ

ಬೆಳಗಾವಿ: ಮಧ್ಯ ಪ್ರಾಂತ್ಯದ ಯುದ್ಧದ ಎಫೆಕ್ಟ್ ಬೆಳಗಾವಿ ಜಿಲ್ಲೆಗೂ ತಟ್ಟಿದೆ. ಜನತೆಯ ಅಡುಗೆ ಮನೆಯಲ್ಲಿದ್ದ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಇದೀಗ ಅಂತೂ ಇಂತೂ ಈಗ ಸಮಸ್ಯೆಯು ಖಾಲಿ ಗ್ಯಾಸ್ ಜೊತೆಗೆ ಜನತೆಯು ಬೀದಿಗೆ ಬಂದಂತಾಗಿದೆ.

ಸಿಲಿಂಡರ್ ಒದಗಿಸುವಂತೆ ಆಗ್ರಹಿಸಿ ಗ್ರಾಮಸ್ಥರು ರಸ್ತೆಗೆ ಇಳಿದಿರುವ ಘಟನೆ ಬುಧವಾರ ಜಿಲ್ಲೆಯ ಎಂ. ಕೆ. ಹುಬ್ಬಳ್ಳಿ ಪಟ್ಟಣದಲ್ಲಿ ನಡೆದಿದೆ. ಗೃಹಬಳಕೆಯ ಸಿಲಿಂಡರ್ ಸಹ ಸಿಗುತ್ತಿಲ್ಲ. ಏಜೆನ್ಸಿಗಳಲ್ಲೂ ಹಾಹಾಕಾರ ಉಂಟಾಗಿದೆ. ಜಿಲ್ಲಾಡಳಿತ ತತ್‌ಕ್ಷಣ ಗ್ಯಾಸ್ ಒದಗಿಸಲಿ ಎಂದು ರಸ್ತೆಯಲ್ಲಿ ಖಾಲಿ ಸಿಲಿಂಡರ್ ಇಟ್ಟು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳಕ್ಕೆ ಕಂದಾಯ ಹಾಗೂ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಅಧಿಕಾರಿಗಳು ಹಾಗೂ ಕಿತ್ತೂರು ಪೊಲೀಸರು ತೆರಳಿ ಗ್ರಾಮಸ್ಥರನ್ನು ಸಮಾಧಾನಪಡಿಸಲು ಯತ್ನಿಸಿದರು. ಸಿಲಿಂಡರ್ ಕೊರತೆಯಿಲ್ಲ, ಪೆಟ್ರೋಲ್ ಕೊರತೆ ಇಲ್ಲ ಎಂದು ಜಿಲ್ಲಾಡಳಿತ ಪದೇ ಪದೇ ಸ್ಪಷ್ಟಪಡಿಸುತ್ತಿರುವ ಮಧ್ಯೆ ಪದೇ ಪದೇ ಪೆಟ್ರೋಲ್ ಹಾಗೂ ಗ್ಯಾಸ್ ಸಮಸ್ಯೆ ತಲೆದೋರುತ್ತಿರುವುದರ ಬಗ್ಗೆ ಗ್ರಾಮಸ್ಥರು ಆಕ್ರೋಶವನ್ನು ಹೊರ ಹಾಕಿದರು.

ಜಿಲ್ಲಾಡಳಿತ ಕೂಡಲೇ ಸಾರ್ವಜನಿಕರಿಗೆ ಸಿಲಿಂಡರ್ ಗ್ಯಾಸ್ ವ್ಯವಸ್ಥೆ ಮಾಡಬೇಕೆಂದು ಪ್ರತಿಭಟನೆಯಲ್ಲಿ ಜಿಲ್ಲಾಡಳಿತಕ್ಕೆ ಆಗ್ರಹಿಸಿದರು. ಇಲ್ಲವಾದಲ್ಲಿ ಗ್ರಾಮಸ್ಥರು ಎಲ್ಲರು ಸೇರಿಕೊಂಡು ಜಿಲ್ಲಾಡಳಿತಕ್ಕೆ ಮುತ್ತಿಗೆ ಹಾಕಿ ಉಗ್ರ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಸಿದ್ದಾರೆ.



ಎಲ್‌ಪಿಜಿ ಗ್ಯಾಸ್‌ಗಾಗಿ ಕಾದು ನಿಂತ ಆಟೋಗಳು

ಬೆಳಗಾವಿ: ಮಧ್ಯ ಪ್ರಾಂತ್ಯದ ಯುದ್ಧದ ಎಫೆಕ್ಟ್ ರಾಷ್ಟ್ರ ಹಾಗೂ ಬೆಳಗಾವಿಗೂ ತಲುಪಿದೆ. ನಗರದಲ್ಲಿರುವ ಕೆಲ ಜನರ ಬದುಕನ್ನು ಬುಡಮೇಲು ಕಳೆದ ಕೆಲ ದಿನಗಳಿಂದ ಮಾಡುತಿದ್ದು, ಬುಧವಾರ ಸಾರ್ಜನಿಕರ ಜೀವನವನ್ನು ಸಂಪೂರ್ಣವಾಗಿ ಬುಡಮೇಲು ಮಾಡಿದೆ. ಒಂದು ಕಡೆ ಎಲ್‌ಪಿಜಿ ಸಿಲಿಂಡರ್ ಗ್ಯಾಸ್ ಕೊರತೆ ಮತ್ತೋಂದು ಕಡೆ ಆಟೋಗಳ ಸಿಎನ್‌ಜಿ ಕೊರತೆಯಿಂದ ನಗರದ ಆಟೋ ಚಾಲಕರು ಸಾಕಷ್ಟು ತೊಂದರೆಯನ್ನು ಅನುಭವಿಸಿದ್ದಾರೆ.

ಕುಂದಾನಗರಿಯಲ್ಲಿ ವಾಣಿಜ್ಯ ಬಳಕೆ ಸಿಲಿಂಡರ್ ವ್ಯತ್ಯಯದಿಂದ ಹೋಟೆಲ್‌ಗಳ ಬಾಗಿಲು ಮುಚ್ಚುತ್ತಿದ್ದರೆ. ಸಿಎನ್‌ಜಿ ಗ್ಯಾಸ್ ಕೊರತೆಯಿಂದ ಆಟೊ ಚಾಲಕ ಬದುಕಿಗೂ ಪೆಟ್ಟು ಬಿದ್ದಿದೆ. ಈ ಚಾಲಕರು ಹೊತ್ತಿನ ಊಟಕ್ಕಾಗಿ ದುಡಿದ ತಿನ್ನುವ ಶ್ರಮಿಕರು. ನಗರದಲ್ಲಿ ನಿತ್ಯ ಆಟೊ ಓಡಾಡಿಸಿಕೊಂಡು ದುಡಿದರೆ ಮಾತ್ರ ಆ ಮನೆಯಲ್ಲಿ ಜೀವನ ಸಾಗಲು ಸಾಧ್ಯ. ಈಗಿರುವಾಗ ಯುದ್ಧದ ಪರಿಣಾಮ ಇವರ ಜೀವನವೇ ಏರುಪೇರು ಆಗಿದೆ. ಆಟೊ ಸಿಎನ್‌ಜಿ ಗ್ಯಾಸ್‌ಗಾಗಿ ದಿನವಿಡೀ ಕಾಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಗ್ಯಾಸ್ ಫಿಲ್ಲಿಂಗ್ ಮಾಡಿಸಿಕೊಳ್ಳಲು ನಗರದಲ್ಲಿ ಆಟೊಗಳು ಸರತಿ ಸಾಲಿನಲ್ಲಿ ನಿಂತು ಕಾದರು. ಕಾಯುವುದರಲ್ಲಿಯೇ ಚಾಲಕರ ಇಡೀ ದಿನ ವ್ಯರ್ಥ ಮಾಡಿದರು. ಕೇಂದ್ರ ಹಾಗೂ ರಾಜ್ಯ ಸರ್ಕಾರ ಕೂಡಲೇ ಈ ಸಮಸ್ಯೆ ನಿವಾರಣೆಗೆ ಗಮನ ಹರಿಸಬೇಕು. ಮತ್ತಷ್ಟು ಬಿಗಡಾಯಿಸಿದರೆ ಮುಂದೆ ಕಷ್ಟವಾಗುತ್ತದೆ. ನಮ್ಮಂಥ ಅನೇಕ ಬಡ ಕುಟುಂಬಗಳು ಬೀದಿಗೆ ಬೀಳುವಂಥ ಪರಿಸ್ಥಿತಿ ಬರುತ್ತದೆ ಎಂದು ಆಟೊ ಚಾಲಕರು ತಮ್ಮ ಅಳಲು ತೋಡಿಕೊಂಡಿದ್ದಾರೆ.

ಜಾತಿ ಮರೆತರೆ ಮಠಗಳ ಅಭಿವೃದ್ಧಿ ಸಾಧ್ಯ

ರಾಮದುರ್ಗ : ಮಠ ಮಂದಿರಗಳಲ್ಲಿರುವ ಸ್ವಾಮಿಗಳನ್ನು ಅರಳಿಸುವ ಕೆಲಸ ಮಾಡಬೇಕು ವಿನಃ ಕೆರಳಿಸವು ಕೆಲಸಕ್ಕೆ ಭಕ್ತರು ಮಾಡಬೇಡಿ ಇತ್ತೀಚೆಗೆ ಸ್ವಾಮಿಗಳನ್ನು ಇಕ್ಕಟ್ಟಿಗೆ ಸಿಕ್ಕಿಹಾಕಿಸುವ ಪ್ರಯತ್ನ ನಡೆಯುತ್ತಿರುವದು ವಿಷಾದನೀಯ ಎಂದು ಶಿರಹಟ್ಟಿಯ ಫಕೀರದಿಂಗಾಲೇಶ್ವರ ಸ್ವಾಮಿಗಳು ಹೇಳಿದರು.

ಬುಧವಾರ ತಾಲೂಕಿನ ಕುಳ್ಳೂರು ಶ್ರೀ ಗುರು ಶಿವಯೋಗೀಶ್ವರರ 118ನೇ ಪುಣ್ಯಾರಾಧನೆ, ಶ್ರೀ ಗುರು ರೇವಯ್ಯ ಶಿವಯೋಗಿಗಳ 150ನೇ ಜಯಂತ್ಯೋತ್ಸವ, ಶ್ರೀ ಸಿದ್ಧರಾಮ ಶಿವಯೋಗಿಗಳ 50 ನೇ ಪುಣ್ಯಾರಾಧನೆ, ಶ್ರೀ ಶಿವಯ್ಯ ಮಹಾಸ್ವಾಮಿಗಳ 6ನೇ ಪುಣ್ಯಾರಾಧನೆಯ ಅಂಗವಾಗಿ ನಡೆದ ವೇದಾಂತ ಪರಿಷತ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಠಗಳ ಅಭಿವೃದ್ಧಿಗೆ ಗ್ರಾಮಸ್ಥರು ರಾಜ ಕಾರಣ ಮತ್ತು ಜಾತಿ ಮರೆತು ಕೆಲಸ ಮಾಡಿರೆ ಮಠಗಳ ಅಭಿವೃದ್ಧಿ ಸಾಧ್ಯವಾಗುವುದು ಇಂದಿನ ಪರಿಸ್ಥಿತಿಯಲ್ಲಿ ರಾಜಕಾರಣ ಅನಿವಾರ್ಯವಾದರೆ ಜೀವನವೇ ರಾಜಕಾರಣ ಆಗದಂತೆ ನೋಡಿಕೊಂಡು ಜೀವನ ನಡೆಸಿದರೆ ನೆಮ್ಮದಿಯ ಜೀವನ ಸಾಧ್ಯವೆಂದು ಹೇಳಿದರು. ವಿಶ್ವಗುರು ಬಸವಣ್ಣನವರು ಸೇರಿದಂತೆ ಶರಣಷ್ಟೆಯಲ್ಲ ಜಗತ್ತಿನ ಎಲ್ಲ ಧರ್ಮಗಳ ಸಾರ ಒಂದೇ ದಯೆಯೆ ಆಗಿದ್ದು ಶ್ರೇಷ್ಠ ಧರ್ಮವಾಗಿದ್ದು ಸಹಾಯ, ನೆರವು ಬಂಧು ಭಾಂಧವರಿಗೆ ಮಾಡುವದು ಮುಖ್ಯವಲ್ಲ ನೆರೆಹೊರೆಯವರಿಗೆ ಕೈಲಾದಷ್ಟು ಸಹಾಯ ಮಾಡಬೇಕು ಎಂದರು. ಮನೆಯಲ್ಲಿ ಮಗಳು ಮತ್ತು ಸೊಸೆಯನ್ನು ಸಮಾನಗಿ ಕಾಣುವದು ನಿಜವಾಧ ಧರ್ಮವಾಗಿದೆ. ಯಾವದೇ ಪ್ರಾಣಿಗಳ ಜೀವನವು ಮುಖ್ಯವಾಗಿದೆ ಹಾನಿಯಾಗದಂತೆ ನೋಡಿಕೊಳ್ಳಬೇಕು ಎನ್ನುವದು ದಯರವಿರಬೇಕು ಸಕಲ ಪ್ರಾಣಿಗಳಲ್ಲಿ ಎಂದು ಹೇಳಿದ್ದಾರೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ನೇಸರಗಿ ಮಲ್ಲಾಪೂರ ಚಿದಾನಂದ ಮಹಾಸ್ವಾಮಿಗಳು, ಹೊಸಯರಗುದ್ರಿಯ ಸಿದ್ಧಪ್ರಭು ಶಿವಾಚಾರ್ಯರು, ತೊಂಡಿಕಟ್ಟಿಯ ಅಭಿನವ ವೆಂಕಟೇಶ ಮಹಾರಾಜರು ಹರ್ಲಾಪೂರದ ರೇಣುಕ ಶಿವಾಚಾರ್ಯರು ಮಾತನಾಡಿ ಕುಳ್ಳೂರು ಶಿವಯೋಗಿಗಳ ನಡೆದಾಡಿದ ಸ್ಥಳವೇಲ್ಲ ಪಾವಣ ಕ್ಷೇತ್ರವಾಗಿದ್ದು ಶ್ರೀ ಮಠದಲ್ಲಿ ನಿತ್ಯ ದಾಸೋಹ ನಡೆಯುತ್ತಿರುವದು ವಿಶೇಷವಾಗಿದೆ ಎಂದು ಹೇಳಿದರು. ಕುಳ್ಳೂರು ಶಿವಯೋಗೀಶ್ವರ ಸಂಸ್ಥಾನ ಮಠದ ಬಸವಾನಂದ ಭಾರತಿ ಮಹಾಸ್ವಾಮಿಗಳು ಸಾನಿಧ್ಯವಹಿಸಿದ್ದ ಕಾರ್ಯಕ್ರಮದಲ್ಲಿ ಹೊಸಕೋಟೆಯ ಅಭಿನವ ರೇವಯ್ಯಸ್ವಾಮಿಗಳು, ಕೊಟಬಾಗಿಯ ಪ್ರಭುದೇವರು, ಕೊಟಬಾಗಿಯ ರೇಖಾ ತಾಯಿಯವರು, ವೆಂಕಟಾಪೂರದ ಜಾನಮ್ಮ ತಾಯಿಯವರು, ಷರೀಪ ಸ್ವಾಮೀಜಿ ಇದ್ದರು.



ಉ.ಕ ಭಾಗದ ಏಳು ಜಿಲ್ಲೆಗಳ ಕಚೇರಿ ಸಮಯ ಬದಲಾವಣೆ

ಬೆಳಗಾವಿ : ರಾಜ್ಯದಲ್ಲಿ ಹೆಚ್ಚುತ್ತಿರುವ ಬಿಸಿಲಿನ ತಾಪಮಾನ ಪರಿಗಣಿಸಿ, ಕರ್ನಾಟಕ ಸರ್ಕಾರ ಮಹತ್ವದ ನಿರ್ಧಾರ ತೆಗೆದುಕೊಂಡಿದೆ.

ರಾಜ್ಯದಲ್ಲಿ ಬಿಸಿಲಿನ ತಾಪಮಾನದ ಹೆಚ್ಚಾಗಿರುವುದರಿಂದ, ಕಿತ್ತೂರು ಕರ್ನಾಟಕದ ಎರಡು ಜಿಲ್ಲೆ, ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳಲ್ಲಿ ಸರ್ಕಾರಿ ಕಚೇರಿ ಸಮಯವನ್ನು ಬದಲಾವಣೆ ಮಾಡಲಾಗಿದೆ. 2026ರ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಪ್ರಸ್ತುತ ಇರುವ ಕಚೇರಿ ವೇಳಾಪಟ್ಟಿಯ ಬದಲಾಗಿ ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 1.30 ನಿಗದಿ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಸರ್ಕಾರಿ ನೌಕರರು, ಸಾರ್ವಜನಿಕರ ಹಿತ ದೃಷ್ಟಿಯಿಂದ ಈ ಕ್ರಮಕ್ಕೈಗೊಳ್ಳಲಾಗಿದೆ.

ಬೆಳಗಾವಿ ವಿಭಾಗದ ಜಿಲ್ಲೆಗಳಾದ ವಿಜಯಪುರ, ಬಾಗಲಕೋಟೆ ಸರ್ಕಾರಿ ಕಚೇರಿಗಳ ಸಮಯ ಬದಲಾವಣೆ ಮಾಡಲಾಗಿದೆ. ಇನ್ನು ಕಲಬುರಗಿ ವಿಭಾಗಕ್ಕೆ ಒಳಪಡುವ ಬೀದರ್, ರಾಯಚೂರು, ಯಾದಗಿರಿ, ಕೊಪ್ಪಳ, ಬಳ್ಳಾರಿ, ವಿಜಯನಗರ ಜಿಲ್ಲೆಗಳಲ್ಲಿ ಸರ್ಕಾರಿ ಕಚೇರಿಗಳ ಕೆಲಸದ ಸಮಯವನ್ನು ಬೆಳಗ್ಗೆ 8 ರಿಂದ ಮಧ್ಯಾಹ್ನ 1.30ರ ತನಕ ನಿಗದಿ ಮಾಡಿದ್ದು, ಏಪ್ರಿಲ್, ಮೇ ತಿಂಗಳ ಅಂತ್ಯದವರೆಗೆ ಸರ್ಕಾರಿ ಕಚೇರಿ ಸಮಯ ಬದಲಾವಣೆ ಜಾರಿಯಲ್ಲಿ ಇರಲಿದೆ.

2026ನೇ ಸಾಲಿನ ಏಪ್ರಿಲ್ ಮತ್ತು ಮೇ ಮಾಹೆಗಳಲ್ಲಿ ಹೆಚ್ಚಿನ ಬಿಸಿಲಿನ ತಾಪಮಾನದ ಹಿನ್ನೆಲೆಯಲ್ಲಿ ಬೆಳಗಾವಿ ವಿಭಾಗದ ವಿಜಯಪುರ ಮತ್ತು ಬಾಗಲಕೋಟೆ ಹಾಗೂ



ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳಿಗೆ ಪ್ರಸ್ತುತ ಜಾರಿಯಲ್ಲಿರುವ ಸರ್ಕಾರಿ ಕಚೇರಿಗಳ ವೇಳಾಪಟ್ಟಿಯ ಬದಲಾಗಿ ಏಪ್ರಿಲ್ ಮತ್ತು ಮೇ ಮಾಹೆಗಳಲ್ಲಿ ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಬದಲಾವಣೆ ಮಾಡಿ ಆದೇಶಿಸಿದೆ.

ಇನ್ನು ಬೆಳಗಾವಿ ವಿಭಾಗದ ವಿಜಯಪುರ ಮತ್ತು ಬಾಗಲಕೋಟೆ ಹಾಗೂ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿನ ಸರ್ಕಾರಿ ನೌಕರರು ಬದಲಾದ ಸಮಯದಲ್ಲಿ ಎಂದಿನಂತೆ ಯಾವುದೇ ಲೋಪ, ಅಡೆತಡೆಯಿಲ್ಲದೆ ತಮ್ಮ ಕರ್ತವ್ಯವನ್ನು ನಿರ್ವಹಿಸತಕ್ಕದ್ದು, ಸಾರ್ವಜನಿಕರಿಗೆ ಯಾವುದೇ ಅನಾನುಕೂಲತೆಯಾಗದಂತೆ ಮತ್ತು ಜಿಲ್ಲಾಧಿಕಾರಿಗಳು ಅಥವಾ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತುರ್ತು ಸಂದರ್ಭದಲ್ಲಿ ಯಾವುದೇ ಕಾರ್ಯವನ್ನು ನಿರ್ವಹಿಸಲು ನಿರ್ದೇಶಿಸಿದಲ್ಲಿ ಸಮಯದ ಪರಿಮಿತಿಯಿಲ್ಲದೆ ಕರ್ತವ್ಯ ನಿರ್ವಹಿಸತಕ್ಕದ್ದು ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ವಾತ್ಸಲ್ಯ ಯೋಜನೆಯು ಅಸಹಾಯಕರಿಗೆ ಆಸರೆ: ಸತೀಶ ನಾಯ್ಕ

ಚನ್ನಮ್ಮನಕಿತ್ತೂರು: ಧರ್ಮಸ್ಥಳದ ಮಾತೃಶ್ರೀ ಹೇಮಾವತಿ ಅಮ್ಮನ ವಾತ್ಸಲ್ಯ ಯೋಜನೆಯು ಅಸಹಾಯಕರ ಪಾಲಿಗೆ ಆಸರೆಯಾಗಿದೆ ಎಂದು ಜಿಲ್ಲಾ ನಿರ್ದೇಶಕ ಸತೀಶ ನಾಯ್ಕ ಹೇಳಿದರು.

ತಾಲೂಕಿನ ಕಾದ್ರೋಳ್ಳಿ ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಗ್ರಾಮದ ವಾತ್ಸಲ್ಯ ಯೋಜನೆಯ ಫಲಾನುಭವಿ ಅದೃಶಪ್ಪ ಕುರಬರರಿಗೆ ಮನೆ ಹಸ್ತಾಂತರಿಸಿ ಮಾತನಾಡಿ, ಪಾರ್ಶ್ವವಾಯುವಿನಿಂದ ಬಳಲಿತ್ತಿರುವ ಈ ಕುಟುಂಬದ ಮುಖ್ಯಸ್ಥನಿಗೆ ನಮ್ಮ ಯೋಜನೆಯಡಿಯಲ್ಲಿ ಈಗಾಗಲೇ ಮಾಸಿಕ ರೂ 1000 ಮಾಶಾಸನ ಪಡೆಯುತ್ತಿದ್ದು, ಇವರಿಗೆ ವಾಸಿಸಲು ಮನೆಯಿಲ್ಲದ್ದನ್ನು ಗಮನಿಸಿ ರೂ. 1.80 ಲಕ್ಷ ವೆಚ್ಚದಲ್ಲಿ ಮನೆಯನ್ನು ನಿರ್ಮಿಸಿ ಕೊಡಲಾಗಿದ್ದು ಧರ್ಮಸ್ಥಳದ ಪೂಜ್ಯರ ಮಾರ್ಗದರ್ಶನದಂತೆ ಮನೆಯಿಲ್ಲದೇ



ಜೋಪಡಿಪಟ್ಟಿಯಲ್ಲಿ ವಾಸವಾಗಿರುವ ಕುಟುಂಬಗಳಿಗೆ ಈಗಾಗಲೇ ಹಲವಾರು ಮನೆಗಳನ್ನು ನಿರ್ಮಿಸಿಕೊಟ್ಟು ನಿರ್ಗತಿಕರು ನೆಮ್ಮದಿ ಜೀವನ ನಡೆಸಲು ಅವಕಾಶ ಕಲ್ಪಿಸಿ ಕೊಟ್ಟಿದ್ದು, ಬಡ ಜನರಿಗೆ ಹಲವು ಯೋಜನೆ ಜಾರಿಗೆ ತಂದಿದ್ದಾರೆ ಎಂದರು.

ಜಿಲ್ಲಾ ಜನ ಜಾಗೃತಿ ವೇದಿಕೆಯ ನಿಕಟ ಪೂರ್ವ ಅಧ್ಯಕ್ಷ ಜಗದೀಶ ಹಾರೂಗೊಪ್ಪ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಹಲವಾರು ಜನಪಯೋಗಿ ಕಾರ್ಯಗಳನ್ನು ಮಾಡುತ್ತಿದ್ದು ವಾತ್ಸಲ್ಯ ಸದಸ್ಯರಿಗೆ ಮಂಜುನಾಥ ಸ್ವಾಮಿ ಆರ್ಶಿವಾದ ಮಾಡಲಿ ಎಂದರು. ಜಿಲ್ಲಾಜನಜಾಗೃತಿ ವೇದಿಕೆ ಅಧ್ಯಕ್ಷ ಉ.ಖ. ಸೋನೇಕರ, ಡಬ್ಲೂ. ಎಚ್ .ಸಿ. ಜಿ. ಎಸ್. ಸಾಲಿಮಠ ಮಾತನಾಡಿದರು. ಜನಜಾಗೃತಿ ವೇದಿಕೆಯ ಸದಸ್ಯೆ ಉಮಾದೇವಿ ಬಿಕ್ಕಣ್ಣವರ ವಾತ್ಸಲ್ಯ ಸದಸ್ಯರಿಗೆ 2 ಪ್ಯಾನ್ ಹಾಗೂ 5 ಕುರ್ಚಿಗಳನ್ನು ನೀಡುವದಾಗಿ ಭರವಸೆ ನೀಡಿದರು. ನ್ಯಾಯವಾದಿ ವಿಶ್ವನಾಥ ಬಿಕ್ಕಣ್ಣವರ, ಅದೃಶ್ಯಪ್ಪ ಗದ್ದಿಹಳ್ಳಿ, ರವಿ ಉಪ್ಪಿನ್, ಬಾಳಪ್ಪ ಹೈಬತ್ತಿ, ಮಾರುತಿ ಹೈಬತ್ತಿ, ಸವಿತಾ, ನಾಗರತ್ನ, ಮಂಜುನಾಥ ಇತರರು ಇದ್ದರು. ಯೋಜನಾಧಿಕಾರಿ ಯೋಗೇಶ್ ಬಿ. ಆರ್. ಸ್ವಾಗತಿಸಿದರು.

ನೂತನ ಸಂಹಿತೆಗಳ ಜಾರಿಗೊಳಿಸದಂತೆ ಒತ್ತಾಯಿಸಿ ಪ್ರತಿಭಟನೆ

ಬೆಳಗಾವಿ : ಕೇಂದ್ರ ಸರ್ಕಾರ ಜಾರಿ ಮಾಡುತ್ತಿರುವ ನೂತನ ಮೂರು ಸಂಹಿತೆಗಳನ್ನು ವಿರೋಧಿಸಿ ಸಿ.ಐ.ಟಿ.ಯೂ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ಬುಧವಾರ ಬೆಳಗಾವಿಯಲ್ಲಿ ಸಿ.ಐ.ಟಿ.ಯೂ ನೇತೃತ್ವದಲ್ಲಿ ಪ್ರತಿಭಟನಾ ರ‍್ಯಾಲಿ ಮೂಲಕ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಆಗಮಿಸಿದ ಸಿ.ಐ.ಟಿ.ಯೂ ಕಾರ್ಯಕರ್ತರು ಕೇಂದ್ರ ಸರ್ಕಾರದ ನೀತಿ ಖಂಡಿಸಿ ಪ್ರತಿಭಟಿಸಿದರು. ಬಳಿಕ ಜಿಲ್ಲಾಧಿಕಾರಿಗಳ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದರು.

ಸಿಐಟಿಯೂ ನೇತೃತ್ವದಲ್ಲಿ ಕೇಂದ್ರ ಸರ್ಕಾರದ ಹೊಸ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ವಿರೋಧಿಸಿ ಭಾರತದಾದ್ಯಂತ ಕರಾಳ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಈ ಹಿನ್ನೆಲೆ ಬೆಳಗಾವಿಯಲ್ಲಿಯೂ ಸಿಐಟಿಯು ತನ್ನ ಪ್ರತಿಭಟನೆಯನ್ನು ನಡೆಸಿತು. ಆದೇಶದ ಪತ್ರಗಳನ್ನು ಸುಟ್ಟು ತನ್ನ ಅಸಮಾಧಾನವನ್ನು ಹೊರ ಹಾಕಿತು.

ಕಾರ್ಮಿಕ ಕಾನೂನುಗಳನ್ನು ಬದಲಾವಣೆ ಕೇಂದ್ರ ಸರ್ಕಾರ ಬದಲಾವಣೆ ಮಾಡಿ, ಮಾಲೀಕರ ಜೇಬುಗಳನ್ನು ತುಂಬುತ್ತಿದೆ. ಅಲ್ಲದೇ ಕಾರ್ಮಿಕ ಹೊಟ್ಟೆ ಮೇಲೆ ಕಾಲು ತರುವ ಕೆಲಸವನ್ನು ಮಾಡುತ್ತಿದೆ. ನೂತನ ಸಂಹಿತೆಗಳನ್ನು ಜಾರಿಗೊಳಿಸಬಾರದು ಎಂದು ಫೆಬ್ರುವರಿಯಲ್ಲಿ ಪ್ರತಿಭಟಿಸಿ 4 ಕೋಟಿ ಜನರು ಮನವಿ ಸಲ್ಲಿಸಿದರೂ ಪಿಎಂ ಅವರು ವಿಮರ್ಶೆ ಮಾಡದೇ, ಹೊಸ ಕಾನೂನುಗಳನ್ನು ಜಾರಿ ಮಾಡಲು ಹೊರಟಿದ್ದಾರೆ. ಚೌಕಾಶಿ ಕಾಯ್ದೆ, ಮಾತುಕತೆಯ ಕಾನೂನು, ಹೋರಾಟದ ಹಕ್ಕು, ನೋಂದನಿ ಹಕ್ಕುಗಳನ್ನು ಕಸಿದುಕೊಳ್ಳುತ್ತಿದ್ದಾರೆ. ಕಾರ್ಮಿಕ ಮೇಲೆ ನಡೆಯುತ್ತಿರುವ ದಾಳಿಯನ್ನು ಸಹಿಸಲು ಸಾಧ್ಯವಿಲ್ಲ. ಮುಂದಿನ ದಿನಗಳಲ್ಲಿ ಇದರ ವಿರುದ್ಧ ಉಗ್ರ ಹೋರಾಟ ನಡೆಸಲಾಗುವುದಾಗಿ ಹೋರಾಟದ ನೇತೃತ್ವ ವಹಿಸಿದ್ದ ಜೆ.ಎಂ. ಜೈನೆಖಾನ್ ಎಚ್ಚರಿಕೆಯನ್ನು ನೀಡಿದರು.

ಈ ವೇಳೆ ಸಿ.ಐ.ಟಿ.ಯೂ ಪದಾಧಿಕಾರಿಗಳು, ಕಾರ್ಮಿಕರು ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕಣ್ಣಿನ ಗಾಯಗಳ ತಡೆ ಕುರಿತು ಜಾಗೃತಿ ಕಾರ್ಯಕ್ರಮ

ಬೆಳಗಾವಿ: ನಗರದಲ್ಲಿರುವ ಕೆ.ಎಲ್.ಇ. ಸಂಸ್ಥೆಯ ರಾಜಾ ಲಖಮಗೌಡ ವಿಜ್ಞಾನ (ಸ್ವಾಯತ್ತ) ಮಹಾವಿದ್ಯಾಲಯದ ಜೀವಶಾಸ್ತ್ರ ವಿಭಾಗವು, ವಾಯ್ ಆರ್‌ಸಿ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ''ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕಣ್ಣಿನ ಗಾಯಗಳ ತಡೆ ಕುರಿತು ಜಾಗೃತಿ ಮೂಡಿಸುವುದು'' ವಿಷಯದ ಮೇಲೆ ಅತಿಥಿ ಉಪನ್ಯಾಸವನ್ನು ಸರ್. ಸಿ.ವಿ. ರಾಮನ್ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಜೆಎನ್‌ಎಮ್ಸಿ ಬೆಳಗಾವಿಯ ನೇತ್ರರೋಗ ತಜ್ಞ ಡಾ. ಶಿವಾನಂದ ಬೂಬ್ನಾಳೆ ಆಗಮಿಸಿ ವಿದ್ಯಾರ್ಥಿಗಳಿಗೆ ಕಣ್ಣಿನ ಗಾಯಗಳ ಪ್ರಮುಖ ಕಾರಣಗಳು ಹಾಗೂ ಅವುಗಳನ್ನು ತಡೆಯುವ ಕ್ರಮಗಳ ಬಗ್ಗೆ ವಿವರಿಸಿದರು.



ಕಣ್ಣಿನ ಸುರಕ್ಷತೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಜೀವಶಾಸ್ತ್ರ ವಿಭಾಗದ ಮುಖ್ಯಸ್ಥೆ ಮಿಸ್ ಜಿ. ಆರ್. ದೇಶಪಾಂಡೆ ಸರ್ವರನ್ನು ಸ್ವಾಗತಿಸಿದರು. ಮುಖ್ಯ ಅತಿಥಿಯನ್ನು ಮಿಸ್. ಕಾವ್ಯ ಸಂಗಣ್ಣವರ್ ಪರಿಚಯಿಸಿದರು. ಪ್ರಾಂಶುಪಾಲ ಡಾ. ಜೆ.ಎಸ್. ಕವಳೇಕರ ಅವರು ಅಧ್ಯಕ್ಷೀಯ ಭಾಷಣ ಮಾಡಿದರು. ಈ ಕಾರ್ಯಕ್ರಮದಲ್ಲಿ ಐಕ್ಯೂಎಸಿ ಸಂಯೋಜಕ ಡಾ. ವಿನಯ ಕುಮಾರ ಉಪಸ್ಥಿತರಿದ್ದರು.

ಸುಯಶ್ ಜಿ. ಮತ್ತು ಆದಿತ್ಯ ಎಚ್. ನಿರೂಪಿಸಿ, ವೈಆರ್‌ಸಿ ಸಂಯೋಜಕಿ ಮಿಸ್ ಪವಿತ್ರಾ ಸಮಾಜೆ ವಂದಿಸಿದರು. ಕಾರ್ಯಕ್ರಮದಲ್ಲಿ ಮಹಾ ವಿದ್ಯಾಲಯದ ಉಪನ್ಯಾಸಕರು, ಸಿಬ್ಬಂದಿ ವಿದ್ಯಾರ್ಥಿಗಳು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಅಕ್ಕಮಹಾದೇವಿ ವಚನಗಳು ದಾರಿದೀಪ

ಗೋಕಾಕ: ಶರಣೆ ಅಕ್ಕಮಹಾದೇವಿಯವರ ವಚನಗಳು ಮಹಿಳೆಯರಿಗೆ ದಾರಿದೀಪವಾಗಿದ್ದು ಅವುಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಆಚರಣೆಗೆ ತರುವಂತೆ ಅಮೃತ್ತಮ್ಮ ಮುನವಳ್ಳಿಯವರು ಹೇಳಿದರು.

ಮಂಗಳವಾರದಂದು ಸಂಜೆ ಕರ್ನಾಟಕ ರಾಜ್ಯ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘ ಮಹಿಳಾ ಘಟಕ ಗೋಕಾಕ ಇವರು ಆಯೋಜಿಸಿದ್ದ ಶಿವಶರಣೆ ಅಕ್ಕ ಮಹಾದೇವಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ತಮ್ಮ ವಚನಗಳ ಮೂಲಕ ಧರ್ಮ ಜಾಗರತಿ ಮೂಡಿಸಿ ಸ್ತ್ರೀ ಸ್ವಾತಂತ್ರಕ್ಕೆ ಬೂನಾದಿ ಹಾಕಿದ ಪ್ರಥಮ ಶರಣೆಯಾಗಿದ್ದಾರೆ ಎಂದರು. ಉಪನ್ಯಾಸಕರಾಗಿ ಆಗಮಿಸಿದ್ದ ಜ್ಞಾನ ಮಂದಿರದ ಧರ್ಮದರ್ಶಿ ಸುವರ್ಣಾತಾಯಿ ಹೊಸಮಠ ಮಾತನಾಡಿ, ಮಹಿಳೆಯರಲ್ಲಿ ಅಗಾದ ಶಕ್ತಿ ಇದ್ದು ಕುಟುಂಬ ನಿರ್ವಹಣೆಯಲ್ಲಿ ಅಪರ ಪಾತ್ರ ಮಹತ್ವದ್ದಾಗಿದೆ. ತಾಯಂದಿರು ತಮ್ಮ ಮಕ್ಕಳಿಗೂ ಉತ್ತಮ ಸಂಸ್ಕಾರ ನೀಡಿ. ಇಂದು ಮಹಿಳೆ ಎಲ್ಲ ಕ್ಷೇತ್ರಗಳಲ್ಲಿಯೂ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿದ್ದು ಇದಕ್ಕೆ ಶರಣೆ ಅಕ್ಕಮಹಾದೇವಿಯವರೇ ಪ್ರೇರಣೆಯಾಗಿದ್ದಾರೆಂದರು. ವೇದಿಕೆಯ ಮೇಲೆ ಬೆಂಗಳೂರಿನ ಬಸವ ಧರ್ಮ ಪೀಠದ ವಿಜಯಾಂಬಿಕಾ ಮಾತಾಜಿ, ಮಹಿಳಾ ಘಟಕದ ಅಧ್ಯಕ್ಷೆ ಮಹಾದೇವಿ ಉಪ್ಪಿನ, ಕಾರ್ಯದರ್ಶಿ ಹರ್ಷಿತಾ ಸವಣೂರ, ಉಪಾಧ್ಯಕ್ಷೆ ದೀಪಾ ಬೆಲ್ಲದ ಇದ್ದರು.



ಸಾಹುಕಾರನ ಸಂಪತ್ತು, ಬಡವನ ತಾಕತ್ತು ನಾಟಕ ಪ್ರದರ್ಶನ

ಅಡಹಳ್ಳಿ : ಜಾತ್ರೆ, ಹಬ್ಬಗಳಲ್ಲಿ ಗ್ರಾಮೀಣ ಪ್ರದೇಶದ ಯುವಕರು ನಾಟಕ ಪ್ರದರ್ಶಿಸುವ ಮೂಲಕ ನಮ್ಮ ದೇಶಿಯ ಸಂಸ್ಕೃತಿಯನ್ನು ಉಳಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ಪಿಕೆಪಿಎಸ್ ಅಧ್ಯಕ್ಷ ಮಹಾದೇವ ಹಿಪ್ಪರಗಿ ಹೇಳಿದರು.

ಅವರು ಗ್ರಾಮದ ಶ್ರೀ ಚಂದ್ರವ್ವತಾಯಿ ಜಾತ್ರಾ ನಿಮಿತ್ಯ ಶ್ರೀ ಚಂದ್ರವ್ವತಾಯಿ ನಾಟ್ಯ ಸಂಘದ ಯುವಕರು ಹಮ್ಮಿಕೊಂಡ ಸಾಹುಕಾರನ ಸಂಪತ್ತು, ಬಡವನ ತಾಕತ್ತು ಎಂಬ ಸಾಮಾಜಿಕ ನಾಟಕ ಉದ್ಘಾಟಿಸಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮೊಬೈಲ್ ಎಂಬ ಮಾಯಾಜಾಲದಲ್ಲಿ ಯುವಕರು ಸಿಲುಕಿ ಜೀವನವನ್ನು ಹಾಳುಮಾಡಿಕೊಳ್ಳುತ್ತಿದ್ದು, ನಾಟಕ, ಕಥೆ, ಕಾದಂಬರಿಗಳನ್ನು ಓದುದನ್ನೇ ಮರೆತ್ತಿದ್ದಾರೆ. ಕಳೆದ ಹದಿನೈದು ವರ್ಷಗಳಿಂದ ಗ್ರಾಮದ ಯುವಕರು



ಜಾತ್ರಾ ನಿಮಿತ್ತಯವಾಗಿ ನಾಟಕವನ್ನು ಮಾಡುತ್ತಿರುವುದು ಸಂತೋಷವನ್ನುಂಟು ಮಾಡಿದೆ ಎಂದರು.

ಈ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ಈರಗೌಡ ಪಾಟೀಲ, ಮಹಾದೇವ ಸೂರ್ಯವಂಶಿ, ಸಂಗಪ್ಪ ಬಾಡಗಿ, ಅಪ್ಪಾಸಾಬ ಶೇಗಾಂವಿ, ಕಲ್ಮೇಶ ಪೂಜಾರಿ, ವಿಜಯ ಕೋಹಳ್ಳಿ, ಶ್ರೀಮಂತ ಖೋಬ್ರಿ, ಬಂದು ಮುಲ್ಲಾ, ಹಣಮಂತ ಕಡೆನ್ನವರ, ಸದಾಶಿವ ಚಂಡಕಿ, ಸಂಗನಗೌಡ ಪಾಟೀಲ, ಮುರಗೇಶ ಹಿರೇಮಠ, ಪ್ರಶಾಂತ ಮಾಳಿ, ಘೂಳಪ್ಪ ಕೋಳಿ, ಮಹೇಶ ಹಾದಿಮನಿ, ರಾಜು ಮಾಳಿ, ನಾರಾಯಣ ಪೂಜಾರಿ, ಸುರೇಶ ಸಂಕೋನಟ್ಟಿ, ಶೇಖರ ಕೋಳಿ ಸೇರಿದಂತೆ ಅನೇಕರು ಇದ್ದರು. ಬಸವರಾಜ ಪತ್ತಾರ ನಿರೂಪಿಸಿದರು. ಕಿರಣ ಕೆಂಚಣ್ಣವರ ಸ್ವಾಗತಿಸಿ, ವಂದಿಸಿದರು.

ಕಿರುಸುದ್ದಿ

ಅರಿವು ಜಾಥಾ ಇಂದು

ಬೆಳಗಾವಿ : ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಳಗಾವಿರವರ ನಿರ್ದೇಶನದಂತೆ ನಗರದಲ್ಲಿ ಮಹಾನಗರ ಪಾಲಿಕೆ ವತಿಯಿಂದ ಏ.2 ರಂದು ಬೆಳಿಗ್ಗೆ 9.30 ಗಂಟೆಗೆ ವಿಶ್ವ ಜಲದಿನ ಮತ್ತು ಪ್ಲಾಸ್ಟಿಕ್ ಮುಕ್ತ ದಿನದ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಜಾಥಾವನ್ನು ಹಾಗೂ ಕ್ಲಾಥ ಬ್ಯಾಗ್ ವೆಂಡಿಂಗ್ ಯಂತ್ರದ ಉದ್ಘಾಟನಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ನಗರದ ನರಗುಂದಕರ ಭಾವೆ ಚೌಕದಿಂದ ಬೋಗಾರವೇಸ್ ವೃತ್ತದ ವರೆಗೆ ಪಾಲಿಕೆಯ ಮಹಾಪೌರರು, ಉಪ ಮಹಾಪೌರರು, ಎಲ್ಲಾ ನಗರ ಸೇವಕರುಗಳು, ಪಾಲಿಕೆಯ ಅಧಿಕಾರಿ, ಸಿಬ್ಬಂದಿಗಳು, ನಗರದ ಎನ್.ಜಿ.ಓ. ಸದಸ್ಯರುಗಳು ಹಾಗೂ ಪಾಲಿಕೆಯ ಕಮ್ಯೂನಿಟಿ ಮೊಬಲೈಸರ್ಗಳೊಂದಿಗೆ ಜಾಥಾ ಕಾರ್ಯಕ್ರಮ ಜರುಗಲಿದೆ ಎಂದು ಮಹಾನಗರ ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮನೆ ಕರ ವಸೂಲಾತಿಯಲ್ಲಿ ಕಾಗವಾಡ ತಾಪಂ ಜಿಲ್ಲೆಗೆ ಪ್ರಥಮ ಸ್ಥಾನ

ಕಾಗವಾಡ: ಗ್ರಾಮ ಪಂಚಾಯಿತಿಗಳ ಮೂಲಕ ಮನೆ ಕರ ವಸೂಲಾತಿಯಲ್ಲಿ ಕಾಗವಾಡ ತಾಲೂಕು ಪಂಚಾಯಿತಿ ಶೇ.121 ರಷ್ಟು ಸಾಧನೆ ಮಾಡಿ, ಬೆಳಗಾವಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದೆ. ಜಿಲ್ಲೆಯಲ್ಲಿ ಒಟ್ಟು 15 ತಾ.ಪಂ. ಗಳಿದ್ದು, ಈ ಪೈಕಿ ಕಾಗವಾಡ ತಾ.ಪಂ. ವ್ಯಾಪ್ತಿಯಲ್ಲಿ 8 ಗ್ರಾಮ ಪಂಚಾಯತಗಳಿವೆ. ಇವುಗಳಲ್ಲಿ 7 ಗ್ರಾಮ ಪಂಚಾಯತಗಳು ಶೇ.100 ಸಾಧನೆ ಮಾಡಿವೆ. ಈ ಗ್ರಾ.ಪಂ.ಗಳ ವಾರ್ಷಿಕ ಗುರಿ 1.44 ಕೋಟಿ ರೂ. ಇದ್ದು, 1.75 ಕೋಟಿ ರೂ. ಮನೆಕರ ವಸೂಲಿಯಾಗಿದೆ ಎಂದು ತಾ.ಪಂ. ಇಒ ವೀರಣ್ಣ ವಾಲಿ ತಿಳಿಸಿದ್ದಾರೆ.

ಸೋಮನಗೌಡಗೆ ಪಿಎಚ್‌ಡಿ

ಬೆಳಗಾವಿ: ಆರ್.ಸಿ.ಯು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಬೋಧಕ ಸಹಾಯಕ ಸೋಮನಗೌಡ ಶಂಕರಗೌಡ ಪಾಟೀಲ ಅವರಿಗೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಪಿಎಚ್‌ಡಿ ಪದವಿ ನೀಡಿದೆ.



ಸೋಮನಗೌಡ ಪಾಟೀಲ ಅವರು ''ರೀಡಿಂಗ್ ಹ್ಯಾಬಿಟ್ಸ್ ಆಫ್ ದಿ ಸ್ಟುಡೆಂಟ್ಸ್ ಆಫ್ ಪ್ರೀ-ಯುನಿವರ್ಸಿಟಿ ಕಾಲೇಜಸ್ ಆಫ್ ಬೆಳಗಾವಿ ಡಿಸ್ಟಿಕ್ಟ್: ಎ ಸ್ಟಡಿ'' ವಿಷಯದ ಕುರಿತಾದ ಸಂಶೋಧನಾ ಮಹಾಪ್ರಬಂಧವನ್ನು ಇತ್ತೀಚೆಗೆ ಆರ್.ಸಿ.ಯುಗೆ ಸಲ್ಲಿಸಿದ್ದರು. ಇವರು ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲೂಕಿನ ಬಸಾಪುರ ಗ್ರಾಮದ ನಿವಾಸಿ ಆಗಿರುತ್ತಾರೆ.

ಇವರಿಗೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ರಮೇಶ್ ಬಿ. ಕುರಿ ಮಾರ್ಗದರ್ಶನ ನೀಡಿದ್ದಾರೆ.

ಕಿರಣಗೆ ಪಿಎಚ್‌ಡಿ

ಬೆಳಗಾವಿ: ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಕಿರಣ ರಾಣವಗೋಳ ಎಸ್ ಅವರಿಗೆ ಪಿಎಚ್.ಡಿ ಪದವಿ ನೀಡಿದೆ. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಸಹ-ಪ್ರಾಧ್ಯಾಪಕರಾದ ಡಾ. ಕಿರಣ ಪಿ. ಸವಣೂರ ಅವರ ಮಾರ್ಗದರ್ಶನದಲ್ಲಿ, ಕಿರಣ ರಾವಳಗೋಳ ಎಸ್ ಅವರು ಇತ್ತೀಚೆಗೆ ಇನ್ಫಾರ್ಮೇಷನ್ ಗ್ಯಾದರಿಂಗ್ ಸ್ಕಿಲ್ಸ್ ಅಮಾಂಗ ಟ್ರೆಡಿಷನಲ್ ಮೆಡಿಸಿನ್ ಪ್ರಾಕ್ಟಿಶನರಸ್ ಇನ್ ವಿಜಯಪುರ ಡಿಸ್ಟಿಕ್ಟ್, ಕರ್ನಾಟಕ: ಆ್ಯನ್ ಎಕ್ಸ್‌ಪ್ಲೋರೇಟರಿ ಸ್ಟಡಿ ಎಂಬ ವಿಷಯದ ಕುರಿತಾಗಿ ಸಂಶೋಧನಾ ಮಹಾಪ್ರಬಂಧ ಆರ್.ಸಿ.ಯುಗೆ ಸಲ್ಲಿಸಿದ್ದರು. ಕಿರಣ ಅವರು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಡೋಣವಾಡ ಗ್ರಾಮದ ನಿವಾಸಿಯಾಗಿರುತ್ತಾರೆ.



ಲಕ್ಷ್ಮೀಗೆ ಪಿಎಚ್‌ಡಿ ಪದವಿ

ಬೆಳಗಾವಿ: ಲಕ್ಷ್ಮೀ ಯಲ್ಲಪ್ಪ ಕಾಂಬಳೆ ಅವರಿಗೆ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯವು ಪಿಎಚ್.ಡಿ ಪದವಿ ಪ್ರದಾನಿಸಿದೆ. ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ ಸಂಶೋಧನಾ ವಿದ್ಯಾರ್ಥಿನಿಯಾಗಿದ್ದ ಲಕ್ಷ್ಮೀ ಕಾಂಬಳೆ ಅವರು ''ಪರ್ಸೆಪ್ಷನ್ ಅಬೌಟ್ ಆಂಡ್ ಯುಜ್ ಆಫ್ ಸೋಷಿಯಲ್ ನೆಟ್ವರ್ಕಿಂಗ್ ಸೈಟ್ಸ್ ಬೈ ದಿ ಲೈಬ್ರರಿ ಯುಜರ್ಸ್ ಆಫ್ ಅಗ್ರಿಕಲ್ಚರಲ್ ಯುನಿವರ್ಸಿಟೀಸ್ ಇನ್ ಕರ್ನಾಟಕ: ಅ ಸ್ಟಡಿ'' ಎಂಬ ಮಹಾಪ್ರಬಂಧವನ್ನು ಇತ್ತೀಚೆಗೆ ಆರ್.ಸಿ.ಯುಗೆ ಸಲ್ಲಿಸಿದ್ದರು.



ಇವರು ಬೆಳಗಾವಿ ನಗರ ನಿವಾಸಿ ಆಗಿರುತ್ತಾರೆ. ಇವರಿಗೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ವಿನಾಯಕ ಎಂ. ಬಂಕಾಪುರ ಅವರು ಸಂಶೋಧನಾ ಮಾರ್ಗದರ್ಶನ ನೀಡಿರುತ್ತಾರೆ.



ತೆಲಸಂಗ: ಗ್ರಾಮದ ಆರಾಧ್ಯ ದೈವ ವೆಂಕಟರಮಣ ದೇವಸ್ಥಾನಗಳಲ್ಲಿ ಏಕಾದಶಿ ನಿಮಿತ್ತ ಭಾನುವಾರ ಅತ್ಯಂತ ಸಡಗರ-ಸಂಭ್ರಮದಿಂದ ಪಲ್ಲಕ್ಕಿ ಸೇವೆ ಮತ್ತು ಗ್ರಾಮ ಪ್ರದಕ್ಷಿಣೆ ಕಾರ್ಯಕ್ರಮ ಜರುಗಿತು. ಪಲ್ಲಕ್ಕಿ ಉತ್ಸವದ ನಂತರ ದೇವಸ್ಥಾನದ ಆವರಣದಲ್ಲಿ ಭಕ್ತರಿಗೆ ಮಹಾಪ್ರಸಾದ ವಿನಿಯೋಗಿಸಲಾಯಿತು. ಗ್ರಾಮದ ಹಿರಿಯರು ಹಾಗೂ ಯುವಕರು ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದರು.

ಕಾನೂನು ಅರಿವು ಅಗತ್ಯ: ಸಂದೀಪ ಪಾಟೀಲ

ಬೆಳಗಾವಿ: ಜನರಲ್ಲಿ ಕಾನೂನಿನ ಬಗ್ಗೆ ಅರಿವು ಮೂಡಿಸುವುದು ತುಂಬಾ ಮುಖ್ಯವಾಗಿದೆ. ಜನರಿಗೆ ಕಾನೂನಿನ ಬಗ್ಗೆ ತಿಳಿವಳಿಕೆ ಇಲ್ಲದೆ ಕಾನೂನು ಸರಿಯಾಗಿಲ್ಲ ಎಂದು ಹಲವರು ತಿಳಿದಿದ್ದಾರೆ. ಅದನ್ನು ಹೋಗಲಾಡಿಸಲು ಅನೇಕ ಉಚಿತ ಕಾನೂನು ಕಾರ್ಯಕ್ರಮಗಳು ಹಳ್ಳಿ-ಹಳ್ಳಿಗಳಲ್ಲಿ ನಡೆಸಲಾಗುತ್ತಿದೆ ಎಂದು ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಂದೀಪ ಪಾಟೀಲ ಹೇಳಿದರು.

ರಾಜಾ ಲಖಮಗೌಡ ಕಾನೂನು ಮಹಾವಿದ್ಯಾಲಯ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಭಾನುವಾರ ಪಂತ ಬಾಳೇಕುಂದ್ರಿ ಗ್ರಾಮದಲ್ಲಿ ನಡೆದ ಉಚಿತ ಕಾನೂನು ನೆರವು ಕಾರ್ಯಕ್ರಮದಲ್ಲಿ ಮಾತನಾಡಿ, ಜನರಿಗೆ ಕಾನೂನು ಅರಿವು ಬಗ್ಗೆ, ಉಚಿತ ಕಾನೂನು ಸಲಹೆ, ಮಹಿಳಾ ಕಾನೂನುಗಳ ಕುರಿತು, ಮಕ್ಕಳ ಮೇಲೆ ಆಗುತ್ತಿರುವ ದೌರ್ಜನ್ಯಗಳ ಬಗ್ಗೆ ಜನರಲ್ಲಿ ತಿಳಿವಳಿಕೆ ಮೂಡಿಸಿದರು. ಮಾರಿಹಾಳ ಪೊಲೀಸ್ ಠಾಣೆಯ ಸಿಪಿಐ ಐ.ಆರ್. ಪಟ್ಟಣಶೆಟ್ಟಿ ಅವರು ಜನರಿಗೆ ಕಾನೂನು ನಿಯಮಗಳ ಪಾಲನೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸಿದರು. ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದ ಸಂಯೋಜಕರಾದ, ರಾಜಾ ಲಖಮಗೌಡ ಕಾನೂನು ಮಹಾ ವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಚೇತನಕುಮಾರ ಟಿ.ಎಂ, ಜನರಿಗೆ ಅನೇಕ ನೈಜ ಘಟನೆಗಳ ಬಗ್ಗೆ ಮನಃ ಮುಟ್ಟುವಂತೆ ವಿವರಿಸಿದರು. ಗ್ರಾಪಂ ಅಧ್ಯಕ್ಷೆ ಗುಲಾಬಿ ಕೋಲಕಾರ, ಸಹಾಯಕ ಪ್ರಾಧ್ಯಾಪಕ ಪ್ರೀತಮ್ ರೇವಣಕರ್ ಉಪಸ್ಥಿತರಿದ್ದರು. 3 ನೇ ವರ್ಷದ ವಿದ್ಯಾರ್ಥಿ ಸಂಜನಾ ಇಟಗಿ ನಿರೂಪಿಸಿದರು. ನ್ಯಾಮಗೌಡ ವಂದಿಸಿದರು. ಸಚಿನ ಕೋಟಗಿ ವಂದಿಸಿದರು. ಜಯಶ್ರೀ ಕಾಂಬಳೆ ಕಾರ್ಯಕ್ರಮಕ್ಕೆ ಸಹಕರಿಸಿದರು.



ಬೆಳಗಾವಿ : ರಾಜಾ ಲಖಮಗೌಡ ಕಾನೂನು ಮಹಾವಿದ್ಯಾಲಯ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಭಾನುವಾರ ಪಂತ ಬಾಳೇಕುಂದ್ರಿ ಗ್ರಾಮದಲ್ಲಿ ಉಚಿತ ಕಾನೂನು ನೆರವು ಕಾರ್ಯಕ್ರಮ ನಡೆಯಿತು. ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಂದೀಪ ಪಾಟೀಲ ಸೇರಿದಂತೆ ಇತರರಿದ್ದರು.

ಸಮಾಜದಲ್ಲಿ ಮಹಿಳೆ ಪಾತ್ರ ಅಪಾರ: ಡಾ. ರಮೇಶ

ಯರಗಟ್ಟಿ : ಇಂದು ಎಲ್ಲ ಕ್ಷೇತ್ರದಲ್ಲಿ ಮಹಿಳೆಯರು ಸಾಧನೆ ಮಾಡಿದ್ದು, ಸಮಾಜದಲ್ಲಿ ಮಹಿಳೆಯರ ಪಾತ್ರ ಅಪಾರವಾಗಿದೆ ಎಂದು ಗೋಕಾದ ಎಲಬು ಕೀಲು ತಜ್ಞ ಡಾ. ರಮೇಶ ಪಟಗುಂದಿ ಹೇಳಿದರು.



ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ತು ಯರಗಟ್ಟಿ ಘಟಕದಿಂದ ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮನೆಗೆ ಸೀಮಿತವಾಗಿದ್ದ ಮಹಿಳೆ ಇದೀಗ ರಾಜಕೀಯ, ಸಾಮಾಜಿಕ, ಉದ್ಯೋಗ ಕ್ಷೇತ್ರದಲ್ಲಿ, ಎಲ್ಲಡೆ ಛಾಪು ಮೂಡಿಸುತ್ತಿದ್ದಾಳೆ. ಅಲ್ಲದೇನಗೆ ಸಿಕ್ಕಿರಿವ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಸುವ ಕಾರಣ ಎಲ್ಲಡೇ ಅವಳ ಅವಶ್ಯಕತೆ ಇದೆ ಎಂದರು.

ಉಪನ್ಯಾಸಕಿ ಡಾ. ಗೀತಾ ಪಟಗುಂದಿ ಮಾತನಾಡಿ, ಮಹಿಳೆಯರ ರಕ್ಷಣಗೆ ಹಲವು ಕಾನೂನುಗಳು ಇದ್ದು, ಇಂತ ಕಾನೂನುಗಳ ಕುರಿತು ಹೆಚ್ಚು ಅರಿತುಕೊಳ್ಳಬೇಕು. ಮತ್ತು ಮಹಿಳೆ ಒತ್ತಡ ಕೆಲಸದಲ್ಲಿ ತೊಡಗಿಕೊಂಡು ತನ್ನ ಆರೋಗ್ಯದ ಕಡೆ ಗಮನ ಕೊಡದೆ ಕೆಲವು ಕಾಯಲೆಗಳಿಂದ ಬಳಲುತ್ತಾರೆ. ಮಾನಸಿಕ, ದೈಹಿಕವಾಗಿ ಕುಗ್ಗುತ್ತಾರೆ. ಅಂತವರು ಮಹಿಳಾ ವೈದ್ಯರಿಂದ ಸಲಹೆ ಪಡೆಯಬೇಕು. ನಮ್ಮ ಆಸ್ಪತ್ರಯಲ್ಲಿ ಮಹಿಳೆಯರಿಗೆ ಆರೋಗ್ಯ ಪ್ಯಾಕೇಜ್ ಮಾಡಿದ್ದು ಅದರ ಸದುಪಯೋಗ ಪಡೆಯಬೇಕು. ಹಾಗೂ ಕೆಲವೊಂದು ಉಚಿತ ಚಿಕಿತ್ಸೆ ನೀಡಲಾಗುವುದು ಎಂದರು.

ಬ್ರಹ್ಮಕುಮಾರಿ ಅಕ್ಕನವರು ಸಾನಿಧ್ಯ ವಹಿಸಿ ಮಾತನಾಡಿದರು. ಕಸಾಪ ಅಧ್ಯಕ್ಷ ತಮ್ಮಣ್ಣ ಕಾಮಣ್ಣವರ, ಉಮಾದೇವಿ ಪೂರ್ವಿಮಠ, ಶಿಲ್ಪಾ ಹಾದಿಮನಿ, ಪದ್ಮಾ ಹಾದಿಮನಿ, ಸೃಷ್ಟಿ ಪಟ್ಟಣಶೆಟ್ಟಿ, ನಿಶಾ ನಾಯ್ಕ, ಆಶಾ ಪರೀಟ್, ಶ್ರೀದೇವಿ ಮದ್ದಾಣಿ, ರೇಖಾ ದೇವರಡ್ಡಿ, ವೆಂಕುಬಾಯಿ ಅಂಬಲಝುರಿ, ಮಯತ್ರಾ ಹೊಂಗಲ, ರಾಜಶೇಖರ ಬಿರಾದರ, ಆರ್.ಎಲ್. ಜೂಗನವರ, ಎನ್.ಬಿ. ಹುಚರಡ್ಡಿ, ಪಟ್ಟಣದ ವಿವಿಧ ಮಹಿಳಾ ಸಂಘಟನೆಗಳ ಸದಸ್ಯರು ಪಾಲ್ಗೊಂಡಿದ್ದರು.

ಅಕ್ರಮ ಗಣಿಗಾರಿಕೆ ತಡೆಗೆ ಮನವಿ

ಬೆಳಗಾವಿ: ಖಾನಾಪುರ, ಬೆಳಗಾವಿ ಭಾಗದಲ್ಲಿ ಅಕ್ರಮ ಗಣಿಗಾರಿಕೆ ತಡೆಯುವಂತೆ ಆಗ್ರಹಿಸಿ ರಾಜಕುಮಾರ ಟೋಪಣ್ಣವರ ಹಾಗೂ ಸುಜೀತ್ ಮುಳಗುಂದ್ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಬಾಕ್ಸೈಟ್, ಲೇಟರೈಟ್ ಮತ್ತು ಸಿಲಿಕಾ ಖನಿಜಗಳನ್ನು ವ್ಯಾಪಕವಾಗಿ ಅಕ್ರಮವಾಗಿ ತೆಗೆಯಲಾಗುತ್ತಿದೆ. ಬೆಳಗುಂಡಿ, ಬಕನೂರು, ಬೀಜಗರ್ಣಿ, ಗೋಳ್ಯಾಳಿ, ಅಮಟೆ, ಬೆಟಗೇರಿ, ಕಿಣಯೆ, ಇನಾಮ ಬಡಸ್ ಹಾಗೂ ಖಾನಾಪುರ ತಾಲೂಕಿನ ತೋರಳಿ ಗ್ರಾಮಗಳಲ್ಲಿ ಈ ಅಕ್ರಮ ಚಟುವಟಿಕೆಗಳು ನಡೆಯುತ್ತಿವೆ. ಅಲ್ಲದೇ ರೈತರ ಅನುಮತಿ ಇಲ್ಲದೆ ಅವರ ಕೃಷಿಭೂಮಿಗಳಲ್ಲೇ ಗಣಿಗಾರಿಕೆ ನಡೆಸಲಾಗುತ್ತಿದ್ದು, ಇದರಿಂದ ಭೂಮಿ ಹಾನಿಗೊಳಗಾಗುತ್ತಿದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಮಹಾರಾಷ್ಟ್ರದ ಸಮೀಪದ ಪ್ರದೇಶಗಳಿಗೆ ನೀಡಲಾದ ಗಣಿಗಾರಿಕೆ ಪಾಸ್ಗಳನ್ನು ದುರುಪಯೋಗ ಪಡಿಸಿಕೊಂಡು ಕರ್ನಾಟಕದ ಈ ಭಾಗದಲ್ಲಿ ಖನಿಜಗಳನ್ನು ತೆಗೆಯಲಾಗುತ್ತಿದೆ. ಖನಿಜಗಳನ್ನು ಡಾಲ್ಮಿಯಾ ಸಿಮೆಂಟ್ ಹಾಗೂ ಚೆಟ್ಟಿನಾಡ್ ಸಿಮೆಂಟ್ ಕಂಪನಿಗಳಿಗೆ ಸಾಗಿಸಲಾಗುತ್ತಿದೆ ಎಂಬ ಶಂಕೆ ಇದೆ. ಅಕ್ರಮ ಗಣಿಗಾರಿಕೆ ಹೆಚ್ಚಾಗಿ ರಾತ್ರಿ 2 ಗಂಟೆಯಿಂದ ಬೆಳಿಗ್ಗೆ 6ರವರೆಗೆ ನಡೆಯುತ್ತಿದ್ದು, ಅಧಿಕಾರಿಗಳ ಗಮನ ತಪ್ಪಿಸಲು ಈ ರೀತಿ ಕಾರ್ಯಾಚರಣೆ ನಡೆಯುತ್ತಿದೆ. ಭಾರೀ ಲಾರಿಗಳ ಸಂಚಾರ ಬೆಳಗಾವಿ, ಖಾನಾಪುರ ಭಾಗದ ಪಶ್ಚಿಮ ರಸ್ತೆಗಳ ಮೇಲೆ ಹೆಚ್ಚಿರುವುದು ಸ್ಥಳೀಯರ ಆತಂಕಕ್ಕೆ ಕಾರಣವಾಗಿದೆ ಎಂದು ರಾಜಕುಮಾರ್ ಟೋಪಣ್ಣವರ ಆರೋಪಿಸಿದರು. ಈ ಭಾಗಗಳು ಪರಿಸರದ ದೃಷ್ಟಿಯಿಂದ ಸೂಕ್ಷ್ಮ ಪ್ರದೇಶಗಳಾಗಿದ್ದು, ಅಕ್ರಮ ಗಣಿಗಾರಿಕೆಯಿಂದ ಅರಣ್ಯ ನಾಶ, ಭೂಗರ್ಭ ಜಲಮಟ್ಟ ಕುಸಿತ, ಮಣ್ಣು ಕೊಚ್ಚಿಹೋಗುವಿಕೆ ಸೇರಿದಂತೆ ಗಂಭೀರ ಪರಿಸರ ಹಾನಿ ಉಂಟಾಗುತ್ತಿದೆ. ಈ ಹಿನ್ನೆಲೆ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ದೂರಿನಲ್ಲಿ ತಕ್ಷಣ ತನಿಖೆ ನಡೆಸಿ ಅಕ್ರಮ ಗಣಿಗಾರಿಕೆ ನಿಲ್ಲಿಸುವಂತೆ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸಾಮಾಜಿಕ ಕಾರ್ಯಕರ್ತ ಸುಜೀತ್ ಮುಳಗುಂದ ಜಿಲ್ಲಾಧಿಕಾರಿಗಳಿಗೆ ಒತ್ತಾಯಿಸಿದ್ದಾರೆ.



ಪ್ರಾಮಾಣಿಕ ಪ್ರಯತ್ನ, ಸಹಕಾರದಿಂದ ಸಾಧನೆ: ಸಿದ್ದಪ್ಪ ನಾಗನೂರ



ಹಾರೂಗೇರಿ: ಸ್ಥಳೀಯ ಜಾಗೃತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ 2025-26ನೇ ಸಾಲಿನ ಆರ್ಥಿಕ ಬೆಳವಣಿಗೆಯು ಉತ್ತಮ ಲಾಭದೊಂದಿಗೆ ಪ್ರಗತಿ ಪಥ ದತ್ತ ದಾಪುಗಾಲು ಹಾಕಿದ್ದು, ರೂ. 1,57,41, 190.00 ರಷ್ಟು ನಿವ್ವಳ ಲಾಭ ಹೊಂದಿದೆ ಎಂದು ಸಂಘದ ಉಪಾಧ್ಯಕ್ಷ ಸಿದ್ದಪ್ಪ ನಾಗನೂರ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾಗೃತಿ ಸೌಹಾರ್ದ ಸಹಕಾರಿ ಸಂಘವೂ ಸರ್ವ ಸದಸ್ಯರ ಸಹಕಾರ, ಸಿಬ್ಬಂದಿ ವರ್ಗದವರ ಪ್ರಾಮಾಣಿಕ ಪ್ರಯತ್ನ, ವ್ಯವಸ್ಥಾಪಕರ, ಆಡಳಿತ ಮಂಡಳಿಯ ಸಂಪೂರ್ಣ ಜವಾಬ್ದಾರಿಯು ಸಹಕಾರಿಯ ಸಾಧನೆಗೆ ದಾರಿದೀಪವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಿ.ಎನ್. ಆಲಗೂರ, ಚಂದ್ರಕಾಂತ ಆಸಂಗಿ, ಧರೆಪ್ಪ ಸವದತ್ತಿ, ಶ್ರೀಕಾಂತ ಕರ್ಣವಾಡಿ, ಮಹಾವೀರ ಅಸ್ಕಿ, ಎ.ಡಿ. ಕಡಹಟ್ಟಿ, ಎಲ್ಲ ಸಿಬ್ಬಂದಿ ವರ್ಗದವರು ಹಾಗೂ ಇತರರು ಉಪಸ್ಥಿತರಿದ್ದರು.

ಅಂಬೇಡ್ಕರ್ ಅಲೆಮಾರಿಗಳ ಆತ್ಮಬಲ

ಹಾರೂಗೇರಿ: ಅಲೆಮಾರಿಗಳು ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕವಾಗಿ ಕಡೆಗಣಿಸಲ್ಪಟ್ಟ ನತದೃಷ್ಟ ಸಮುದಾಯ. ಸದ್ಯದ ಸ್ಥಿತಿಯಲ್ಲಿ ಅಂಬೇಡ್ಕರ್ ಚಿಂತನೆಯೊಂದೇ ಅಲೆಮಾರಿಗಳ ಆತ್ಮಬಲವಾಗಿದೆಯೆಂದು ಬಂಡಾಯ ಸಾಹಿತಿ ಡಾ. ಯಲ್ಲಪ್ಪ ಹಿಮ್ಮಡಿ ಹೇಳಿದರು.

ಪಟ್ಟಣದ ಶ್ರೀ ವಾಲ್ಮೀಕಿ ಶಿಕ್ಷಣ ಸಂಸ್ಥೆಯ ದೈಹಿಕ ಶಿಕ್ಷಣ ಮಹಾವಿದ್ಯಾಲಯದಲ್ಲಿ ನಡೆದ ಅಲೆಮಾರಿ ಚೆನ್ನದಾಸರ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಮತ್ತು ಅಂಬೇಡ್ಕರ್ ನಮನ ಕಾರ್ಯಕ್ರಮದ ಸಮಾಲೋಚನಾಸಭೆಯಲ್ಲಿಮಾತನಾಡಿ,ಸುಪ್ರೀಂ ಕೋರ್ಟ್ ತೀರ್ಪಿನಂತೆ ಒಳಮೀಸಲಾತಿಯನ್ನು ಪರಿಶಿಷ್ಟ ಜಾತಿಗಳ ಸಂಖ್ಯಾಬಲದ ಬದಲಿಗೆ ಅವಕಾಶ ವಂಚಿತ ಸಮುದಾಯಗಳ ಆದ್ಯತೆಯ ಆಧಾರದ ಮೇರೆಗೆ ಅವಕಾಶ ನೀಡುವುದಾಗಿದೆ. ಅಲ್ಲದೆ ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ಮೊದಲ ಆದ್ಯತೆಯೆಂಬುದು ಡಾ. ಅಂಬೇಡ್ಕರ್ ಅವರ ಅಚಲ ನಿಲುವಾಗಿತ್ತು. ಆದರೆ ರಾಜ್ಯ ಸರಕಾರ ಪರಿಶಿಷ್ಟ ಜಾತಿಯ ಅಲೆಮಾರಿಗಳನ್ನು ಕಡೆಯ ಗುಂಪಿನಲ್ಲಿ ಸೇರಿಸ ಕಡೆಗಣಿಸಿದೆ. ಆದುದರಿಂದ ಕಾನೂನು ಹೋರಾಟವೊಂದೇ ಅಲೆಮಾರಿಗಳ ಗುರಿಯಾಗಿದೆ. ಆದ್ದರಿಂದ ಶೋಷಿತರು ಒಂದಾಗಬೇಕೇಹೊರತು ವಿಭಜನೆಯಾಗಬಾರದು ಎಂದರು.

ಕಾರ್ಯದರ್ಶಿ ಹನುಮಂತ ಗಾಣಿಗೇರ ಮಾತನಾಡಿ, ಸಾಂಸ್ಕೃತಿಕವಾಗಿ ತಳಸಮುದಾಯಗಳ ವಿದ್ಯಾರ್ಥಿಗಳಲ್ಲಿ ಅಪಾರವಾದ ಕಲೆಗಳಿವೆ. ಶೈಕ್ಷಣಿಕವಾಗಿ ಸಾಧನೆಮಾಡಿದ ಇಂತಹ ಪ್ರತಿಭಾವಂತರನ್ನು ಅಂಬೇಡ್ಕರ್ ಅವರ ಹೆಸರಿನಲ್ಲಿ ಪುರಸ್ಕರಿಸಿದರೆ, ಅವರಿಗೆ ಮತ್ತಷ್ಟು ಬಲ ಬರುತ್ತದೆ ಎಂದರು.

ಮಾರುತಿ ಅಕ್ಕೆನ್ನವರ, ಶಿವಾಜಿ ಮಾಳಗೆನ್ನವರ, ಮಾಹನುಮಂತತುಳಸಿಗೇರಿ,ತಾನಾಜಿಗಾಣಿಗೇರ, ಸತ್ಯಪ್ಪ ಗೋಳಸಂಗಿ, ದುರ್ಗಪ್ಪ ತುಳಸಿಗೇರಿ, ಮಹೇಂದ್ರ ಗಾಣಿಗೇರ ಮಾತನಾಡಿದರು. ಒಕ್ಕೂಟದ ಅಧ್ಯಕ್ಷ ರಾಮು ಗಾಣಿಗೇರ ಅಧ್ಯಕ್ಷತೆ ವಹಿಸಿದ್ದರು. ಸಂಘದ ಉಪಾಧ್ಯಕ್ಷ ನಾಗೇಶ ಕಾಮಶೆಟ್ಟಿ, ಅಲೆಮಾರಿ ಅಭಿವೃದ್ಧಿ ಕೋಶದ ನಾಮ ನಿರ್ದೇಶಿತ ಸದಸ್ಯ ಹನುಮಂತ ಅಕ್ಕೆನ್ನವರ, ಕಾನೂನು ಸಲಹೆಗಾರರಾದ ನ್ಯಾಯವಾದಿ ವಸಂತ ಅಕ್ಕೆನ್ನವರ, ಉದಯ್ ಗಾಣಿಗೇರ ನೇತೃತ್ವದಲ್ಲಿ ವಿವಿಧ ಸಮಿತಿ ರಚಿಸಲಾಯಿತು. ಭೀಮಸೇನ ಹುಲ್ಲೆನ್ನವರ, ಮಯೂರ ಹುಲ್ಲೆನ್ನವರ, ಸವಿತಾ ಗಾಣಿಗೇರ, ತಮ್ಮಾಣಿ ತುಳಸಿಗೇರಿ, ಮಹಾದೇವ ಜಾಗನೂರ, ಮುತ್ತು ಹುಲ್ಲೆನ್ನವರ, ಶಂಕರ ಗಾಣಿಗೇರ, ಚಿಂತಾಮಣಿ ಸಣ್ಣಕ್ಕಿನವರ ಇದ್ದರು. ನೌಕರರ ಒಕ್ಕೂಟದ ಕಾರ್ಯದರ್ಶಿ ಶಾನೂರಕುಮಾರ ಗಾಣಿಗೇರ ಸ್ವಾಗತಿಸಿ, ಉಪಾಧ್ಯಕ್ಷ ಲಕ್ಷ್ಮಣ್ ಅಕ್ಕೆನ್ನವರ ವಂದಿಸಿ, ಹನುಮಂತ ಸಣ್ಣಕ್ಕಿನವರ ನಿರೂಪಿಸಿದರು.



ಮೂಲ ಸೌಲಭ್ಯ ಒದಗಿಸಲು ಆಗ್ರಹ

ಕಬ್ಬೂರ: ಪಟ್ಟಣಕ್ಕೆ ಮೂಲಭೂತ ನಾಗರಿಕ ಸೌಲಭ್ಯಗಳನ್ನು ಒದಗಿಸುವ ಆಗ್ರಹಿಸಿ ಪಪಂ ಮುಖ್ಯಾಧಿಕಾರಿಗಳಿಗೆ ಮಂಗಳವಾರ ಸಾರ್ವಜನಿಕರಿಂದ ಮನವಿ ಸಲ್ಲಿಸಲಾಯಿತು. ಪಟ್ಟಣವು ಚಿಕ್ಕೋಡಿ ತಾಲೂಕಿನಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿದ್ದು, ದುರಾದೃಷ್ಟವೇನಂದರೆ ಯಾವುದೇ ಮೂಲಭೂತ ಸೌಲಭ್ಯಗಳಿಲ್ಲದೆ ಇರುವುದರಿಂದ ನಾಗರಿಕರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಪಟ್ಟಣದ ರಸ್ತೆಗಳ ದುಸ್ಥಿತಿ ಶಾಲಾ ಮಕ್ಕಳಿಗೆ ಹಾಗೂ ವಯೋವೃದ್ಧರಿಗೆ ಸಂಚಾರಕ್ಕೆ ತೊಂದರೆ. ಶುದ್ಧ ಕುಡಿಯುವ ನೀರಿನ ಕೊರತೆ ಸಮರ್ಪಕ ಒಳಚರಂಡಿ ವ್ಯವಸ್ಥೆವಿಲ್ಲದೆ ಸ್ವಚ್ಛತಾ ಸಮಸ್ಯೆ, ಬೀದಿ ದೀಪಗಳ ಕೊರತೆಯಿಂದ ಸುರಕ್ಷತಾ ಸಮಸ್ಯೆ, ಆರೋಗ್ಯ ಹಾಗೂ ಸ್ವಚ್ಛತಾ ಸೌಲಭ್ಯಗಳ ಪ್ರಾಥಮಿಕ ಶಾಲಾ ಕಟ್ಟಡಕ್ಕೆ ಸಾರ್ವಜನಿಕರ ಮೂತ್ರಾಲಯದಿಂದ ಶಾಲಾ ಆವರಣದಲ್ಲಿ ಗಬ್ಬು ವಾಸನೆ ಬರುತ್ತಿದ್ದು ಈ ಸಮಸ್ಯೆಗಳಿಗೆ ಪರಿಹಾರ ಒದಗಿಸಬೇಕು ಎಂದು ಮನವಿಯಲ್ಲಿ ತಿಳಿಸಿದರು.

ಸರಕಾರಿ ಕಾಲೇಜು ಪ್ರಾರಂಭಕ್ಕೆ ಅನುಮತಿಸಬೇಕು. ಪಟ್ಟಣದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ನಡೆದಿಲ್ಲ, ಆಡಳಿತ ಮಂಡಳಿ ಇಲ್ಲದಿರುವುದರಿಂದ ಪಪಂ ಸಿಬ್ಬಂದಿ ಕಾಲಹರಣ ಮಾಡುತ್ತಿದ್ದು, ಏ.15ರಒಳಗಾಗಿ ಯಾವುದೇ ಕ್ರಮ ಕೈಗೊಳ್ಳದಿದ್ದರೇ ಕಣ್ಣೂರ ಪಟ್ಟಣ ನಿಪ್ಪಾಣಿ ಮುಧೋಳ ರಾಜ್ಯ ಹೆದ್ದಾರಿ ಬಂದ್ ಮಾಡಿ ಅರೆ ಬೆತ್ತಲೆ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿ, ಅಗತ್ಯ ಮೂಲ ಭೂತ ಸೌಲಭ್ಯಗಳನ್ನು ಶೀಘ್ರವಾಗಿ ಒದಗಿಸಲು ಕ್ರಮಕೈಗೊಳ್ಳ ಬೇಕೆಂದು ಮನವಿ ಸಲ್ಲಿಸಿದರು.



ಮುಖ್ಯಾಧಿಕಾರಿ ಇಂದು ಶಿಂಗೆ, ಜಯಾನಂದ ಕಪಲಿ, ಪ್ರಕಾಶ ಪಾಟೀಲ, ವಿಠ್ಠಲ ಕುಕನೂರ, ಜಮೀರ ಮಕಾನದಾರ, ಅಬ್ಬಸ ನದಾಪ್, ಮಹಾಂತೇಶ ಪಾಟೀಲ, ಸಿದ್ರಾಮ ಕರಗಾವ, ಶಾಬು ಮುಲ್ಲಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಏ.5ರಂದು ಡಾ. ಬಾಬು ಜಗಜೀವನರಾಮ್ ಜನ್ಮ ದಿನಾಚರಣೆ

ಬೆಳಗಾವಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಬೆಳಗಾವಿ ಸಹಯೋಗದಲ್ಲಿ, ಏ.5 ರಂದು ಬೆಳಿಗ್ಗೆ 11 ಗಂಟೆಗೆ ಸಂಗಮೇಶ್ವರ ನಗರದ ಡಾ. ಬಾಬು ಜಗಜೀವನರಾಮ್ ಉದ್ಯಾನವನದಲ್ಲಿ ಡಾ. ಬಾಬು ಜಗಜೀವನರಾಮ್ ಅವರ 119 ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಜರುಗಲಿದೆ.

ಸಚಿವ ಸತೀಶ ಜಾರಕಿಹೊಳಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಶಾಸಕರಾದ ಆಸೀಫ್ ಸೇಠ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಬೆಳಗಾವಿಯ ಕೆ.ಎಲ್. ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕ ಡಾ. ಸಂಜೀವ ಕೆ. ತಳವಾರ ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಸರ್ಕಾರಿ ಮುಖ್ಯ ಸಚೇತಕ ಅಶೋಕ ಪಟ್ಟಣ, ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ 2 ನವದೆಹಲಿ ಪ್ರಕಾಶ ಹುಕ್ಕೇರಿ, ವಾಯುವ್ಯ ಸಾರಿಗೆ ನಿಗಮ ನಿಯಮಿತ ಅಧ್ಯಕ್ಷ ಭರಮಗೌಡ ಕಾಗೆ ಮತ್ತು ರಾಜ್ಯ ಹಣಕಾಸು ಸಂಸ್ಥೆ ಅಧ್ಯಕ್ಷ ಮಹಾಂತೇಶ ಕೌಜಲಗಿ ಅವರುಗಳು ವಿಶೇಷ ಆಮಂತ್ರಿತರಾಗಿ ಆಗಮಿಸಲಿದ್ದಾರೆ.

ರಾಜ್ಯ ಸಭೆ ಸಂಸದ ಈರಣ್ಣ ಕಡಾಡಿ, ಚಿಕ್ಕೋಡಿ ಲೋಕ ಸಭಾ ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ಜಿಲ್ಲಾ ಲೋಕ ಸಭಾ ಸಂಸದ ಜಗದೀಶ್ ಶೆಟ್ಟರ, ಉತ್ತರ ಕನ್ನಡ ಲೋಕ ಸಭಾ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಗೌರವಾನ್ವಿತ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಜಿಲ್ಲೆಯ ಎಲ್ಲ ಸಂಸದರು, ಶಾಸಕರು, ಪರಿಷತ್ ಸದಸ್ಯರು, ಜನಪ್ರತಿಧಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

ಮೆರವಣಿಗೆ: ಏ.5 ರಂದು ಬೆಳಿಗ್ಗೆ 9.30 ಗಂಟಗೆ ಜಿಲ್ಲಾಧಿಕಾರಿಗಳ ಕಚೇರಿಯಿಂದ ಸಂಗಮೇಶ್ವರ ನಗರದಲ್ಲಿನ ಡಾ. ಬಾಬು ಜಗಜೀವನರಾಮ್ ಉದ್ಯಾನವನದವರಗೆ ಮೆರವಣಿಗೆ ನಡೆಯಲಿದೆ.

ಅದ್ವೈತ್ 2026 ಕೆಎಲ್‌ಎಸ್ ಜಿಐಟಿಯಲ್ಲಿ ಆಯೋಜನೆ

ಬೆಳಗಾವಿ : ಇಲ್ಲಿನ ಕೆಎಲ್‌ಎಸ್ ಗೊಗಟೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಜಿಐಟಿ) ಯ ಎಂ.ಬಿ.ಎ ವಿಭಾಗವು ತನ್ನ ಪ್ರಮುಖ ರಾಷ್ಟ್ರೀಯ ಮಟ್ಟದ ಮ್ಯಾನೇಜ್ಮೆಂಟ್ ಫೆಸ್ಟ್ ಅದ್ವೈತ್ 2026 ಅನ್ನು ಇತ್ತೀಚೆಗೆ ಯಶಸ್ವಿಯಾಗಿ ಆಯೋಜಿಸಿತು.



ದೇಶದ ವಿವಿಧ ಕಾಲೇಜುಗಳಿಂದ ವಿದ್ಯಾರ್ಥಿಗಳು ತಮ್ಮ ನಿರ್ವಹಣಾ ಕೌಶಲ್ಯ, ಸೃಜನಶೀಲತೆ ಮತ್ತು ನಾಯಕತ್ವವನ್ನು ಪ್ರದರ್ಶಿಸಲು ಈ ವೇದಿಕೆಯಲ್ಲಿ ಭಾಗವಹಿಸಿದರು.

ಕಾರ್ಯಕ್ರಮವನ್ನು ಡೀನ್ ಡಾ. ಎಚ್. ಎನ್. ಶಿವಪ್ರಸಾದ್ ಅವರು ಆತ್ಮೀಯ ಸ್ವಾಗತದೊಂದಿಗೆ ಆರಂಭಿಸಿದರು.

ಡಾ. ರೇಖಾ ಬಿರ್ಜೆ ಅವರು ಮುಖ್ಯ ಅತಿಥಿ ಅಮಿತ್ ಸೌಂದಲ್ಗೇಕರ್, ಬಿಸಿನೆಸ್ ಸ್ಟ್ರಾಟಜಿ ಕನ್ಸಲ್ಟೆಂಟ್ ಮತ್ತು ಲೀಡರ್ಶಿಪ್ ಕೋಚ್ ಅವರನ್ನು ಪರಿಚಯಿಸಿದರು.

ಮುಖ್ಯ ಅತಿಥಿ ತಮ್ಮ ಪ್ರೇರಣಾದಾಯಕ ಭಾಷಣದಲ್ಲಿ ಯಶಸ್ಸಿನಲ್ಲಿ ವಿನಯ ಮತ್ತು ವಿಫಲತೆಯಲ್ಲಿ ಗೌರವದ ಮಹತ್ವವನ್ನು ಒತ್ತಿ ಹೇಳಿದರು.

ಅವರು ಶಿಸ್ತು, ಪರಿಶ್ರಮ ಮತ್ತು ನಿರಂತರ ಸ್ವ-ವಿಕಾಸದ ಅಗತ್ಯವನ್ನು ಹೈಲೈಟ್ ಮಾಡಿದರು.

- ರಾಷ್ಟ್ರೀಯ ಮಟ್ಟದ ಮ್ಯಾನೇಜ್ಮೆಂಟ್ ಫೆಸ್ಟ್ ಅದ್ವೈತ್ 2026
- ಶಿಸ್ತು, ಪರಿಶ್ರಮ ಮತ್ತು ನಿರಂತರ ಸ್ವ-ವಿಕಾಸದ ಅಗತ್ಯ ಹೈಲೈಟ್

ಅಧ್ಯಕ್ಷೀಯ ಭಾಷಣದಲ್ಲಿ ರಾಜೇಂದ್ರ ಬೆಳಗಾಂವ್ಕರ್, ಅಧ್ಯಕ್ಷರು, ಕೆಎಲ್‌ಎಸ್ ಜಿಐಟಿ, ಉದ್ಯೋಗ ಮಾರುಕಟ್ಟೆ ಮತ್ತು ಭಾರತೀಯ ಆರ್ಥಿಕತೆಯ ನಿರಂತರ ಬದಲಾವಣೆಗಳನ್ನು ಉಲ್ಲೇಖಿಸಿ, ಹೊಂದಿಕೊಳ್ಳುವ ಶಕ್ತಿ ಮತ್ತು ಪ್ರಾಯೋಗಿಕ ಜ್ಞಾನವೇ ಯಶಸ್ಸಿನ ಪ್ರಮುಖ ಅಂಶ ಎಂದು ಹೇಳಿದರು.

ಪ್ರಾಂಶುಪಾಲರು ಡಾ. ಎಂ. ಎಸ್. ಪಾಟೀಲ ಅವರು ವಿದ್ಯಾರ್ಥಿಗಳಿಗೆ ನೈಜ ಜಗತ್ತಿನ ಅನುಭವದ ಮಹತ್ವವನ್ನು ತಿಳಿಸಿದರು.

ಡಾ. ಎಚ್. ಎನ್. ಶಿವಪ್ರಸಾದ್ ಅವರು ವಿದ್ಯಾರ್ಥಿಗಳಿಂದಲೇ ಸಂಪೂರ್ಣವಾಗಿ ಯೋಜನೆ ಮತ್ತು ನಿರ್ವಹಣೆಗೊಂಡ ಈ ಫೆಸ್ಟ್ ಅವರಲ್ಲಿ ಸಮಯ ನಿರ್ವಹಣೆ, ಹಣಕಾಸು ಯೋಜನೆ, ಬ್ರಾಂಡಿಂಗ್, ಪಬ್ಲಿಸಿಟಿ ಮತ್ತು ಮಾನವ ಸಂಪನ್ಮೂಲ ನಿರ್ವಹಣೆ ಕೌಶಲ್ಯಗಳನ್ನು ಬೆಳೆಸಲು ಸಹಾಯ ಮಾಡುತ್ತದೆ ಎಂದು ಹೇಳಿದರು.

ಆರೋಪಿಗಳ ಬಂಧನ

ಬೆಳಗಾವಿ: ರಾಜ್ಯದ ಎರಡನೇಯ ರಾಜ್ಯಧಾನಿ ಬೆಳಗಾವಿ ದಿನದಿಂದ ದಿನಕ್ಕೆ ಬೆಳೆಯುತ್ತಿದ್ದಂತೆಯೇ ಅಪರಾಧಗಳು ಅಷ್ಟೇ ವೇಗದಲ್ಲಿ ಬೆಳೆಯುತ್ತಿವೆ. ಈ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ, ನಗರದಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡುವದಕ್ಕಾಗಿ ಪೊಲೀಸ್ ಆಯುಕ್ತರ ಮಾರ್ಗದರ್ಶನದಲ್ಲಿ ವಿವಿಧ ಠಾಣಾ ವ್ಯಾಪ್ತಿಗಳಲ್ಲಿ ಬೃಹತ್ ದಾಳಿ ನಡೆಸಲಾಗಿದೆ. ಮಾರಕಾಸ್ತ್ರ ಹೊಂದಿದ್ದವನು, ಜೂಜಾಟದಲ್ಲಿ ನಿರತರಾಗಿದ್ದ ಐವರು, ಮಾದಕ ವ್ಯಸನಿ ಸೇರಿದಂತೆ ಹಲವರನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಲಾಗಿದೆ. ಕ್ಯಾಂಪ್ ಠಾಣೆಯ ಪಿಎಸ್‌ಐ ರುಕ್ಕಿಣಿ ಎ. ನೇತರತ್ವದಲ್ಲಿ ನಡೆದ ಪರಿಶೀಲನೆ ವೇಳೆ ತಲವಾರು ಹೊಂದಿದ್ದ ಅರುಣ ಪರುಶರಾಮ ಗಾಡಿವಡ್ಡರ ಎಂಬಾತನನ್ನು ಬಂಧಿಸಲಾಗಿದೆ. ಹಿರೇಬಾಗೇವಾಡಿ ಪಿಐ ಸುಂದ್ರೇಶ ಕೆ. ಹೊಳನ್ನವರ ತಂಡ ಹಲಗಾ ಗ್ರಾಮದ ಕೆರೆಯ ಬಳಿ ಅಂದರ್-ಬಾಹರ್ ಜೂಜಾಡುತ್ತಿದ್ದ ವಿಶ್ವನಾಥ ರವಿ ಗೋಟಡಕಿ, ರವಿ ಮಹಾವೀರ ದಡ್ಡಿ, ಲಕ್ಷಣ ಯಲ್ಲಪ್ಪ ಮಾಶಾನಕಟ್ಟಿ, ನಾಗಪ್ಪ ಸಿದ್ರಾಯಿ ನಾಯಿಕ ಹಾಗೂ ಕಲ್ಲಪ್ಪ ಶೆಟ್ಟೆಪ್ಪ ಮಾಸ್ತಮರ್ಡಿ ಎಂಬುವವರನ್ನು ಬಂಧಿಸಿ 21,000 ರೂ. ನಗದು ವಶಪಡಿಸಿಕೊಂಡಿದ್ದಾರೆ. ಗಾಂಜಾ ಸೇವನೆಯ ಶಂಕಿತ ಮಲ್ಲಪ್ಪ ಆನಂದ ಗುಳೇಚಿಯನ್ನು ಪಿಎಸ್‌ಐ ಪಿ.ಜಿ. ಗಂಡವಗೋಳ ತಂಡ ವಶಕ್ಕೆ ಪಡೆದಿದೆ. ಇದಲ್ಲದೆ ಸಾರ್ವಜನಿಕ ಸ್ಥಳದಲ್ಲಿ ಮದ್ಯಪಾನ ಮಾಡುತ್ತಿದ್ದ ಗಿರೀಶ ರಮೇಶ ಹಾಲಪೇಟೆ, ಬಸವರಾಜ ದುಂಡಪ್ಪ ಇಟಗಿ ವಿರುದ್ಧ ಮಾರ್ಕೆಟ್ ಠಾಣೆಯ ಪಿಎಸ್‌ಐ ಹುಸೇನಸಾಬ ಕರೂರ ಕ್ರಮ ಕೈಗೊಂಡಿದ್ದಾರೆ. ಬೆಳಗಾವಿ ನಗರದ ವಿವಿಧ ಬಾಗಗಳಲ್ಲಿ ದಾಳಿ ಮಾಡಿ ಸಾರ್ವಜನಿಕರಲ್ಲಿ ಬಯ ಪಡಿಸುತ್ತಿದ್ದ ಆರೋಪಿಗಳನ್ನು ಪೊಲೀಸರು ಬಂಧಿಸಿರುವ ಕಾರ್ಯಕ್ಕೆ ಬೆಳಗಾವಿ ನಗರ ಪೊಲೀಸ್ ಆಯುಕ್ತರು ಬೋಷನ್ ಬೋರಸೆ ಶ್ಲಾಘನಿಯ ವ್ಯಕ್ತಪಡಿಸಿದ್ದಾರೆ.

ನಾಟಕಗಳು ಸಾಮಾನ್ಯರ ಬದುಕಿಗೆ ಸ್ಫೂರ್ತಿ: ನ್ಯಾ. ಸೂರ್ಯಕಾಂತ

ಚನ್ನಮ್ಮ ಕಿತ್ತೂರ: ನಾಟಕಗಳು ಜನಸಾಮಾನ್ಯರ ಸಾಂಸ್ಕೃತಿಕ ಬದುಕಿಗೆ ಸ್ಫೂರ್ತಿ ತುಂಬಿ ಕ್ರಿಯಾಶೀಲತೆ ಬೆಳಸುತ್ತವೆ ಎಂದು ನ್ಯಾಯವಾದಿ ಸೂರ್ಯಕಾಂತ ತಾರಿಹಾಳ ಹೇಳಿದರು.



ಸೋಮವಾರ ಘಸ್ಟೋಳ್ಳಿ ದಡ್ಡಿ ಗ್ರಾಮದಲ್ಲಿ ಹನುಮಂತ ದೇವರ ಜಾತ್ರಾ ಮಹೋತ್ಸವದಲ್ಲಿ ನಡೆದ ಸಂಗ್ಯಾ ಬಾಳ್ಯಾ ನಾಟಕ ಉದ್ಘಾಟಿಸಿ ಮಾತನಾಡಿದರು. ಸಾಮರಸ್ಯ ಬದುಕಿಗೆ ಜಾತ್ರೆಗಳು ಕೂಡ ಮುಖ್ಯವಾಗಿದ್ದು, ಈ ನಿಮಿತ್ಯ ವಿವಿಧ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ಮೂಲಕ ಗ್ರಾಮದ ಜನತೆಯ ಕಾರ್ಯ ಶ್ಲಾಘನೀಯ ಎಂದರು. ಶಿವಾಜಿ ತಿಪ್ಪಣ್ಣವರ ಅಧ್ಯಕ್ಷತೆ ವಹಿಸಿದ್ದು,ಪೋಲಿಸ್ ಸಿಬ್ಬಂದಿ ಪಾಂಡು ತುರಮರಿ, ಅರ್ಜುನ ಪಾಟೀಲ, ಶಂಕರ ಪ್ಯಾಟಿಗೌಡ್ರ, ರುದ್ರಪ್ಪ ಬೆಂಡಿಗೇರಿ, ಶಬ್ಬೀರ ಹರೇಕರ, ಅಬ್ದುಲ್ ತಿಗಡಿ, ಮಾರುತಿ ಹಿರೇಕರ, ವಿಠ್ಠಲ ಸಾಗರೇಕರ ಇದ್ದರು. ಪ್ರಕಾಶ ಹಿರೇಕರ ಸ್ವಾಗತಿಸಿ,ಶಿವಾಜಿ ಸಾಗರೇಕರ ನಿರೂಪಿಸಿದರು.

ಏ.5 ರಂದು ಡಾ. ಬಾಬುಜಗಜೀವನ್ ಜಯಂತಿ ಉತ್ಸವ

ರಾಯಬಾಗ: ತಾಪಂ, ಪಪಂ ಹಾಗೂ ಸಮಾಜ ಕಲ್ಯಾಣ ಇಲಾಖೆ ರಾಯಬಾಗ ಸಹಯೋಗದಲ್ಲಿ ಏ.5ರಂದು ಬೆಳಗ್ಗೆ 11ಕ್ಕೆ ಪಟ್ಟಣದ ಡಾ. ಬಾಬುಜಗಜೀವನ್ ರಾಮ್ ಭವನದಲ್ಲಿ ಡಾ. ಬಾಬುಜಗಜೀವನ ರಾಮ್ ರವರ 119ನೇ ಜಯಂತಿ ಉತ್ಸವವನ್ನು ಸಂಭ್ರಮದಿಂದ ಆಚರಿಸಲಾಗುವುದು. ರಾಯಬಾಗ ಶಾಸಕ ದುರ್ಯೋಧನ ಐಹೊಳೆ ಸಭೆಯ ಅಧ್ಯಕ್ಷತೆ ವಹಿಸುವರು. ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ಕಾರ್ಯಕ್ರಮ ಉದ್ಘಾಟಿಸುವರು. ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಮುಖ್ಯ ಅತಿಥಿಗಳಾಗಿ ಆಗಮಿಸುವರು. ರಾಯಬಾಗ ಪಟ್ಟಣದ ಸಮಾಜ ಸೇವಕರು ಕಾಡೇಶ ಐಹೊಳೆ ಅತಿಥಿ ಉಪನ್ಯಾಸ ನೀಡುವರು. ಈ ವೇಳೆ ತಹಶೀಲ್ದಾರ್ ಮಹಾದೇವ ಸನಮುರಿ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸುಭಾಷ ಭಜಂತ್ರಿ, ರಾಯಬಾಗ ಸಿಪಿಐ ಎಂ.ಎಂ. ಡಪ್ಪಿನ, ರಾಯಬಾಗ ಪಪಂ ಮುಖ್ಯಾಧಿಕಾರಿ ಎಸ್.ಆರ್. ಮಾಂಗ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ವ್ಹಿ.ಎಸ್. ಚಂದರಗಿ, ತಾಲೂಕಿನ ಪುರಸಭೆ/ ಪಪಂ ಎಲ್ಲಾ ಚುನಾಯಿತ ಸದಸ್ಯರು, ತಾಲೂಕು ಮಟ್ಟದ ಎಲ್ಲ ಇಲಾಖೆ ಅಧಿಕಾರಿಗಳು, ಸಿಬ್ಬಂದಿ, ತಾಲೂಕಿನ ವಿವಿಧ ಸಂಘಟನೆಯ ಮುಖಂಡರು, ಪದಾಧಿಕಾರಿಗಳು ಹಾಜರಾಗಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ವ್ಹಿ.ಎಸ್.ಚಂದರಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಬೆಳಗ್ಗೆ 9ಕ್ಕೆ ಶ್ರೀಮಾತಂಗಿದೇವಿಗೆ ಮತ್ತು ಡಾ. ಬಾಬುಜಗಜೀವನ್ ರಾಮ್ ರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ನಂತರ ಮಾತಂಗಿ ದೇವಸ್ಥಾನದಿಂದ ಡಾ.ಬಾಬುಜಗಜೀವನ್ ರಾಮ್ ಭವನದವರಿಗೆ ಭಾವಚಿತ್ರದ ಭವ್ಯ ಮೆರವಣಿಗೆಯು ಸಾಗುವುದು. ನಂತರ ಡಾ. ಬಾಬುಜಗಜೀವನ್ ರಾಮ್ ರವರ ಪುತ್ಥಳಿಗೆ ವಿಶೇಷ ಪೂಜೆ ಸಲ್ಲಿಸಿದ ನಂತರ ವೇದಿಕೆಯ ಕಾರ್ಯಕ್ರಮಗಳು ಜರಗುವವು ಎಂದು ಸಂಘಟಕರು ತಿಳಿಸಿದ್ದಾರೆ.

ಕಿರುಸುದ್ದಿ

ಇಂದು 33ನೇ ಭಾಗವತ ಪ್ರವಚನ

ಕಲಾದಗಿ: ಸ್ಥಳೀಯ ಶ್ರೀ ಸಾಯಿಮಂದಿರದಲ್ಲಿ ದವನದ ಹುಣ್ಣಿಮೆಯ ದಿನ ಏ.2ರಂದು 33ನೇಯ 'ಭಾಗವತ ಪ್ರವಚನ' ನಡೆಯಲಿದೆ.



ಸಂಜೆ 5.30 ಗಂಟೆಯಿಂದ ಚಿಕ್ಕಸಂಶಿಯ ಭಜನಾ ಮಂಡಳಿಯವರಿಂದ ಭಜನೆ ನೆರವೇರಲಿದೆ. ಸಂಜೆ 6.30ಕ್ಕೆ ಆರಂಭವಾಗುವ ಪ್ರವಚನದಲ್ಲಿ ಖ್ಯಾತ ಪ್ರವಚನಕಾರರಾದ ಸಮೀಪದ ಖಜ್ಜಿಡೋಣಿಯ ಶ್ರೀಕೃಷ್ಣಶಾಸ್ತ್ರಿಗಳು ಭಾಗವತ ಕುರಿತು ಪ್ರವಚನವನ್ನು ನೀಡಲಿದ್ದು, ಶ್ರೀಸಾಯಿ ಭಕ್ತರಾದ ಕಾತರಕಿಯ ದಾನಯ್ಯ ಎಸ್. ಮಠದ ಅವರು ಪ್ರಸಾದದ ಸೇವೆಯನ್ನು ಮಾಡಲಿದ್ದಾರೆ. ಎಲ್ಲರೂ ಸರಿಯಾದ ಸಮಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ಸಂಘಟಕರು ಕೋರಿದ್ದಾರೆ.

ಹಿರಿಯ ಪತ್ರಕರ್ತ ವಿಜಯ ಬಿರಾದಾರಗೆ ಪ್ರಶಸ್ತಿ

ಜಮಖಂಡಿ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಕೊಡಮಾಡುವ ರಾಜ್ಯ ಮಟ್ಟದ ವಿಶೇಷ ಪ್ರಶಸ್ತಿಗೆ ಜಮಖಂಡಿಯ ಕಾರ್ಯನಿರತ ಪತ್ರಕರ್ತರ ಸಂಘ ಗೌರವಾಧ್ಯಕ್ಷ, ಹಿರಿಯ ಪತ್ರಕರ್ತ ವಿಜಯ ಬಿರಾದಾರ 2024 ನೇ ಸಾಲಿನ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕಳೆದ ನಾಲ್ಕು ದಶಕಗಳಿಂದ ಅವರು ಪತ್ರಿಕಾ ರಂಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ, ಇವರು ಸೈಕ್ಲಿಂಗ್ ಹಾಗೂ ಕೃಷ್ಣಾ ನದಿಯ ಬಗ್ಗೆ ಹಲವಾರು ಲೇಖನಗಳನ್ನು ಬರೆದು ಇವರ ಲೇಖನಗಳು ರಾಜ್ಯ ಮಟ್ಟದಲ್ಲಿ ಗುರುತಿಸಿಕೊಂಡಿವೆ, ಪ್ರಶಸ್ತಿ ಪ್ರದಾನ ಸಮಾರಂಭ ಏ.11 ಮತ್ತು 12ರಂದು ಬೀದರ್‌ನಲ್ಲಿ ಜರುಗಲಿರುವ ಪತ್ರಕರ್ತರ ಸಂಘದ 40 ನೆಯ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.



ಪೊಲೀಸ್ ಧ್ವಜ ದಿನಾಚರಣೆ ಇಂದು

ಬಾಗಲಕೋಟೆ: ಜಿಲ್ಲಾ ಪೊಲೀಸ್ ವತಿಯಿಂದ ಎಪ್ರೀಲ್ 2 ರಂದು ಬೆಳಿಗ್ಗೆ 8 ಗಂಟೆಗೆ ನವನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಪೊಲೀಸ್ ಧ್ವಜ ದಿನಾಚಾರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ನಿವೃತ್ತ ಡಿವೈಎಸ್‌ಪಿ ಮಂಜುನಾಥ ಕೆ. ಗಂಗಲ ಭಾಗವಹಿಸಿ, ವಂದನೆ ಸ್ವೀಕಾರ ಮತ್ತು ಸಾಂಪ್ರದಾಯಿಕ ಕವಾಯತ್ ವೀಕ್ಷಣೆ ಮಾಡಲಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ತಿಳಿಸಿದ್ದಾರೆ.

ವಾಹನಗಳ ತಪಾಸಣೆ



ಕೆರೂರ: ಪಟ್ಟಣ ಬಟಕುರ್ಕಿ ಕ್ರಾಸ್ ಹತ್ತಿರ ಚೆಕ್ ಪೋಸ್ಟ್‌ನಲ್ಲಿ ಅಧಿಕಾರಿಗಳು ವಾಹನ ತಪಾಸಣೆ ನಡೆಸಿದರು.ಬಾಗಲಕೋಟೆ ಜಿಲ್ಲೆಯ ಕ್ಷೇತ್ರದ ಉಪಚುನಾವಣೆ ಹಿನ್ನೆಲೆಯಲ್ಲಿ ಬಟಕುರ್ಕಿ ಕ್ರಾಸ್ ಸ್ಥಾಪಿಸಲಾಗಿದ್ದು,ಚೆಕಪೋಸ್ಟ ಅಧಿಕಾರಿಗಳು ಅಕ್ರಮವಾಗಿ ಹಣವನ್ನು ಸಾಗಿಸುವುದನ್ನು ತಡೆಗಟ್ಟಲು, ಇದನ್ನು ಸ್ಥಾಪಿಸಲಾಗಿದೆ. ಪಟ್ಟಣವು ರಾಷ್ಟ್ರೀಯ ಹೆದ್ದಾರಿ ಹೊಂದಿಕೊಂಡಿರುವ ಕಾರಣ ಚುನಾವಣಾ ಅಧಿಕಾರಿಗಳು ಈ ಕ್ರಮವನ್ನು ಕೈಗೊಂಡಿದ್ದಾರೆ.ಈ ಸಂದರ್ಭದಲ್ಲಿ ಎಫ್ ಎಸ್‌ಟಿ ಅಧಿಕಾರಿ ರಮೇಶ ಮಾಡಬಾಳ, ಪೊಲೀಸ್ ಸಿಬ್ಬಂದಿ ಮಲ್ಲು ಪೂಜಾರ ಇದ್ದರು.

ಇಂದು ಶರಣೆ ಅಕ್ಕಮಹಾದೇವಿ ಜಯಂತಿ

ಗುಳೇದಗುಡ್ಡ: ಪಟ್ಟಣದ ಶ್ರೀ ಜ. ಗುರುಸಿದ್ದೇಶ್ವರ ಮಠದಲ್ಲಿ ಏ.2ರಂದು ಬೆಳಿಗ್ಗೆ 11 ಗಂಟೆಗೆ ಮಹಾಶರಣೆ ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶ್ರೀಮಠದ ಜ.ಶ್ರೀ.ಬಸವರಾಜ ಪಟ್ಟದಾರ್ಯ ಸ್ವಾಮಿಗಳು, ಜ.ಶ್ರೀ. ಗುರುಸಿದ್ದೇಶ್ವರ ಪಟ್ಟದಾರ್ಯ ಸ್ವಾಮಿಗಳು ಕಾರ್ಯಕ್ರಮದ ಸಾನಿಧ್ಯ ವಹಿಸುವರು. ಗಜೇಂದ್ರಗಡದ ದೇವಿಮನಿ ಪುಣ್ಯಾಶ್ರಮದ ಪ್ರವಚನಗಾರ್ತಿ ಸಾವಿತ್ರಮ್ಮ ಹಿರೇಮಠ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದಲ್ಲಿ ಶ್ರೀ.ಜ.ಗುರುಸಿದ್ದೇಶ್ವರ ಮಹಳಾ ಬಿ.ಇಡಿ ಶಿಕ್ಷಣಾರ್ಥಿಗಳಿಂದ ವಚನ ಗಾಯನ ಭಾಷಣ, ವಚನ ಕಂಠಪಾಠ ಹಾಗೂ ಉಪನ್ಯಾಸ ನಡೆಯಲಿದೆ ಎಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.



ಗುಳೇದಗುಡ್ಡ: ಶ್ರೀರಾಮನವಮಿ ನಿಮಿತ್ತ ಹಿಂದೂ ಜನ ಜಾಗೃತಿ ಸಮಿತಿ ವತಿಯಿಂದ ಗುಳೇದಗುಡ್ಡದ ಕನ್ನಿಕಾಪರಮೇಶ್ವರಿ ದೇವಸ್ಥಾನದಲ್ಲಿ ಶ್ರೀರಾಮ ಜಪ ಕಾರ್ಯಕ್ರಮ ನಡೆಯಿತು. ಹಿಂದೂ ಜನಜಾಗೃತಿ ಸಮಿತಿಯ ಸುಜಾತಾ ಹುಲಿಪಲ್ಲೇದ, ಸುರೇಶ ಪರ್ವತಿಕರ್, ಅಂಜನಾ ಪರ್ವತಿಕರ್, ರಮೇಶ್ ಚೆಲ್ಲಾಪುರ, ರಜನಿ ಚೆಲ್ಲಾಪುರ, ದಾಮೋದರ ಆಚಾರ್ಯ, ಶ್ರೀಧರ ನರೇಗಲ್, ಅನುಪಮಾ ಧಾರವಾಡ, ಸುರೇಖಾ ಧಾರವಾಡ, ಅನಿತಾ ಬಿಜಾಪುರ, ರಾಜೇಶ್ವರಿ ಬಳಿಗೇರ ಹಾಗೂ ಹಿಂದೂ ಜನಜಾಗೃತಿ ಸಮಿತಿಯ ಕಾರ್ಯಕರ್ತರು ಉಪಸ್ಥಿತರಿದ್ದರು.

ವೈರಾಗ್ಯದ ಸಾಧನೆ ಶಿಖರವಾದ ಅಕ್ಕಮಹಾದೇವಿ

ರನ್ನ ಬೆಳಗಲಿ: ಪಟ್ಟಣದ ಶ್ರೀ ಅಕ್ಕಮಹಾದೇವಿ ದೇವಸ್ಥಾನ ಟ್ರಸ್ಟ್ ಕಮಿಟಿ ಆಶ್ರಯದಲ್ಲಿ ಬುಧವಾರದಂದು ಅಕ್ಕಮಹಾದೇವಿಯ ದೇವಸ್ಥಾನದಲ್ಲಿ ಅಕ್ಕಮಹಾದೇವಿ ಜಯಂತಿ ಅಂಗವಾಗಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಜರುಗಿತು.

ಶಿವಶರಣೆ ಕಾಶಿಬಾಯಿ ಪುರಾಣಿಕ ಪ್ರವಚನಕಾರರು, ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವೈರಾಗ್ಯದ ಸಾಧನೆ ಶಿಖರವಾದ ಅಕ್ಕಮಹಾದೇವಿ ಜೀವನವೇ ಎಲ್ಲಾ ಮಹಿಳೆಯರಿಗೆ ಸ್ಫೂರ್ತಿ. ಮೊದಲ ವಚನಕಾರ್ತಿಯಾಗಿ, ಕವಿತ್ರಿಯಾಗಿ ಪ್ರತಿಯೊಂದು ವಚನದಲ್ಲಿ ಕೂಡ ಸಮಾಜದ ಮೌಢ್ಯವನ್ನು ಧಿಕ್ಕರಿಸಿದ ಧೀಮಂತ ಮಹಿಳೆ ಎಂಬ ವಿಚಾರವನ್ನು ತಿಳಿಸಿದರು.

ಸಭಾಧ್ಯಕ್ಷೆ ಸರೋಜಾ ಶಿರೋಳ ಈ ಕಾರ್ಯಕ್ರಮವು ಅಕ್ಕಮಹಾದೇವಿ ದೇವಸ್ಥಾನದ ಟ್ರಸ್ಟ್ ಅಡಿಯಲ್ಲಿ ಮೊದಲ ಬಾರಿಗೆ ಪ್ರಾರಂಭಗೊಂಡಿದ್ದು ಹಂತ ಹಂತವಾಗಿ ಎಲ್ಲಾ ಕ್ಷೇತ್ರದ ಮಹಿಳೆಯರನ್ನು ಗುರುತಿಸಿ ಸನ್ಮಾನಿಸುವ ವೇದಿಕೆಯಾಗುತ್ತದೆ.ಅದಕ್ಕೆ ಎಲ್ಲರ ಸಹಕಾರ ಅತಿ ಮುಖ್ಯ ಎಂದು ಹೇಳಿದರು. ಉಪನ್ಯಾಸಕರಾದ ಬನಶ್ರೀ ಕಂಬಿ,ಅಕ್ಕತಾಯಿ ಕಿಚಡಿ ಇರ್ವವರು ಅಕ್ಕಮಹಾದೇವಿಯ ಸಮಗ್ರ ಜೀವನದ ಕುರಿತು ಉಪನ್ಯಾಸ ನೀಡಿದರು.ಸಾವಿತ್ರಿ ಮೇಟಿ,ನೀಲಾ ಪಾಟೀಲ,ವಿ ಬಿ ಗೌಡಪ್ಪನವರ, ಬಸವರಾಜ ಮೇಟಿ ಕಾರ್ಯಕ್ರಮದ ಕುರಿತು ಮಾತನಾಡಿದರು.ಈ ಸಂದರ್ಭದಲ್ಲಿ ಸ್ಥಳೀಯ ವಿಶೇಷ ಮಹಿಳಾ ಸಾಧಕ ದಂಪತಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ವರ್ಷಾ ಮುಧೋಳ, ವೀಣಾ ಬಡಿಗೇರ, ಬಸವರಾಜ ಪುರಾಣಿಕ, ಮಹಾದೇವ ಕಂಬಾರ, ಮಹಾಲಿಂಗಪ್ಪ ಕೊಣ್ಣೂರ ಇನ್ನಿತರರು ಉಪಸ್ಥಿತರಿದ್ದರು.



ರನ್ನ ಬೆಳಗಲಿ: ಪಟ್ಟಣದ ಶ್ರೀ ಅಕ್ಕಮಹಾದೇವಿ ದೇವಸ್ಥಾನ ಟ್ರಸ್ಟ್ ಕಮಿಟಿ ಆಶ್ರಯದಲ್ಲಿ ಬುಧವಾರದಂದು ಅಕ್ಕಮಹಾದೇವಿಯ ದೇವಸ್ಥಾನದಲ್ಲಿ ಅಕ್ಕಮಹಾದೇವಿ ಜಯಂತಿ ಅಂಗವಾಗಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಜರುಗಿತು.

ಗ್ರಾಮೀಣದಲ್ಲಿ ಬಿಜೆಪಿ ಮತಯಾಚನೆ



ಬಾಗಲಕೋಟೆ: ಉಪ ಚುನಾವಣೆಯ ಹಿನ್ನೆಲೆಯಲ್ಲಿ, ಚಿಕ್ಕಮ್ಯಾಗೇರಿ ಗ್ರಾಮದಲ್ಲಿ ವೀರಣ್ಣ ಚರಂತಿಮಠ ಅವರ ಪರವಾಗಿ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರಾದ ಛಲವಾದಿ ನಾರಾಯಣಸ್ವಾಮಿ, ಸಂಸದ ಗೋವಿಂದ ಕಾರಜೋಳ ಹಾಗೂ ಮಾಜಿ ಸಚಿವ ಎನ್. ಮಹೇಶ್ ಅಬ್ಬರದ ಮತಯಾಚನೆ ಮಾಡಿದರು.

ಇದೇ ವೇಳೆ ಗ್ರಾಮದಲ್ಲಿ ಸಮಾಜದ ಮುಖಂಡರನ್ನು ಭೇಟಿ ಮಾಡಿ ಸಂವಾದ ನಡೆಸಿ ರಾಜ್ಯದಲ್ಲಿನ ಪ್ರಸಕ್ತ ರಾಜಕೀಯ ವಿದ್ಯಮಾನಗಳು ಹಾಗೂ ಬಿಜೆಪಿಯ ಅಭಿವೃದ್ಧಿ ಪರ ಚಿಂತನೆಗಳನ್ನು ಗ್ರಾಮಸ್ಥರ ಮುಂದೆ ಇಡಬೇಕು, ಕ್ಷೇತ್ರದ ಏಳಿಗೆಗಾಗಿ ಶ್ರಮಿಸುತ್ತಿರುವ ವೀರಣ್ಣ ಚರಂತಿಮಠ ಅವರಿಗೆ ಮತ ನೀಡಿ ಆಶೀರ್ವದಿಸಬೇಕೆಂದು ಮನವಿ ಮಾಡಿದರು. ಗ್ರಾಮದ ಜನರ ಬಿಜೆಪಿ ಗೆಲುವು ನಿಶ್ಚಿತ ಎಂದು ಭರವಸೆ ನೀಡಿದರು ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರು ಕಾರ್ಯಕರ್ತರು ಭಾಗಿಯಾಗಿದ್ದರು.



ಬಾಗಲಕೋಟೆ: ಮತಕ್ಷೇತ್ರದ ಕಿರಸೂರ ಗ್ರಾಮ ಮತ್ತು ಹೊನ್ನಕಟ್ಟಿ ಗ್ರಾಮಗಳಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಮಾಜಿ ಸಚಿವ ಬಿ.ಶ್ರೀರಾಮುಲು ಪ್ರಚಾರ ನಡೆಸಿದರು. ರಾಜು ನಾಯ್ಕರ, ವೀರಣ್ಣ ಹಳೇಗೌಡರ ಇದ್ದರು.

ಕಿಲ್ಲಾ ಪ್ರದೇಶದಲ್ಲಿ ಮತಯಾಚನೆ

ಬಾಗಲಕೋಟೆ: ಮುಳುಗಡೆಯಾದ ಕಿಲ್ಲಾ ಪ್ರದೇಶ ಜನರ ಮನೆಗಳ ಪುನರ್ವಸತಿ ಮತ್ತು ನಗರದ ಸರ್ವತೋಮುಖದ ಅಭಿವೃದ್ಧಿ ಮಾಡಿದ ಬಿಜೆಪಿಯನ್ನು ಮತ್ತೊಮ್ಮೆ ಬೆಂಬಲಿಸಿ ನಗರಾಭಿವೃದ್ಧಿಗೆ ಕೈಜೋಡಿಸಿ ಎಂದು ವೀರಣ್ಣ ಚರಂತಿಮಠ ಮತದಾರರಲ್ಲಿ ಮನವಿ ಮಾಡಿದರು.

ಉಪಚುನಾವಣೆ ನಿಮಿತ್ತ ಹಳೆಯ ಬಾಗಕೋಟೆಯ ಕಿಲ್ಲಾದ ಕೊತ್ತಲೇಶ ಆಂಜನೇಯ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ವಾರ್ಡ್ ನಂ. 2,4 ಮತ್ತು 12ರಲ್ಲಿ ಮತಯಾಚನೆ ಮಾಡಿದರು. ಮುಳಗಡೆ ಸಂದರ್ಭದಲ್ಲಿ ಎದುರಾದ ಸಮಸ್ಯೆಗಳನ್ನು ಸಾರ್ವಜನಿಕರಿಗೆ ತೊಂದರೆಯಾಗದಂತೆ ನಿವಾರಿಸಿ ಮೂಲಸೌಕರ್ಯ, ಪರಿಹಾರ ಮತ್ತು ಪುನರ್ವಸತಿ ಮನೆಗಳನ್ನು ನ್ಯಾಯಬದ್ಧ ನೀಡುವ ಕೆಲಸವನ್ನು ಬಿಜೆಪಿಯು ಮಾಡಿದೆ. ಮೂರು ವರ್ಷಗಳಿಂದ ಎದುರಾದ ಸಂಕಷ್ಟಕಗಳಿಂದ ಹೊರಬರಲು ಉಪಚುನಾವಣೆಯಲ್ಲಿ ಬಹುಮತಗಳ ಅಂತರದಲ್ಲಿ ಕಮಲಕ್ಕೆ ಮತ ನೀಡಿ ಗೆಲ್ಲಿಸಿ ಎಂದರು.

ಮತಯಾಚನೆಯಲ್ಲಿ ನಾರಯಾಣ ಸಾಬ ಭಾಂಡಗೆ, ವಾರ್ಡ್ ಸದಸ್ಯೆ ರೇಖಾ ಕಲಬುರ್ಗಿ, ಜಗದೀಶ್ ಒಲೇಕರ, ಮುರಳಿ ಕೋಟೇಶ್ವರ, ದುಂಡಪ್ಪ ಏಳೆಮ್ಮಿ, ಗಿರೀಶ ಭಾಂಡಗೆ, ಬಸವರಾಜ ಯಂಕಂಚಿ, ವಿಲಾಸ ವಂದಕುದರಿ, ಪಾಲ್ಗೊಂಡಿದ್ದರು.



ಕೌಲು ಕಟ್ಟುವ ಪದ್ಧತಿ ಇಂದಿಗೂ ಜಾರಿ

ರಬಕವಿ-ಬನಹಟ್ಟಿ: ಸುಮಾರು 500 ವರ್ಷಗಳ ಹಳೆಯದಾದ ಹನುಮಾನ ದೇವಸ್ಥಾನದಲ್ಲಿ ಇಂದಿಗೂ ಪವಾಡಗಳಿಗೆ ಸಾಕ್ಷಿಯಾಗಿದೆ.

ಮದನಮಟ್ಟಿ ಗ್ರಾಮದ ಆರಾಧ್ಯ ದೈವವಾಗಿ ನಿಂತಿರುವ ಈ ದೇವಾಲಯದಲ್ಲಿ 'ಕೌಲು ಕಟ್ಟುವದು' ಇಂದಿಗೂ ವಾಡಿಕೆ. ಮಳೆ-ಬೆಳೆ ಸರಿಯಾಗಿ ಬಾರದದಿದಲ್ಲಿ, ಬರಗಾಲ ಹಾಗೂ ಸಾಂಕ್ರಾಮಿಕ ರೋಗಗಳಿಂದ ದೂರ ವಾಗುವದರೊಂದಿಗೆ ವೈಯಕ್ತಿಕ ಇಷ್ಟಾರ್ಥಗಳಿಗೆ 'ಕೌಲು ಕಟ್ಟಿ' ಕೇಳುವದು ಇಂದಿಗೂ ಮುಂದುವರೆದಿದೆ.



ಸುಮಾರು 10 ಎಕರೆಯಷ್ಟು ವಿಶಾಲ ಪ್ರದೇಶದಲ್ಲಿ ಗುಡ್ಡದ ಅತಿ ಎತ್ತರದ ಪ್ರದೇಶದಲ್ಲಿ ವಿರಾಜವಾನವಾಗಿ ದೇವಾಲಯ ನಿರ್ಮಾಣವಾಗಿದ್ದು, 6 ಅಡಿಯಷ್ಟು ಎತ್ತರದ ಹನುಮ ವಿಶೇಷತೆಯಿಂದ ಕೂಡಿದೆ.

ಘಟಸರ್ಪಕ್ಕೆ ಬೆಚ್ಚಿ ಬಿದ್ದ ಗ್ರಾಮಸ್ಥರು: ಈ ಭಾಗದಲ್ಲಿ ನಿಧಿಯಾಸೆಗೋಸ್ಕರ ಅನೇಕ ಕಡೆಗಳಲ್ಲಿ ಅಗೆದು ಪರಿಸರ ಹಾಳುಗೆಡುವಲ್ಲಿ ಕೆಲವರು ಕಾರಣರಾಗಿದ್ದಾರೆ. ಕಳೆದೆರಡು ವರ್ಷಗಳ ಹಿಂದೆ ದೇವಸ್ಥಾನ ಜೀರ್ಣೋದ್ಧಾರ ಸಂದರ್ಭ ಅಗೆಯುವ ಸಂದರ್ಭ ಘಟಸರ್ಪವೊಂದು ಕಾಣಿಸಿಕೊಂಡ ಪರಿಣಾಮ ಅಲ್ಲಿದ್ದ ಜನತೆ ಬೆಚ್ಚಿ ಬೀಳುವಲ್ಲಿ ಕಾರಣವಾಗಿತ್ತು. ಆಗ ಕೌಲು ಕಟ್ಟಿ ಇಲ್ಲಿ ಯಾವದೇ ನಿಧಿಯಾಸೆಗೆ ಅಗೆಯುತ್ತಿಲ್ಲ. ಬದಲಾಗಿ ದೇವಸ್ಥಾನದ ಅಭಿವೃದ್ಧಿಗಾಗಿಯೆಂದು ದೇವರಲ್ಲಿ ಬೇಡಿಕೊಂಡ ಮಾಹಿತಿಯನ್ನು ಜಿಪಂ ಮಾಜಿ ಅಧ್ಯಕ್ಷ ಬಾಬಾಗೌಡ ಪಾಟೀಲ ಹಂಚಿಕೊಂಡರು.

ರಥೋತ್ಸವ: ಬರೋಬ್ಬರಿ 31 ಅಡಿ ಎತ್ತರದ ರಥವನ್ನು ಪ್ರಸಕ್ತ ವರ್ಷದಿಂದ ಎಳೆಯಲಾಗುತ್ತಿದೆ. ಮೊದಲಿಗಿಂತಲೂ ಜಾತ್ರೆ ವಿಶೇಷತೆಯು ದುಪ್ಪಟ್ಟಾಗಿದ್ದು ಭಕ್ತರ ಅಪಾರ ಸಂಖ್ಯೆಯಲ್ಲಿ ದರ್ಶನ ಪಡೆದು ಪುನೀತರಾಗುತ್ತಾರೆ.

1 ಕೋಟಿಯಲ್ಲಿ ಅಭಿವೃದ್ಧಿ: ಕಳೆದ ವರ್ಷವಷ್ಟೇ ಸುಮಾರು 1 ಕೋಟಿ ರೂ.ಗಳ ವೆಚ್ಚದಲ್ಲಿ ಇಡೀ ದೇವಾಲಯ ಆವರಣದೊಂದಿಗೆ ಪ್ರಕೃತಿ ನಿಸರ್ಗ ಸಿರಿವಂತಿಕೆಗೆ ಅಭಿವೃದ್ಧಿ ಸಲುವಾಗಿ ಸಾರ್ವಜನಿಕರಿಂದ ಹಾಗೂ ಸರ್ಕಾರದ ಸಹಾಯ ಪಡೆದು ಜೀರ್ಣೋದ್ಧಾರ ಮಾಡುವಲ್ಲಿ ದೇವಾಲಯ ಸೇವಾ ಸಮಿತಿಯ ಅಧ್ಯಕ್ಷ ಬಾಬಾಗೌಡ ಪಾಟೀಲ ನೇತೃತ್ವದ ಆಡಳಿತ ಮಂಡಳಿ ಯಶಸ್ವಿಯಾಗಿದೆ. ಶೀಘ್ರವೇ ಕೆರೆ ಹಾಗೂ ಸಮುದಾಯ ಭವನ ನಿರ್ಮಾಣದ ಗುರಿಯಾಗಿದೆಯೆಂದು ತಿಳಿಸಿದರು.

ಕರ್ನಾಟಕ ಹಾಗೂ ಮಹಾರಾಷ್ಟ್ರದಿಂದ ಭಕ್ತರ ದಂಡೇ ಬರುತ್ತದೆ. ಮದನಮಟ್ಟಿ ಗ್ರಾಮದಲ್ಲಿ ಕಡ್ಡಾಯ ಶನಿವಾರ ಎಲ್ಲರೂ ಉಪವಾಸ ಸಾಮಾನ್ಯ.

ಕಾಂಗ್ರೆಸ್ ಪಕ್ಷ ಬೆಂಬಲಿಸಿ: ಡಾ.ಯತೀಂದ್ರ

ಬಾಗಲಕೋಟೆ: ಬಡವರ ಹಾಗೂ ರೈತರ ಪರವಾಗಿದ್ದ ಪ್ರಾಮಾಣಿಕ ರಾಜಕಾರಣಿ ಎಚ್. ವೈ.ಮೇಟಿ ಅವರ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಅವರ ಪುತ್ರ ಉಮೇಶ ಅವರಿಗೆ ಪ್ರತಿಯೊಬ್ಬರೂ ಮತ ನೀಡಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಸಂಗಾಪುರ ಗ್ರಾಮದಲ್ಲಿ ಬುಧವಾರ ನಡೆದ ಪ್ರಚಾರ ಸಭೆಯಲ್ಲಿಅವರು ಮಾತನಾಡಿ, ಕಾಂಗ್ರೆಸ್ ಪಕ್ಷ ಬಡವರ ಪರವಾಗಿದೆ.ಕಳೆದ ಚುನಾವಣೆಯಲ್ಲಿ ನೀಡಿದ್ದ170 ಭರವಸೆಗಳ ಪೈಕಿ 167 ಭರವಸೆ ಈಡೇರಿಸಿದೆ.ಆದರೆ ಬಿಜೆಪಿ ಬಡವರನ್ನು ಬಿಟ್ಟು ಕೇವಲ ಶ್ರೀಮಂತರ ಸಾಲ ಮನ್ನಾ ಮಾಡುತ್ತಿದೆ.

ನಮ್ಮ ಸರ್ಕಾರದ ಅನ್ನ ಭಾಗ್ಯಕ್ಕೆ ಕಲ್ಲು ಹಾಕಿದ್ದ ಬಿಜೆಪಿ ನರೇಗಾ ಯೋಜನೆಗೂ ಕಲ್ಲು ಹಾಕಿದೆ. ಗ್ಯಾರಂಟಿ ಯೋಜನೆಗಳನ್ನು ಬಿಟ್ಟಿ ಭಾಗ್ಯ ಎನ್ನುತ್ತಿದೆ. ಭಾಗ್ಯಗಳು ಬಡವರ ಹಕ್ಕು.ಬಿಜೆಪಿ ಆರೋಪ ಸತ್ಯಕ್ಕೆ ದೂರವಾಗಿದೆ.ಬಡವರ ಏಳಿಗೆ ಬಿಜೆಪಿಗೆ ಅಸಹನೀಯವಾಗಿದೆ. ಜನಸಾಮಾನ್ಯರ ಮನವಿಗೆ ಸ್ಪಂದಿಸುವ ಕಾಂಗ್ರೆಸ್ ಪಕ್ಷವನ್ನು ಮತ್ತೊಮ್ಮೆ ಬೆಂಬಲಿಸಬೇಕು ಎಂದರು.

ನಂತರ ಸ್ಥಳೀಯ ಕಾಂಗ್ರೆಸ್ ಮುಖಂಡರೊಂದಿಗೆ ಬಿಲ್‌ಕೆರೂರ, ರಾಂಪುರ, ಆಲೂರ, ಮಸ್ತಿಹಾಳ, ಸೀತಿಮನಿ, ಮಲ್ಲಾಪುರ, ಬೇವಿನಮಟ್ಟಿ, ಸೀಗಿಕೇರಿ, ನೀರಲಕೇರಿ, ಕದಾಂಪುರ ಗ್ರಾಮಗಳಲ್ಲಿ ಸಂಜೆವರೆಗೆ ಪ್ರಚಾರಕ್ಕೆಗೊಂಡು ಮತ ಯಾಚಿಸಿದರು.

ಮಹೇಶ ಹೊಸಗೌಡರ, ಮಲ್ಲಣ್ಣಐಕೂರ, ನಿಂಗಣ್ಣಕೋಟಿ, ಅಶ್ವಿನಿ ಪಾಟೀಲ, ರುಕ್ಮಿಣಿ ಮೇಟಿ, ಶಶಿಕಾಂತ ಪೂಜಾರ, ಶ್ರೀಕರ ದೇಸಾಯಿ ಇತರರಿದ್ದರು.

ಮೇಟಿ ಪರ ಜೆಟಿ ಮತಯಾಚನೆ: ಬಾಗಲಕೋಟೆ ತಾಲೂಕಿನ ಹಳ್ಳೂರು, ಭಗವತಿ ಗ್ರಾಮಗಳಲ್ಲಿ ಶಾಸಕ ಜೆ.ಟಿ.ಪಾಟೀಲ ಬುಧವಾರ ಬೆಳಗ್ಗೆ ಪ್ರಚಾರಕ್ಕೆಗೊಂಡು ಉಮೇಶ ಮೇಟಿ ಅವರ ಪರ ಮತ ಯಾಚಿಸಿದರು.

ಪರಿಶಿಷ್ಟ ಜಾತಿ ಕಾಲೊನಿಗಳಲ್ಲಿ ಮನೆ ಮನೆ ಪ್ರಚಾರ ನಡೆಸಿದ ಅವರು, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಬಡವರ ಬದುಕಿಗೆ ಆಸರೆಯಾಗಿವೆ. ಗ್ರಾಮಗಳ ಅಭಿವೃದ್ಧಿಗೆ ಕಾಂಗ್ರೆಸ್ ಬದ್ದವಾಗಿದೆ. ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿಅವರಿಗೆ ಮತ ನೀಡಬೇಕುಎಂದು ವಿನಂತಿಸಿದರು..

ನಗರದಲ್ಲಿ ಬಿರುಸಿನ ಪ್ರಚಾರ: ನಗರದ ವಿದ್ಯಾಗಿರಿ ಭಾಗದಲ್ಲಿ ಮಂಗಳವಾರ ಸಂಜೆ ಸಚಿವ ಬೈರತಿ ಸುರೇಶಪ್ರಚಾರ ನಡೆಸಿ ಮತ ಯಾಚಿಸಿದರು.ದಿ.ಎಚ್.ವೈ.ಮೇಟಿಅವರ ಪ್ರಯತ್ನದಿಂದ ನಗರದಜನತೆಯ ವೈದ್ಯಕೀಯ ಮಹಾವಿದ್ಯಾಲಯ ಕನಸು ನನಸಾಗುತ್ತಿದೆ. ಬಡವರ, ಹಳ್ಳಿ ಜನತೆ ಪರಅಪಾರಕಾಳಜಿ ಹೊಂದಿದ್ದಅವರ ಕಾರ್ಯಗಳನ್ನು ಗಮನಿಸಿ ಕಾಂಗ್ರೆಸ್‌ಅಭ್ಯರ್ಥಿ ಉಮೇಶ ಮೇಟಿಅವರನ್ನು ಬೆಂಬಲಿಸಬೇಕು ಎಂದು ಕೋರಿದರು.



ಸಂಭ್ರಮದ ಮಂಗಳಾದೇವಿ ರಥೋತ್ಸವ

ಗುಳೇದಗುಡ್ಡ: ತಾಲೂಕಿನ ಮಂಗಳಗುಡ್ಡ ಗ್ರಾಮದ ಶ್ರೀ ಮಂಗಳಾದೇವಿ ರಥೋತ್ಸವ ಬುಧವಾರ ಸಂಜೆ ಅಪಾರ ಭಕ್ತರ ಹರ್ಷೋದ್ಘಾರದ ನಡುವೆ ಸಂಭ್ರಮದಿಂದ ನಡೆಯಿತು.

ಇದಕ್ಕೂ ಮೊದಲು ನಂದಿಕೇಶ್ವರ ಭಕ್ತರಿಂದ ದೇವಿಗೆ ಹೂವಿನ ಮಾಲೆ ಹಾಗೂ ರಥೋತ್ಸವದ ಸೇವೆ ನಡೆಯಿತು. ಬಳಿಕ ಕಳಸದ ಮೆರವಣಿಗೆ ನಡೆದು, ಸಂಜೆ 6 ಗಂಟೆಗೆ ಮಂಗಳಾದೇವಿಯ ರಥೋತ್ಸವ ಸಂಭ್ರಮದಿಂದ ನಡೆಯಿತು. ಭಕ್ತರು ರಥಕ್ಕೆ ಉತ್ತತ್ತಿ ತೂರಿ ಭಕ್ತಿ ಮೆರೆದರು. ರಥೋತ್ಸವದಲ್ಲಿ ಸುತ್ತಮುತ್ತಲ ಗ್ರಾಮಗಳ ಸಾವಿರಾರು ಭಕ್ತರು ಭಾಗವಹಿಸಿದ್ದರು.



ಸಿಲಿಂಡರ್‌ಗೆ ಹೆಚ್ಚಿನ ದರ ವಸೂಲಿ: ಕರೆ ಮಾಡಿ

ಬಾಗಲಕೋಟೆ: ಜಿಲ್ಲೆಯಲ್ಲಿರುವ ಸಾರ್ವಜನಿಕರುಎಲ್‌ಪಿಜಿಸಿಲಿಂಡರಗಳ ರಶೀದಿಮೇಲೆಇರುವಂತಹ ಮೊತ್ತವನ್ನೇ ಪಾವತಿಸಬೇಕು. ರಶೀದಿ ಮೇಲಿರುವ ಮೊತ್ತಕಿಂತ ಹೆಚ್ಚಿನ ಮೊತ್ತವನ್ನು ಕೇಳಿ ಪಡೆಯುತ್ತಿದಲ್ಲಿ ಈ ಕೆಳಕಂಡ ಆಯಿಲ್ ಕಂಪನಿ ಸೇಲ್ಸ್ ಅಧಿಕಾರಿ ಹಾಗೂ ಖಾಸಲಿ ಗ್ಯಾಸ್ ಸರಬರಾಜುದಾರರಿಗೆ ಕರೆ ಮಾಡಬಹುದಾಗಿದೆ ಎಂದು ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ ತಿಳಿಸಿದ್ದಾರೆ.

ಐಓಸಿ ಸೇಲ್ಸ್ ಅಧಿಕಾರಿ ಅಶೋಕ ರಾಜಗೋಪಾಲ (9958980557), ಬಿಪಿಸಿ ಸೇಲ್ಸ್ ಅಧಿಕಾರಿ ಆಸಿಶ್ ಅಗರವಾಲ್ (9131115185), ಆಶಿಸ್ ದುಬೆ (9425140800), ಗೋ ಗ್ಯಾಸ್ ಡೀಲರ್ ಹೊನಕೇರಿ (9740726111), ಟೋಟಲ್ ಗ್ಯಾಸ್ ಡೀಲರ್ ಬಗಲಿ (9663117999), ಪೂರ್ ಗ್ಯಾಸ್ ಡೀಲರ್ ಮದನ (8088389012) ಹಾಗೂ ಜಿಲ್ಲಾಧಿಕಾರಿಗಳ ಆಹಾರ ವಿಭಾಗ (08354-235094), ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಮ್ (112)ಗೆ ಕರೆ ಮಾಡಬಹುದಾಗಿದೆ ಎಂದು ತಿಳಿಸಿದ್ದಾರೆ.

ಶ್ರೀರಾಮನಾಮ ಜಪ: ರಾಮರಾಜ್ಯಕ್ಕಾಗಿ ಪ್ರತಿಜ್ಞೆ

ಮಹಾಲಿಂಗಪುರ: ಶ್ರೀರಾಮನವಮಿ ನಿಮಿತ್ತ ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಮಹಾಲಿಂಗಪುರದ ಸಿದ್ಧಾರೂಢ ಮಠದಲ್ಲಿ ಮತ್ತು ಇನ್ನೂ ಹಲವು ದೇವಸ್ಥಾನಗಳಲ್ಲಿ ಶ್ರೀ ರಾಮ ನಾಮಜಪ, ಪ್ರಾರ್ಥನೆ ಹಾಗೂ ರಾಮರಾಜ್ಯ ಸ್ಥಾಪನೆಗಾಗಿ ಪ್ರತಿಜ್ಞೆ ಮಾಡಿ ಕಾರ್ಯಕ್ರಮವನ್ನು ಭಕ್ತಿಭಾವದಿಂದ ಆಚರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಭಕ್ತಾದಿಗಳು ಮತ್ತು ಧರ್ಮಪ್ರೇಮಿಗಳು ಹಾಗೂ ಹಿಂದೂ ಜನಜಾಗೃತಿ ಸಮಿತಿಯ ಕಾರ್ಯಕರ್ತರು ಭಾಗವಹಿಸಿ ಶ್ರೀರಾಮನ ನಾಮಜಪ ಮಾಡಿದರು. ಸಮಾಜದಲ್ಲಿ ಧರ್ಮ, ಸತ್ಪ್ರವೃತ್ತಿ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಬಲಪಡಿಸುವ ಸಂಕಲ್ಪವನ್ನು ಎಲ್ಲರೂ ಕೈಗೊಂಡರು.

ಈ ಸಂದರ್ಭದಲ್ಲಿ ರಾಮರಾಜ್ಯ ಸ್ಥಾಪನೆಗೆ ಅಗತ್ಯವಾದ ಸತ್ಸಂಕಲ್ಪಗಳನ್ನು ಪಾಲಿಸುವುದಾಗಿ ಪ್ರತಿಜ್ಞೆ ಮಾಡಲಾಯಿತು.





ಬಾದಾಮಿ: ಪಟ್ಟಣದ ಟ್ಯಾಕ್ಸಿ ವಾಹನ ಮಾಲಕರು ಮತ್ತು ಚಾಲಕರ ಸಂಘದ ಸಹಯೋಗದೊಂದಿಗೆ ಬುಧವಾರ ಡಾ.ಶಿವುಕುಮಾರ ಸ್ವಾಮಿಜಿಯವರ 119ನೇ ಜನ್ಮದಿನದ ನಿಮಿತ್ತ ಮಹಾಪ್ರಸಾದ ಏರ್ಪಡಿಸಲಾಗಿತ್ತು. ಸಹಸ್ರಾರು ಭಕ್ತರು, ಸಾರ್ವಜನಿಕರು ಪ್ರಸಾದ ಸ್ವೀಕರಿಸಿದರು.

ಎಸ್‌ವ್ಹಿಎಂ ಮಹಾವಿದ್ಯಾಲಯದಲ್ಲಿ ಪಾಲಕರ ಸಭೆ

ಇಳಕಲ್: ವಿದ್ಯಾರ್ಥಿ ಕಲ್ಯಾಣ ವಿಭಾಗದ ಅಡಿಯಲ್ಲಿ ನಡೆದ 2025-26ನೇ ಶೈಕ್ಷಣಿಕ ವರ್ಷದ ಪಾಲಕರ ಸಭೆಯನ್ನು ನಗರದ ಎಸ್.ವ್ಹಿ. ಎಂ. ಕಲೆ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿತ್ತು.

ಎಸ್.ವ್ಹಿ. ಎಂ. ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಆಡಳಿತ ಮಂಡಳಿ ಚೇರಮನ್ ಆರ್.ಎಸ್. ಹೂಲಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ಎಸ್. ಬಿ. ಬಿರಾದಾರ ಅವರು ವಹಿಸಿದ್ದರು. ಸ್ವಾಗತ ಹಾಗೂ ಪ್ರಾಸ್ತಾವಿಕ ಮಾತುಗಳನ್ನಾಡುತ್ತ ಅವರು ಸಭೆಯ ಉದ್ದೇಶ, ಮಹಾವಿದ್ಯಾಲಯದ ರಚನಾತ್ಮಕ ಕಾರ್ಯ-ಚಟುವಟಿಕೆ, ಸಾಧನೆ, ಸೌಲಭ್ಯ, ಮುನ್ನೋಟ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ, ಕ್ರೀಡಾ, ಸಾಂಸ್ಕೃತಿಕ ಮತ್ತು ಸಹಪಠ್ಯ ಚಟುವಟಿಕೆಗಳಲ್ಲಿಯ ಸಾಧನೆ, ವೃತ್ತಿಜೀವನ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಎಲ್ಲಾ ಸೌಲಭ್ಯಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿದರು.

ಪಾಲಕರಾದ ಮೋತಿಲಾಲ್ ಚವ್ಹಾಣ, ರೇಣುಕಾ ಕೊಪ್ಪರದ, ಮುದ್ದಯ್ಯ ತೋಟಗಂಟಿಮಠ, ಸೋಮು ಸೋಲಾಪುರ, ಮಹಮ್ಮದ್ ಕಟಂಬಲಿ, ಸೈಯದಸಾಬ್ ಮಿರ್ಜಿ, ಶಿವಾನಂದ ಅಂಗಡಿ ಮುಂತಾದವರು ಮಹಾವಿದ್ಯಾಲಯದಲ್ಲಿ ದೊರೆಯುತ್ತಿರುವ ಸೌಲಭ್ಯಗಳ ಕುರಿತು ಮಾತನಾಡಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ತಮ್ಮ ಮಕ್ಕಳು



ಮಹಾವಿದ್ಯಾಲಯದಲ್ಲಿ ದೊರೆಯುತ್ತಿರುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಭವಿಷ್ಯ ನಿರ್ಮಾಣ ಮಾಡುವಲ್ಲಿ ಮಹಾವಿದ್ಯಾಲಯವು ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಅಭಿಪ್ರಾಯಪಟ್ಟರು.

ವಿದ್ಯಾರ್ಥಿ ಕಲ್ಯಾಣ ಅಧಿಕಾರಿ ವಿಜಯಕುಮಾರ ತುಂಬದ ಮಾತನಾಡಿ, ಪಾಲಕರು ಕೊಟ್ಟ ಸಲಹೆಗಳನ್ನು ಶೈಕ್ಷಣಿಕ ಚಟುವಟಿಕೆಗಳಲ್ಲಿ ಅಳವಡಿಸಿಕೊಂಡು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮವಹಿಸುತ್ತೇವೆ ಎಂದು ಭರವಸೆ ನೀಡಿ ಸಭೆಗೆ ವಂದಿಸಿದರು. ಐಕ್ಯೂ ಎ ಸಿ ಸಂಯೋಜಕ ಡಾ. ರಮೇಶ ಮಾಳಗಿ, ವಿದ್ಯಾರ್ಥಿ ಒಕ್ಕೂಟದ ಕಾರ್ಯಾಧ್ಯಕ್ಷ ಡಾ. ಎಸ್. ಡಿ. ಕೆಂಚಾಯಿಗೋಳ, ವಿದ್ಯಾರ್ಥಿ ಪ್ರತಿನಿಧಿಯಾದ ಕುಮಾರಿ ಚೈತ್ರ ರಂಗನಗೌಡರ, ಪಾಲಕರ ಪ್ರತಿನಿಧಿಗಳಾಗಿ ಶಂಕರ ಕಂಪ್ಲಿ ಹಾಗೂ ಮಹಾದೇವಿ ಸಾರಂಗಮಠರವರು, ಮಹಾವಿದ್ಯಾಲಯದ ಎಲ್ಲ ಪ್ರಾಧ್ಯಾಪಕ ವೃಂದದವರು ಉಪಸ್ಥಿತರಿದ್ದರು. ಕುಮಾರಿ ಸಹನಾ ಬುದ್ದಿನ್ನಿ ಅವರ ವಚನ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮವನ್ನು ಡಾ. ಸದಾಶಿವ ದೊಡಮನಿಯವರು ನಿರೂಪಿಸಿದರು.

ರಾಜ್ಯ ಸರ್ಕಾರದಿಂದ ಅವೈಜ್ಞಾನಿಕ ಕ್ರಮ

ಬೀಳಗಿ: ಎಸ್ಸೆಸ್ಸೆಲ್ಸಿ ಹಿಂದಿ ಪರೀಕ್ಷೆ ಇದೇ ಮಾ.31ರಂದು ಜರುಗುತ್ತಿರುವ ಸಂದರ್ಭದಲ್ಲಿ ಸರ್ಕಾರ ಏಕಾಏಕಿಯಾಗಿ ತೃತೀಯ ಭಾಷೆ ಹಿಂದಿಗೆ ಅಂಕಗಳ ಬದಲಾಗಿ ಗ್ರೇಡಿಂಗ್ ಪದ್ಧತಿಯನ್ನು ಜಾರಿಗೆ ತರಲು ಕೈಕೊಂಡ ನಿರ್ಧಾರ ವಿದ್ಯಾರ್ಥಿಗಳಲ್ಲಿ ಆತಂಕ ಹಾಗೂ ಗೊಂದಲಕ್ಕೆ ಕಾರಣವಾಗಿದೆ ಮತ್ತು ಇದು ದುಡುಕಿನ ನಿರ್ಧಾರ ಎಂದು ವಿಧಾನ ಪರಿಷತ್ ಸದಸ್ಯ ಎಚ್. ಆರ್. ನಿರಾಣಿ ಪತ್ರಿಕಾ ಹೇಳಿಕೆ ನೀಡಿದ್ದಾರೆ.




ಶೈಕ್ಷಣಿಕ ವ್ಯವಸ್ಥೆಯಲ್ಲಿ ಏನೇ ಬದಲಾವಣೆ ತರುವದಿದ್ದರೂ ಶೈಕ್ಷಣಿಕ ವರ್ಷದ ಆರಂಭದಲ್ಲಿ ಮಾಡಬೇಕೇ ವಿನಃ ಕೊನೆಯ ಹಂತದಲ್ಲಿ ಅಲ್ಲ. ಹೀಗಾಗಿ ಇದು ಸರ್ಕಾರದ ಏಕಪಕ್ಷೀಯ ಹಾಗೂ ಅವೈಜ್ಞಾನಿಕ ಕ್ರಮವಾಗಿದೆ. ಈ ರೀತಿಯ ನಿರ್ಧಾರದಿಂದ ಹಿಂದಿ ಭಾಷಾ ಶಿಕ್ಷಕರು ಮುಂಬರುವ ದಿನಮಾನದಲ್ಲಿ ತಮ್ಮ ಅಸ್ತಿತ್ವ ಕಳೆದುಕೊಳ್ಳುವ ಆತಂಕ ಹಾಗೂ ಭಯದ ವಾತಾವರಣದಲ್ಲಿ ಇದ್ದಾರೆ. ನಮ್ಮ ದೇಶದಲ್ಲಿ ಆರಂಭದ ದಿನದಿಂದಲೂ ತ್ರಿಭಾಷಾ ಸೂತ್ರ ಪಾಲಿಸುತ್ತಾ ಬಂದಿದ್ದು, ಈಗ ಏಕಾಏಕಿಯಾಗಿ ದ್ವಿಭಾಷಾ ಸೂತ್ರಕ್ಕೆ ಬದಲಾವಣೆ ಮಾಡುವುದರಿಂದ ಆಗುವ ಸಾಧಕ ಬಾಧಕಗಳ ಕುರಿತು ಪುನರ್ ಚಿಂತನೆ ಮಾಡಲು ಅವರು ಆಗ್ರಹಿಸಿದ್ದಾರೆ.

ಭಾಷಾ ಸೂತ್ರದ ವಿಷಯಕ್ಕೆ ಸಂಬಂಧಿಸಿದಂತೆ ರಾಜಕೀಯ ಬೆರೆಸಬಾರದು ಎಂದು ಹೇಳಿ, ಸರ್ಕಾರ ಏನೇ ನಿರ್ಣಯ ಕೈಗೊಂಡರೂ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಂಡಿರುವರು.

ಇಂದಿನಿಂದ ಸಂಗಮೇಶ್ವರ ದೇವರ ಜಾತ್ರಾ ಮಹೋತ್ಸವ

ಬೀಳಗಿ: ತಾಲೂಕಿನ ಪುಣ್ಯಕ್ಷೇತ್ರ ಚಿಕ್ಕಸಂಗಮ ಗ್ರಾಮದಲ್ಲಿ ಸಂಗಮೇಶ್ವರ ದೇವರ ಜಾತ್ರಾ ಮಹೋತ್ಸವದ ಅಂಗವಾಗಿ ಏ. 2ರಿಂದ 6ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ ಎಂದು ಪ್ರಧಾನ ಅರ್ಚಕ ಚಂದ್ರಶೇಖರಯ್ಯ ಪಾಟೀಲ ತಿಳಿಸಿದ್ದಾರೆ.

ಏ.2ರಂದು ಪ್ರಾಥಃಕಾಲ ಸಂಗಮನಾಥನಿಗೆ ಮಹಾ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಹೋಮ ಹವನ ಮಹಾಮಂಗಳಾರತಿ ನೆರವೇರುವುದು. ಮಧ್ಯಾಹ್ನ 1 ಗಂಟೆಗೆ ಕಳಸ ಪೂಜೆ ನೆರವೇರುವುದು. ಹಿರೇಮೂರಮಟ್ಟಿ ಗ್ರಾಮದ ರುದ್ರಮಂಟಪದಲ್ಲಿ ಸಂಗಮನಾಥನಿಗೆ ಪಲ್ಲಕ್ಕಿ ಸೇವೆ, ವಿಶೇಷ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಮುತ್ತಲದಿನ್ನಿ ಗ್ರಾಮಸ್ಥರಿಂದ ಸಂಗಮನಾಥನಿಗೆ ಗಂಗಾ ಸ್ನಾನ, ಬೀರಕಬ್ಬಿ ಸದ್ಭಕ್ತರಿಂದ ಸಂಗಮನಾಥನಿಗೆ ವಿಶೇಷ ಪೂಜೆ ನೆರವೇರಲಿದೆ. ಶಿರಗುಪ್ಪಿಯ ಸಿದ್ದಲಿಂಗೇಶ್ವರ ಬ್ರಾಸ್ ಬ್ಯಾಂಡ್ ಕಂಪನಿಯಿಂದ ಬ್ಯಾಂಡ್ ಸೇವೆ ನಡೆಯಲಿದೆ. ಹೆಗ್ಗೂರ ಗ್ರಾಮದಿಂದ ರಥದ ಹಗ್ಗ ಮತ್ತು ನಂದಿಕೋಲು ಮೆರವಣಿಗೆ ನಡೆಯಲಿದೆ.



ಮುತ್ತತ್ತಿ ಗ್ರಾಮದಿಂದ ತೇರಿನ ಹೂ ಮಾಲೆ, ಜಡ್ರಾಮಕುಂಟಿ ಗ್ರಾಮದಿಂದ ಸಂಗಮೇಶ್ವರ ದೇವರ ತೇರಿನ ಕಳಸ ಆಗಮಿಸುವುದು. ಸಂಜೆ 5 ಗಂಟೆಗೆ ಕಳಸದ ಮೆರವಣಿಗೆ ಪ್ರಾರಂಭಗೊಂಡು, ಗಿರಿಸಾಗರದ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಮುತ್ತತ್ತಿಯ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು, ಬಿಲ್‌ಕೆರೂರದ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ರಥೋತ್ಸವ ಆರತಿ ನಡೆಯಲಿದೆ.

ರಾತ್ರಿ 10 ಗಂಟೆಗೆ ಸಂಗಮೇಶ್ವರ ನಾಟ್ಯ ಸಂಘದ ಹವ್ಯಾಸಿ ಕಲಾವಿದರಿಂದ ಮಾತು ಕೇಳದ ಮಕ್ಕಳು ನೀತಿ ಗೆಟ್ಟ ಸೊಸೆ ಅರ್ಥಾತ್ ಮನೆ ಮುರುಕ ಹೆಣ್ಣು ಹಾಸ್ಯಭರಿತ ಸಾಮಾಜಿಕ ನಾಟಕ ಅಭಿನಯಿಸಲ್ಪಡಲಿದೆ.

ಏ. 3ರಂದು ಸಂಗಮನಾಥನಿಗೆ ವಿಶೇಷ ಪೂಜೆ ಜರುಗುವುದು. ರಾತ್ರಿ 8 ಗಂಟೆಗೆ ದೀಪೋತ್ಸವ ಜರುಗುವುದು. ಏ. 4 ರಂದು ಸಂಜೆ 5 ಗಂಟೆಗೆ ಕಡುಬಿನ ಕಾಳಗ, ಏ. 6 ರಂದು ಕಳಸ ಇಳಿಸುವುದರೊಂದಿಗೆ ಜಾತ್ರಾ ಮಹೋತ್ಸವ ಸಂಪನ್ನಗೊಳ್ಳುವುದು.

ಉಚಿತ ಆರೋಗ್ಯ ತಪಾಸಣಾ ಶಿಬಿರ: ಏ. 2ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 4ರ ವರೆಗೆ ಜಾತ್ರೆ ಮೈದಾನದಲ್ಲಿ ಸ್ವ. ವೀರಯ್ಯ ಗಚ್ಚಿನಮಠ ಸ್ಮರಣಾರ್ಥ ಸಂಗಮೇಶ್ವರ ದೇವರ ಜಾತ್ರೆ ಪ್ರಯುಕ್ತ ವಿಜಯಪುರದ ಬಸವೇಶ್ವರ ಕ್ಲಿನಿಕ್ ಆಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಜರುಗಲಿದೆ. ತಜ್ಞವೈದ್ಯರಾದ ಡಾ. ಭುವನೇಶ್ವರಿ ಗಚ್ಚಿನಮಠ, ಡಾ. ಸೋಮೇಶ್ವರಿ ಗಚ್ಚಿನಮಠ ಇವರಿಂದ ಶಿಬಿರದಲ್ಲಿ ಸಾಮಾನ್ಯ ಆರೋಗ್ಯ ತಪಾಸಣೆ, ರಕ್ತದೊತ್ತಡ ಪರಿಶೀಲನೆ, ರಕ್ತದ ಸಕ್ಕರೆ ಪರೀಕ್ಷೆ,ಚರ್ಮರೋಗಗಳ ತಪಾಸಣೆ, ಗಾಯಗಳು, ಸಣ್ಣ ಶಸ್ತ್ರ ಚಿಕಿತ್ಸಾ ಸಲಹೆ, ಮೂಲೆ, ಪೈಲ್ಸ್, ಫಿಸ್ತುಲಾ ಸಮಸ್ಯೆಗಳಿಗೆ ಸಲಹೆ, ಮಹಿಳಾ ಆರೋಗ್ಯ ಸಲಹೆ, ಔಷಧಿ ಸಲಹೆ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೋ: 9148672999ಗೆ ಸಂಪರ್ಕಿಸಬಹುದು.

ಕಿರುಸುದ್ದಿ

ಗುರುವಂದನಾ, ಸ್ನೇಹ ಸಮ್ಮಿಲನ ನಾಳೆ

ದೇವರಹಿಪ್ಪರಗಿ: ತಾಲೂಕಿನ ಯಾಳವಾರ ಗ್ರಾಮದ ಶ್ರೀ ಸೋಮೇಶ್ವರ ವಿದ್ಯಾ ವರ್ಧಕ ಸಂಘದ ಪ್ರೌಢಶಾಲೆಯ 2006ನೇ ಸಾಲಿನ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳಿಂದ ಏ.3ರಂದು ಬೆಳಗ್ಗೆ 10 ಗಂಟೆಗೆ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮವನ್ನು ಶಾಲೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಷ್ಯರು ತಮ್ಮ ಜೀವನವನ್ನು ರೂಪಿಸಿದ ಗುರುಗಳಿಗೆ ಗೌರವ, ಕೃತಜ್ಞತೆ ಮತ್ತು ಪ್ರೀತಿಯನ್ನು ಸಲ್ಲಿಸುವ ಪವಿತ್ರ ಸಮಾರಂಭವಾಗಿದೆ. ಹಳೆಯ ವಿದ್ಯಾರ್ಥಿಗಳು ಒಗ್ಗೂಡಿ, ತಾವು ಕಲಿತ ಶಾಲೆಗೆ ಮರಳಿ, ತಮ್ಮ ಬಾಲ್ಯದ ಶಿಕ್ಷಕರನ್ನು ಸನ್ಮಾನಿಸಿ, ನೆನಪುಗಳನ್ನು ಹಂಚಿಕೊಳ್ಳುವ ಮೂಲಕ ಈ ಕಾರ್ಯಕ್ರಮ ಆಚರಿಸಲಾಗುತ್ತಿದೆ. ಶಿಕ್ಷಕರಿಗೆ ಶಾಲು ಹೊದಿಸಿ, ಫಲ-ಪುಷ್ಪ ನೀಡಿ, ಸ್ಮರಣಿಕೆಗಳ ಮೂಲಕ ಗೌರವಿಸಲಾಗುತ್ತದೆ. ಕಾರ್ಯಕ್ರಮದ ಅಂಗವಾಗಿ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಆಯೋಜಿಸಲಾಗಿದೆ ಎಂದು ಹಳೆಯ ವಿದ್ಯಾರ್ಥಿಗಳ ಸಂಘವು ತಿಳಿಸಿದೆ.

ಇಂದು ಬಿಇಡಿ ಶಿಕ್ಷಕ ವಿದ್ಯಾರ್ಥಿ ಒಕ್ಕೂಟ ಉದ್ಘಾಟನೆ

ತಾಳಿಕೋಟೆ: ಸ್ಥಳೀಯ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯದ ಬಿಇಡಿ ಪ್ರಥಮ ವರ್ಷದ ಶಿಕ್ಷಕ ವಿದ್ಯಾರ್ಥಿಗಳ ಸ್ವಾಗತ ಮತ್ತು 2025-26ನೆಯ ಸಾಲಿನ ಶಿಕ್ಷಕ ವಿದ್ಯಾರ್ಥಿ ಒಕ್ಕೂಟದ ಉದ್ಘಾಟನಾ ಸಮಾರಂಭವು ಏ.2 ರಂದು ಬೆಳಿಗ್ಗೆ 11.30ಕ್ಕೆ ವಿರಕ್ತಶ್ರೀ ಸಭಾಭವನದಲ್ಲಿ ನಡೆಯಲಿದೆ. ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷ ವಿ.ಸಿ.ಹಿರೇಮಠ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ವಿಜಯಪುರದ ಶಿಕ್ಷಕ ಎಂ.ಇ.ಕಾಗವಾಡ, ವೀ.ವಿ.ಸಂಘದ ಉಪಾಧ್ಯಕ್ಷ ಕಾಶಿನಾಥ ಮುರಾಳ, ಕಾರ್ಯದರ್ಶಿ ಎಂ.ಎಸ್.ಸರಶೆಟ್ಟಿ, ಸಹಕಾರ್ಯದರ್ಶಿ ಆರ್.ಸಿ.ಪಾಟೀಲ ಉಪಸ್ಥಿತರಿರುವರು. ಅಧ್ಯಕ್ಷತೆಯನ್ನು ಸಂಸ್ಥೆಯಪ್ರಾಚಾರ್ಯ ಆರ್.ಎಂ.ಭಂಟನೂರ ವಹಿಸುವರು ಎಂದು ಪ್ರಕಟನೆ ತಿಳಿಸಿದೆ.

ಏ.7 ರವರೆಗೆ ಕಾಲುವೆ ಜಾಲಕ್ಕೆ ನೀರು

ವಿಜಯಪುರ: ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಮುಳವಾಡ ಏತ ನೀರಾವರಿ ವೃತ್ತ ಟಕ್ಕಳಕಿ ಅಡಿ ಬರುವ ಕಾಲುವೆ ಜಾಲಕ್ಕೆ 2025 - 26ರ ಹಿಂಗಾರು ಹಂಗಾಮಿಗೆ ಕಾಲುವೆ ಜಾಲಕ್ಕೆ ನೀರು ಹರಿಸುವ ಅವಧಿಯನ್ನು ಏ.1 ರಿಂದ ಏ.7ರ ವರೆಗೆ ವಿಸ್ತರಿಸಲಾಗಿದೆ ಎಂದು ಕೆಬಿಜೆಎನ್ ಎಲ್ ಮುಳವಾಡ ಏತ ನೀರಾವರಿ ಯೋಜನೆಯ ಟಕ್ಕಳಕಿ ವೃತ್ತದ ಅಧೀಕ್ಷಕ ಅಭಿಯಂತರರು ಹೇಳಿದ್ದಾರೆ.
2025-26 ನೇ ಸಾಲಿನ ಕೃಷ್ಣಾ ಮೇಲ್ದಂಡೆ ಯೋಜನೆಯ ನೀರಾವರಿ ಸಲಹಾ ಸಮಿತಿ ಸಭೆಯ ನಿರ್ಣಯದಂತೆ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಮುಳವಾಡ ಏತ ನೀರಾವರಿ ವೃತ್ತ ಟಕ್ಕಳಕಿ ಅಡಿಯಲ್ಲಿ ಬರುವ ಹಂತ-2 ರ ಪೂರ್ವ ಮತ್ತು ಪಶ್ಚಿಮ ಕಾಲುವೆ, ಸೊನ್ನ ಏತ ನೀರಾವರಿ, ರೊಳ್ಳಿ ಮನ್ನಿಕೇರಿ ಏತ ನೀರಾವರಿ ಮತ್ತು ತೆಗ್ಗಿ ಸಿದ್ದಾಪೂರ ಏತ ನೀರಾವರಿ ಯೋಜನೆಗಳ ಕಾಲುವೆ ಜಾಲಕ್ಕೆ ಹಿಂಗಾರು ಹಂಗಾಮಿಗೆ ಡಿ. 2, 2025 ರಿಂದ ಏ. 3, 2026 ರವರೆಗೆ 14 ದಿನ ಚಾಲೂ ಹಾಗೂ 10 ದಿನ ಬಂದ ಅನುಸರಿಸಿ ಒಟ್ಟು 123 ದಿನಗಳವರೆಗೆ ನೀರು ಪೂರೈಸಲು ತೀರ್ಮಾನಿಸಲಾಗಿತ್ತು. ಈಗ ನೀರಿನ ಲಭ್ಯತೆಯ ಅನುಸಾರ 2025-26ನೇ ಸಾಲಿನ ಹಿಂಗಾರು ಹಂಗಾಮಿಗೆ ನೀರು ಪೂರೈಸುವ ಅವಧಿಯನ್ನು ಏ. 1 ರಿಂದ ಏ. 7 ರವರೆಗೆ ವಿಸ್ತರಿಸಲಾಗಿದೆ. ಯೋಜನಾ ವ್ಯಾಪ್ತಿಯ ಕಾಲುವೆಗಳಲ್ಲಿ ಬೆಳೆದು ನಿಂತಿರುವ ಲಘು ನೀರಾವರಿ ಬೆಳೆಗಳನ್ನು ಸಂರಕ್ಷಿಸಲು ಅವಶ್ಯವಿದ್ದಲ್ಲಿ ಮಾತ್ರ ನೀರನ್ನು ಮಿತವಾಗಿ ಬಳಸಬೇಕು ಎಂದವರು ಪ್ರಕಟಣೆಯಲ್ಲಿ ರೈತರಿಗೆ ಮನವಿ ಮಾಡಿದ್ದಾರೆ.

ಅಪರಿಚಿತ ಶವ ಪತ್ತೆ

ವಿಜಯಪುರ: ನಗರದ ಗಾಂಧಿಚೌಕ್ ಪೊಲೀಸ್ ಠಾಣೆಯ ಸರಹದ್ದಿನ ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಹನುಮಾನ ಗುಡಿ ಹತ್ತಿರ ಕಾಯಿಲೆಯಿಂದ ಬಳಲುತ್ತಿದ್ದ 42 ವರ್ಷದ ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿದೆ. ಮೃತ ವ್ಯಕ್ತಿಯು ಸುಮಾರು 5.5 ಅಡಿ ಎತ್ತರ ಇದ್ದು, ಕಪ್ಪು ತಲೆ ಕೂದಲು, ಉದ್ದು ಮುಖ ಸಾಧಗಪ್ಪು ಮೈ ಬಣ್ಣ, ಸಾಧಾರಣ ಮೈ ಕಟ್ಟು ಹೊಂದಿದ್ದು, ನೀಲಿ ಬಣ್ಣದ ಬಿಳಿ ಹೂವಿನ ಚಿತ್ರ ಪೂರ್ತಿ ತೋಳಿನ ಅಂಗಿ ಮೈ, ನೀಲಿ ಬಣ್ಣದ ಬನಿಯನ್, ಧರೆಸಿರುತ್ತಾರೆ.ಈ ಮೃತ ಅಪರಿಚಿತ ವ್ಯಕ್ತಿಯ ವಾರಸುದಾರರ ಪತ್ತೆ ಸುಳಿವು ಸಿಕ್ಕರೆ ಗಾಂಧಿ ಚೌಕ್ ಪೊಲೀಸ್ ಠಾಣೆ ವಿಜಯಪುರ ಹಾಗೂ ವಿಜಯಪುರ ಪೊಲೀಸ್ ಠಾಣೆ ಪೊಲೀಸ್ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರೋಜಾ ಹರಿಜನ ನಿಧನ

ಕೊಲ್ಹಾರ: ತಾಲೂಕಿನ ಕೂಡಗಿ ಗ್ರಾಮದ ಸರೋಜಾ ಸುನೀಲ ಹರಿಜನ(22) ಮಂಗಳವಾರ ನಿಧನರಾಗಿದ್ದಾರೆ.



ಮೃತರು ಪತ್ರಕರ್ತ ಹಾಗೂ ಕರವೇ ವಿದ್ಯಾರ್ಥಿ ಘಟಕದ ಜಿಲ್ಲಾಧ್ಯಕ್ಷ ಮಹೇಶಕುಮಾರ ಹರಿಜನ ಅವರ ಸಹೋದರಿಯಾಗಿದ್ದಾರೆ. ಮೃತರಿಗೆ ಪತಿ, ಪುತ್ರ ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ.



ವಿಜಯಪುರ: ನಗರದ ದರ್ಬಾರ್ ಹೈಸ್ಕೂಲ್ ಮೈದಾನದಲ್ಲಿ ಏ. 10 ರಿಂದ 14 ವರೆಗೆ ನಡೆಯಲಿರುವ ಬಿಜಾಪುರ ಬುದ್ಧ, ಬಸವ, ಬಾಬಾಸಾಹೇಬ ಅಂಬೇಡ್ಕರ್ ಪುಸ್ತಕ ಮೇಳದ ಪೋಸ್ಟರ್‌ಗಳನ್ನು ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪುಸ್ತಕ ಮೇಳದಲ್ಲಿ ಜಿಲ್ಲೆಯ ಜನರು, ಸಾಹಿತ್ಯಾಸಕ್ತರು, ಓದುಗರು ಪಾಲ್ಗೊಂಡು ಪುಸ್ತಕ ಮೇಳವನ್ನು ಯಶಸ್ವಿಗೊಳಿಸುವಂತೆ ಕೋರಿದರು.
ಮೇ ಸಾಹಿತ್ಯ ಬಳಗದ ಚೆನ್ನು ಕಟ್ಟಿಮನಿ, ಸೋಮು ರಣದೇವಿ, ಶಿವರಾಜ ಕಟ್ಟಿಮನಿ, ಅಪ್ಪು ಚೆನಗುಂಡಿ ಇದ್ದರು.

ಅಕ್ಷರ ಜ್ಞಾನಕ್ಕಿಂತ ಸಂಸ್ಕಾರ ಜ್ಞಾನ ಅತೀ ಅವಶ್ಯಕ

ವಿಜಯಪುರ: ನಗರದ ಬಿಎಲ್‌ಡಿಇ ಸಂಸ್ಥೆಯ ಜ್ಞಾನಯೋಗಿ ಸಿದ್ಧೇಶ್ವರ ಸ್ವಾಮೀಜಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪಾಲಕ-ಶಿಕ್ಷಕರ ಸಭೆ ಹಮ್ಮಿಕೊಳ್ಳಲಾಯಿತು.

ಬಿಎಲ್‌ಡಿಇ ಸಂಸ್ಥೆಯ ಎಸ್.ಎಸ್. ಆವರಣದ ಆಡಳಿತಾಧಿಕಾರಿ ಪ್ರೊ.ಐ.ಎಸ್. ಕಾಳಪ್ಪನವರ ಮಾತನಾಡಿ, ಎಂ.ಬಿ. ಪಾಟೀಲ ಅವರ ಸಾರಥ್ಯದಲ್ಲಿ ಮುನ್ನಡೆಯುತ್ತಿರುವ ಬಿಎಲ್‌ಡಿಇ ಶಿಕ್ಷಣ ಸಂಸ್ಥೆ ವ್ಯಾಪಾರೀಕರಣದ ಶಿಕ್ಷಣ ಸಂಸ್ಥೆ ಅಲ್ಲ, ಬದಲಾಗಿ ಮಕ್ಕಳಲ್ಲಿ ಗುಣಾತ್ಮಕ ಶಿಕ್ಷಣ, ಸಂಸ್ಕಾರ, ಶಿಸ್ತು ಬದ್ಧತೆಯನ್ನು ಬೆಳೆಸುವ ಸಂಪನ್ಮೂಲ ಕೇಂದ್ರವಾಗಿದೆ ಎಂದರು. ಅಕ್ಷರ ಜ್ಞಾನಕ್ಕಿಂತ ಸಂಸ್ಕಾರ ಜ್ಞಾನ ಅತೀ ಅವಶ್ಯಕವಾಗಿದ್ದು, ಅಕ್ಷರ ಕಲಿತ ವ್ಯಕ್ತಿ ಬದುಕಿನಲ್ಲಿ ಕೆಲವೊಮ್ಮೆ ತಪ್ಪು ಮಾಡಬಹುದು. ಆದರೆ ಸಂಸ್ಕಾರ ಕಲಿತ ವ್ಯಕ್ತಿ ಬದುಕಿನಲ್ಲಿ ಎಂದಿಗೂ ತಪ್ಪು ಮಾಡಲಾರ. ಹೀಗಾಗಿ ನಮ್ಮ ಮಕ್ಕಳನ್ನು ಜ್ಞಾನವಂತ ಮತ್ತು ಸಂಸ್ಕಾರವಂತರನ್ನಾಗಿ ಮಾಡೋಣ ಎಂದರು.

ಮಹಾವಿದ್ಯಾಲಯದ ಪ್ರಾಚಾರ್ಯರು ಡಾ.ಭಾರತಿ ಖಾಸನೀಸ್ ಮಾತನಾಡಿ, ಮಕ್ಕಳಿಗೆ ಶಿಕ್ಷಕರು ಮತ್ತು ಪಾಲಕರು ಒಳ್ಳೆಯ ಅನುಭವಗಳನ್ನು ನೀಡುವುದು ಬಹಳಷ್ಟು ಮುಖ್ಯವಾಗಿದೆ. ವಿದ್ಯಾರ್ಥಿಗಳ ಪ್ರಗತಿಗಾಗಿ ನಾವೆಲ್ಲರೂ ಬದ್ಧತೆಯಿಂದ ಶ್ರಮಿಸೋಣ. ಪಾಲಕರ ಸಲಹೆ ಸೂಚನೆಗಳು ನಮಗೆ ಎಂದಿಗೂ ಸ್ವೀಕಾರ್ಹ ಎಂದರು.

ಸಹ ಪ್ರಾಧ್ಯಾಪಕ ಡಾ.ಎಂ.ಎಸ್. ಹಿರೇಮಠ, ಡಾ.ಎಂ.ಬಿ. ಕೋರಿ, ಸಹಾಯಕ ಪ್ರಾಧ್ಯಾಪಕಿ ಡಾ.ಜೆ.ಎಸ್. ಪಟ್ಟಣಶೆಟ್ಟಿ, ಎಸ್.ಎಸ್. ಪಾಟೀಲ, ಪಿ.ಡಿ. ಮುಲ್ತಾನಿ, ಸಂಗಮೇಶ ಗುಂಡಳ್ಳಿ, ಎ.ಎಚ್. ಕೆಂಭಾವಿ, ಎಸ್.ಎಸ್. ನಾಯ್ಕೋಡಿ ಇದ್ದರು.



ವಿಜಯಪುರ: ನಗರದ ಬಿಎಲ್‌ಡಿಇ ಸಂಸ್ಥೆಯ ಜ್ಞಾನಯೋಗಿ ಸಿದ್ಧೇಶ್ವರ ಸ್ವಾಮೀಜಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪಾಲಕ-ಶಿಕ್ಷಕರ ಸಭೆ ಹಮ್ಮಿಕೊಳ್ಳಲಾಯಿತು. ಆಡಳಿತಾಧಿಕಾರಿ ಪ್ರೊ.ಐ.ಎಸ್. ಕಾಳಪ್ಪನವರ,ಮಹಾವಿದ್ಯಾಲಯದ ಪ್ರಾಚಾರ್ಯರು ಡಾ.ಭಾರತಿ ಖಾಸನೀಸ್,ಸಹ ಪ್ರಾಧ್ಯಾಪಕ ಡಾ.ಎಂ.ಎಸ್. ಹಿರೇಮಠ, ಡಾ.ಎಂ.ಬಿ. ಕೋರಿ, ಸಹಾಯಕ ಪ್ರಾಧ್ಯಾಪಕಿ ಡಾ.ಜೆ.ಎಸ್. ಪಟ್ಟಣಶೆಟ್ಟಿ, ಎಸ್.ಎಸ್. ಪಾಟೀಲ, ಪಿ.ಡಿ. ಮುಲ್ತಾನಿ, ಸಂಗಮೇಶ ಗುಂಡಳ್ಳಿ, ಎ.ಎಚ್. ಕೆಂಭಾವಿ, ಎಸ್.ಎಸ್. ನಾಯ್ಕೋಡಿ ಇದ್ದರು.

ನೀರಿನ ಸಮಸ್ಯೆ ತಪ್ಪಿಸಲು ಮುಂಜಾಗ್ರತಾ ಕ್ರಮ ಕೈಗೊಳ್ಳಿ

ಚಡಚಣ: ಬೇಸಿಗೆಯ ತೀವ್ರತೆಗೆ ಮುನ್ನ ತಾಲೂಕಿನಲ್ಲಿ ಎಲ್ಲೆಡೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಅಧಿಕಾರಿಗಳು ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ ಸೂಚಿಸಿದರು.

ಸ್ಥಳೀಯ ಪ್ರವಾಸಿ ಮಂದಿರದಲ್ಲಿ ಬುಧವಾರ ನಡೆದ ತಾಲೂಕು ಮಟ್ಟದ ಟಾಸ್ಕ್‌ಫೋರ್ಸ್ ಸಭೆಯಲ್ಲಿ ಅವರು ಮಾತನಾಡಿದರು. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಉಷ್ಣತೆ ಹೆಚ್ಚಾಗುವ ಸಾಧ್ಯತೆ ಇದ್ದು, ಕೊಳವೆಬಾವಿಗಳು ಸೇರಿದಂತೆ ನೀರಿನ ಮೂಲಗಳು ಬತ್ತಿಹೋಗುವ ಪರಿಸ್ಥಿತಿ ಎದುರಾಗಬಹುದು. ಆದ್ದರಿಂದ ಪ್ರತಿಯೊಂದು ಗ್ರಾಮದಲ್ಲೂ ಜನರು ಹಾಗೂ ಜಾನುವಾರುಗಳಿಗೆ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪ್ರತಿ ಗ್ರಾಮ ಲೆಕ್ಕಾಧಿಕಾರಿ ಹಾಗೂ ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿಗಳು ತಮ್ಮ ವ್ಯಾಪ್ತಿಯ ಗ್ರಾಮಗಳಲ್ಲಿ ನೀರಿನ ಸಮಸ್ಯೆ ಎದುರಾಗದಂತೆ ಗಮನಹರಿಸಬೇಕು. ಗ್ರಾಮ ಪಂಚಾಯಿತಿಗಳಲ್ಲಿ ಸದಸ್ಯರ ಅವಧಿ ಮುಗಿದಿರುವ ಹಿನ್ನೆಲೆ ಆಡಳಿತಾಧಿಕಾರಿಗಳು ಮತ್ತು ಪಿಡಿಓಗಳು ಸಮನ್ವಯದಿಂದ ಕೆಲಸ ಮಾಡಬೇಕು. ವಾರಕ್ಕೊಮ್ಮೆ ಸಭೆ ನಡೆಸಿ ಸಮಸ್ಯೆಗಳ ಪರಿಶೀಲನೆ ಮಾಡಬೇಕು ಎಂದು ಹೇಳಿದರು. ನೀರಿನ ಸಂಬಂಧ ಸಣ್ಣಪುಟ್ಟ ಕಾಮಗಾರಿಗಳಿಗೆ ಬಜೆಟ್ ಕೊರತೆ ಇದ್ದರೂ ಕೂಡ



- ತಾಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಭೆ
- ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ ಸೂಚನೆ

ತಕ್ಷಣ ತಮ್ಮ ಗಮನಕ್ಕೆ ತಂದರೆ ಅಗತ್ಯ ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದರು. ಶಾಸಕರು ನೀರಿನ ವ್ಯವಸ್ಥೆ ಇರುವ ಸ್ಥಳಗಳಾದ ಕೊಳವೆಭಾವಿ ಹಾಗೂ ಭೀಮಾ ನದಿಯ ಸ್ಥಳದಲ್ಲಿ ವಿದ್ಯುತ್ ಕೊರತೆ ಆಗದಂತೆ ನೋಡಿಕೊಳ್ಳಲು ಮತ್ತು ಟಿಸಿ ವಿಫಲವಾದರೆ ಕೂಡಲೆ ರಿಪೇರಿ ಮಾಡಿಸಿ ಅಳವಡಿಸುವಂತೆ ಎಇಇ ವಿಜಯಕುಮಾರ ಹವಾಲ್ದಾರರಿಗೆ ಸೂಚಿಸಿದರು.

ಚಡಚಣ ಪಟ್ಟಣಕ್ಕೆ ಮಂಜೂರಾಗಿರುವ ಮೌಲಾನಾ ಆಜಾದ್ ವಸತಿ ಶಾಲೆ, ಸರ್ಕಾರಿ ಪದವಿ ಕಾಲೇಜುಗಳಿಗೆ ಕನಿಷ್ಠ 30 ಎಕರೆ ಜಮೀನು ಅಗತ್ಯವಿದೆ ಎಂದು ಶಾಸಕ ಪ್ರಶ್ನಿಸಿದಾಗ, ತಹಶೀಲ್ದಾರ ಸಂಜಯ ಇಂಗಳೆ ಪ್ರತಿಕ್ರಿಯಿಸಿ, ಪಟ್ಟಣದಿಂದ ಸುಮಾರು 3 ಕಿ.ಮೀ ದೂರದಲ್ಲಿರುವ ಹಾವಿನಾಳ ಗ್ರಾಮದಲ್ಲಿ ಸರ್ಕಾರದ 45 ಎಕರೆ ಜಾಗ ಲಭ್ಯವಿದ್ದು, ಅಲ್ಲಿ ಶಿಕ್ಷಣ ಹಬ್ ನಿರ್ಮಿಸಲು ಅವಕಾಶವಿದೆ ಎಂದು ತಿಳಿಸಿದರು. ಒಂದೇ ಆವರಣದಲ್ಲಿ ವಸತಿ ಶಾಲೆ, ಕೈಗಾರಿಕಾ ತರಬೇತಿ ಕೇಂದ್ರ, ಪದವಿ ಕಾಲೇಜು ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಬಹುದಾಗಿದೆ ಎಂದರು. ಸಾರ್ವಜನಿಕರು ತಮ್ಮ ಮನೆಯ ಮುಂದೆ ಮೂಕ ಪ್ರಾಣಿಗಳಾದ ಜಾನುವಾರಗಳಿಗೆ ಹಾಗೂ ಪಕ್ಷಿಗಳಿಗೆ ಕುಡಿಯಲು ನೀರಿನ ವ್ಯವಸ್ಥೆ ಮಾಡುವಂತೆ ಶಾಸಕರು ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡರು.

ತಾಲೂಕು ಟಾಸ್ಕ್‌ಫೋರ್ಸ್ ನೋಡಲ್ ಅಧಿಕಾರಿ ಸಿ.ಬಿ. ಕುಂಬಾರ, ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಅಶೋಕಕುಮಾರ ರಾಠೋಡ, ಪಪಂ ಮುಖ್ಯಾಧಿಕಾರಿ ಬಾಬಾಸಾಹೇಬ ತಾವಸೆ, ಆಹಾರ ನಿರೀಕ್ಷಕ ಶಿವಾನಂದ ಕೋಳಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳು ಉಪಸ್ಥಿತರಿದ್ದರು.

37ನೇ ದಿನಕ್ಕೆ ಕಾಲಿಟ್ಟ ಧರಣಿ: ಬೆಂಬಲ

ತಾಳಿಕೋಟೆ: 'ಪ್ರಜಾಸೌಧ ಜನರಿಗಾಗಿ ಇರಬೇಕೇ ಹೊರತು, ನಿರ್ಜನ ಪ್ರದೇಶದ ಪಾಲಿಗಲ್ಲ' ಎಂದು ಆಗ್ರಹಿಸಿ ತಾಳಿಕೋಟೆಯ ಬಸವೇಶ್ವರ ವೃತ್ತದಲ್ಲಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವು ಬುಧವಾರ 37ನೇ ದಿನಕ್ಕೆ ಯಶಸ್ವಿಯಾಗಿ ಮುಂದುವರಿಯಿತು. ಈ ಹೋರಾಟಕ್ಕೆ ಬಾವೂರ ಗ್ರಾಮದ ಸರ್ವ ಸಮಾಜದ ಹಿರಿಯರು ಹಾಗೂ ಅಖಂಡ ಕರ್ನಾಟಕ ರೈತ ಸಂಘ ಭಾರಿ ಬೆಂಬಲ ವ್ಯಕ್ತಪಡಿಸುವ ಮೂಲಕ ಚಳುವಳಿಗೆ ಹೊಸ ಚೈತನ್ಯ ನೀಡಿದರು.

ಜನವಿರೋಧಿ ಸ್ಥಳ ಆಯ್ಕೆ ವಿರುದ್ಧ ಆಕ್ರೋಶ: ಪ್ರತಿಭಟನಾ ನಿರತರನ್ನು ಉದ್ದೇಶಿಸಿ ಮಾತನಾಡಿದ ರೈತ ಸಂಘದ ರಾಜ್ಯ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಹಾಗೂ ಬಾವೂರ ಗ್ರಾಮದ ಮುಖಂಡ ಎಚ್.ಎಸ್. ಪಾಟೀಲ, ''ತಾಲೂಕು ಆಡಳಿತ ಕೇಂದ್ರವು ಸಾರ್ವಜನಿಕರಿಗೆ ಸುಲಭವಾಗಿ ಎಟುಕುವಂತಿರಬೇಕು. ಆದರೆ ಈಗ ಗುರುತಿಸಲಾಗಿರುವ ಮೈಲೇಶ್ವರ ಗ್ರಾಮದ ಹತ್ತಿರದ ಜಾಗವು ಪಟ್ಟಣದಿಂದ ಬಹಳ ದೂರವಿದ್ದು, ನಿರ್ಜನ ಪ್ರದೇಶದಲ್ಲಿದೆ. ಇದು ಮಹಿಳೆಯರ, ವಿದ್ಯಾರ್ಥಿನಿಯರ ಮತ್ತು ವೃದ್ಧರ ಸುರಕ್ಷತೆಯ ದೃಷ್ಟಿಯಿಂದ ಅಪಾಯಕಾರಿ'' ಎಂದು ಎಚ್ಚರಿಸಿದರು.

ಸ್ಥಳಾಂತರಕ್ಕೆ ಪಟ್ಟು: ಈಗಾಗಲೇ ನಿಗದಿಪಡಿಸಿರುವ ಸ್ಥಳವನ್ನು ಕೂಡಲೇ ರದ್ದುಪಡಿಸಿ, ಪಟ್ಟಣದ ವ್ಯಾಪ್ತಿಯಲ್ಲಿ ಲಭ್ಯವಿರುವ ಸರ್ಕಾರಿ ಜಾಗದಲ್ಲಿಯೇ ಪ್ರಜಾಸೌಧ ನಿರ್ಮಿಸಬೇಕು.

ಆಡಳಿತದ ಮೌನ: ಶಾಸಕರಿಗೆ ಹಾಗೂ ಜಿಲ್ಲಾಡಳಿತಕ್ಕೆ ಹಲವು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಳ್ಳದಿರುವುದು ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗಿದೆ.

ಸ್ವಹಿತಾಸಕ್ತಿಯ ಸಂಚು: ಜಾಗ ನೀಡಿದವರ ಹಿಂದೆ ವೈಯಕ್ತಿಕ ಲಾಭ ಹಾಗೂ ಸ್ವಹಿತಾಸಕ್ತಿ ಅಡಗಿದೆ ಎಂದು ಹೋರಾಟಗಾರರು ಗಂಭೀರವಾಗಿ ಆರೋಪಿಸಿದರು.

ಬಾಳಪ್ಪ ಗೌಡ ಲಿಂಗದಳ್ಳಿ, ಸಿದ್ದನಗೌಡ ಪಾಟೀಲ, ಸೈಯದ ಪಟೇಲ ಬಿರಾದಾರ, ಶಂಕರಲಿಂಗ ಅಸ್ಕಿ, ಶಂಕರಲಿಂಗ ಅರವಿ, ಬಸಣ್ಣ ಕುಂಬಾರ, ಬಮ್ಮು ಕೈರುಡಗಿ, ಬಸವರಾಜ ಅರವಿ, ಹನುಮಂತ ಚಲವಾದಿ ಸೇರಿದಂತೆ ನೂರಾರು ರೈತರು ಹಾಗೂ ಯುವಕರು ಭಾಗವಹಿಸಿದ್ದರು. ಹೋರಾಟ ಸಮಿತಿಯ ಅಧ್ಯಕ್ಷ ದಶರತಸಿಂಗ್ ಮನಗೂಳಿ, ಎಸ್.ಬಿ. ಕಟ್ಟಿಮನಿ, ಆರ್ ಎಸ್ ಪಾಟೀಲ (ಕುಚಬಾಳ) ಮುತ್ತಪ್ಪ ಚಮಲಾಪುರ, , ಕಾಶೀನಾಥ ಮುರಾಳ, ಮುರಿಗೆಪ್ಪ ಸರಶೆಟ್ಟಿ, ದತ್ತು ಹೆಬಸೂರ, ಪರಶುರಾಮ ತಂಗಡಗಿ, ನಾಗೇಶ ಕಟ್ಟಿಮನಿ, ದೇವೇಂದ್ರ ಹಾದಿಮನಿ, ವಿಜಯಸಿಂಗ್ ಹಜೇರಿ, ಮಹೇಶ ಛಲವಾದಿ, ಪ್ರಕಾಶ್ ಹಜೇರಿ ಮುದಕಪ್ಪ ಬಡಿಗೇರ, ಸಿರಸಕುಮಾರ ಹಜೇರಿ, ಮಲ್ಲು ಮೇಟಿ, ಸೇರಿದಂತೆ ಅನೇಕರು ಮತ್ತು ಪಟ್ಟಣದ ಗಣ್ಯರು ಭಾಗವಹಿಸಿದ್ದರು.



ನಿಗದಿತ ಸಮಯಕ್ಕೆ ಕಚೇರಿಯಲ್ಲಿರಿ: ಡಿಸಿ

ವಿಜಯಪುರ: ಪ್ರಸಕ್ತ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಹೆಚ್ಚಿನ ಬಿಸಿಲಿನ ತಾಪಮಾನ ಹಿನ್ನೆಲೆಯಲ್ಲಿ ಏ. 1 ರಿಂದ ಜಿಲ್ಲೆಯಲ್ಲಿ ಸರ್ಕಾರಿ ಕಚೇರಿ ಸಮಯ ಬದಲಾವಣೆಯಾಗುತ್ತಿದ್ದಂತೆಯೇ, ಬುಧವಾರ ಬೆಳಗ್ಗೆಯೇ ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ನಗರದ ಕೃಷಿ ಇಲಾಖೆ ಜಂಟಿ ನಿರ್ದೇಶಕರ ಕಚೇರಿ ಸೇರಿದಂತೆ ವಿವಿಧ ಕಚೇರಿಗಳಿಗೆ ಭೇಟಿ ನೀಡಿ ಪರಿಶೀಲಿಸಿ, ಅಧಿಕಾರಿ, ಸಿಬ್ಬಂದಿ ಹಾಜರಾತಿ ಪರಿಶೀಲಿಸಿದರು.

ಕಚೇರಿ ಸಮಯ ಬದಲಾವಣೆ ಹಿನ್ನೆಲೆಯಲ್ಲಿ ಬುಧವಾರ ನಗರದ ವಿವಿಧ ಇಲಾಖೆಗಳ ಕಚೇರಿಗೆ ದಿಢೀರ್ ಭೇಟಿ ನೀಡಿ, ಸಿಬ್ಬಂದಿ ಹಾಜರಾತಿ ಪರಿಶೀಲನೆ ನಡೆಸಿದರು. ಎಲ್ಲ ಅಧಿಕಾರಿ, ಸಿಬ್ಬಂದಿ ನಿಗದಿತ ಸಮಯಕ್ಕೆ ಕಚೇರಿಗೆ ಹಾಜರಾಗಬೇಕು. ದೈನಂದಿನ ಕಚೇರಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಯಾವುದೇ ಸಿಬ್ಬಂದಿ ಯಾವುದೇ ಕಡತ, ವಹಿ ಬಾಕಿ ಉಳಿಸಿಕೊಳ್ಳದೇ ಕಾರ್ಯ ನಿರ್ವಹಿಸುವ ಮೂಲಕ ಕಡತಗಳನ್ನು ವಿಲೇವಾರಿಯಲ್ಲಿ ಪ್ರಗತಿ ಸಾಧಿಸಬೇಕು ಎಂದರು.

ತಮ್ಮ ಎಂದಿನ ಕೆಲಸ ಕಾರ್ಯಗಳಿಗೆ ಆಯಾ ಕಚೇರಿಗೆ ಆಗಮಿಸುವ ಸಾರ್ವಜನಿಕರಿಗೆ ಸ್ಪಂದನೆ ನೀಡಬೇಕು. ಅವರ ಸಮಸ್ಯೆಗಳನ್ನು ಸಹಾನುಭೂತಿಯಿಂದ ಆಲಿಸಿ. ಯಾವುದೇ ಲೋಪ- ದೋಷ ಉಂಟಾಗದಂತೆ ಕಾರ್ಯ ನಿರ್ವಹಿಸುವಂತೆ ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಇದೇ ವೇಳೆ ಕಚೇರಿಯಲ್ಲಿ ಅಗತ್ಯ ಮೂಲಭೂತ ಸೌಲಭ್ಯ ವ್ಯವಸ್ಥೆ ಇರಬೇಕು. ಜೊತೆಗೆ ಕಚೇರಿ ಸಮಯಕ್ಕೆ ಸರಿಯಾಗಿ ಕಚೇರಿಗೆ ಹಾಜರಿರಬೇಕಾದುದು ಕಡ್ಡಾಯ. ಯಾವುದೇ ಕಚೇರಿಗೆ ಹಠಾತ್ ಭೇಟಿ ನೀಡಲಾಗುವುದು. ಕಚೇರಿಯ ವೇಳೆಯಲ್ಲಿ ಕಚೇರಿಯಲ್ಲಿದ್ದು, ಕಡತಗಳನ್ನು ತಕ್ಷಣಕ್ಕೆ ವಿಲೇವಾರಿ ಮಾಡಬೇಕು ಎಂದರು.

ಇಡೀ ಜಿಲ್ಲೆಯಾದ್ಯಂತ ಎಲ್ಲ ಸರ್ಕಾರಿ ಕಚೇರಿಗಳ ಸಿಬ್ಬಂದಿ ಬದಲಾದ ಸಮಯದಲ್ಲಿ ಕಚೇರಿಯಲ್ಲಿದ್ದುಕೊಂಡು ಯಾವುದೇ ಅಡೆತಡೆಯಿಲ್ಲದ ತಮ್ಮ ಕರ್ತವ್ಯ ನಿರ್ವಹಿಸಬೇಕು ಎಂದರು.

ಸರ್ಕಾರಿ ಕಚೇರಿ ಕೆಲಸಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಅನಾನುಕೂಲವಾಗದಂತೆ ಹಾಗೂ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತುರ್ತು ಸಂದರ್ಭಗಳಲ್ಲಿ ಯಾವುದೇ ಕಾರ್ಯವನ್ನು ನಿರ್ವಹಿಸಲು ನಿರ್ದೇಶನ ನೀಡಿದರೆ ಸಮಯದ ಮಿತಿಯಿಲ್ಲದೇ ಕೆಲಸ ನಿರ್ವಹಿಸಬೇಕೆಂದು ಇದೇ ವೇಳೆ ಜಿಲ್ಲಾಧಿಕಾರಿಗಳು ಜಿಲ್ಲೆಯ ಎಲ್ಲ ಅಧಿಕಾರಿ ಹಾಗೂ ಸಿಬ್ಬಂದಿಗೆ ಸೂಚಿಸಿದರು.



ಸಮ್ಮೇಳನದ ಉಳಿಕೆ ಹಣದಿಂದ ಗೋಶಾಲೆಗೆ ಜೋಳದ ಕಣಿಕೆ ದಾನ



ಮುದ್ದೇಬಿಹಾಳ: ಕಳೆದ ಜನವರಿ ತಿಂಗಳಲ್ಲಿ ನಡೆದಿದ್ದ ತಾಲೂಕು ಮಟ್ಟದ ಅಖಂಡ ಹಿಂದೂ ಮಹಾ ಸಮ್ಮೇಳನದ ಖರ್ಚು ವೆಚ್ಚದ ನಂತರ, ಉಳಿದ ಹಣವನ್ನು ತಾಲೂಕಿನ ಯಲಗೂರು ಗ್ರಾಮದ ಮಾರುತೇಶ್ವರ ದೇವಸ್ಥಾನದ ಗೋವುಗಳಿಗೆ ಆಹಾರವಾಗಿ ಜೋಳದ ಕಣಿಕೆಯನ್ನು ಖರೀದಿಸಿ ಸಮಾಜ ಬಾಂಧವರು ದಾನವಾಗಿ ನೀಡಿದ್ದಾರೆ.

ದೇಶಾದ್ಯಂತ ನಡೆದ ಮಹಾ ಸಮ್ಮೇಳನಗಳಲ್ಲಿ ತಾಲೂಕಿನ ಜನತೆ ಕೂಡ ಸಮ್ಮೇಳನವನ್ನು ಆಯೋಜಿಸಿ ಯಶಸ್ವಿಯಾಗಿ ಮಾಡಿದರು. ಈ ಹಿನ್ನಲೆಯಲ್ಲಿ ಸಂಗ್ರಹಿಸಲಾದ ಹಣದ ಕೆಲವು ಭಾಗ ಉಳಿಕೆಯಾಗಿ ಅದನ್ನು ಉತ್ತಮ ಉದ್ದೇಶಕ್ಕೆ ಬಳಸುವ ಉದ್ದೇಶದಿಂದ ಸಮಾಜ ಬಾಂಧವರು ಯಲಗುರದ ಮಾರುತೇಶ್ವರ ದೇವಸ್ಥಾನದ ಗೋ ಶಾಲೆಯ ಜಾನುವಾರುಗಳಿಗೆ ಆಹಾರವನ್ನು ಸಂಗ್ರಹಿಸಿ ಕೊಡಬೇಕೆಂದು ತೀರ್ಮಾನಿಸಿದ್ದರು.

ಬುಧವಾರ ಈ ಸಂಬಂಧಿತವಾಗಿ ತಾಲೂಕಿನ ರೈತರಿಂದ ಸಂಗ್ರಹಿಸಲಾದ 5 ಟ್ರ್ಯಾಕ್ಟರ್ ತುಂಬಿದ ಕಣಿಕೆಯನ್ನು ಸಮಾಜ ಬಾಂಧವರು ಯಲಗೂರದ ಗೋಶಾಲೆಗೆ ಮೂಕ ಪ್ರಾಣಿಗಳಿಗೆ ಆಹಾರವನ್ನು ಕಳಿಸಿಕೊಟ್ಟರು. ಗೋವು ಕೃಷಿಯ ಕೇಂದ್ರ ಬಿಂದುವಾಗಿದ್ದು ಮೂಕ ಪ್ರಾಣಿಗಳಿಗೆ ಆಹಾರದ ಕೊರತೆ ತೀವ್ರ ಆಗಿರುವುದರಿಂದ ಸಮಾಜದ ಈ ನಡೆ ಪ್ರಶಂಸೆಗೆ ಪಾತ್ರವಾಗಿದೆ.

ಕಣಿಗೆ ಸಾಗಿಸುವ ಸಂದರ್ಭದಲ್ಲಿ ಸಮಾಜದ ಮುಖಂಡರಾದ ವೆಂಕನಗೌಡ ಪಾಟೀಲ್, ಪ್ರಭು ಕಡಿ, ಪರಶುರಾಮ ಪವಾರ, ಮುರಿಗೆಪ್ಪ ಮೋಟಗಿ, ಮಾಣಿಕ ದಂಡಾವತಿ, ಸುಭಾಸ್ ಕುಲಕರ್ಣಿ, ನಿಂಗಣ್ಣ ಮಹೀಂದ್ರಕರ, ಅಜಯ್ ಬೋಸಲೆ, ಕಾಶಿನಾಥ ಹುಗ್ಗಿ, ಶ್ರೀಶೈಲ ದೊಡ್ಡಮನಿ, ಬಾಬು ಗೋಗಿ, ಅಶೋಕ್ ಪಿ ಮಣಿ, ಶ್ರೀಕಾಂತ ಹಿರೇಮಠ, ಚಂದ್ರು ಕಲಾಲ್, ಮಹಾಂತೇಶ ಬೂದಿಹಾಳಮಠ, ವಿಜಯ ಬಡಿಗೇರ ಸೇರಿದಂತೆ ನೂರಾರು ಹಿಂದೂ ಬಾಂಧವರು ಟ್ರ್ಯಾಕ್ಟರ್ ಮೂಲಕ ಕಣಿಕೆಯನ್ನು ತೆಗೆದುಕೊಂಡು ಹೋಗಿ ಯಲಗೂರ ಗೋಶಾಲೆಗೆ ಸಮರ್ಪಿಸಿದರು.

ಇಂದಿನಿಂದ ದಿಗಂಬರೇಶ್ವರ ಜಾತ್ರಾ ಮಹೋತ್ಸವ



ಕೊಲ್ಹಾರ: ವಿಜಯಪುರ ಮತ್ತು ಬಾಗಲಕೋಟೆ ಅವಳಿ ಜಿಲ್ಲೆಯಲ್ಲಿ ಪ್ರಸಿದ್ಧ ಜಾತ್ರೆಗಳಲ್ಲಿ ಒಂದಾದ ಕೊಲ್ಹಾರ ಶ್ರೀ ದಿಗಂಬರೇಶ್ವರ ಮಠದ ಜಾತ್ರೆಯೂ ಬುಧವಾರದಂದು ಮಠದ ಪ್ರಸ್ತುತ ಪೀಠಾಧಿಪತಿಗಳಾದ ಜಗದ್ಗುರು ಶ್ರೀ ಕಲ್ಲಿನಾಥ ದೇವರ ನೇತೃತ್ವದಲ್ಲಿ ಬಾಗಲಕೋಟ ಜಿಲ್ಲೆಯ ಶಿರೂರದಿಂದ ಸಿದ್ಧಲಿಂಗ ಶಿವಯೋಗಿ ಹಾಗೂ ಕಲ್ಲಪ್ಪಯ್ಯ ಶಿವಯೋಗಿಗಳ ಭಾವಚಿತ್ರದ ಮೆರವಣಿಗೆಯೊಂದಿಗೆ ಪಟ್ಟಣಕ್ಕೆ ಆಗಮಿಸಿ ಮತ್ತು ಸಾಮೂಹಿಕ ರೊಟ್ಟಿ ಜಾತ್ರೆಯೊಂದಿಗೆ ಅಧಿಕೃತವಾಗಿ ಚಾಲನೆಗೊಂಡಿತು.

ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಸಾವಿರಾರು ಮಹಿಳೆಯರ ಸಮ್ಮುಖದಲ್ಲಿ ಐತಿಹಾಸಿಕ ರೊಟ್ಟಿ ಜಾತ್ರೆಯೂ ವಿಜೃಂಭಣೆಯಿಂದ ನೆರವೇರಿತು.

ಐದು ದಿಗಳ ಕಾಲ ನಡೆಯುವ ಜಾತ್ರೆಯು ಕಲ್ಲಪ್ಪಯ್ಯ ಶ್ರೀಗಳ ಆಶೀರ್ವಾದ ಹಾಗೂ ಸುತ್ತ ಮುತ್ತಲಿನ ಗ್ರಾಮಗಳ ಭಕ್ತರ ಸಹಕಾರದಿಂದ ಪುರಾಣ ಪ್ರವಚನ,ಧಾರ್ಮಿಕ ,ಪ್ರಸಾದ ಸೇವೆಯಿಂದ 21 ದಿನಗಳ ಕಾಲ ನಡೆಯುತ್ತಿದೆ.

ಐದು ದಿನಗಳವರೆಗೆ ವಿಜೃಂಭಣೆಯಿಂದ ನಡೆಯುವ ಜಾತ್ರೆ. ಏ.2ರಂದು ಬೆಳಿಗ್ಗೆ 6 ಗಂಟೆಗೆ ಕತೃ ಗದ್ದುಗೆಗೆ ರುದ್ರಾಭಿಷೇಕ, ಮಧ್ಯಾಹ್ನ ಪಲ್ಲಕ್ಕಿ ಉತ್ಸವ ಹಾಗೂ ರಥೋತ್ಸವದ ಕಳಸದ ಮೆರವಣಿಗೆ ನಡೆಯುವುದು. ಸಂಜೆ 5.30ಕ್ಕೆ ಲಕ್ಷಾಂತರ ಭಕ್ತ ಸಮೂಹಗಳ ಮಧ್ಯೆ ಮಹಾರಥೋತ್ಸವ ನಡೆಯುವುದು. ಪ್ರತಿ ದಿನ ಸಂಜೆ 7 ಗಂಟೆಗೆ ಗೀಗೀ ಪದಗಳು ನಡೆಯುವುದು. ಅದೇ ದಿನ ರಾತ್ರಿ 10 ಗಂಟೆಗೆ ದೀಪಾವಳಿ ಸುಂದರ ಸಾಮಾಜಿಕ ನಾಟಕ ನಡೆಯುವುದು. ಏ.3 ರಂದು ನೀಲವಾಣಿಯವರ ಮನೆಯಿಂದ ಭಿನ್ನಹ ಹಾಗೂ ಶ್ರೀಗಳ ಪಲ್ಲಕ್ಕಿ ಉತ್ಸವ, ಮಧ್ಯಾಹ್ನ12 ಗಂಟೆಗೆ ಮಹಾಪ್ರಸಾದ ಪಂಕ್ತ ನಡೆಯುವುದು. ಅದೇ ದಿನ ಸಂಜೆ 5 ಗಂಟೆಗೆ ಇತಿಹಾಸ ಪ್ರಸಿದ್ಧ ಹಾಲೋಕಳಿ ನಡೆಯುವುದು. ರಾತ್ರಿ 10 ಗಂಟೆಗೆ ಶ್ರೀ ರೇಣುಕಾ ಯಲ್ಲಮ್ಮ ಎಂಬ ಸುಂದರ ಭಕ್ತಿ ಪ್ರಧಾನ ನಾಟಕ ನಡೆಯುವುದು. ಏ.4 ರಂದು ಬೆಳಿಗ್ಗೆ 8 ಗಂಟೆಗೆ ಎತ್ತಿನ ಗಾಡಿ ಓಟದ ಸ್ಪರ್ಧೆ ನಡೆಯುವುದು. ಸಂಜೆ 7 ಗಂಟೆಗೆ ಚಿತ್ರ ವಿಚಿತ್ರ ಮದ್ದು ಸುಡುವುದು ನಡೆಯುವುದು. ಅದೇ ದಿನ ರಾತ್ರಿ ಸಂಗ್ಯಾ ಬಾಳ್ಯಾ ಸುಂದರ ಸಾಮಾಜಿಕ ನಾಟಕ ನಡೆಯುವುದು. ಎ.5ರಂದು ಬೆಳಿಗ್ಗೆ 8 ಗಂಟೆಗೆ ಪುರುಷರಿಗಾಗಿ ಸೈಕಲ್ ಸ್ಪರ್ಧೆ ನಡೆಯುವುದು. ರಾತ್ರಿ 10 ಗಂಟೆಗೆ ಶ್ರೀ ಕೃಷ್ಣ ಮಹಾತ್ಮೆ ಭಕ್ತಿ ಪ್ರಧಾನ ನಾಟಕ ನಡೆಯುವುದು. ಎ.2ರಿಂದ 6ರವರೆಗೆ ಇತಿಹಾಸ ಪ್ರಸಿದ್ಧ ಜಾನುವಾರಗಳ ಜಾತ್ರೆ ನಡೆಯುವುದು. ಎ.6ರಂದು ವಿಜಯಪುರ ಎ ಪಿ ಎಂ ಸಿಯಿಂದ ಉತ್ತಮ ಜಾನುವಾರಗಳಿಗೆ ಬಹುಮಾನ ನೀಡಲಾಗುವುದು. ನಿತ್ಯ ಅನ್ನ ಸಂತರ್ಪಣೆ ನಡೆಯುವುದು ಎಂದು ಜಾತ್ರಾ ಕಮಿಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಕ್ರಮ ಕಟ್ಟಡ ತೆರುವುಗೊಳಿಸಲು ಅಗ್ರಹ

ಬಸವನಬಾಗೇವಾಡಿ: ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಕೆಲ ಸಿ.ಟಿ.ಎಸ್. ನಂಬರಗಳಲ್ಲಿ ಪುರಸಭೆಯಿಂದ ಪರವಾನಿಗೆ ಪಡೆಯದೆ 5ಅಂತಸ್ತಿನ ವರೆಗೆ ವಾಣಿಜ್ಯ ಕಟ್ಟಡ ನಿರ್ಮಾಣ, ಹೆದ್ದಾರಿ ಮೇಲೆ ಅನಧಿಕೃತ ವಿದ್ಯುತ್ ಪರಿವರ್ತಕ (ಟಿ.ಸಿ) ಕುಳ್ಳಿರಿಸಿರುವುದು, ಸರ್ಕಾರಿ ಗಾರ್ಡನದಲ್ಲಿ ಕಟ್ಟಡ ನಿರ್ಮಾಣ ಮಾಡಿದ್ದಾರೆ ಅವರ ಮೇಲೆ ಸೂಕ್ತಕ್ರಮ ಕೈಗೊಳ್ಳಬೇಕೆಂದು ಅಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಬುಧವಾರ ತಹಶೀಲ್ದಾರ್ ಅವರ ಮುಖಾಂತರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಪಟ್ಟಣದ ವಿಜಯಪುರ ರಸ್ತೆಯಲ್ಲಿರುವ ಸರಕಾರಿ ಜಾಗವನ್ನು ಅಕ್ರಮಗೊಳಿಸಿ ಆ ಜಾಗಯಲ್ಲಿ ಬ್ರಿಟೀಷರ ಕಾಲದಿಂದರುವ ಸಾರ್ವಜನಿಕರ ಭಾವಿ ಇದ್ದು, ಅದನ್ನು ತೆರೆವುಗೊಳಿಸಿರುವುದು ಮತ್ತು ಅನಧಿಕೃತ ಪ್ಲಾಟ್ ಮಾಡಿರುವುದನ್ನು ಸೂಕ್ತ ತನಿಖೆ ನಡೆಸಿ ಸಾರ್ವಜನಿಕರಿಗೆ ನ್ಯಾಯ ಒದಗಿಸಿಕೊಡಬೇಕು. ಕೂಡಲೇ ಪುರಸಭೆ ಮುಖ್ಯಾಧಿಕಾರಿಗಳಿಗೆ ಸರಕಾರಿ ಜಾಗವನ್ನು ತೆರವುಗೊಳಿಸಲು ಆದೇಶಿಸಬೇಕು, ಇಲ್ಲವಾದರೆ ಉಗ್ರ ಹೋರಾಟ ಮಾಡಬೇಕಾಗುತ್ತದೆಂದು ಎಚ್ಚರಿಕೆಯನ್ನು ಮನವಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಕರವೇ ರಾಜ್ಯ ಸಂಘಟನಾ ಕಾರ್ಯದರ್ಶಿ ಹಾಗೂ ಅವಳಿ ಜಿಲ್ಲೆಗಳ ಉಸ್ತುವಾರಿ ಅಶೋಕ ಹಾರಿವಾಳ ಮಾತನಾಡಿದರು. ದಯಾನಂದ ಸಾರವಾಡ, ಸೀತಾರಾಮ ಭಜಂತ್ರಿ, ಹನಮಂತ ಟಕ್ಕಳಕಿ, ರವಿ ವಡ್ಡರ, ಸುರೇಶ ಬೇವಿನಗಿಡದ, ರಾಜು ವಡ್ಡರ, ಗಣೇಶ ಗಾಯಕವಾಡ, ರಾಜು ದಡ್ಡಿ ಸೇರಿದಂತೆ ಇತರರು ಇದ್ದರು.



ಬಿಜೆಪಿಗೆ ನಂದು ಗಡಗಿ ಸೇರ್ಪಡೆ



ವಿಜಯಪುರ: ನಗರ ಶಾಸಕ ಬಸನಗೌಡ ಪಾಟೀಲ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಯುವ ಮುಖಂಡ ನಂದು ಗಡಗಿ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೆಂದ್ರ ಅವರ ನಾಯಕತ್ವವನ್ನ ಒಪ್ಪಿಕೊಂಡು, ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ವಿಜಯಪುರ ನಗರ ಮಂಡಲ ಅಧ್ಯಕ್ಷ ಸಂದೀಪ ಪಾಟೀಲ ಸಮ್ಮುಖದಲ್ಲಿ ಬಾಗಲಕೋಟೆ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಪಕ್ಷಕ್ಕೆ ಅಧಿಕೃತವಾಗಿ ಸೇರ್ಪಡೆಗೊಂಡರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಮತ್ತಿತರ ಹಿರಿಯ ನಾಯಕರು ಪಕ್ಷದ ಧ್ವಜ ನೀಡಿ ಪಕ್ಷಕ್ಕೆ ಬರ ಮಾಡಿಕೊಂಡರು. ದೇಶದ ಪ್ರಧಾನಿ ಮೋದಿ ಅವರ ನಾಯಕತ್ವ ಹಾಗೂ ವಿಜಯೆಂದ್ರ ಅವರ ನಾಯಕತ್ವ ಹಾಗೂ ಬಿಜೆಪಿ ತತ್ವ ಸಿದ್ಧಾಂತಗಳನ್ನು ಮೆಚ್ಚಿ ಪಕ್ಷಕ್ಕೆ ಬಂದಿದ್ದೇನೆ. ಜಿಲ್ಲೆಯಲ್ಲಿ ಪಕ್ಷದ ಬೆಳೆವಣಿಗೆಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ನಂದು ಗಡಗಿ ಹೇಳಿದರು.

ಏ. 4ಕ್ಕೆ ವೈದ್ಯಕೀಯ ಶಿಕ್ಷಣ ಕಾರ್ಯಾಗಾರ

ವಿಜಯಪುರ: ನಗರದ ಪ್ರತಿಷ್ಠಿತ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯ ಬಿ.ಎಂ. ಪಾಟೀಲ ಮೆಡಿಕಲ್ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದಲ್ಲಿ ಕಿವಿ, ಮೂಗು, ಗಂಟಲು ವಿಭಾಗದಿಂದ ಅಲರ್ಜಿ ಕ್ಷೇತ್ರದ ಹೊಸ ಒಳನೋಟಗಳು ಕುರಿತು ನಿರಂತರ ವೈದ್ಯಕೀಯ ಶಿಕ್ಷಣ ಮತ್ತು ಕಾರ್ಯಾಗಾರ ಏ. 4 ರಂದು ನಡೆಯಲಿದೆ.

ಬಿಎಲ್‌ಡಿಇ ಆಸ್ಪತ್ರೆಯ ಟ್ರಾಮಾ ಸೆಂಟರ್‌ನ 2 ನೇ ಮಹಡಿಯ ಮಿನಿ ಆಡಿಟೋರಿಯಂನಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ಬೆಂಗಳೂರಿನ ಖ್ಯಾತ ಅಲರ್ಜಿ ತಜ್ಞೆ ಡಾ. ಗಾಯತ್ರಿ ಪಂಡಿತ, ಡಾ. ಶ್ರುತಿ ಮಂಜುನಾಥ, ಹುಬ್ಬಳ್ಳಿ ಚಿಕ್ಕಮಕ್ಕಳ ತಜ್ಞ ಡಾ. ಬಾಹುಬಲಿ ಇಂಗಳೆ ಅವರು ಅಲರ್ಜಿ ಮತ್ತು ಇಮ್ಯುನಾಲಜಿ ಕ್ಷೇತ್ರದಲ್ಲಿನ ವಿನೂತನ ವಿಚಾರಗಳನ್ನು ಹಂಚಿಕೊಳ್ಳಲಿದ್ದಾರೆ.

ಅಲ್ಲದೇ, ಬಿಎಲ್‌ಡಿಇ ಪಲ್ಮನಾಲಜಿಸ್ಟ್ ವಿಭಾಗದ ಡಾ. ಕೀರ್ತಿವರ್ಧನ ಕುಲಕರ್ಣಿ ಅವರು ಅಸ್ತಮಾ ಕುರಿತು ಉಪನ್ಯಾಸ ನೀಡಲಿದ್ದಾರೆ.

ಅಲರ್ಜಿ ಸಂಬಂಧಿತ ರೋಗಗಳ ಪತ್ತೆಹಚ್ಚುವಿಕೆ ಮತ್ತು ಚಿಕಿತ್ಸೆ ಕುರಿತ ಮಾಹಿತಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ, ವೈದ್ಯರು ಹಾಗೂ ಆರೋಗ್ಯ ಕ್ಷೇತ್ರದ ವೃತ್ತಿಪರರಿಗೆ ಮಕ್ಕಳ ತಜ್ಞರು, ಕಿವಿ ಮೂಗು ಗಂಟಲು ತಜ್ಞರು, ಚರ್ಮರೋಗ ಹಾಗೂ ಸಾಮಾನ್ಯ ವೈದ್ಯರಿಗೆ ಈ ಕಾರ್ಯಾಗಾರ ಉಪಯುಕ್ತವಾಗಲಿದೆ.

ಈ ಕಾರ್ಯಾಗಾರದಲ್ಲಿ ಭಾಗವಹಿಸುವ ವೈದ್ಯರಗಳಿಗೆ ಸ್ವತಃ ಅಲರ್ಜಿಯ ಚರ್ಮ ಪರೀಕ್ಷೆ ಮಾಡಲು ಕಾರ್ಯಾಗಾರ ಇದ್ದು, ಈ ಕಾರ್ಯಾಗಾರದಿಂದ ವೈದ್ಯರು ರೋಗಿಗಳಿಗೆ ಅಲರ್ಜಿಯ ಚರ್ಮ ಪರೀಕ್ಷೆ ಮಾಡಲು ಆತ್ಮವಿಶ್ವಾಸ ಹೆಚ್ಚುತ್ತದೆ. ಜಿಲ್ಲೆಯ ಎಲ್ಲ ವೈದ್ಯರು ಈ ಕಾರ್ಯಾಗಾರದ ಉಪಯೋಗವನ್ನು ಪಡೆಯಬೇಕು ಎಂದು ಇ.ಎನ್.ಟಿ ಪ್ರಾಧ್ಯಾಪಕಿ ಡಾ. ಎಚ್. ಟಿ. ಲತಾದೇವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಕ್ಕಿಗೊಂದು ಹನಿ ನೀರು ಅಭಿಯಾನ



ಝಳಕಿ: ಪ್ರಾಣಿ, ಪಕ್ಷಿಗಳ ಸಂರಕ್ಷಣೆಗೆ ಪ್ರತಿಯೊಬ್ಬರು ಕಾಳಜಿ ವಹಿಸಬೇಕು ಎಂದು ಕಾಂಗ್ರೆಸ್ ಪಕ್ಷದ ಯುಥ್ ಬಳ್ಳೋಳ್ಳಿ ಬ್ಲಾಕ್ ಅಧ್ಯಕ್ಷ ಸತೀಶಗೌಡ ಹತ್ತಿ ಹೇಳಿದರು.

ಸಮಿಪದ ಜೇವೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ನಡೆದ ಯಶವಂತರಾಯಗೌಡ ಪಾಟೀಲ ಫೌಂಡೇಶನ್ ವತಿಯಿಂದ ಹಮ್ಮಿಕೊಂಡ ಹಕ್ಕಿಗೊಂದು ಹನಿ ನೀರು ಅಭಿಯಾನದಲ್ಲಿ ಚಾಲನೆ ನೀಡಿ ಮಾತನಾಡಿ, ಮನುಷ್ಯನಿಗೆ ಬದುಕಲು ಹೇಗೆ ಸಾಧ್ಯವೂ ಹಾಗೆ ಪ್ರಾಣಿ ಪಕ್ಷಿಗಳಿಗೂ ಸಾಧ್ಯವಿರುವುದು. ಪ್ರಾಣಿ ಪಕ್ಷಿಗಳಿಗೆ ಬದುಕಲು ಸಹಾಯ ಮಾಡಿ ಗಿಡ-ಮರಗಳನ್ನು ಬೆಳಸಿ ಪ್ರಾಣಿ, ಪಕ್ಷಿಗಳಿಗೆ ನೀರು, ಕಾಳು ಇಟ್ಟು ಸಂರಕ್ಷಣೆ ಮಾಡಿರಿ ಎಲ್ಲರೂ ಪ್ರಾಣಿ ಪಕ್ಷಿಗಳ ಸಂರಕ್ಷಣೆಯಲ್ಲಿ ಕೈಜೋಡಿಸಿರಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪಿಕೆಪಿಎಸ್ ಅಧ್ಯಕ್ಷ ಶರಣಪ್ಪಗೌಡ ಹತ್ತಿ, ಶಾಲಾ ಮುಖ್ಯ ಗುರುಗಳಾದ ಎಸ್.ಬಿ. ಪಾಟೀಲ, ಶ್ರೀಶೈಲಗೌಡ ಬಿರಾದಾರ, ಜೆ.ಡಿ. ಹೂಗಾರ, ಮಲ್ಲು ಕಂಬಾರ, ಪಂಡೀತ ಕಾಂಬಳೆ, ಲಕ್ಷ್ಮಣಗೌಡ ಬಿರಾದಾರ, ತುಕಾರಾಮಗೌಡ ಬಿರಾದಾರ, ಮಡಕೇಶ್ವರ, ಎಸ್.ಕೆ. ಸೊನಕನಳ್ಳಿ, ಶಿವಪ್ಪ ಹೂನ್ನರ, ಅರ್ಜುನ ಕಂಬಾರ, ಹಾಗೂ ಶಾಲಾ ಮಕ್ಕಳು ಉಪಸ್ಥಿತರಿದ್ದರು.

ಕಿರುಸುದ್ದಿ

ಇಂದಿನಿಂದ ಭೋಗೇಶ್ವರ ಜಾತ್ರಾ ಮಹೋತ್ಸವ



ಕಲಬುರಗಿ: ಜಿಲ್ಲೆಯ ಆಳಂದ ತಾಲೂಕಿನ ಸುಕ್ಷೇತ್ರ ಝಳಕಿ (ಬಿ) ಗ್ರಾಮದ ಆರಾಧ್ಯ ದೈವ ಶ್ರೀಭೋಗೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಹಡಲಗಿಯ ಶಾಂತಬಸವ ಶಿವಾಚಾರ್ಯರ ದಿವ್ಯ ಸಾನಿಧ್ಯದಲ್ಲಿ ಇದೇ ಏ.2 ಮತ್ತು 3ರಂದು ಅದ್ದೂರಿಯಾಗಿ ಉಚ್ಚಾಯಿ ಕಾರ್ಯಕ್ರಮ ಹಾಗೂ ಭೋಗೇಶ್ವರ ಮಹಾ ರಥೋತ್ಸವ ಜರುಗಲಿದೆ.

ಏ.2ರಂದು ಬೆಳಗಿನ ಜಾವ 6ಗಂಟೆಗೆ ಅಡವಿ ಭೋಗೇಶ್ವರ ಲಿಂಗ ಪೀಠಕ್ಕೆ ರುದ್ರಾಭಿಷೇಕ ಹಾಗೂ ಸಂಜೆ 4 ಗಂಟೆಗೆ ಗ್ರಾಮದಿಂದ ಪಲ್ಲಕ್ಕಿ ಜೊತೆ ಕುಂಭ ಕಳಸದೊಂದಿಗೆ ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ತೆರಳಿ 5 ಗಂಟೆಗೆ ಉಚ್ಚಾಯಿ ಕಾರ್ಯಕ್ರಮ ನಡೆಯಲಿದೆ. ಏ.3ರಂದು ಬೆಳಿಗ್ಗೆ 5 ಭೋಗೇಶ್ವರ ಲಿಂಗ ಪೀಠಕ್ಕೆ ರುದ್ರಾಭಿಷೇಕ,ವಿಶೇಷ ಪೂಜೆ ನೆರವೇರಿಸಿ, ಸಂಜೆ 5 ಗಂಟೆಗೆ ಸಕಲ ವಾದ್ಯ ವೈಭವದೊಂದಿಗೆ ಪುರವಂತರ ಕುಣಿತದೊಂದಿಗೆ ಪಲ್ಲಕ್ಕಿ ಸಮೇತ ರಥೋತ್ಸವದೆಡೆ ಸಾಗಿ ಸಂಜೆ 7 ಗಂಟೆಗೆ ಮಹಾ ರಥೋತ್ಸವ ಜರುಗಲಿದೆ.

ಭೋಗೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ಏ.2ರಂದು ರಾತ್ರಿ 9ಕ್ಕೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಸಿದ್ದಪ್ಪ ಬಿದರಿ, ಕಲಾವಿದ ಗುಂಡಣ್ಣ ಡಿಗ್ಗಿ ಹರಸೂರ ಇವರಿಂದ ಹಾಸ್ಯ ಕಾರ್ಯಕ್ರಮ ಜರುಗಲಿದೆ. ಏ.3ರಂದು 9ಕ್ಕೆ ಗಂಧದ ಗುಡಿ ಕಲಾ ತಂಡ ಹಾಗರಗುಂಡಗಿಯಿಂದ ಹಾಸ್ಯ ರಸಮಂಜರಿ ಕಾರ್ಯಕ್ರಮ ಜರುಗಲಿವೆ ಎಂದು ದೇವಸ್ಥಾನದ ಸದ್ಭಕ್ತ ಮಂಡಳಿ ಹಾಗೂ ಗ್ರಾಮಸ್ಥರು ತಿಳಿಸಿದ್ದಾರೆ.

ಆರೋಗ್ಯ ನಿಧಿ ವಿತರಣೆ



ಲಿಂಗಸಗೂರು: ಪುರಸಭೆ ವತಿಯಿಂದ ಪತ್ರಕರ್ತರ ಆರೋಗ್ಯ ನಿಧಿ 70 ಸಾವಿರ ಚೆಕ್‌ಅನ್ನು ಲಿಂಗಸಗೂರು ಸಹಾಯಕ ಆಯುಕ್ತ ಬಸವಣ್ಣೆಪ್ಪ ಕಲಶೆಟ್ಟಿ ವಿತರಣೆ ಮಾಡಿದರು. ಪತ್ರಕರ್ತರಾದ ನಾಗರಾಜ ಗೋರೆಬಾಳ ಮತ್ತು ಅಮರೇಶ ಸ್ವಾಮಿ ಬಲ್ಲಟಗಿ ಹುಬ್ಬಳ್ಳಿಯ ಕಣ್ಣಿನ ಆಸ್ಪತ್ರೆಯಲ್ಲಿ ಶಸ್ತ?ಚಿಕಿತ್ಸೆ ಮಡಿಸಿಕೊಂಡಿದ್ದರು ಆಸ್ಪತ್ರೆಯ ಬಿಲ್ ಸ್ಥಳಿಯ ಪುರಸಭೆಗೆ ನೀಡಿ ಪತ್ರಕರ್ತರ ಆರೋಗ್ಯ ನಿಧಿಯಡಿ ಮೀಸಲಾದ ಐದು ಲಕ್ಷಗಳ ಪೈಕಿ ಎಪ್ಪತ್ತು ಸಾವಿರ ನೀಡಿದರು. ಡಿವೈಎಸ್ಪಿ ದತ್ತಾತ್ರೇಯ ಕರ್ನಾಡ್, ತಹಸೀಲ್ದಾರ ಸತ್ಯಮ್ಮ ಪುರಸಭೆ ಮುಖ್ಯಾಧಿಕಾರಿ ನಟರಾಜ, ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾರಾಜ ಕೆಂಭಾವಿ, ಪ್ರಧಾನ ಕಾರ್ಯದರ್ಶಿ ಗಂಗಾಧರ ನಾಯಕ ಉಪಸ್ಥಿತರಿದ್ದರು.

ಬಿಜೆಪಿ ಜಿಲ್ಲಾ ಎಸಿ ಮೋರ್ಚಾ ಪದಾಧಿಕಾರಿಗಳ ನೇಮಕ



ಕಲಬುರಗಿ: ಭಾರತೀಯ ಜನತಾ ಪಕ್ಷದ ಕಲಬುರಗಿ ಗ್ರಾಮಾಂತರ ಜಿಲ್ಲಾಧ್ಯಕ್ಷರ ಆದೇಶದ ಮೇರೆಗೆ ಕಲಬುರಗಿ ಗ್ರಾಮಾಂತರ ಜಿಲ್ಲೆಯ ಸಂಘಟನಾತ್ಮಕ ಜಿಲ್ಲಾ ಎಸ್.ಸಿ.ಮೋರ್ಚಾ ಪದಾಧಿಕಾರಿ ನೇಮಕ ಮಾಡಲಾಗಿದೆ ಎಂದು ಎಸ್‌ಸಿ ಮೋರ್ಚಾದ ಜಿಲ್ಲಾಧ್ಯಕ್ಷರಾದ ಮಹೇಂದ್ರ ಪೂಜಾರಿ ತಿಳಿಸಿದ್ದಾರೆ. ಉಪಾಧ್ಯಕ್ಷರಾಗಿ ಶಿವಕುಮಾರ ತೊಟನಳ್ಳಿ, ರಾಜು ಮುಕ್ಕಣ್ಣಾ, ವಿನೋದ ರಾಠೋಡ, ಶರಣು ಹಾಗರಗುಂಡಗಿ, ಪ್ರಕಾಶ ತೊಳೆ, ಪ್ರಧಾನ ಕಾರ್ಯದರ್ಶಿಗಳಾಗಿ ಗುಂಡಪ್ಪ ಶಿರಾಡೋಣ, ತಿಪ್ಪಣ್ಣ ರಾಠೋಡ,ಕಾರ್ಯದರ್ಶಿಗಳಾಗಿ ವೆಂಕಟೇಶ ಮೇಸ್ತ್ರಿ ರವಿ ಪವಾರ, ಆಕಾಶ ಪಾತ್ರೆ, ನಾಗೇಶ ಕೊಳ್ಳಿ, ರಾಯಪ್ಪ ಕೊಳಕೂರ, ಕೋಶಾಧ್ಯಕ್ಷರಾಗಿ ದುರ್ಗಪ್ಪಾ ಪವಾರ, ಕಾರ್ಯಾಲಯ ಕಾರ್ಯದರ್ಶಿಯಾಗಿ ರವಿ ಸಿಂಗೆ, ಮಾಧ್ಯಮ ಸಂಚಾಲಕರಾಗಿ ಮಲ್ಲಿಕಾರ್ಜುನ ಸಜ್ಜನ ಹಾಗೂ ಸ್ವಚ್ಛ ಭಾರತ ಅಭಿಯಾನ ಸಂಚಾಲಕರಾಗಿ ಪರಷುರಾಮ ರಾವೂರ. ಅವರನ್ನು ನೇಮಕ ಮಾಡಲಾಗಿದೆ. ಪಕ್ಷ ವಹಿಸಿದ ಜವಾಬ್ದಾರಿಯನ್ನು ನಿಷ್ಠೆಯಿಂದ ಕಾರ್ಯನಿರ್ವಹಿಸಬೇಕೆಂದುಪಕ್ಷದ ಎಸ್‌ಸಿ ಮೋರ್ಚಾದ ಜಿಲ್ಲಾಧ್ಯಕ್ಷರಾದ ಮಹೇಂದ್ರ ಪೂಜಾರಿ ಆದೇಶದಲ್ಲಿ ತಿಳಿಸಿದ್ದಾರೆ.



ಮಾನ್ವಿ: ತಾಲೂಕಿನ ವಿವಿಧ ಗ್ರಾಮಗಳಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು ಹಾಗೂ ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ನೇತೃತ್ವದಲ್ಲಿ ದಾಳಿ ನಡೆಸಿ ನೀರಮಾನ್ವಿ ಗ್ರಾಮದಲ್ಲಿ ಒಂದು ಹಾಗೂ ಪೋತ್ನಾಳ್ ಗ್ರಾಮದಲ್ಲಿ ಎರಡು ನಕಲಿ ಕ್ಲಿನಿಕ್‌ಗಳ ಮೇಲೆ ದಾಳಿ ನಡೆಸಿ ವೈದ್ಯಕೀಯ ನೋಂದಣಿ ಇಲ್ಲದೆ ವೈದ್ಯ ಪದವಿ ಇಲ್ಲದೆ ಇರುವ ನಕಲಿ ವೈದ್ಯ ವೃತ್ತಿ ನಡೆಸುತ್ತಿರುವವರ ಮೇಲೆ ಕ್ರಮಕೈಗೊಂಡು ನಕಲಿ ಕ್ಲಿನಿಕ್‌ಗಳನ್ನು ಸೀಜ್ ಮಾಡಲಾಯಿತು.

ದುಷ್ಕರ್ಮಿಗಳಿಂದ ಹುಲ್ಲಿನ ಬಣವೆ ಭಸ್ಮ

ಹನುಮಸಾಗರ: ಪಟ್ಟಣದ ಸಣ್ಣ ಮಾಬುಸಾಬ್ ಮೂಲಿಮನಿ ಇವರಿಗೆ ಸೇರಿದ ಹೊಲದಲ್ಲಿ ಬುಧವಾರ ಮಧ್ಯಾಹ್ನ ದುಷ್ಕರ್ಮಿಗಳಿಂದ ಹುಲ್ಲಿನ ಬಣವೆ ಭಸ್ಮವಾಗಿದೆ.

ಪಟ್ಟಣದ ಹೊರವಲಯದಲ್ಲಿ ಇರುವ ಸಣ್ಣ ಮಾಬುಸಾಬ್ ಮೂಲಿಮನಿ ಹೊಲದಲ್ಲಿನ ಬಿಳಿ ಜೋಳದ ಬಣವೆಯಲ್ಲಿ ಬೆಂಕಿ ಕಾಣಿಸಿಕೊಂಡಿದ್ದು ತಕ್ಷಣ ನೆರೆಹೊರೆಯವರಾದ ಸಿರಾಜ್ ಸಾಬ್ ಮೂಲಿಮನಿ, ಖಾಜಾ ಹುಸೇನ್, ಇಲಿಯಾಸ್, ಮೊಹಮ್ಮದ್ ಸುಹೇಲ, ಉಮರ್ ಫಾರೂಕ್, ನೀರು ಹಾಕಲು ಯತ್ನಿಸಿದರು.ಸಾಧ್ಯವಾಗದ ಕಾರಣ ನಜೀರ್ ಸಾಬ್ ಮೂಲಿಮನಿಯವರು ಅಗ್ನಿಶಾಮಕದಳಕ್ಕೆ ಮಾಹಿತಿ ನೀಡಿದರು. ಕುಷ್ಟಗಿಯ ಅಗ್ನಿಶಾಮಕ ದಳದ ಸಿಬ್ಬಂದಿಯವರು ಬರುವಷ್ಟರಲ್ಲಿ ಬೆಂಕಿಗೆ ಸುಮಾರು ಆರು ಟ್ರಿಪ್ ಬಣವೆ ಸಂಪೂರ್ಣವಾಗಿ ಬೆಂಕಿ ಯಿಂದ ಆವರಿಸಿಕೊಂಡಿತ್ತು ಇನ್ನುಳಿದ ಉಳಿದ ಬಣವೆ ಬೆಂಕಿಯನ್ನು ಅಗ್ನಿ ಶಾಮಕ ದಳದ ಸಿಬ್ಬಂದಿಯವರು ನಂದಿಸುವುದರಲ್ಲಿ ಯಶಸ್ವಿಯಾದರು ಸ್ಥಳದಲ್ಲಿದ್ದ ರೈತ ಸಂಘದ ರಾಜ್ಯ ಕಾರ್ಯದರ್ಶಿ ನಜೀರ್ ಸಾಬ್ ಮೂಲಿಮನಿ ಮಾತನಾಡಿ, ಜಾನುವಾರುಗಳಿಗೆ ಶೇಖರಿಸಿಟ್ಟ ಬಡ ರೈತನ ಜೋಳದ ಬಣವೆ ಸಂಪೂರ್ಣವಾಗಿ ಸುಟ್ಟು ಹೋಗಿದೆ, ಶೀಘ್ರವೇ ಕಂದಾಯ ಇಲಾಖೆಯವರು ಸೂಕ್ತ ಪರಿಹಾರ ನೀಡಲು ಆಗ್ರಿಸಿದರು. ಸ್ಥಳಕ್ಕೆ ಆಗಮಿಸಿದ ಕಂದಾಯ ಇಲಾಖೆಯ ಗ್ರಾಮ ಲೆಕ್ಕಾಧಿಕಾರಿ ಅಭಿಷೇಕ್ ಪಂಚನಾಮೆ ವರದಿಯನ್ನು ತಹಶೀಲ್ದಾರ್ ಕಚೇರಿಗೆ ಕಳಿಸುವುದಾಗಿ ತಿಳಿಸಿದರು ಹಾಗೂ ಬೆಂಕಿ ಹಚ್ಚಿದ ದುಷ್ಕರ್ಮಿಗಳನ್ನು ಪತ್ತೆ ಹಚ್ಚಲು ಪೊಲೀಸ ಇಲಾಖೆಗೆ ಮಾಹಿತಿ ನೀಡಿದರು.



ಹನುಮಸಾಗರ: ಪಟ್ಟಣದ ಸಣ್ಣ ಮಾಬುಸಾಬ್ ಮೂಲಿಮನಿ ಇವರಿಗೆ ಸೇರಿದ ಹೊಲದಲ್ಲಿ ಬುಧವಾರ ಮಧ್ಯಾಹ್ನ ದುಷ್ಕರ್ಮಿಗಳು ಹುಲ್ಲಿನ ಬಣವೆಗೆ ಬೆಂಕಿ ಹಚ್ಚಿದ್ದು, ಅಗ್ನಿ ಶಾಮಕ ದಳದ ಸಿಬ್ಬಂದಿಯವರು ಬೆಂಕಿ ನಂದಿಸುವುದರಲ್ಲಿ ಯಶಸ್ವಿಯಾದರು.

ನಿತ್ಯ ಸಾರ್ವಜನಿಕರ ಅಲೆದಾಟ | ಆಸ್ಪತ್ರೆಯಲ್ಲಿ ಅವ್ಯವಸ್ಥೆ
ಆಡಳಿತಾಧಿಕಾರಿ ಇಲ್ಲದ ತಾಯಿ ಮಕ್ಕಳ ಆಸ್ಪತ್ರೆ

ಎಚ್.ಕೆ.ಬಡಿಗೇರ್

ಸಿಂಧನೂರು: ಔಷಧ ದಾಸ್ತಾನು, ಸಿಬ್ಬಂದಿ ಕಾರ್ಯನಿರ್ವಹಣೆ ಸೇರಿ ಸಕಾಲದಲ್ಲಿ ಸಾರ್ವಜನಿಕರಿಗೆಸೇವೆನೀಡಬೇಕಿದ್ದ ಆಡಳಿತಾಧಿಕಾರಿ ಹುದ್ದೆಯ ಜವಾಬ್ದಾರಿವಹಿಸಿಕೊಳ್ಳಲು ನಾನೊಲ್ಲೆ.. ನೀನೊಲ್ಲೆ ಎನ್ನುವಂತ ಸ್ಥಿತಿ ಸದ್ಯ ನಗರದ ಪಿಡಬ್ಲ್ಯೂಡಿ ಕ್ಯಾಂಪಿನ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ನಿರ್ಮಾಣವಾಗಿದೆ.



ತಾಯಿ ಮಕ್ಕಳ ಆಸ್ಪತ್ರೆ ಆಡಳಿತಾಧಿಕಾರಿ ಹುದ್ದೆಗೆ ಪ್ರಾರಂಭದಲ್ಲಿ ಭಾರಿ ಡಿಮ್ಯಾಂಡ್ ಸೃಷ್ಟಿಯಾಗಿತ್ತು. ಆದರೆ ಈಗ ಆಡಳಿತಾಧಿಕಾರಿ ಜವಾಬ್ದಾರಿವಹಿಸಿಕೊಳ್ಳಲು ವೈದ್ಯರು ಹಿಂದೇಟು ಹಾಕುತ್ತಿದ್ದು,ಸಾರ್ವಜನಿಕರ ಕೆಲಸ ಕಾರ್ಯಗಳು ಸುಗಮವಾಗದೇ ದಿನನಿತ್ಯ ಸಾರ್ವಜನಿಕರು ತಮ್ಮ ಕೆಲಸ ಕಾರ್ಯಗಳಿಗೆ ಆಸ್ಪತ್ರೆಗೆ ಅಲೆದಾಡುವಂತಾಗಿದೆ. ಆಸ್ಪತ್ರೆ ಪ್ರಾರಂಭದಲ್ಲಿ ಆಡಳಿತ ಹುದ್ದೆ ಗಿಟ್ಟಿಸಿಕೊಳ್ಳಲು ಕೆಲ ವೈದ್ಯರು ತಮ್ಮದೇ ಪ್ರಭಾವ ಬಳಸಿದ್ದರು. ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯ ಮೇಲಾಧಿಕಾರಿಗಳವರೆಗೂ ಲಾಬಿ ನಡೆಸಿದ್ದು,ಗುಟ್ಟಾಗಿ ಉಳಿದಿಲ್ಲ,ಇದೀಗ ಆಡಳಿತಾಧಿಕಾರಿ ಹುದ್ದೆಗೇರಲು ಒಬ್ಬರು ಸಿದ್ಧರಿಲ್ಲದಿರುವುದು ಆಡಳಿತಾತ್ಮಕ ಸಮಸ್ಯೆ ಸೃಷ್ಟಿಸಿದ್ದು,ಹಲವು ಚರ್ಚೆಗಳಿಗೆ ಪುಷ್ಟಿ ನೀಡಿದೆ.

ಈ ಹಿಂದೆ ಆಸ್ಪತ್ರೆಯ ಆಡಳಿತಾಧಿಕಾರಿಯಾಗಿದ್ದ ಡಾ.ನಾಗರಾಜ ಕಾಟ್ವಾ ಅವರು ತುರ್ವಿಹಾಳ ಆರೋಗ್ಯ ಕೇಂದ್ರಕ್ಕೆ ವರ್ಗಾವಣೆಯಾದ ಹಿನ್ನಲೆ ಹುದ್ದೆ ಖಾಲಿಯಾಗಿದ್ದು,ಈವರೆಗೆ ಯಾರೂ ಸಹ ಆ ಜವಾಬ್ದಾರಿವಹಿಸಿಕೊಳ್ಳುವ ಗೋಜಿಗೆ ಮುಂದಾಗುತ್ತಿಲ್ಲ ಎನ್ನುವ ಆರೋಪ ಕೇಳಿಬಂದಿದೆ. ಈ ನಡುವೆ ಜಿಲ್ಲಾ ಆರೋಗ್ಯ ಅಧಿಕಾರಿಗಳು, ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇಬ್ಬರು ವೈದ್ಯರಿಗೆ ಆಡಳಿತಾಧಿಕಾರಿ ಹುದ್ದೆಯ ಜವಾಬ್ದಾರಿ ನೀಡಲು ಮುಂದಾಗಿದ್ದರೂ ಯಾರೂ ಅತ್ತ ಮುಖಮಾಡುತ್ತಿಲ್ಲ ಎನ್ನುವ ಮಾತುಗಳು ಕೇಳಿ ಬರುತ್ತಿದೆ.

ದಿಗಂತ ವಿಶೇಷ

ಸದ್ಯ ಡಾ.ಶಕುಂತಲಾ ಪಾಟೀಲ ಎನ್ನುವ ವೈದ್ಯರು ದಶಕಗಳ ಕಾಲ ಅನುಭವ ಹೊಂದಿದ ವೈದ್ಯರಾಗಿದ್ದು, ಅವರು ಈ ಜವಾಬ್ದಾರಿ ನಿಭಾಯಿಸಲು ಹಿಂದೇಟು ಹಾಕುತ್ತಿದ್ದಾರೆ ಎನ್ನಲಾಗಿದೆ. ಆಡಳಿತ ಯಂತ್ರಕ್ಕೆ ಚುರುಕು ಮೂಡಿಸುವ ಉದ್ದೇಶದಿಂದ ಹೊಸಬರಿಗೆ ಮಣೆ ಹಾಕುವ ಸಾಧ್ಯತೆಗಳಿವೆ ಎನ್ನಲಾಗಿದೆ.

ಜಿಲ್ಲೆಯಲ್ಲೇ ಅಧಿಕ ಹೆರಿಗೆಗಳು ತಾಯಿಮಕ್ಕಳ ಆಸ್ಪತ್ರೆಯಲ್ಲಿ ಆಗುತ್ತಿದ್ದು,ಆಸ್ಪತ್ರೆ ನಿರ್ವಹಣೆ ಸೇರಿ ಅಗತ್ಯ ದಾಖಲೆಗಳಿಗೆ ಸಹಿ ಹಾಕುವ ಆಡಳಿತಾಧಿಕಾರಿಗಳು ಇಲ್ಲದಂತಾಗಿದ್ದು, ವಿಪರ್ಯಾಸ ಎನ್ನುವಂತಾಗಿದೆ.

> **ಆಡಳಿತಾಧಿಕಾರಿಯಾಗಿ ಈಗಾಗಲೇ ಡಾ.ಶಕುಂತಲಾ ಹಾಗೂ ಶರಣಪ್ಪ ಎನ್ನುವವರಿಗೆ ನೇಮಿಸಲಾಗಿತ್ತು. ಆದರೆ ಕಾರಣಾಂತರಗಳಿಂದ ಅವರು ಅಧಿಕಾರ ಸ್ವೀಕರಿಸಿಲ್ಲ, ತುರ್ತುಪರಿಸ್ಥಿತಿಯಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ಅಗತ್ಯ ಸೇವೆ ನೀಡಲು ಸೂಚಿಸಿದ್ದು, ಶೀಘ್ರದಲ್ಲೇ ಹೊಸಬರಿಗೆ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಲಾಗುವುದು.**
> **■ ಡಾ.ಸುರೇಂದ್ರ ಬಾಬು, ಡಿಎಚ್‌ಒ**

ಇಬ್ಬರು ಶಾಸಕರು ಕ್ಷೇತ್ರದಲ್ಲಿ ಅಧಿಕಾರ ನಡೆಸುತ್ತಿದ್ದು, ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಸಾರ್ವಜನಿಕರ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ

ನಿಟ್ಟಿನಲ್ಲಿ ಪ್ರಯತ್ನಿಸದೇ ಇರುವುದು ನಾಗರಿಕರ ಬೇಸರಕ್ಕೆ ಕಾರಣವಾಗಿದೆ.

ಸ್ಥಳೀಯ ಶಾಸಕರು, ಚುನಾಯಿತ ಜನಪ್ರತಿನಿಧಿಗಳು ಈಗಲಾದರೂ ಎಚ್ಚೆತ್ತುಕೊಂಡು ತಾಯಿ ಮಕ್ಕಳ ಆಸ್ಪತ್ರೆಗೆ ಶಾಶ್ವತ ಆಡಳಿತಾಧಿಕಾರಿಯನ್ನು ನೇಮಿಸಿ,ಅಗತ್ಯ ಸೌಕರ್ಯಗಳನ್ನು ಸಾರ್ವಜನಿಕರಿಗೆ ಒದಗಿಸುವ ಮೂಲಕ ಅನುಕೂಲ ಕಲ್ಪಿಸಬೇಕೆಂದು ದಸಂಸ (ಸಂಯೋಜಕ ಬಣದ) ರಾಯಚೂರು ಜಿಲ್ಲಾ ಅಧ್ಯಕ್ಷ ಮಲ್ಲಪ್ಪ ಎಸ್.ಗೋನಾಳ ಹಾಗೂ ದಸಂಸ (ಸಂಯೋಜಕ ಬಣದ) ತಾಲೂಕು ಅಧ್ಯಕ್ಷ ನಾಗರಾಜ ಸಾಸಲಮರಿ ಒತ್ತಾಯಿಸಿದರು.

ಮಕ್ಕಳಲ್ಲಿರುವ ಪ್ರತಿಭೆ ಅನಾವರಣಗೊಳ್ಳಲಿ

ಯಲಬುರ್ಗಾ: ಮಕ್ಕಳ ಮನಸ್ಸು ಬಹಳ ಸೂಕ್ಷ್ಮವಾಗಿರುತ್ತದೆ ಅವರಲ್ಲಿ ಹಲವಾರು ಪ್ರತಿಭೆಗಳನ್ನು ಹೊರತಂದರೆ ಅವರು ಉತ್ತಮ ಭಾವಿ ಪ್ರಜೆಗಳಾಗುತ್ತಾರೆ ಎಂದು ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ವಿದ್ಯಾಶ್ರೀ ಕುಡಗುಂಟಿರವರು ಅಭಿಪ್ರಾಯ ಪಟ್ಟರು.

ಪಟ್ಟಣದ ಈಶ್ವರಿ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ ಮಕ್ಕಳ ಸರ್ವತೋಮುಖ ವ್ಯಕ್ತಿತ್ವ ವಿಕಾಸ ಬೇಸಿಗೆ ತರಬೇತಿ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಯಾವ ಮಕ್ಕಳಲ್ಲಿ ಯಾವ ಪ್ರತಿಭೆ ಇದೆ ಎಂದು ಗುರುತಿಸುವ ಕಾರ್ಯವನ್ನು ಹತ್ತು ದಿನದ ತರಬೇತಿಯಲ್ಲಿ ಕಂಡು ಹಿಡಿಯುವುದು ಕಷ್ಟಕರವಾದರೂ ಆ ಮಕ್ಕಳ ಮನಸ್ಸನ್ನು ಅರಿತು ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ಗೊಳಿಸುವ ಕಾರ್ಯ ನಿಜಕ್ಕೂ ಪ್ರಶಂಸನೀಯವಾಗಿದೆ ಎಂದರು.

ಮುಖ್ಯ ಅತಿಥಿಗಳಾದ ಸ್ಥಳೀಯ ಬಸವಲಿಂಗೇಶ್ವರ ಶಾಲೆಯ ಮುಖ್ಯೋಪಾಧ್ಯಯನಿ ಸುನೀತಾ ಪತಂಗರಾಯ್ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ವೀರಣ್ಣ ನಿಂಗೋಜಿಹಾಗೂ ಮಹೇಶ ತೆಗ್ಗಿನಮನಿ ಹಾಗೂ ಇತರರು ಮಾತನಾಡಿ, ಮಕ್ಕಳ ಬಗ್ಗೆ ವಿಶೇಷ ಕಾಳಜಿವಹಿಸಿ ಅವರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವ ಈಶ್ವರಿ ವಿಶ್ವವಿದ್ಯಾಲಯದ ಕಾರ್ಯಕ್ರಮದ ಪ್ರಯೋಜನವನ್ನು ಮಕ್ಕಳು ಸದುಪಯೋಗ ಪಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಮಕ್ಕಳಾದ ಅಥರ್ವ ಗವಿಸಿದ್ದಪ್ಪ ಬಿಸರಳ್ಳಿ ಹಾಗೂ ಕು.ಸುಕ್ರತ ಶಿವಾನಂದ ತೊಂಡಿಹಾಳರವರು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ತರಬೇತಿಯಲ್ಲಿ ಸುಮಾರು 25 ಮಕ್ಕಳು ಭಾಗವಹಿಸಿದ್ದರು.

ಅಧ್ಯಕ್ಷತೆ ವಹಿಸಿದ್ದ ಸ್ಥಳೀಯ ಸಂಚಾಲಕಿ ಗೀತಕ್ಕನವರುಮಾತನಾಡಿ,ಶಾಲೆಯರಜೆಯ ಅವಧಿಯಲ್ಲಿ ಮಕ್ಕಳು ಸಮಯವನ್ನು ಸದುಪಯೋಗ ಪಡಿಸಿಕೊಳ್ಳಲು ಶಿಬಿರವನ್ನು ಏರ್ಪಡಿಸಲಾಗಿದೆ. ಆರೋಗ್ಯಪೂರ್ಣ ವ್ಯಕ್ತಿತ್ವವನ್ನು ಬೆಳೆಸಲು ನಮ್ಮ ಈಶ್ವರಿ ವಿಶ್ವವಿದ್ಯಾಲಯ ವ್ಯಕ್ತಿತ್ವ ವಿಕಸನ ಶಿಬಿರವನ್ನು ಆಯೋಜಿಸಿದೆ. ಯೋಗಾಸನ ಪ್ರಾಣಾಯಮ, ಧ್ಯಾನ, ಕರಕುಶಲ, ಚಿತ್ರಕಲೆ, ಹಾಡುಗಾರಿಕೆ, ಅಭಿನಯ ಹಾಗೂ ಉತ್ತಮ ದಿನಚರಿ ಪ್ರಾರಂಭಿಸುವುದು ಹೀಗೆ ಮೊದಲಾದ ವಿಷಯಗಳನ್ನು ಹತ್ತು ದಿನದ ಶಿಬಿರದಲ್ಲಿ ಅನುಭವಿ ತಜ್ಞರಿಂದ ತರಬೇತಿಗೊಳಿಸಿ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಲಾಗುವುದು ಎಂದು ಮಾಹಿತಿ ನೀಡಿದರು. ಕು.ವರ್ಣಾ ರಾಜಶೇಖರ ಕಣವಿ ನಿರೂಪಿಸಿ, ವಂದಿಸಿದರು.



ವದಂತಿ ಹಬ್ಬಿಸುವವರ ವಿರುದ್ಧ ಕಠಿಣ ಕ್ರಮ: ಜಿಲ್ಲಾಧಿಕಾರಿ

ಕಲಬುರಗಿ: ಜಿಲ್ಲೆಯಲ್ಲಿ ಪೆಟ್ರೋಲ್, ಡಿಸೇಲ್ ಮತ್ತು ಎಲ್.ಪಿ.ಜಿ ಸಿಲಿಂಡರ್‌ಗಳ ಯಾವುದೇ ಕೊರತೆ ಇಲ್ಲ, ಎಲ್ಲವು ಸಮರ್ಪಕವಾಗಿ ಪೂರೈಕೆಯಾಗುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುಳ್ಳು ಸುದ್ದಿ ಸಾರ್ವಜನಿಕರು ಕೊವಿಗೊಡಬಾರದು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಜಿಲ್ಲೆಯ ಜನತೆಯಲ್ಲಿ ಮನವಿ ಮಾಡಿಕೊಂಡಿದ್ದಾರೆ.



ಜಿಲ್ಲೆಯಾದ್ಯಂತ ಎಲ್ಲಾ ತೈಲ ಕಂಪನಿ ಬಳಿ ಮತ್ತು ಪೆಟ್ರೋಲ್ ಬಂಕ್‌ಗಳಲ್ಲಿ ಸಾಕಷ್ಟು ಪ್ರಮಾಣದ ಇಂಧನ ದಾಸ್ತಾನು ಲಭ್ಯವಿದೆ. ಪೆಟ್ರೋಲ್ ಬಂಕ್‌ಗಳಿಗೆ ನಿರಂತರವಾಗಿ ಇಂಧನ ಪೂರೈಕೆಯಾಗುತ್ತಿದೆ. ಅದೇ ರೀತಿ ಗೃಹ ಬಳಕೆ ಮತ್ತು ವಾಣಿಜ್ಯ ಬಳಕೆಯ ಸಿಲಿಂಡರ್ ಪೂರೈಕೆಯಲ್ಲಿ ಯಾವುದೇ ರೀತಿಯ ವ್ಯತ್ಯಯ ಉಂಟಾಗಿಲ್ಲ. ಜನರು ಆತಂಕಗೊಳ್ಳಬಾರದು. ಇನ್ನು ಸಿಲಿಂಡರ್, ಇಂಧನ ಅಭಾವ ಕುರಿತು ಸುಳ್ಳು ಸುದ್ದಿ ಹರಡುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಎಚ್ಚರಿಕೆ ನೀಡಿದ್ದಾರೆ.

ಜಿಲ್ಲೆಯಲ್ಲಿ ಗೃಹಬಳಕೆ ಅಡುಗೆ ಅನಿಲ ಸಿಲಿಂಡರ್‌ಗಳ ಸರಬರಾಜು ಸಮರ್ಪಕವಾಗಿ ನಡೆಯುತ್ತಿದೆ.ಗೃಹ ಬಳಕೆಸಿಲಿಂಡರ್‌ಗಳನ್ನು ಪಡೆಯಲು ಈ ಹಿಂದೆ ಪಡೆದ ದಿನಂಕದಿಂದ 25 ದಿನಗಳ ಬಳಿಕವೇ ನಗರ ಪ್ರದೇಶದ ಗ್ರಾಹಕರು ಬುಕ್ಕಿಂಗ್ ಮಾಡಬೇಕಾಗುತ್ತದೆ. ಅದೇ ರೀತಿ ಗ್ರಾಮಾಂತರ ಪ್ರದೇಶದ ಗ್ರಾಹಕರು 45 ದಿನಗಳ ಬಳಿಕವೇ ಬುಕ್ ಮಾಡಲು ಅವಕಾಶ ಕಲ್ಪಿಸಲಾಗಿದೆ. ವಾಸ್ತವದ ವಿಷಯವನ್ನು ಅರಿಯದೆ ಗ್ರಾಹಕರು ಗ್ಯಾಸ್ ಏಜೆನ್ಸಿಗಳಿಗೆ ಮುಗಿಬೀಳುತ್ತಿರುವುದರಿಂದ ಅನಗತ್ಯ ಜನಸಂದಣಿಯಾಗಿ ಗೊಂದಲು ಸೃಷ್ಟಿಯಾಗುತ್ತಿದೆ ಎಂದಿದ್ದಾರೆ.

ಹೆಚ್ಚುವರಿ ದಾಸ್ತಾನು ಬೇಡ ಗೃಹ ಬಳಕೆಯ ಅಡುಗೆ ಅನಿಲ ಗ್ರಾಹಕರು ಹಾಗೂ ವಾಣಿಜ್ಯ ಬಳಕೆಯ ಗ್ರಾಹಕರಾದ ಹೋಟೇಲ್, ರೆಸ್ಟೋರೆಂಟ್ ಇತ್ಯಾದಿ ಬಳಕೆದಾರರು ಯಾವುದೇ ಆತಂಕಕ್ಕೆ ಒಳಗಾಗಬಾರದು. ಜಿಲ್ಲಾಡಳಿತವು ಎಚ್‌ಪಿಸಿ, ಐಓಸಿ ಮತ್ತು ಬಿಪಿಸಿ ತೈಲ ಕಂಪನಿಗಳ ಅಧಿಕಾರಿಗಳೊಂದಿಗೆ ಸತತ ಸಂಪರ್ಕದಲ್ಲಿದ್ದು, ಪೆಟ್ರೋಲ್, ಡಿಸೇಲ್ ಮತ್ತು ಎಲ್.ಪಿ.ಜಿ ಸಿಲಿಂಡರ್‌ಗಳ ಕೊರತೆ ಉಂಟಾಗದೇ ಬೇಡಿಕೆಗೆ ಅನುಗುಣವಾಗಿ ಅಗತ್ಯವಾದ ದಾಸ್ತಾನನ್ನು ಸಂಗ್ರಹಿಸಿಟ್ಟಿಕೊಳ್ಳಲು ಸೂಕ್ತ ಸೂಚನೆಗಳನ್ನು ನೀಡಲಾಗಿದೆ. ಹೀಗಾಗಿ ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ ಮತ್ತು ಹೆಚ್ಚುವರಿಯಾಗಿ ದಾಸ್ತಾನು ಮಾಡಿಟ್ಟುಕೊಳ್ಳಬಾರದೆಂದು ಡಿ.ಸಿ. ಬಿ.ಫೌಜಿಯಾ ತರನ್ನುಮ್ ಅವರು ಮನವಿ ಮಾಡಿದ್ದಾರೆ.

ಶೀಘ್ರದಲ್ಲೇ ನೀರು ಬಿಡುಗಡೆ ಭಾಗ್ಯ

ಮುನಿರಾಬಾದ್: ಸಮೀಪದ ಬಸಾಪುರ ಗ್ರಾಮದ ಬಳಿ ಇತ್ತೀಚೆಗೆ ಒಡೆದು ಹೋಗಿದ್ದ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಯ (ಟಿಎಲ್‌ಬಿಸಿ) ದುರಸ್ತಿ ಕಾರ್ಯವು ಸೋಮವಾರ ಯಶಸ್ವಿಯಾಗಿ ಪೂರ್ಣಗೊಂಡಿದೆ. ಹಗಲು-ರಾತ್ರಿಯನ್ನದೇ ಕಾಮಗಾರಿ ನಡೆಸಿದ ನಂತರ ಕಾಲುವೆಯು ಮತ್ತೆ ಸಜ್ಜಾಗಿದ್ದು, ಶೀಘ್ರವೇ ನೀರು ಹರಿಸಲು ಅಧಿಕಾರಿಗಳು ನಿರ್ಧರಿಸಿದ್ದಾರೆ.

ಕಳೆದ ಮಾರ್ಚ್ 17ರ ಮಂಗಳವಾರ ತಡರಾತ್ರಿ ನೀರಿನ ತೀವ್ರ ರಭಸಕ್ಕೆ ಕಾಲುವೆ ಒಡೆದಿತ್ತು. ಕಾಲುವೆ ಒಡೆದ ಪರಿಣಾಮ ಪಕ್ಕದ ನೂರಾರು ಎಕರೆ ಪ್ರದೇಶದಲ್ಲಿದ್ದ ಭತ್ತದ ಗದ್ದೆಗಳಿಗೆ ನೀರು ನುಗ್ಗಿ ರೈತರ ಬೆಳೆ ಸಂಪೂರ್ಣ ನಾಶವಾಗಿತ್ತು. ಘಟನೆಯ ಗಂಭೀರತೆಯನ್ನು ಅರಿತ ನೀರಾವರಿ ಇಲಾಖೆಯು ತಕ್ಷಣವೇ ಕಾರ್ಯಪ್ರವೃತ್ತವಾಗಿ ದುರಸ್ತಿಗೆ ಚಾಲನೆ ನೀಡಿತ್ತು. ಸುಮಾರು 15 ದಿನಗಳ ಕಾಲ ಸತತವಾಗಿ ನೀರಾವರಿ ಇಲಾಖೆಯ ಉನ್ನತ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಸೇರಿ ಕಾರ್ಮಿಕರೊಂದಿಗೆ ಹಗಲು-ರಾತ್ರಿ ಕೆಲಸ ನಿರ್ವಹಿಸಿ ಸದ್ಯ ಕಾಮಗಾರಿಯು ಪೂರ್ಣಗೊಂಡಿದೆ.

ಕಾಲುವೆ ಒಡೆದಿದ್ದರಿಂದ ರಾಯಚೂರು ಜಿಲ್ಲೆಯ ವಿವಿಧ ಭಾಗಗಳಲ್ಲಿ ಜನರಿಗೆ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ತೀವ್ರ ಸಮಸ್ಯೆ ಎದುರಾಗಿತ್ತು. ಇದೀಗ ದುರಸ್ತಿ ಕಾರ್ಯ ಮುಗಿದಿರುವುದರಿಂದ ಇನ್ನೂ



ಎರಡು ದಿನಗಳಲ್ಲಿ ಕಾಲುವೆಗೆ ನೀರು ಬಿಡಲು ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ. ಕಾಲುವೆಗೆ ನೀರು ಹರಿಸುವುದರಿಂದ ರಾಯಚೂರು ಭಾಗದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯಲಿದೆ.

ಸದ್ಯ ಕಾಲುವೆಯ ಸ್ಥಿತಿಗತಿಯನ್ನು ಅಧಿಕಾರಿಗಳು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಇನ್ನು ಎರಡೇ ದಿನಗಳಲ್ಲಿ ರಾಯಚೂರು ಭಾಗದ ಜನರ ಹಾಗೂ ಜಾನುವಾರುಗಳ ಬಾಯಾರಿಕೆ ತಣಿಯಲಿದೆ ಎಂದು ನೀರಾವರಿ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ನಾಳೆ ಕಾಶಿವಿಶ್ವನಾಥ ಮಹಾರಥೋತ್ಸವ

ಕುಷ್ಟಗಿ: ತಾಲೂಕಿನ ಹಿರೇಮನ್ನಾಪುರ ಗ್ರಾಮದ ಶ್ರೀಕಾಶಿವಿಶ್ವನಾಥ ಹಾಗೂ ಶ್ರೀಶರಣಬಸವೇಶ್ವರರ 71ನೇ ವರ್ಷದ ಜಾತ್ರಾ ಮಹೋತ್ಸವ, ಕಳಸಾರೋಹಣ ಮತ್ತು ಮಹಾರಥೋತ್ಸವವು ಏ.2ರ ಗುರುವಾರ ಅತ್ಯಂತ ಸಡಗರದಿಂದ ನೆರವೇರಲಿದೆ.

ಕಳೆದ ಮಾ.13ರಿಂದ ಆರಂಭಗೊಂಡಿದ್ದ ಶರಣಬಸವೇಶ್ವರ ಪುರಾಣ ಪ್ರವಚನವು ನಾಳೆ ಸಂಪನ್ನಗೊಳ್ಳಲಿದ್ದು, ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಗ್ರಾಮದಲ್ಲಿ ಕಳೆಗಟ್ಟಲಿವೆ.

ಕೊಪ್ಪಳ ಗವಿಮಠದ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಜೊತೆಗೆ ಚಳಗೇರಾ-ತಳುವಗೇರಾದ ವೀರಸಂಗಮೇಶ್ವರ ಶಿವಾಚಾರ್ಯರು, ಮಂಗಳೂರಿನ ಸಿದ್ದಲಿಂಗ ಶಿವಾಚಾರ್ಯರು, ಯಲಬುರ್ಗಾ ಹಿರೇಮಠದ ಬಸವಲಿಂಗೇಶ್ವರ ಶಿವಾಚಾರ್ಯರು, ಬಿಜಕಲ್ ವಿರಕ್ತಮಠದ ಶಿವಲಿಂಗ ಮಹಾಸ್ವಾಮಿಗಳು ಸೇರಿದಂತೆ ಹರ-ಗುರು-ಚರಮೂರ್ತಿಗಳು ಉಪಸ್ಥಿತರಿರುವರು.

ಸಂಜೆ 5.30ಕ್ಕೆ ಕಳಸಾರೋಹಣ ಹಾಗೂ ಲಘು ರಥೋತ್ಸವ ಜರುಗಲಿದೆ. ನಾಳೆ (ಗುರುವಾರ) ಬೆಳಗ್ಗೆ 6 ಗಂಟೆಗೆ ಶ್ರೀ ಕಾಶಿವಿಶ್ವನಾಥ ಹಾಗೂ ಶರಣಬಸವೇಶ್ವರರಿಗೆ ಮಹಾ ರುದ್ರಾಭಿಷೇಕ ಮತ್ತು ಸಹಸ್ರ ಬಿಲ್ವಾರ್ಚನೆ ನಡೆಯಲಿದ್ದು, ಬೆಳಗ್ಗೆ 9 ಗಂಟೆಗೆ ಅಕ್ಕನ ಬಳಗದವರಿಂದ 108 ಕುಂಭಗಳೊಂದಿಗೆ ಶರಣಬಸವೇಶ್ವರ ಪುರಾಣದ ಅಡ್ಡಪಲ್ಲಕ್ಕಿ ಮಹೋತ್ಸವ ಸಾಗಲಿದೆ. ಮಧ್ಯಾಹ್ನ 12.28ರ ಶುಭ ಮುಹೂರ್ತದಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮಗಳು ನೆರವೇರಲಿವೆ. ನಂತರ ಮಹಾಗಣಾರಾಧನೆ ಮತ್ತು ಪ್ರಸಾದ ವಿತರಣೆ ಇರಲಿದೆ. ಅಂದು ಸಂಜೆ 4:00 ಗಂಟೆಗೆ ನೀರಲೂಟಿ ಗ್ರಾಮದ ಸದ್ಭಕ್ತರಿಂದ ತೇರಿನ ಹಗ್ಗದ ಮೆರವಣಿಗೆ ವಿಜೃಂಭಣೆಯಿಂದ ಗ್ರಾಮಕ್ಕೆ ಆಗಮಿಸಲಿದೆ. ಜಾತ್ರೆಯ ಪ್ರಮುಖ ಆಕರ್ಷಣೆಯಾದ ಕಾಶಿವಿಶ್ವನಾಥನ ಮಹಾರಥೋತ್ಸವವು ಸಾಯಂಕಾಲ 5.30ಕ್ಕೆ ಸಕಲ ವಾದ್ಯಗೋಷ್ಠಿಗಳೊಂದಿಗೆ ಜರುಗಲಿದೆ. ರಾತ್ರಿ 9:30ಕ್ಕೆ ಶರಣಬಸವೇಶ್ವರ ಪುರಾಣ ಮಹಾಮಂಗಲಗೊಳ್ಳುವ ಮೂಲಕ ಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ. ಸುತ್ತಮುತ್ತಲ ಗ್ರಾಮಗಳ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ದೇವಸ್ಥಾನ ಸಮಿತಿ ಹಾಗೂ ಹಿರೇಮನ್ನಾಪುರ ಗ್ರಾಮಸ್ಥರು ಕೋರಿದ್ದಾರೆ.

ಕ್ಯಾಂಟೀನ್ ತೆರೆಯಲು ಆಗ್ರಹ

ಕುಕನೂರು: ಯಲಬುರ್ಗಾ ಮತ್ತು ಕುಕನೂರು ತಾಲೂಕಿನ ಬಸ್ ನಿಲ್ದಾಣದಲ್ಲಿರುವ ಬಹುತೇಕ ಕ್ಯಾಂಟೀನ್ ಮುಚ್ಚಿದ್ದರಿಂದ ಬೆಳಗಿನ ಚಹಾ, ಉಪಹಾರ, ಊಟ ಮಾಡಲು ಸಾರ್ವಜನಿಕ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿದೆ. ಅವುಗಳನ್ನು ಕೂಡಲೇ ತೆರೆದು ಸಾರ್ವಜನಿಕ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಸಮಾಜ ಸೇವಕ ಶಿವಣ್ಣ ರಾಯರೆಡ್ಡಿ ತೀವ್ರವಾಗಿ ಒತ್ತಾಯಿಸಿದರು.



ಪಟ್ಟಣದಲ್ಲಿ ಸುದ್ದಿಗರೊಂದಿಗೆ ಮಾತನಾಡಿದ ಅವರು ಸರಕಾರ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಬಸ್ ನಿಲ್ದಾಣ ಕ್ಯಾಂಟೀನ್ ವ್ಯವಸ್ಥೆ ನಿರ್ಮಿಸುತ್ತದೆ. ಆದರೆ ಸಾರಿಗೆ ಇಲಾಖೆ ಅಧಿಕಾರಿಗಳು ಬಸ್ ನಿಲ್ದಾಣದ ಕ್ಯಾಂಟಿನೆ ಗಳಿಗೆ ಹೆಚ್ಚು ಬಾಡಿಗೆ ಟೆಂಡರ್ ಮಾಡಿದ್ದರಿಂದ ಹೋಟೆಲ್ ನಡೆಸುವ ಉದ್ದಿಮೆದಾರರು ಟೆಂಡರ್ ನಿಂದ ಹಿಂದೆ ಸರಿದಿದ್ದರಿಂದ

ಅನೇಕ ಬಸ್ ನಿಲ್ದಾಣಗಳ ಕ್ಯಾಂಟೀನ್‌ಗಳು ಬಾಗಿಲ ಮುಚ್ಚಿಕೊಂಡಿವೆ ಇದರಿಂದ ಜನರಿಗೆ ತುಂಬಾ ತೊಂದರೆಯಾಗಿದೆ. ಈಗಾಗಲೇ ಸಮಾಜ ಸೇವಕ ಶಿವಣ್ಣ ರಾಯರೆಡ್ಡಿ ಅವರ ಸಾರ್ವಜನಿಕರ ಹಿತ ದೃಷ್ಟಿಯಿಂದ ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಪುನಃ ಪುನಃ ಒತ್ತಾಯಿಸಿ ಮುಚ್ಚಿಕೊಂಡಿದ್ದ ತಳಕಲ್ ಮತ್ತು ಯಲಬುರ್ಗಾ ಬಸ್ ನಿಲ್ದಾಣ ಕ್ಯಾಂಟೀನ್ ಓಪನ್ ಮಾಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ.

ಇನ್ನು ಓಪನ್ ಆಗದ ಅನೇಕ ಬಸ್ ನಿಲ್ದಾಣ ಕ್ಯಾಂಟೀನ್ ಗಳನ್ನು ತೆರೆಯಲು ಸಾರಿಗೆ ಇಲಾಖೆ ಅಧಿಕಾರಿಗಳು ವಿರುದ್ಧ ಹೋರಾಟ ಮಾಡುವುದಾಗಿ ತಿಳಿಸಿದ್ದಾರೆ.

ಹಿರೇಮನ್ನಾಪುರ: ನೀರಿಗಾಗಿ ಪರದಾಟ

ಕುಷ್ಟಗಿ: ತಾಲೂಕಿನ ಹಿರೇಮನ್ನಾಪುರ ಗ್ರಾಮದಲ್ಲಿ ಜಲ ನಿರ್ಮಲ ಯೋಜನೆ ಅಡಿಯಲ್ಲಿ ನಿರ್ಮಿಸಿದ ಕುಡಿಯುವ ನೀರು ಕೆಲ ವಾರ್ಡ್‌ಗಳಲ್ಲಿ ನೀರಿನ ಸಮಸ್ಯೆ ತಲೆದೋರಿದ್ದು, ಕಳೆದ 20 ದಿನಗಳಿಂದ ನೀರಿನ ಸಮಸ್ಯೆಯಾಗಿದ್ದು ಬಿಸಿಲಿನ ಪ್ರಖರತೆ ಹೆಚ್ಚಾಗಿದ್ದು ಹಾಗೂ ನಾಳೆಯ ದಿನ ಗ್ರಾಮದಲ್ಲಿ ಶ್ರೀಶರಣ ಬಸವೇಶ್ವರ ಜಾತ್ರಾ ಮಹೋತ್ಸವ ಇದ್ದು ಸಾಮೂಹಿಕ ಮದುವೆಗಳು ಕೂಡ ಇವೆ ಈ ವಿಷಯವಾಗಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ವಿಚಾರಿಸಲು ಫೋನ್ ಕರೆ ಸ್ವೀಕರಿಸಲಿಲ್ಲ, ನಂತರ ಆಡಳಿತಾಧಿಕಾರಿ ಪಂಪಾಪತಿ ಹಿರೇಮಠ್ ಮಾತನಾಡಿ ಎರಡು ದಿವಸದಲ್ಲಿ ಸರಿ ಮಾಡುತ್ತೇವೆ ಎಂದು ಹೇಳಿದ್ದರು. ಆದರೂ ಸಹ ಇಲ್ಲಿಯವರೆಗೂ ನೀರು ಸರಬರಾಜು ಆಗುತ್ತಿಲ್ಲ ಎಂದು ಗ್ರಾಮದ ಶಿವಾನಂದ ತೋಟದ ಶಿವಪುತ್ರಪ್ಪ ಗುರಿಕಾರ ಬಾಲಪ್ಪ ಕಜ್ಜಿ ಹುಸೇನಸಾಬ ಕೋಳುರ ದೂರಿದ್ದಾರೆ.

ನಕಲಿ ಕ್ಲಿನಿಕ್‌ಗಳ ಮೇಲೆ ದಾಳಿ

ಮಾನ್ವಿ: ತಾಲೂಕಿನ ವಿವಿಧ ಗ್ರಾಮಗಳಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು ಹಾಗೂ ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ನೇತೃತ್ವದಲ್ಲಿ ದಾಳಿ ನಡೆಸಿ ನೀರಮಾನ್ವಿ ಗ್ರಾಮದಲ್ಲಿ ಒಂದು ಹಾಗೂ ಪೋತ್ನಾಳ್ ಗ್ರಾಮದಲ್ಲಿ ಎರಡು ನಕಲಿ ಕ್ಲಿನಿಕ್‌ಗಳ ಮೇಲೆ ದಾಳಿ ನಡೆಸಿ ವೈದ್ಯಕೀಯ ನೋಂದಣಿ ಇಲ್ಲದೆ ವೈದ್ಯ ಪದವಿ ಇಲ್ಲದೆ ಇರುವ ನಕಲಿ ವೈದ್ಯ ವೃತ್ತಿ ನಡೆಸುತ್ತಿರುವವರ ಮೇಲೆ ಕ್ರಮಕೈಗೊಂಡು ನಕಲಿ ಕ್ಲಿನಿಕ್‌ಗಳನ್ನು ಸೀಜ್ ಮಾಡಲಾಯಿತು.

ದಾಳಿಯಲ್ಲಿ ಜಿಲ್ಲಾ ಆಯುಷ್ ಅಧಿಕಾರಿ ಡಾ.ಶಂಕರಗೌಡ, ಜಿಲ್ಲಾ ಮಲೇರಿಯ ಅಧಿಕಾರಿ ಡಾ.ಚಂದ್ರಶೇಖರಯ್ಯಸ್ವಾಮಿ, ತಾ.ಆರೋಗ್ಯಧಿಕಾರಿ ಡಾ.ಶರಣಬಸವರಾಜು, ಪಿ.ಐ.ಸೋಮಶೇಖರ ಎಸ್.ಕೆಂಚರೆಡ್ಡಿ ಸೇರಿದಂತೆ ಇನ್ನಿತರ ಅಧಿಕಾರಿಗಳು ಭಾಗವಹಿಸಿದರು.

ಬೇಸಿಗೆ: ಸಾರ್ವಜನಿಕರಿಗೆ ಆರೋಗ್ಯ ಜಾಗೃತಿ ಮೂಡಿಸಿ

ಕೊಪ್ಪಳ: ಬೇಸಿಗೆ ಸಮಯದಲ್ಲಿ ಆರೋಗ್ಯ ರಕ್ಷಣೆಯ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸಬೇಕು ಎಂದು ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವಿ.ಪೂಜಾರ ಹೇಳಿದರು.

ಅವರು ಇತ್ತೀಚೆಗೆ ಗಂಗಾವತಿಯ ಸಮುದಾಯ ಭವನದಲ್ಲಿ ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಗಂಗಾವತಿಯ ಅಂಬೇಡ್ಕರ್ ನಗರದಲ್ಲಿರುವ ನಗರ ಆರೋಗ್ಯ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಗಂಗಾವತಿ ನಗರ ಪ್ರದೇಶದ ಆಶಾ ಕಾರ್ಯಕರ್ತೆಯರಿಗೆ ಹಮ್ಮಿಕೊಂಡಿದ್ದ ಬೇಸಿಗೆ ಸಮಯದಲ್ಲಿ ಸಾರ್ವಜನಿಕರ ಆರೋಗ್ಯದ ಬಗ್ಗೆ ವಹಿಸಬೇಕಾದ ಮುಂಜಾಗ್ರತೆಕುರಿತು ಪುನರ್ ಮನನ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರತಿ ವರ್ಷ ಮಾರ್ಚ್ ತಿಂಗಳಿಂದ ಬೇಸಿಗೆ ಕಾಲ ಪ್ರಾರಂಭವಾಗುತ್ತಿದೆ. ಈ ಸಮಯದಲ್ಲಿ ಸಾರ್ವಜನಿಕರು ಆರೋಗ್ಯದ ಕುರಿತು ಹೆಚ್ಚಿನ ಗಮನ ಹರಿಸುವುದು ಅತ್ಯವಶ್ಯಕವಾಗಿದೆ. ಆಶಾ ಕಾರ್ಯಕರ್ತೆಯರು ಮನೆ-ಮನೆ ಭೇಟಿ ನೀಡಿದ ಸಂದರ್ಭದಲ್ಲಿ ಬಿಸಿಲಿನಿಂದ ವೃದ್ಧರು, ಮಕ್ಕಳು, ಗರ್ಭಿಣಿಯರು ಹಾಗೂ ಸಹವ್ಯಾಧಿಗಳು ಆರೋಗ್ಯದ ರಕ್ಷಣೆ ಪಡೆದುಕೊಳ್ಳಲು ಸಲಹೆ ನೀಡಬೇಕು. ಬೇಸಿಗೆ ಅವಧಿಯಲ್ಲಿ ಎಲ್ಲರೂ ಹೆಚ್ಚು ನೀರನ್ನು



ಕುಡಿಯಬೇಕು. ಮಜ್ಜಿಗೆ ಅಥವಾ ಎಳನೀರು, ಹಣ್ಣಿನ ರಸವನ್ನು ಹೆಚ್ಚಾಗಿ ಸೇವಿಸಬಹುದು. ನೀರಿನ ಅಂಶ ಹೆಚ್ಚಾಗಿರುವ ತರಕಾರಿಗಳು ಅಥವಾ ಹಣ್ಣುಗಳನ್ನು ಸೇವಿಸುವುದು ಉತ್ತಮವಾಗಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ವಿಶೇಷ ಅರಿವು ಮೂಡಿಸಬೇಕು ಎಂದರು.

ಸಾರ್ವಜನಿಕರು ಸಡಿಲವಾದ ತೆಳು ಬಣ್ಣದ ಹತ್ತಿಯ ಬಟ್ಟೆಯನ್ನು ಧರಿಸುವುದು ಸೂಕ್ತವಾಗಿದೆ. ಇದಲ್ಲದೇ ಗಾಳಿಯಾಡುವ ಪಾದರಕ್ಷೆ ಧರಿಸಿರಿ, ಹೊರಗಡೆ ತೆರಳುವ ವೇಳೆ ತಂಪು ಕನ್ನಡಕ, ಛತ್ರಿ, ಟವೆಲ್ ಅಥವಾ ಬಿಸಿಲಿನಿಂದ ಕಾಪಾಡಿಕೊಳ್ಳುವ ಸಾಮಾನ್ಯ ಕ್ರಮಗಳನ್ನು ಪಾಲಿಸುವುದು ಅತ್ಯವಶ್ಯಕವಾಗಿದೆ. ರೇಡಿಯೊ-ದೂರದರ್ಶನ ಹಾಗೂ ದಿನಪತ್ರಿಕೆಗಳಲ್ಲಿ ಬಿಸಿಯಾದ ಗಾಳಿ ಅಥವಾ ಶಾಖ ತರಂಗ (ಹೀಟ್ ವೇವ್)ದ ಬಗ್ಗೆ ನೀಡುವ ಮಾಹಿತಿ ಅನುಸಾರ ದೈನಂದಿನ ಚಟುವಟಿಕೆಗಳನ್ನು ಯೋಜಿಸಿಕೊಳ್ಳುವಂತೆ ಜನರಿಗೆ ತಿಳಿ ಹೇಳಿ. ಜಮೀನಕೆಲಸ, ರಸ್ತೆ ಕಾಮಗಾರಿ ಮತ್ತು ಮುಂತಾದ ಕೆಲಸಗಳು ಸೇರಿ ಬಿಸಿಲಿನಲ್ಲಿ ಹೊರಗಡೆ ಕಾರ್ಯನಿರ್ವಹಿಸುವವರು ಆದಷ್ಟು ಬೆಳಗ್ಗೆ 11 ಗಂಟೆಯೊಳಗೆ ಮತ್ತು ಸಂಜೆ 4 ಗಂಟೆ ನಂತರ ಕೆಲಸ ಕೈಗೊಳ್ಳುವುದು ಉತ್ತಮ. ಬೆಳಗ್ಗೆ 11 ರಿಂದ ಸಂಜೆ 4 ಗಂಟೆಯೊಳಗಿನ ಅವಧಿಯಲ್ಲಿ ಶ್ರಮದಾಯಕ ಕೆಲಸಗಳಿಂದ ವಿಶ್ರಾಂತಿ ಪಡೆಯುವುದು ಸೂಕ್ತ. ಹಾಗಾಗಿ ಈ ಬಗ್ಗೆ ಜನರಿಗೆ ಮಾಹಿತಿ ನೀಡಬೇಕು ಎಂದು ಹೇಳಿದರು.

ಆರೋಗ್ಯ ನಿರೀಕ್ಷಣಾಧಿಕಾರಿ ರಮೇಶ್ ಅವರು ಹೆಚ್.ಪಿ.ವಿ ಲಸಿಕೆ, ಸಾಂಕ್ರಾಮಿಕ-ಅಸಾಂಕ್ರಾಮಿಕ ರೋಗಗಳ ನಿಯಂತ್ರಣ ಕುರಿತು ಮತ್ತು ಜಯಪ್ರಕಾಶ್ ಅವರು ಕುಷ್ಠರೋಗ ನಿರ್ಮೂಲನೆ ಕುರಿತು ಹಾಗೂ ಮಲ್ಲಿಕಾರ್ಜುನ್, ಎಸ್.ಟಿ.ಎಸ್ ಅವರು ಕ್ಷಯರೋಗ ನಿರ್ಮೂಲನೆ ಕುರಿತು ಮಾಹಿತಿ ನೀಡಿದರು.

ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳಾದ ಹನುಮಂತವ್ವ, ಸುಮಿತ್ರಾ, ಎಸ್‌ಟಿಎಸ್ ಹುಸೇನಬಾಷಾ, ಲಿಂಕ್‌ವರ್ಕರ್ ಶಿವಪ್ರಸಾದ ಸೇರಿದಂತೆ ಆಶಾ ಕಾರ್ಯಕರ್ತೆಯರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಕಿರುಸುದ್ದಿ

ಸದಸ್ಯರಾಗಿ ಸುಭಾಷ್ ಮುತ್ತೂರ್ ಆಯ್ಕೆ



ಹಗರಿಬೊಮ್ಮನಹಳ್ಳಿ: ಇತ್ತೀಚೆಗೆ ಉಡುಪಿಯ ದುರ್ಗಾ ಇಂಟರನ್ಯಾಷನಲ್ ಹೋಟೆಲ್‌ನಲ್ಲಿ ರಾಜ್ಯ ಕರಾಟೆ ಶಿಕ್ಷಕರ ಸಂಘದ ಮಹಾಸಭೆ ನಡೆಯಿತು. ಸಂಘದ ನಿಯಮಾವಳಿಗಳ ಪ್ರಕಾರ ನಡೆದ ಚುನಾವಣೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಕರಾಟೆ ಶಿಕ್ಷಕರು ಹಾಗೂ ಪ್ರತಿನಿಧಿಗಳು ಸಕ್ರಿಯವಾಗಿ ಭಾಗವಹಿಸಿದ್ದರು. ಈ ಮಹಾಸಭೆಯಲ್ಲಿ ಸಂಘದ ಹೊಸ ಕಾರ್ಯಕಾರಿ ಸಮಿತಿ ರಚನೆಯಾಗಿದ್ದು, ಪ್ರಮುಖ ಹುದ್ದೆಗಳ ಆಯ್ಕೆ ಪ್ರಕ್ರಿಯೆ ಯಶಸ್ವಿಯಾಗಿ ಪೂರ್ಣಗೊಂಡಿತು. ವಿಜಯನಗರ ಜಿಲ್ಲೆಯಿಂದ ಕರಾಟೆ ಮಾಸ್ಟರ್ ಶಿಹಾನ್ ಸುಭಾಷ್ ಮುತ್ತೂರ್ ಅವರನ್ನು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಮಂಗಳೂರಿನ ಮಹಮ್ಮದ್ ನದೀಮ್ ಅವರನ್ನು ಸಂಘದ ಅಧ್ಯಕ್ಷರಾಗಿ ಹಾಗೂ ಬಳ್ಳಾರಿ ಜಿಲ್ಲೆಯ ಕಟ್ಟೇಸ್ವಾಮಿ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಗಿದೆ. ಹೊಸದಾಗಿ ಆಯ್ಕೆಯಾದ ಪದಾಧಿಕಾರಿಗಳು ರಾಜ್ಯದ ಕರಾಟೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಬದ್ಧರಾಗಿದ್ದು, ತರಬೇತಿ ಗುಣಮಟ್ಟವನ್ನು ಹೆಚ್ಚಿಸುವುದು, ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವುದು ಹಾಗೂ ರಾಜ್ಯ ಮಟ್ಟದ ಕ್ರೀಡಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸುವ ದಿಸೆಯಲ್ಲಿ ಕಾರ್ಯನಿರ್ವಹಿಸುವುದಾಗಿ ತಿಳಿಸಿದ್ದಾರೆ. ವಿಜಯನಗರ ಜಿಲ್ಲೆಯ ಕರಾಟೆ ಮಾಸ್ಟರ್‌ಗಳಾದ ಡಾ. ದಾಸರ ನಾಗರಾಜ, ಹನುಮಂತ, ಆನಂದ, ಕೊಂಡಯ್ಯ ಸೇರಿದಂತೆ ಸಂಘದ ಹಿರಿಯರು ಹಾಗೂ ಸದಸ್ಯರು ನೂತನ ಪದಾಧಿಕಾರಿಗಳಿಗೆ ಅಭಿನಂದನೆಗಳನ್ನು ತಿಳಿಸಿ, ಅವರ ಮುಂದಿನ ಕಾರ್ಯಚಟುವಟಿಕೆಗಳಿಗೆ ಶುಭ ಹಾರೈಸಿದರು.

ಮಹಾವೀರ ಜಯಂತಿ ಆಚರಣೆ



ಸಿರುಗುಪ್ಪ: ನಗರದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಕುಂಥುನಾಥ್ ಜೈನ್ ಸಂಘದ ವತಿಯಿಂದ ಭಗವಾನ ಮಹಾವೀರ ಜಯಂತಿಯ ಅಂಗವಾಗಿ ಮಹಾವೀರ ಭಾವಚಿತ್ರಕ್ಕೆ ಮಂಗಳವಾರ ಪೂಜೆ ಸಲ್ಲಿಸಿದರು. ಜಯಂತಿ ಅಂಗವಾಗಿ ದಾಸೋಹ, ಶುದ್ಧಕುಡಿಯುವ ನೀರಿನ ಅರವಟಿಕೆ, ಗೋ ಶಾಲೆಯ ಹಸುಗಳಿಗೆ ಮೇವು ದಾನ ಮಾಡುವ ಮೂಲಕ ಆಚರಿಸಿದರು. ಮಾಜಿ ಶಾಸಕ ಎಂ.ಎಸ್.ಸೋಮಲಿಂಗಪ್ಪ, ಕುಂಥುನಾಥ್ ಜೈನ ಸಂಘದ ಅಧ್ಯಕ್ಷ ಕಿರಣ್ ಕುಮಾರ್ ಜೈನ, ಸದಸ್ಯರಾದ ವಿಕ್ರಮ್ ಜೈನ್, ಸುಭಾಷ್ ಜೈನ, ಸಂತೋಷ ಜೈನ, ನೀಲೇಶ್ ಜೈನ, ರಿಶಬ್ ಜೈನ, ಪ್ರಶಾಂತ ಜೈನ ಹಾಗೂ ಜೈನ ಸಮುದಾಯದವರು ಭಾಗವಹಿಸಿದ್ದರು.

ಶಿವಕುಮಾರ ಶ್ರೀಗಳ ಜಯಂತಿ ಆಚರಣೆ



ಕುರುಗೋಡು: ತಾಲೂಕಿನ ಮುಷ್ಟಗಟ್ಟೆ ಗ್ರಾಮದಲ್ಲಿ ಸಿದ್ದಗಂಗಾ ಮಠದ ಲಿಂಗೈಕ್ಯ ಡಾ.ಶಿವಕುಮಾರ ಸ್ವಾಮೀಜಿ ಅವರ 119ನೇ ಜಯಂತಿಸಡಗರ ಸಂಭ್ರಮದಿಂದ ಬುಧವಾರ ಆಚರಿಸಲಾಯಿತು.

ಈ ವೇಳೆ ಯುವ ಪತ್ರಕರ್ತ ಅಣ್ಣಯ್ಯ ಸ್ವಾಮಿ ಮಾತನಾಡಿ. ಶ್ರೀಶಿವಕುಮಾರ ಸ್ವಾಮೀಜಿ ಅನ್ನದಾಸೋಹ ಜ್ಞಾನ ದಾಸೋಹದ ಮೂಲಕ ಲಕ್ಷಾಂತರ ಮಕ್ಕಳ ಪಾಲಿಗೆ ಆಶಾಕಿರಣವಾಗಿ ನಡೆದಾಡುವ ದೇವರು ಎಂದೇ ಹೆಸರಾದವರು ಅವರ ಜಯಂತಿ ಹಿನ್ನೆಲೆಯಲ್ಲಿ ಬೆಳಿಗ್ಗೆಯಿಂದ ಗ್ರಾಮದ ವೀರಶೈವ ಸಮಾಜದ ಬಾಂಧವರು ಈಶ್ವರ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಶ್ರೀಗಳ ಭಾವಚಿತ್ರಕ್ಕೆ ಹೂವಿನ ಅಲಂಕಾರ ಸಮೇತ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯನ್ನು ಸಾಂಪ್ರದಾಯಿಕ ಭಜನೆ ವಾದ್ಯದೊಂದಿಗೆ ನಡೆಸಲಾಯಿತು.

ಈ ವೇಳೆ ಗ್ರಾಮದ ವೀರಶೈವ ಸಮಾಜದವರು ಹಾಗೂ ಮುಖಂಡರು ಗ್ರಾಮಸ್ಥರು ಇದ್ದರು.



ಕರೂರು: ಸಮೀಪದ ಹಾಗಲೂರಿನಲ್ಲಿ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರ ವತಿಯಿಂದ ಪದ್ಮಭೂಷಣ ಕರ್ನಾಟಕ ರತ್ನ ತ್ರಿವಿಧ ದಾಸೋಹಿ ಶ್ರೀಸಿದ್ದಗಂಗಾ ಮಠದ ಡಾ.ಶಿವಕುಮಾರ ಸ್ವಾಮೀಜಿ ಅವರ ಜಯಂತಿ ಆಚರಿಸಲಾಯಿತು.

ರಾಜ್ಯ ರೈತ ಸಂಘದಿಂದ ಮನವಿ

ಹೂವಿನಹಡಗಲಿ: ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಘಟಕದ ವತಿಯಿಂದ ರೈತರ ಪಂಪ್‌ಸೆಟ್ ಅಕ್ರಮ, ಸಕ್ರಮ ಯೋಜನೆ ಹಣವನ್ನು ಸರ್ಕಾರವೇ ಭರಿಸಬೇಕೆಂದು ತಹಶೀಲ್ದಾರ್ ಕೆ.ಎಂ.ಗುರುಬಸವರಾಜ ಅವರಿಗೆ ಮನವಿ ಸಲ್ಲಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಶಿವರಾಜ್ ಎಂ.ಮಾತನಾಡಿ, ಇಂದನ ಸಚಿವ ಕೆ.ಜೆ. ಜಾರ್ಜ್ ಅವರು ರಾಜ್ಯದಲ್ಲಿ 4.5 ಲಕ್ಷ ಕೃಷಿ ಪಂಪ್‌ಸೆಟ್‌ಗಳು ಇವೆ. ಈಗಗಲೇ 2.75 ಲಕ್ಷ ಸಕ್ರಮ ಹೊಂದಿವೆ. ಇನ್ನೂ ಉಳಿದ 1.75 ಲಕ್ಷ ಕೃಷಿ ಪಂಪ್‌ಸೆಟ್‌ಗಳು ಸಕ್ರಮ ಅಥವಾ ಆರ್‌ಆರ್ ನಂಬರ್ ಪಡೆಯಲು ರೈತರೇ 1.5ಲಕ್ಷ ಹಣವನ್ನು ಕಟ್ಟಿ ಸಕ್ರಮ ಪಡೆಯಲು 3 ತಿಂಗಳು ಗಡವು ನೀಡಿದ್ದಾರೆ. ಆದರೆ, ರೈತರ ಬೆಳೆಗಳಿಗೆ ಯಾವುದೇ ಬೆಂಬಲ ಬೆಲೆ ಇಲ್ಲದೆ ರೈತರು ಕಂಗೆಟ್ಟಿದ್ದಾರೆ ಇಂತಹ ಸಂಭರ್ಧದಲ್ಲಿ ರೈತರು 1.5ಲಕ್ಷ ಹಣ ಭರಿಸಲು ಕಷ್ಟ ವಾಗುತ್ತದೆ. ಆದ್ದರಿಂದ ಸರ್ಕಾರವೇ ಹಣ ಭರಿಸಿ ರೈತರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಕೊಡಬೇಕು. ಈ ಯೋಜನೆಯನ್ನು ಸರ್ಕಾರ 2023 ಸೆ.23ರಂದು ಹಿಂಪಡೆಯಲಾಗಿದೆ. ಈ ಯೋಜನೆಯನ್ನು ಮರು ಜಾರಿಗೆ ಗೊಳಿಸಬೇಕೆಂದು ರೈತ ಸಂಘವು ಒತ್ತಾಯಸುತ್ತದೆ ಎಂದರು.

ಮಹಿಳಾ ಜಿಲ್ಲಾ ಅಧ್ಯಕ್ಷ ವಿಜಯಲಕ್ಷ್ಮೀ, ಜಿಲ್ಲಾ ಉಪಾಧ್ಯಕ್ಷ ಕೆ.ಮಂಜುನಾಥ್, ಕೆ.ಗಣೆಸಬ್ ಗುರುಬಸವರಾಜ, ಪಕ್ಕೀರಪ್ಪ, ಎಂಕನಾಯ್ಕ, ದೇವಪ್ಪ ಇಟಗಿ, ಮಡ್ಡಿ ನಿಂಗಪ್ಪ, ಭೋಜನಾಯ್ಕ, ಸುರೇಶ ನಾಯ್ಕ ಇತರರಿದ್ದರು.



ಹೂವಿನಹಡಗಲಿ: ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಘಟಕದ ವತಿಯಿಂದ ರೈತರ ಪಂಪ್‌ಸೆಟ್ ಅಕ್ರಮ, ಸಕ್ರಮ ಯೋಜನೆ ಹಣವನ್ನು ಸರ್ಕಾರವೇ ಭರಿಸಬೇಕೆಂದು ತಹಶೀಲ್ದಾರ್ ಕೆ.ಎಂ.ಗುರುಬಸವರಾಜ ಅವರಿಗೆ ಮನವಿ ಸಲ್ಲಿಸಿದರು. ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಅಧ್ಯಕ್ಷ ಸಿದ್ದಪ್ಪ ಹೊಸಮನಿ, ಉಪಾಧ್ಯಕ್ಷ ವಿಠಲ್ ನಾಯಕ, ಪ್ರಧಾನ ಕಾರ್ಯದರ್ಶಿ ಶಿವರಾಜ ಎಂ.ಹೊಳಗುಂದಿ, ಗಿರೀಶ ಡಿ. ಇತರರಿದ್ದರು.

ವಿಶ್ವ ರಂಗಭೂಮಿ ದಿನಾಚರಣೆ | ಡಾ.ನಾಗರತ್ನಮ್ಮ ಅಳಲು

ಕಲಾವಿದೆಯರ ಸಂಕಷ್ಟ ಅಷ್ಟಿಷ್ಟಲ್ಲ

ವಿಜಯನಗರ: ಆರಂಭದ ಹಂತದಲ್ಲಿ ಮೊದಲು ನಾಟಕಗಳಲ್ಲಿ ಪುರುಷರೇ ಸ್ತ್ರೀ ಪಾತ್ರಗಳನ್ನು ಅಭಿನಯಿಸುತ್ತಿದ್ದರು. ಆನಂತರ ಮಹಿಳೆಯರು ರಂಗಭೂಮಿ ಪ್ರವೇಶ ಮಾಡಿದರು ಎಂದು ಗುಬ್ಬಿ ವೀರಣ್ಣ ಪ್ರಶಸ್ತಿ ಪುರಸ್ಕೃತ ಹಿರಿಯ ರಂಗಭೂಮಿ ಕಲಾವಿದೆ ಮರಿಯಮ್ಮನಹಳ್ಳಿಯ ಡಾ.ನಾಗರತ್ನಮ್ಮ ತಿಳಿಸಿದರು.

ಹೊಸಪೇಟೆ ನಗರದ ಶ್ರೀಶಂಕರ್ ಆನಂದ್ ಸಿಂಗ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶ್ರೀವಾಲ್ಮೀಕಿ ಮಹಿಳಾ ಕಲಾ ಸಂಸ್ಥೆಯಿಂದ ಬುಧವಾರ ಹಮ್ಮಿಕೊಂಡಿದ್ದ ವಿಶ್ವರಂಗಭೂಮಿ ದಿನಾಚರಣೆ ಕಾರ್ಯಕ್ರಮದಲ್ಲಿ ರಂಗಭೂಮಿ ಮತ್ತು ಮಹಿಳೆ ವಿಚಾರ ಕುರಿತು ಮಾತನಾಡಿದರು.

ಕನ್ನಡ ರಂಗಭೂಮಿಗೆ ಮೊದಲ ಮಹಿಳಾ ಕಲಾವಿದೆಯಾಗಿ ಗುಳೇದಗುಡ್ಡ ಯಲ್ಲುಬಾಯಿ ಪಾದಾರ್ಪಣೆ ಮಾಡಿದರು. ಅವರ ನಂತರ ಮರಿಯಮ್ಮನಹಳ್ಳಿ, ಕೂಡ್ಲಿಗಿ, ಬಳ್ಳಾರಿ, ಗದಗ, ಬಾದಾಮಿ ಸೇರಿದಂತೆ ಅನೇಕ ಜಿಲ್ಲೆಗಳಲ್ಲಿ ಮಹಿಳಾ ಕಲಾವಿದರು ರಂಗಭೂಮಿ ಪ್ರವೇಶಿದರು ಎಂದರು.

ಬಹುತೇಕ ಮಹಿಳಾ ಕಲಾವಿದೆಯರು ತಮ್ಮ ಕುಟುಂಬ ಹಾಗೂ ಜೀವನ ನಿರ್ವಹಣೆಗಾಗಿ ರಂಗಭೂಮಿ ಪ್ರವೇಶ ಮಾಡಿದರು. ತಮ್ಮ ಕಷ್ಟ ನೋವು, ನಲಿವುಗಳನ್ನು ಮರೆತು ಪ್ರೇಕ್ಷಕರನ್ನು ರಂಜಿಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ರಂಗಭೂಮಿ ಕಲಾವಿದೆಯರ ಕೊರತೆ ಉಂಟಾಗಿದೆ. ಪ್ರಸ್ತುತ ವಿರುವ ಕೆಲವು ನಟಿಯನ್ನು ಹೊರತುಪಡಿಸಿದರೆ, ಪೌರಾಣಿಕ,ಐತಿಹಾಸಿಕ,ಭಕ್ತಿ ಪ್ರಧಾನ ನಾಟಕಗಳಲ್ಲಿ ಅಭಿನಯಿಸಲು ಕಲಾವಿದೆಯರಿಲ್ಲ,ಹಾಗಾಗಿ ಯುವತಿಯರು ರಂಗಭೂಮಿ ಪ್ರವೇಶ ಮಾಡಿ ಸುಂದರವಾದ ಬದುಕನ್ನು ಕಟ್ಟಿಕೊಳ್ಳಬಹುದು ಎಂದರು.



> ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಹವ್ಯಾಸಿ ಕಲಾವಿದರು ಜಾತ್ರೆಗಳಲ್ಲಿ ನಾಟಕಗಳ ಮೂಲಕ ಜನರಿಗೆ ಮನರಂಜನೆ ನೀಡುತಿದ್ದಾರೆ. ಜೊತೆಗೆ ಸಮಾಜಮುಖಿ ಸಂದೇಶಗಳನ್ನು ಸಾರುತ್ತಿವೆ. ಹೀಗಾಗಿ ರಂಗಭೂಮಿ ಕಲೆಯು ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸುವ ಮಹತ್ವದ ಪಾತ್ರ ವಹಿಸುತ್ತಿದೆ.
>
> ■ ಡಾ.ನಾಗರತಮ್ಮ, ಹಿರಿಯ ರಂಗಭೂಮಿ ಕಲಾವಿದೆ

ಜನರು ರಂಗಭೂಮಿಯ ನಟಿಯರು ಎಂದರೆ ನೋಡುವ ರೀತಿಯೇ ಬೇರೆ ಇರುತ್ತದೆ. ಅವಮಾನ ಅಪಮಾನ, ಕಷ್ಟಗಳಳನ್ನೆಲ್ಲಾ ಸಹಿಸಿಕೊಂಡು ರಂಗಭೂಮಿಯಲ್ಲಿ ಸಾಧನೆ ಮಹಿಳೆಯರು ಅನೇಕರಿದ್ದಾರೆ. ಮನ್ನೂರು ಸುಭದ್ರಮ್ಮ, ಬಳ್ಳಾರಿ ಲಲಿತಮ್ಮ, ಆರ್. ನಾಗರತ್ನಮ್ಮ, ಕುಕನೂರು ರೆಹಮಾನವ್ವ, ಅಂಜಲಿದೇವಿ ಇನ್ನೂ ಹಲವಾರು ಕಲಾವಿದೆಯರು ಜನರ ಮನದಲ್ಲಿ ಉಳಿದಿದ್ದಾರೆ ಎಂದರು. ಹಿರಿಯ ರಂಗಕರ್ಮಿ ಮ.ಬ.ಸೋಮಣ್ಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕತರಾದ ದೇವರಾಜ್ ಗಿಣಿಗೇರಿಯವರಿಗೆ ಸಂಸ್ಥೆಯ ವತಿಯಿಂದ ವಾಲ್ಮೀಕಿ ಕಲಾರಂಗ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮಲ್ಲಿಕಾರ್ಜುನ ತುರುವನೂರು ರವರು ರಂಗಗೀತೆಗಳನ್ನು ಹಾಡಿದರು. ಶಂಕರ್ ಆನಂದ ಸಿಂಗ್ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ವೀರಭದ್ರಪ್ಪ ತಂಬ್ರಹಳ್ಳಿ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆ ಮೇಲೆ ಸಂಸ್ಥೆಯ ಅಧ್ಯಕ್ಷೆ ವಿ.ಅನುರಾಧ, ಕಲಾವಿದ ಹಾಗೂ ಪತ್ರಕರ್ತ ನಾಗರಾಜ್ ಮಾಡ್ಲಾಕನಹಳ್ಳಿ, ಬಿಜೆಪಿ ಮುಖಂಡ ಮಧುರ ಚೆನ್ನಶಾಸ್ತ್ರಿ ಹಿರೇಮಠ, ಜಾನಪದ ಗಾಯಕ ಯಲ್ಲನಗೌಡ ಶಂಕರಬಂಡೆ, ಬಯಲಾಟ ಕಲಾವಿದರ ಸಂಘದ ರಾಜ್ಯಾಧ್ಯಕ್ಷರಾದ ವಿಶ್ವನಾಥ್ ಸಾಹುಕಾರ್ ಉಪಸ್ಥಿತರಿದ್ದರು.

ರೋಗಿಗಳಿಗೆ ಉಚಿತ ಉಪಹಾರ ಸೇವೆ

ಹಗರಿಬೊಮ್ಮನಹಳ್ಳಿ: ಪಟ್ಟಣದ ಪ್ರಸಿದ್ಧ ದರ್ಶನ್ ಹೋಟೆಲ್ ನಿಂದ ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾದ ನೂರಾರು ರೋಗಿಗಳಿಗೆ ಪ್ರತಿನಿತ್ಯ ರಾತ್ರಿ ಸಮಯದಲ್ಲಿ ಉಚಿತವಾಗಿ ಉಪಹಾರ ನೀಡುತ್ತಿದ್ದರು. ಈ ಒಂದು ಸೇವಾ ಕಾರ್ಯ ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆ ವ್ಯಕ್ತವಾಗಿತ್ತು.

ಉಚಿತ ಉಪಹಾರ ಸೇವೆ ಒಂದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ದರ್ಶನ್ ಹೋಟೆಲ್ ಮಾಲೀಕ ಎಸ್.ಎಂ.ಗಂಗಾಧರಯ್ಯ ಅವರನ್ನು ಸನ್ಮಾನಿಸಲಾಯಿತು.

ನಂದಿಪುರ ಶ್ರೀಮಹೇಶ್ವರ ಸ್ವಾಮೀಜಿ ಮಾತನಾಡಿ, ಯಾವೊಂದು ಸ್ವಾರ್ಥಪರ ಚಿಂತನೆ ಇಲ್ಲದೇ ಸಾಮಾಜಿಕ ಕಳಕಳಿಯಿಂದ ಆಸ್ಪತ್ರೆಯಲ್ಲಿ ದಾಖಲಾದ ಎಲ್ಲ ಬಡ ರೋಗಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ತಮ್ಮ ದುಡಿಮೆಯಒಂದುಪಾಲನ್ನುಸಮಾಜಸೇವೆಗೆ ಮೀಸಲಿಟ್ಟಿದ್ದಾರೆ.ನಿರಂತರವಾಗಿ ವರ್ಷವಿಡಿ ಆಸ್ಪತ್ರೆಯ ರೋಗಿಗಳಿಗೆ ದಿನನಿತ್ಯ ಇಡ್ಲಿ ಉಪ್ಪಿಟ್ಟು ಚಪಾತಿ ಪಲ್ಯ ಇತರ ಉಪಹಾರವನ್ನು ಉಚಿತವಾಗಿ ನೀಡಿ ಬಡ ರೋಗಿಗಳ ನೋವಿಗೆ ಸ್ಪಂದಿಸುವ ಇತರರಿಗೂ ಮಾದರಿ ಆಗುವಂತಹ ಕೆಲಸವನ್ನು ಮಾಡಿದ ಹೋಟೆಲ್ ಮಾಲೀಕ ಎಸ್.ಎಂ.ಗಂಗಾಧರಯ್ಯ ಅವರ ಕುಟುಂಬ ಮತ್ತು ಸ್ನೇಹಿತರ ಬಳಗಕ್ಕೆ ಒಳ್ಳೆಯದಾಗಲಿ ಇನ್ನಷ್ಟು ಇಂತಹ ಸಮಾಜ ಸೇವೆ ಮಾಡಲಿಕ್ಕೆ ಆರೋಗ್ಯವನ್ನು ಶಕ್ತಿಯನ್ನು ಕರುಣಿಸಲಿ ಎಂದರು.

ಹಾಲಸ್ವಾಮಿ ಮಠದ ಹಾಲ ಸಿದ್ದೇಶ್ವರ ಸ್ವಾಮೀಜಿ ಮಾತನಾಡಿ ಪ್ರತಿ ಒಂದೊಂದು ರೂಪಾಯಿಗೂ ಲೆಕ್ಕ ಹಾಕುವ ಕೋಟಿ ಕೋಟಿ ಹಣ ಇದ್ದವರು ಸಮಾಜ ಸೇವೆಗೆ ಹಿಂದೇಟು ಹಾಕುವ ಇಂದಿನ ದಿನಮಾನಗಳಲ್ಲಿ ದಾನ ಧರ್ಮ ಸೇವಾ ಮನೋಭಾವ ಕಾರ್ಯ ಮಾಡುವುದು ತುಂಬಾ ವಿರಳ ದರ್ಶನ್ ಹೋಟೆಲ್ ಮಾಲೀಕರಾದ ಎಸ್ ಎಂ ಗಂಗಾಧರಯ್ಯ ಕುಟುಂಬ ಹೋಟೆಲ್ ಸಿಬ್ಬಂದಿಗಳು ಸ್ನೇಹಿತರೆಲ್ಲಾ ಸೇರಿ ರೋಗಿಗಳಿಗೆ ಉಚಿತ ಉಪಹಾರ ನೀಡುವುದು ಸ್ಪೂರ್ತಿದಾಯಕ ಕೆಲಸವಾಗಿದೆ ಎಂದರು.

ತಾಲೂಕ ವೈದ್ಯಾಧಿಕಾರಿ ಡಾ.ಪ್ರವೀಣ್ ಕುಮಾರ್, ಪುರಸಭೆ ಸದಸ್ಯರಾದ ನವೀನ್ ಕುಮಾರ್, ಜೋಗಿ ಹನುಮಂತಪ್ಪ, ಮುಖಂಡರಾದ ಸರೆಗಾರ ಹುಚ್ಚಪ್ಪ ಕನ್ನಿಹಳ್ಳಿ ಚಂದ್ರಶೇಖರ,, ಗುಂಡ್ರು ಹನುಮಂತಪ್ಪ ಸಿ.ಎಂ.ಶ್ರೀನಿವಾಸ್, ನೆಲ್ಲುದ್ರಿ ಪತ್ರೇಶ್, ಸರ್ದಾರ್ ಯಮನೂರಪ್ಪ, ಹೋಟೆಲ್ ಸಿಬ್ಬಂದಿ ನೂರಾರು ರೋಗಿಗಳ ಪೋಷಕರು ಸ್ಥಳೀಯ ನಾಗರಿಕರು ಮಹಿಳೆಯರು ಇದ್ದರು.



ಸ್ಮಾರ್ಟ್ ಮೀಟರ್ ಅಳವಡಿಕೆ ಬೇಡ

ಕೂಡ್ಲಿಗಿ: ಕೃಷಿ ಪಂಪ್‌ಸೆಟ್‌ಗಳಿಗೆ ಮತ್ತು ಮನೆಗಳಿಗೆ ವಿದ್ಯುತ್ ಸ್ಮಾರ್ಟ್ ಮೀಟರ್ ಅಳವಡಿಕೆ ನಿರ್ಧಾರವನ್ನು ಸರ್ಕಾರ ಕೂಡಲೇ ಹಿಂಪಡೆಯಬೇಕು. ಇಲ್ಲವಾದರೆ ತೀವ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಘಟಕ ಎಚ್ಚರಿಕೆ ನೀಡಿದೆ.

ಪಟ್ಟಣದಲ್ಲಿ ಬುಧವಾರ ಮಹಾತ್ಮ ಗಾಂಧಿ ಚಿತಾಭಸ್ಮದಿಂದ ಮೆರವಣಿಗೆ ಪ್ರಾರಂಭಿಸಿ ಮುಖ್ಯ ರಸ್ತೆಗಳ ಮೂಲಕ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ಹೊರ ಹಾಕಿದರು. ನಂತರ ತಾಲೂಕು ಕಚೇರಿ ಮುಂದೆ ಜಮಾಯಿಸಿ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಕರ್ನಾಟಕ ಸರ್ಕಾರ ಇವರಿಗೆ ಮನವಿ ಸಲ್ಲಿಸಿದರು.

ರೈತ ಸಂಘದ ತಾಲೂಕು ಅಧ್ಯಕ್ಷ ಎನ್. ರಮೇಶ್ ಮಾತನಾಡಿ, 'ಕೃಷಿ ಪಂಪ್‌ಸೆಟ್, ಅಂಗಡಿಗಳು ಹಾಗೂ ಮನೆಗಳಿಗೆ ಸರ್ಕಾರ ವಿದ್ಯುತ್ ಸ್ಮಾರ್ಟ್ ಮೀಟರ್ ಅಳವಡಿಕೆಗೆ ಮುಂದಾಗಿರುವುದು ಅವೈಜ್ಞಾನಿಕವಾಗಿದೆ. ಇದರಿಂದ ರೈತರು, ಸಾರ್ವಜನಿಕರು, ಕೂಲಿ ಕಾರ್ಮಿಕರಿಗೆ ಹೊರೆಯಾಗಲಿದೆ ಎಂದು ಹೇಳಿದರು.

ಸಂಘದ ಕಲ್ಯಾಣ ಕರ್ನಾಟಕ ವಿಭಾಗದ ಕಾರ್ಯದರ್ಶಿ ಎಂಎಲ್‌ಕೆನಾಯ್ಡು ಮಾತನಾಡಿ, ಖಾಸಗಿ ಕಂಪೆನಿಗಳ ಲಾಭಿಗೆ ಮಣಿದಿರುವ ರಾಜ್ಯ ಸರ್ಕಾರ ವಿದ್ಯುತ್ ನಿಗಮಗಳನ್ನು ಖಾಸಗೀಕರಣಗೊಳಿಸುವ ಹುನ್ನಾರ ಮಾಡಿದೆ. ಪಾವತಿಸಿ ಉಪಯೋಗಿಸುವ ವಿದ್ಯುತ್ ಸ್ಮಾರ್ಟ್ ಮೀಟರ್‌ಗಳ ಅವವಡಿಕೆ ಸಾರ್ವಜನಿಕರಿಗೆ ಹಾಗೂ ರೈತರಿಗೆ ಆರ್ಥಿಕವಾಗಿ ಹೊರೆಯಾಗಲಿದೆ. ಸ್ಮಾರ್ಟ್ ಮೀಟರ್ ಅಳವಡಿಕೆ ನಿರ್ಧಾರದಿಂದ ಹಿಂದೆ ಸರಿಯಬೇಕು ಎಂದರು.

ಯುವ ಘಟಕದ ಅಧ್ಯಕ್ಷ ರವಿಕುಮಾರ್ ತಂಬ್ರಹಳ್ಳಿ, ತಾಲೂಕು ಕಾರ್ಯಾಧ್ಯಕ್ಷರು ಕೆ.ತಿಪ್ಪೇಸ್ವಾಮಿ, ಪ್ರಧಾನ ಕಾರ್ಯದರ್ಶಿ ಟಿ.ಹಾಲಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಪಾಂಡುರಂಗ ನಾಯ್ಕ, ಜಿಲ್ಲಾ ಕಾರ್ಯಾಧ್ಯಕ್ಷರ ಬಾಷಾ ಸಾಬ್, ಜಿಲ್ಲಾ ಕಾರ್ಯದರ್ಶಿ ಬಾಣದ ಕೃಷ್ಣ, ತಾಲೂಕು ಯುವ ಘಟಕದ ಅಧ್ಯಕ್ಷ ಎಂ.ಓಬಲೇಶ್, ಜಿ.ರಾಜು ವಕೀಲರು, ಬಿ.ನವೀನ್‌ಕುಮಾರ್, ದುರ್ಗಪ್ಪ, ಯು. ಶ್ರೀರಾಮ, ಮಂಜುನಾಥ್, ಯುವರಾಜ್ ಕೈವಲ್ಯಪುರ, ಕೆ.ವೀರೇಶ್, ಸುರೇಶ್, ಮಲ್ಲಿಕಾರ್ಜುನ್, ರವಿ, ಪೂಜಾರಿ ಹನುಮಂತು, ಕೆ.ಮೈಲಾರಪ್ಪ, ಬಸವರಾಜ್, ಚೌಡೇಶ್ ಸಣ್ಣ ನಿಂಗಪ್ಪ ಸೇರಿದಂತೆ ರೈತ ಸಂಘದ ಪದಾಧಿಕಾರಿಗಳು, ರೈತರು ಇತರರು ಉಪಸ್ಥಿತರಿದ್ದರು.



ಸಿದ್ದಗಂಗಾ ಶ್ರೀಗಳ ಜನ್ಮದಿನ ಆಚರಣೆ, ಕವಿಗೋಷ್ಠಿ

ಕೊಟ್ಟೂರು: ತುಂಗಭದ್ರಾ ಶಿಕ್ಷಣ ಮಹಾವಿದ್ಯಾಲಯ ಹಾಗೂ ಚುಟುಕು ಸಾಹಿತ್ಯ ಪರಿಷತ್ ಕೊಟ್ಟೂರು ತಾಲೂಕು ಘಟಕ, ಯೂನಿಕ್ ಚಾರಿಟೇಬಲ್ ಟ್ರಸ್ಟ್‌ನ ವತಿಯಿಂದ ತುಂಗಭದ್ರಾ ಶಿಕ್ಷಣ ಮಹಾವಿದ್ಯಾಲಯದಲ್ಲಿ ತ್ರಿವಿಧ ದಾಸೋಹಿ ನಡೆದಾಡುವ ದೇವರು ಸಿದ್ದಗಂಗಾ ಶ್ರೀಶಿವಕುಮಾರ ಮಹಾಸ್ವಾಮಿಗಳ 119ನೆಯ ಜನ್ಮದಿನವನ್ನು ಆಚರಿಸಲಾಯಿತು.

ಸಿದ್ದಗಂಗಾ ಶ್ರೀಗಳ ಜನ್ಮದಿನದ ಪ್ರಯುಕ್ತವಾಗಿ ಚುಟುಕು ಸಾಹಿತ್ಯ ಪರಿಷತ್ ತಾಲೂಕು ಘಟಕದ ವತಿಯಿಂದ ಕವಿಗೋಷ್ಠಿಯನ್ನು ಸಹ ಏರ್ಪಡಿಸಲಾಗಿತ್ತು. ಈ ಕವಿಗೋಷ್ಠಿಯಲ್ಲಿ ಅನೇಕ ಯುವಕವಿಗಳು, ಹಾಗೂ ಹಿರಿಯ ಕವಿಗಳು ತಮ್ಮ ಸ್ವ ರಚಿತವಾದ ಕವನಗಳನ್ನು ವಾಚನ ಮಾಡಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ದಾವಣಗೆರೆ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಕೆ.ಎಸ್.ವೀರಭದ್ರಪ್ಪ ಅವರು ಇಂದಿನ ದಿನಮಾನಗಳಲ್ಲಿ ಯುವ ಜನತೆಯಲ್ಲಿ ಸಾಹಿತಿಕ ಆಸಕ್ತಿ ಕಡಿಮೆಯಾಗುತ್ತಿದ್ದು, ಪ್ರತಿಯೊಬ್ಬರು ಸಾಹಿತ್ಯದಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು. ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಕಾಲೇಜಿನ ಪ್ರಾಚಾರ್ಯ ಡಾ.ಟಿ.ಶ್ಯಾಮರಾಜ್ ತ್ರಿವಿಧ ದಾಸೋಹಿಗಳಾದ ಸಿದ್ದಗಂಗಾ ಶ್ರೀಗಳನ್ನು ನೋಡಿ ಅವರ ದರ್ಶನ ಆಶೀರ್ವಾದ ಪಡೆದಂತಹನಾವುಗಳೇಧನ್ಯರುಎಂದುತಿಳಿಸಿದರು.ಇಂತಹಯುವಕವಿಗೋಷ್ಠಿಗಳನ್ನು ಏರ್ಪಡಿಸುವುದರಿಂದ ವಿದ್ಯಾರ್ಥಿಗಳಲ್ಲಿಯೂ ಸಹ ಸಾಹಿತ್ಯಿಕ ಆಸಕ್ತಿಯನ್ನು ಮೂಡಿಸಬಹುದು ಎಂದು ತಿಳಿಸಿದರು. ಮುಖ್ಯ ಅತಿಥಿಗಳಾದ ಜಿ.ಮಹೇಶ್ ಮತ್ತು ರಾಘವೇಂದ್ರ ಭಂಡಾರಿ ಮಾತನಾಡಿದರು.



ವಿದ್ಯಾರ್ಥಿನಿಯರಾದ ಕು.ಕೀರ್ತಿ ಮತ್ತು ಐಶ್ವರ್ಯ ಪ್ರಾರ್ಥಿಸಿದರು. ತಾಲೂಕು ಚುಟುಕು ಸಾಹಿತ್ಯ ಪರಿಷತ್ನ ಅಧ್ಯಕ್ಷ ಮಂಜುನಾಥ್ ಮೋರಗೇರಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಪಿ.ಎಂ.ಈಶ್ವರಯ್ಯ ನಿರ್ವಹಿಸಿದರು. ಕಾಲೇಜಿನ ಎಲ್ಲ ಉಪನ್ಯಾಸಕ ವರ್ಗದವರು ಹಾಗೂ ಪ್ರಥಮ ಮತ್ತು ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ಬಳಿಕ ಯುವ ಉದ್ಯಮಿ ಕೊಟ್ರೇಶ್ ಅವರು ಪ್ರಸಾದ ವ್ಯವಸ್ಥೆ ಮಾಡಿಸಿದರು.

ವಿಕಾಸ ಬ್ಯಾಂಕ್: 10.84 ಕೋಟಿ ರೂ. ನಿವ್ವಳ ಲಾಭ

ವಿಜಯನಗರ: ವಿಕಾಸ್ ಬ್ಯಾಂಕ್‌ನ ಅತ್ಯುತ್ತಮ ಸೇವೆಗಳು ಹಾಗೂ ಜಾಗತಿಕ ಮಟ್ಟದಲ್ಲಿ ಉಂಟಾಗುತ್ತಿರುವ ಆರ್ಥಿಕ ಅಸ್ಥಿರತೆಯಿಂದಾಗಿ ಕೆಲವೇ ತಿಂಗಳಲ್ಲಿ ಬ್ಯಾಂಕ್‌ಗೆ ಶೇ.34 (349 ಕೋಟಿ ರೂ.) ರಷ್ಟು ಹೆಚ್ಚುವರಿಯಾಗಿ ಠೇವಣಿ ಹರಿದು ಬಂದಿದೆ. 2025-26ನೇ ಸಾಲಿನಲ್ಲಿ 10.84 ಕೋಟಿ ರೂ.ನಿವ್ವಳ ಲಾಭವಾಗಿದೆ ಎಂದು ವಿಕಾಸ ಬ್ಯಾಂಕ್‌ನ ಅಧ್ಯಕ್ಷ ವಿಶ್ವನಾಥ್ ಚ.ಹಿರೇಮಠ ತಿಳಿಸಿದರು.



ಹೊಸಪೇಟೆಯಲ್ಲಿರುವ ಬ್ಯಾಂಕ್‌ನ ಪ್ರಧಾನ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 29 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ವಿಕಾಸ ಬ್ಯಾಂಕ್ ಕಲ್ಯಾಣ ಕರ್ನಾಟಕದ ಎಲ್ಲ ಜಿಲ್ಲೆಗಳು, ಕಿತ್ತೂರು ಕರ್ನಾಟಕದ ಗದಗ ಮತ್ತು ಮಧ್ಯ ಕರ್ನಾಟಕದ ದಾವಣಗೆರೆ ಸೇರಿದಂತೆ ಒಟ್ಟು 18 ಶಾಖೆಗಳನ್ನು ಹೊಂದಿದೆ.

ಇತ್ತೀಚೆಗೆ ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಸಂಘರ್ಷಮಯ ಬೆಳವಣಿಗೆಯಿಂದ ಷೇರು ಪೇಟೆಯಲ್ಲಿ ಸಂಚಲನ ಸೃಷ್ಟಿಸಿದೆ. ಪರಿಣಾಮ ಇಕ್ವಿಟಿ, ಮ್ಯೂಚ್ಯುವಲ್ ಫಂಡ್, ಎಸ್‌ಐಪಿ ಗಳೊಂದ ಗ್ರಾಹಕರು ದೂರ ಸರಿಯುತ್ತಿದ್ದು, ಅವರು ಬ್ಯಾಂಕ್ ಗಳತ್ತ ಹೂಡಿಕೆ ಮಾಡುತ್ತಿರುವುದೇ ಠೇವಣಿ ಹೆಚ್ಚಳಕ್ಕೆ ಪ್ರಮುಖ ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ. ದೇಶದಲ್ಲಿ ಕೇವಲ 51 ಬ್ಯಾಂಕ್‌ಗಳಿಗೆ ಶೆಡ್ಯೂಲ್ ಬ್ಯಾಂಕ್ ಸ್ಥಾನಮಾನ ಲಭಿಸಿದ್ದು, ರಾಜ್ಯದಲ್ಲಿ ಸದ್ಯಕ್ಕೆ ಯಾವುದೂ ಇಲ್ಲ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವಾರ್ಷಿಕ ಪ್ರಶಸ್ತಿಗೆ ಪಾತ್ರರಾಗಿರುವ ಇಂದಿರಾ ಅವರನ್ನು ಅಧ್ಯಕ್ಷರು ಸನ್ಮಾನಿಸಲಾಯಿತು. ಪತ್ರಿಕಾಗೋಷ್ಠಿಯಲ್ಲಿ ಬ್ಯಾಂಕ್‌ನ ಸಲಹೆಗಾರರಾದ ವಿ.ಜೆ.ಕುಲಕರ್ಣಿ, ಚಂದಾಹುಸೇನ್, ನಿರ್ದೇಶಕರಾದ ಅನಂತ ಜೋಶಿ, ನವ್ಯಶ್ರೀ ಹಿರೇಮಠ, ರಾಘವೇಂದ್ರ, ವ್ಯವಸ್ಥಾಪಕ ನಿರ್ದೇಶಕ ಪ್ರಸನ್ನ ಹಿರೇಮಠ ಇದ್ದರು.

ಮಹಾವೀರರು ಅಹಿಂಸೆ, ಸತ್ಯದ ಪ್ರತಿಪಾದಕರು

ಯಾದಗಿರಿ: ಭಗವಾನ್ ಮಹಾವೀರರು ಜೈನ ಧರ್ಮದ 24ನೇ ಮತ್ತು ಕೊನೆಯ ತೀರ್ಥಂಕರರು. ಇವರು ಸತ್ಯ, ಅಹಿಂಸೆ, ಮತ್ತು ಅಪರಿಗ್ರಹ (ತ್ಯಾಗ) ತತ್ವಗಳ ಮೂಲಕ ಜಗತ್ತಿಗೆ ಶಾಂತಿ ಮತ್ತು ಆತ್ಮಜ್ಞಾನವನ್ನು ಬೋಧಿಸಿದರೆಂದು ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರ ಹೇಳಿದರು.

ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಭಗವಾನ ಶ್ರೀಮಹಾವೀರ ಜಯಂತ್ಯುತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಇಲ್ಲಿನ ಶರಣ ನಗರದ ಗೌರಿಶಂಕರ ಮಂಗಲ ಕಾರ್ಯಾಲಯದಲ್ಲಿ ಆಯೋಜಿಸಿದ್ದ ಭಗವಾನ ಮಹಾವೀರ ಜಯಂತ್ಯುತ್ಸವ ಉದ್ಘಾಟಿಸಿ ಮಾತನಾಡಿದರು.

ಅಹಿಂಸಾ ಪರಮೋ ಧರ್ಮಃ: ಪ್ರಾಣಿ, ಸಸ್ಯ, ಕೀಟ, ನೀರು, ಗಾಳಿ ಹೀಗೆ ಎಲ್ಲದರಲ್ಲೂ ಜೀವಾತ್ಮವಿದೆ, ಆದ್ದರಿಂದ ಅಹಿಂಸೆ ಅತ್ಯಗತ್ಯ ಎಂದು ಬೋಧಿಸಿದ್ದಾರೆ. ಅಹಿಂಸೆ, ಸತ್ಯ, ಅಸ್ತೇಯ (ಕಳ್ಳತನ ಮಾಡದಿರುವುದು), ಬ್ರಹ್ಮಚರ್ಯ, ಮತ್ತು ಅಪರಿಗ್ರಹ (ಆಸ್ತಿ ಸಂಗ್ರಹಿಸದಿರುವುದು) ಇವುಗಳನ್ನು ಬೋಧಿಸಿದ ಇವರ ತತ್ವಗಳನ್ನು ಎಲ್ಲರೂ ಅನುಸರಿಸಬೇಕೆಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ ಮಾತನಾಡಿ, ಜಗತ್ತಿಗೆ ಶಾಂತಿ ಸಂದೇಶ ಸಾರುವ ಮೂಲಕ ಪ್ರತಿ ಜೀವಕ್ಕೂ ತನ್ನದೇ ಆದ ಬೆಲೆ, ಬದುಕು ಇದೆ. ಯಾರನ್ನು ಹಿಂಸಿಸಬಾರದೆಂಬ ತತ್ವ ಇವರದಾಗಿತ್ತು. ಇಂದ್ರಿಯ, ಕೋಪ, ದುರಾಸೆಯಂತಹ ಆಂತರಿಕ ಶತ್ರುಗಳನ್ನು ಜಯಿಸಿದ್ದರು ಎಂದರು.



ವಿಶೇಷ ಉಪನ್ಯಾಸ ನೀಡಿದ ಮುನಿಶ್ರೀ ನವೀನ್ ಪ್ರಜ್ಞಾಜೀ ಮಾಹಾರಾಜ್ ಅವರು, ವರ್ಧಮಾನ ಮಹಾವೀರರು ಕ್ರಿ.ಪೂ. 599ರಲ್ಲಿ ಜ್ಞಾತ್ರಿಕ ಕುಲದ ರಾಜ ಸಿದ್ಧಾರ್ಥ ಮತ್ತು ರಾಣಿ ತ್ರಿಶಾಲೆಯ ಮಗನಾಗಿ ಜನಿಸಿದರು ಎಂದರು.

ಜಿಪಂ ಸಿಇಒ ಲವೀಶ್ ಒರ್ಡಿಯಾ, ಯುಡಾ ಅಧ್ಯಕ್ಷ ಬಾಬುರಾವ ಕಾಡ್ಲೂರ್, ಯೋಜನಾ ನಿರ್ದೇಶಕ ಲಕ್ಷ್ಮೀ ಕಾಂತರೆಡ್ಡಿ, ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ, ಜೈನ ಸಮುದಾಯದ ಪ್ರಮುಖರಾದ ಪಾರಸಮಲ್ ಜೈನ, ಗೌತಮ ದೋಕಾ, ಬಾಬು ಸೇರಿದಂತೆ ಇತರರಿದ್ದರು.

ಕಾರ್ಯಕ್ರಮ ಅಂಗವಾಗಿ ರಕ್ತದಾನ ಶಿಬಿರ, ಗೋಶಾಲೆಗಳಲ್ಲಿನ ಗೋವುಗಳಿಗೆ ಸಿಹಿ ಹುಗ್ಗಿ ವಿತರಣೆ ಹಾಗೂ ಪಂಪ ಮಹಾ ಕವಿ ಮಂಟಪದಲ್ಲಿ ಸಾರ್ವಜನಿಕರಿಗೆ ಮಹಾ ಪ್ರಸಾದ ವಿತರಿಸಲಾಯಿತು.



ಸಿರುಗುಪ್ಪ: ಶಂಭುಲಿಂಗೇಶ್ವರ ಮಹಾರಥೋತ್ಸವ ಅಂಗವಾಗಿ ಪಲ್ಲಕ್ಕಿಯಲ್ಲಿ ಶಂಭುಲಿಂಗೇಶ್ವರ ಉತ್ಸವ ಮೂರ್ತಿಯನ್ನು ಪ್ರಮುಖ ಬೀದಿಗಳಲ್ಲಿ ಮಂಗಳವಾರ ಸಂಜೆ ಮೆರವಣಿಗೆ ನಡೆಯಿತು.



ಸಿರುಗುಪ್ಪ: ನಗರದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಂಬರ್-2 ವತಿಯಿಂದ ತ್ರಿವಿಧ ದಾಸೋಹಿ ಡಾ.ಶಿವಕುಮಾರ್ ಸ್ವಾಮೀಜಿ ಅವರ 119ನೇ ಜನ್ಮದಿನ ನಿಮಿತ್ತ ಶಿಲಾ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿದರು. ನಂತರ ಎಲ್ಲರಿಗೂ ಸಿಹಿ ಹಂಚಿದರು. ವಿವಿಧ ಗಣ್ಯರು ಉಪಸ್ಥಿತರಿದ್ದರು.

ಹುಣಸೆ ಬೆಳೆಗೆ ರೈತರು ಮುಂದಾಗಲಿ

ಕೊಟ್ಟೂರು: ಒಣ ಪ್ರದೇಶದಲ್ಲಿಯೂ ಉತ್ತಮವಾಗಿ ಬೆಳೆಯಬಹುದಾದ ಹುಣಸೆ ಲಾಭದಾಯಕ ಬೆಳೆಯಾಗಿದ್ದು, ರೈತರು ಅದನ್ನು ಬೆಳೆಯುವತ್ತ ಮುಂದಾಗಬೇಕು ಎಂದು ಭಾರತೀಯ ತೋಟಗಾರಿಕೆ ಸಂಸ್ಥೆ ಹಿರಿಯ ವಿಜ್ಞಾನಿ ಡಾ.ಕರುಣಾಕರನ್ ಹೇಳಿದರು.

ತಾಲೂಕಿನ ಚಪ್ಪರದಹಳ್ಳಿಯಲ್ಲಿ ಇಕ್ರಾ ಸಂಸ್ಥೆ ಮತ್ತು ಭೂಮಿ ಮಿತ್ರ ಸಾವಯವ ರೈತರ ಒಕ್ಕೂಟ ಆಯೋಜಿಸಿದ್ದ ಹುಣಸೆ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹುಣಸೆ ಬೆಳೆಯುವುದನ್ನು ರೈತರು ಚೆನ್ನಾಗಿ ಅರಿಯಬೇಕು. ಒಣ ಬೇಸಾಯದಲ್ಲಿ ಬರುವ ಅತ್ಯುತ್ತಮ ಬಹು ವಾರ್ಷಿಕ ಬೆಳೆಯಾಗಿದೆ. ಇದಕ್ಕೂ ಇತ್ತಿಚಿನ ದಿನಗಳಲ್ಲಿ ರೋಗ ಭಾಧೆ ಕಾಣಿಸಿಕೊಳ್ಳುತ್ತಿವೆ. ಇವುಗಳನ್ನು ಸರಿಯಾದ ಸಮಯದಲ್ಲಿ ಹತೋಟಿಗೆ ತಂದರೆ ಉತ್ತಮ ಇಳುವರಿ ಸಿಗುತ್ತದೆ. ಹುಣಸೆ ಬೆಳೆಯ ವೈವಿಧ್ಯತೆ ಜಾತಿಗಳಿದ್ದು ಅವುಗಳನ್ನು ಗುರುತಿಸಿ ಅಭಿವೃದ್ಧಿ ಪಡಿಸಬೇಕು. ನಮ್ಮ ಸಂಶೋಧನ ಕೇಂದ್ರದಿಂದ ಲಕ್ಷಣ್ ಫಲ ಹುಣ್ಸೆ ಮಾರುಕಟ್ಟೆ ಆಧಾರಿತ ಉತ್ತಮ ಬೆಳೆಯುಳ್ಳ ಹುಣಸೆಯಾಗಿದೆ ಎಂದರು.



ತೋವಿನಕೆರೆಯ ಹುಣಸೆ ಬೆಳೆಗಾರ ಪದ್ಮರಾಜು ಮಾತನಾಡಿ, ಈಗಿರುವ ಹುಣಸೆ ಮರಗಳನ್ನು ರೈತರು ಉಳಿಸಿಕೊಳ್ಳಬೇಕು. ಸರಿಯಾದ ಕ್ರಮಗಳನ್ನು ಸಮಯಕ್ಕೆ ಪೂರಕವಾಗಿ ಅನುಸರಿಸಬೇಕು. ಲಾಭದಾಯಕ ಬೆಳೆಯಾಗಿರುವ ಹುಣಸೆಯನ್ನು ಬೇಸಾಯವಾಗಿ ಮಾಡಬಹುದು ಎಂದರು. ಮಲ್ಲಿಕಾರ್ಜುನ ಹೊಸಪಾಳ್ಯ, ಪತ್ರಕರ್ತ ಗಾಣದಾಳದ ಶ್ರೀಕಂಠ ಮಾತನಾಡಿದರು. ರಾಜ್ಯ ಪ್ರಶಸ್ತಿ ಪುರಸ್ಕೃತ ಹುಲಿಕೆರೆಯ ಎಸ್.ವಿ.ವಿಶ್ವೇಶ್ವರ ಸಜ್ಜನ್, ಪಿ.ಆರ್. ಶೇಷಗಿರಿರಾವ್ ಮಾತನಾಡಿದರು. ಇಕ್ರಾ ಸಂಸ್ಥೆಯ ಗಾಯತ್ರಿ ಪ್ರಾಸ್ತಾವಿಕ ಮಾತನಾಡಿದರು. ಗ್ರಾಮದ ಗೌಡ್ರು ಸುರೇಶ, ಮೂಡಿ ಪ್ರಕಾಶ, ಕಡಕೋಳ ಕೊಟ್ರೇಶ್, ಜಿ.ಅಜ್ಜಪ್ಪ, ಜಿ.ಗಿರೀಶ್, ನಿಂಗಪ್ಪ, ಶಿವಮೂರ್ತಿ, ಸಿದ್ದಲಿಂಗಪ್ಪ ಇದ್ದರು. ಇಕ್ರಾ ಸಂಸ್ಥೆಯ ಕೋಗಳಿ ಕೊಟ್ರೇಶ್, ಮಂಜುನಾಥ ನಿರ್ವಹಿಸಿದರು.